ಕರ್ನಾಟಕ ಸರ್ಕಾರ

# ಕರ್ನಾಟಕ ಪೊಲೀಸು ಅಧಿನಿಯಮ, 1963

## (1964 ರ ಅಧಿನಿಯಮ ಸಂಖ್ಯೆ. 4)

# The Karnataka Police Act, 1963

## (Act No. 4 of 1964)

ಬೆಂಗಳೂರು :
ಕರ್ನಾಟಕ ಸರ್ಕಾರಿ ಮುದ್ರಾಣಲಯದ ಡೈರೆಕ್ಟರ್‌ರವರಿಂದ ಮುದ್ರಿಸಲ್ಪಟ್ಟಿತು.
1975

# ಕರ್ನಾಟಕ ಪೊಲೀಸು ಅಧಿನಿಯಮ, 1963

## ವಿಷಯಾನುಕ್ರಮಣಿಕೆ

### ಅಧ್ಯಾಯ – I

### ಪ್ರಾರಂಭಿಕ

**ಪ್ರಕರಣಗಳು :**


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು


### ಅಧ್ಯಾಯ – II

### ಪೊಲೀಸ್‌ದಳದ ಅಧೀಕ್ಷಣೆ, ನಿಯಂತ್ರಣ ಮತ್ತು ವ್ಯವಸ್ಥೆ


3. ಇಡೀ ರಾಜ್ಯಕ್ಕಾಗಿ ಒಂದು ಪೊಲೀಸು ದಳ
4. ಪೊಲೀಸು ದಳದ ಅಧೀಕ್ಷಣೆಯು ಸರಕಾರದಲ್ಲಿ ನಿಹಿತವಾಗಿರುವುದು.
5. ಪೊಲೀಸು ದಳದ ರಚನೆ
6. ಇನ್ಸ್‌ಪೆಕ್ಟರ್ ಜನರಲ್ ಮತ್ತು ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್
7. ಕಮೀಷನರು
8. ಸೂಪರಿಂಟೆಂಡೆಂಟ್, ಅವರ ಸಹಾಯಕ ಮತ್ತು ಡೆಪ್ಯೂಟಿ ಸೂಪರಿಂಟೆಂಡೆಂಟರುಗಳ ನೇಮಕ
9. ನಿಸ್ತಂತು ವ್ಯವಸ್ಥೆ ಮತ್ತು ಮೋಟಾರು ಸಾರಿಗೆ ವ್ಯವಸ್ಥೆ ಅಥವಾ ಯಾವುದೇ ವಿಶೇಷ ಕರ್ತವ್ಯಕ್ಕಾಗಿ ಸೂಪರಿಂಟೆಂಡೆಂಟರ ನೇಮಕ
10. ಪೊಲೀಸು ತರಬೇತು ಶಾಲೆಯ ಅಥವಾ ಕಾಲೇಜಿನ ಪ್ರಿನ್ಸಿಪಾಲ್
11. ಕಮೀಷನರಿಗೆ ಡೆಪ್ಯೂಟಿಗಳು ಮತ್ತು ಸಹಾಯಕರು
12. ಕೆಳಗಣ ಪೊಲೀಸ್ ನೇಮಕ
13. ನೇಮಕ ಸರ್ಟಿಫಿಕೇಟುಗಳು
14. ಪೊಲೀಸು ಅಧಿಕಾರಿಯ ನಿಲಂಬನದ ಪರಿಣಾಮ
15. ಕಮೀಷನರ್‌ನ ಮತ್ತು ಸೂಪರಿಂಟೆಂಡೆಂಟ್‌ನ ಸಾಮಾನ್ಯ ಅಧಿಕಾರಗಳು

16. ಜಿಲ್ಲಾ ಮ್ಯಾಜಿಸ್ಟ್ರೇಟನ ಸಾಮಾನ್ಯ ನಿಯಂತ್ರಣಕ್ಕೊಳಪಟ್ಟು ಪೊಲೀಸು ಸೂಪರಿಂಟೆಂಡೆಂಟನು ಜಿಲ್ಲೆಯ ಪೊಲೀಸ್ ಮುಖ್ಯಾಧಿಕಾರಿಯಾಗಿರತಕ್ಕದ್ದು.

17. ಸೂಪರಿಂಟೆಂಡೆಂಟನಿಂದ ವರದಿಯನ್ನು ತರಿಸಿಕೊಳ್ಳಲು ಜಿಲ್ಲಾ ಮ್ಯಾಜಿಸ್ಟ್ರೇಟನ ಅಧಿಕಾರ

18. ಜಿಲ್ಲಾ ಮ್ಯಾಜಿಸ್ಟ್ರೇಟನ ಮೇಲ್ವಿಚಾರಣೆಯ ಅಧಿಕಾರ

19. ವಿಶೇಷ ಪೊಲೀಸು ಅಧಿಕಾರಿಗಳು

20. ಹೆಚ್ಚಿನ ಪೊಲೀಸರ ನೇಮಕ

## ಅಧ್ಯಾಯ – III

## ಪೊಲೀಸು ದಳದ ವಿನಿಯಮನ, ನಿಯಂತ್ರಣ ಮತ್ತು ಶಿಸ್ತು

21. ಪೊಲೀಸು ಆಡಳಿತದ ಸಲುವಾಗಿ ನಿಯಮಗಳ ರಚನೆ

22. ಇನ್ಸ್‌ಪೆಕ್ಟರ್ ಜನರಲ್‌ನು ವರದಿಗಳನ್ನು ತರಿಸಿಕೊಳ್ಳಬಹುದು.

23. ಶಿಸ್ತು ಸಂಬಂಧದ ದಂಡಗಳು

24. ದಂಡನೆಯನ್ನು ವಿಧಿಸುವಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ

25. ಅಪೀಲುಗಳು ಮತ್ತು ಪುನರೀಕ್ಷಣೆ

26. ಪೊಲೀಸು ಅಧಿಕಾರಿಗಳು ಕೆಲಸದ ಮೇಲಿದ್ದಾರೆಂದು ಭಾವಿಸುವುದು ಮತ್ತು ರಾಜ್ಯದ ಯಾವುದೇ ಭಾಗದಲ್ಲಿ ನಿಯೋಜಿಸಲ್ಪಡಲು ಬದ್ಧರಾಗಿರುವುದು.

27. ಯಾವ ಷರತ್ತುಗಳ ಮೇಲೆ ಪೊಲೀಸು ಅಧಿಕಾರಿಯು ರಾಜೀನಾಮೆಯನ್ನು ಕೊಡಬಹುದು.

28. ಪೊಲೀಸು ಅಧಿಕಾರಿಯು ವ್ಯಾಪಾರ ಇತ್ಯಾದಿಗಳಲ್ಲಿ ತೊಡಗಿರಕೂಡದು

29. ಪೊಲೀಸು ಅಧಿಕಾರಿಯಾಗಿರುವುದು ಕೊನೆಗೊಂಡಾಗ ಸರ್ಟಿಫಿಕೇಟು, ಶಸ್ತ್ರ, ಇತ್ಯಾದಿಗಳನ್ನು ವಾಪಸ್ಸು ಕೊಡುವುದು.

30. ಪೊಲೀಸು ಅಧಿಕಾರಿಗಳಿಗೆ ಒದಗಿಸಲಾದ ಆವರಣಗಳ ಆಧಿಭೋಗ ಮತ್ತು ಅವುಗಳನ್ನು ತೆರವು ಮಾಡುವ ಹೊಣೆ

## ಅಧ್ಯಾಯ – IV

## ಪೊಲೀಸು ವಿನಿಯಮ

31. ಸಂಚಾರವನ್ನು ಕ್ರಮಗೊಳಿಸುವುದು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಸುವ್ಯವಸ್ಥೆಯನ್ನು ರಕ್ಷಿಸುವುದು ಇತ್ಯಾದಿಗಳಿಗಾಗಿ ಆದೇಶಗಳನ್ನು ಮಾಡಲು ಅಧಿಕಾರ

32. ಬೀದಿಗಳಲ್ಲಿ ಅಡ್ಡಗಟ್ಟುಗಳನ್ನು ನಿರ್ಮಿಸಲು ಅಧಿಕಾರ.

33. ಪ್ರತ್ಯೇಕಿಸಿಟ್ಟ ಸ್ಥಳಗಳಲ್ಲಿ ಹೊರತು ಮೃತದೇಹದ ವಿಲೆಯ ನಿಷೇಧಕ್ಕೆ ನಿಯಮಗಳನ್ನು ರಚಿಸಲು ಅಧಿಕಾರ.

34. ಸಾರ್ವಜನಿಕರಿಗೆ ನಿರ್ದೇಶನವನ್ನು ಕೊಡಲು ಕಮೀಷನರ್ ಅಥವಾ ಸೂಪರಿಂಟೆಂಡೆಂಟ್‌ನ ಮತ್ತು ಇತರ ಅಧಿಕಾರಿಯ ಅಧಿಕಾರ.

35. ಅವ್ಯವಸ್ಥೆಯನ್ನು ನಿರೋಧಿಸುವುದರ ಸಲುವಾಗಿ ಕೆಲವು ಕಾರ್ಯಗಳನ್ನು ನಿಷೇಧಿಸಲು ಅಧಿಕಾರ.

36. ಸಂಗೀತ ಶಬ್ದ ಅಥವಾ ಗದ್ದಲ ಮುಂದುವರಿಕೆ ಇವುಗಳ ನಿರೋಧ ಇತ್ಯಾದಿಗಳಿಗೆ ಅಧಿಕಾರ.

37. ಧ್ವನಿವರ್ಧಕ ಇತ್ಯಾದಿಗಳ ಉಪಯೋಗಕ್ಕೆ ಲೈಸೆನ್ಸು ಕೊಡುವುದು.

38. ದೊಂಬಿ ಇತ್ಯಾದಿಗಳನ್ನು ನಿರೋಧಿಸಲು ಆದೇಶಗಳ ಹೊರಡಿಸುವಿಕೆ.

39. ಸಮಾರಂಭ ಇತ್ಯಾದಿಗಳಲ್ಲಿ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗಲು ಆದೇಶಗಳನ್ನು ಹೊರಡಿಸುವುದು.

40. ವಿನೋದ ಸ್ಥಳಗಳಲ್ಲಿ ಮತ್ತು ಸಾರ್ವಜನಿಕ ಸಭೆಗಳಲ್ಲಿ ಅವ್ಯವಸ್ಥೆ ಇತ್ಯಾದಿಗಳು ಸಂಭವಿಸದಂತೆ ಪೊಲೀಸರು ಏರ್ಪಾಟು ಮಾಡುವುದು.

41. ಅವ್ಯವಸ್ಥೆಯನ್ನುಂಟು ಮಾಡುವ ಜನರು ಆವರಣಗಳನ್ನು ಉಪಯೋಗಿಸುವುದನ್ನು ನಿಲ್ಲಿಸುವುದು.

42. ಜಾತ್ರೆ ಇತ್ಯಾದಿಗಳಲ್ಲಿ ಸಾಂಕ್ರಾಮಿಕ ರೋಗಗಳ ಹರಡುವಿಕೆಯನ್ನು ನಿರೋಧಿಸಲು ವಿಶೇಷ ಕ್ರಮಗಳು.

43. ತೊಂಡು ನಾಯಿಗಳ ನಾಶ.

44. ಬಾಧೆ ಪಡುತ್ತಿರುವ ಅಥವಾ ನಿರುಪಯುಕ್ತ ಪ್ರಾಣಿಗಳ ನಾಶ.

45. ಈ ಅಧ್ಯಾಯದ ಮೇರೆಗಿನ ಅಧಿಕಾರಗಳು ಜಿಲ್ಲಾ ಮ್ಯಾಜಿಸ್ಟ್ರೇಟನ ನಿಯಂತ್ರಣಕ್ಕೊಳಪಟ್ಟು ಸೂಪರಿಂಟೆಂಡೆಂಟನಿಂದ ಮತ್ತು ರಾಜ್ಯ ಸರ್ಕಾರದ ನಿಯಂತ್ರಣಕ್ಕೊಳಪಟ್ಟು ಕಮೀಷನರಿಂದ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ಚಲಾಯಿಸಲ್ಪಡತಕ್ಕದ್ದು.

## ಅಧ್ಯಾಯ – V

### ಸಾರ್ವಜನಿಕ ಸುವ್ಯವಸ್ಥೆ ಮತ್ತು ರಾಜ್ಯದ ನೆಮ್ಮದಿಯನ್ನು ರಕ್ಷಿಸುವುದಕ್ಕಾಗಿ ವಿಶೇಷ ಕ್ರಮಗಳು

46. ವ್ಯಕ್ತಿಯ ಆವೇದನದ ಮೇಲೆ ಹೆಚ್ಚಿನ ಪೊಲೀಸು ನಿಯೋಜನೆ

47. ದೊಡ್ಡ ಕಾಮಗಾರಿಗಳಲ್ಲಿ ಮತ್ತು ಅಲ್ಲಿಯ ನಿಯೋಜಕರ ವರ್ತನೆಯ ಬಗ್ಗೆ ಆಶಂಕೆ ಇರುವ

ಸಂದರ್ಭದಲ್ಲಿ ಹೆಚ್ಚಿನ ಪೊಲೀಸರ ನೇಮಕ.

48. 46 ಮತ್ತು 47ನೆಯ ಪ್ರಕರಣಗಳ ಮೇರೆಗೆ ನಿಯೋಜಿಸಲಾದ ಹೆಚ್ಚಿನ ಪೊಲೀಸಿನ ಖರ್ಚಿನ ವಸೂಲಿ

49. ಸಾರ್ವಜನಿಕ ಶಾಂತಿಗೆ ವಿಶೇಷ ಅಪಾಯದ ಸಂದರ್ಭಗಳಲ್ಲಿ ಹೆಚ್ಚಿನ ಪೊಲೀಸಿನ ನಿಯೋಜನೆ.

50. ಕಾನೂನು ವಿರುದ್ಧವಾದ ಜನ ಸಮೂಹದಿಂದುಂಟಾದ ಕ್ಷತಿಯ ಬಗ್ಗೆ ಪರಿಹಾರವನ್ನು ವಸೂಲು ಮಾಡುವ ಬಗೆ.

51. ವ್ಯಕ್ತಿಗಳಿಗೆ ಜಿಲ್ಲಾ ಮ್ಯಾಜಿಸ್ಟ್ರೇಟನು ಪರಿಹಾರವನ್ನು ಕೊಡುವುದು ಅಥವಾ ಹಂಚುವುದು.

52. ಜಿಲ್ಲಾ ಮ್ಯಾಜಿಸ್ಟ್ರೇಟನು ಸರಕಾರದ ಆದೇಶಗಳ ಮೇರೆಗೆ ಪ್ರಕಾರ್ಯಗಳನ್ನು ನೆರವೇರಿಸುವುದು.

53. ಹೆಚ್ಚಿನ ಪೊಲೀಸಿನ ಖರ್ಚಿನ ಮತ್ತು ಕಾನೂನು ವಿರುದ್ಧ ಜನ ಸಮೂಹ ಸೇರಿದುದರಿಂದ ಉಂಟಾದ ನಷ್ಟದ ಬಗೆಗಿನ ಪರಿಹಾರದ ದಾಮಾಷಾ ವಸೂಲಿ

**II ಗುಂಪುಗಳನ್ನು ಚದುರಿಸುವುದು ಮತ್ತು ಕೆಲವು ಅಪರಾಧಗಳ ಸಿದ್ದದೋಷಿಗಳಾದ ವ್ಯಕ್ತಿಗಳನ್ನು ಸಾಗಿಸುವುದು**

54. ಕೂಟಗಳನ್ನು ಮತ್ತು ಜನಸಮೂಹಗಳನ್ನು ಚದುರಿಸುವುದು.

55. ಅಪರಾಧಗಳನ್ನು ಮಾಡಲಿರುವ ವ್ಯಕ್ತಿಗಳನ್ನು ಸಾಗಿಸುವುದು.

56. ಕೆಲವು ಅಪರಾಧಗಳ ಸಿದ್ದದೋಷಿಗಳಾದ ವ್ಯಕ್ತಿಗಳನ್ನು ಸಾಗಿಸುವುದು.

57. 54, 55 ಅಥವಾ 56ನೆಯ ಪ್ರಕರಣಗಳ ಮೇರೆಗಿನ ಆದೇಶಗಳು ಜಾರಿಯಲ್ಲಿರುವ ಅವಧಿ.

58. 54, 55 ಅಥವಾ 56ನೆಯ ಪ್ರಕರಣದ ಮೇರೆಗೆ ಆದೇಶವನ್ನು ಮಾಡುವುದಕ್ಕೆ ಮುಂಚೆ ಹೇಳಿಕೊಳ್ಳಲು ಅವಕಾಶ ಕೊಡುವುದು.

59. ಅಪೀಲು

60. ಆದೇಶಗಳ ಅಂತಿಮತೆ

61. ವ್ಯಕ್ತಿಯು ಪ್ರದೇಶವನ್ನು ಬಿಟ್ಟು ಹೋಗಲು ತಪ್ಪಿದರೆ ಮತ್ತು ಅವನನ್ನು ಸಾಗಿಸಿದ ತರುವಾಯ ಅವನು ಪ್ರವೇಶಿಸಿದರೆ ಪ್ರಕ್ರಿಯೆ.

62. ಎಲ್ಲಿಗೆ ಹೊರಟುಹೋಗಲು ವ್ಯಕ್ತಿಗೆ ನಿರ್ದೇಶಿಸಲಾಗಿತ್ತೋ ಅಲ್ಲಿಗೆ ಪ್ರವೇಶಿಸಲು ಅಥವಾ ವಾಪಸಾಗಲು ತಾತ್ಕಾಲಿಕ ಅನುಮತಿ.

63. ಗಡಿಪಾರು ಮಾಡಲು ಸರಕಾರದ ಅಥವಾ ವಿಶೇಷವಾಗಿ ಶಕ್ತಗೊಳಿಸಲಾದ ಅಧಿಕಾರಿಗಳ

ಅಧಿಕಾರಗಳು.

**III ಶಿಬಿರಗಳು, ಪರೇಡುಗಳು ಇತ್ಯಾದಿಗಳ ನಿಯಂತ್ರಣ ಮತ್ತು ಕೆಲವು ಸಮವಸ್ತ್ರಗಳ ಉಪಯೋಗ**

64. ಶಿಬಿರಗಳು, ಪರೇಡುಗಳು ಇತ್ಯಾದಿಗಳ ನಿಯಂತ್ರಣ ಮತ್ತು ಸಮವಸ್ತ್ರ ಇತ್ಯಾದಿಗಳ ಉಪಯೋಗದ ಪ್ರತಿಬಂಧ.

## ಅಧ್ಯಾಯ – VI

## ಪೊಲೀಸರ ನಿರ್ವಾಹಕ ಅಧಿಕಾರಗಳು ಮತ್ತು ಕರ್ತವ್ಯಗಳು

65. ಪೊಲೀಸು ಅಧಿಕಾರಿಯ ಕರ್ತವ್ಯಗಳು.

66. ಸಾರ್ವಜನಿಕರು ಸೇರುವ ಸ್ಥಳಗಳನ್ನು ಪ್ರವೇಶಿಸಲು ಅಧಿಕಾರ.

67. ಗುಮಾನಿ ವ್ಯಕ್ತಿಗಳನ್ನು ಬೀದಿಯಲ್ಲಿ ಜಪ್ತಿ ಮಾಡಲು ಅಧಿಕಾರ.

68. ಸಾರ್ವಜನಿಕರ ಬಗ್ಗೆ ಪೊಲೀಸು ಅಧಿಕಾರಿಗಳ ಕರ್ತವ್ಯಗಳು.

69. ಬೀದಿಗಳಲ್ಲಿ ಸಂಚಾರ ಇತ್ಯಾದಿಗಳನ್ನು ಪೊಲೀಸರು ಕ್ರಮಗೊಳಿಸುವುದು.

70. ಪೊಲೀಸರ ಯುಕ್ತ ನಿರ್ದೇಶನಗಳನ್ನು ಅನುಸರಿಸಲು ವ್ಯಕ್ತಿಗಳು ಬದ್ಧರು.

71. ತಡೆಯಲು, ಸಾಗಿಸಲು ಇತ್ಯಾದಿಗಳ ಬಗ್ಗೆ ಪೊಲೀಸು ಅಧಿಕಾರಿಯ ಅಧಿಕಾರಗಳು.

72. 35, 36 ಅಥವಾ 38ನೆಯ ಪ್ರಕರಣದ ಮೇರೆಗೆ ಹೊರಡಿಸಿದ ಆದೇಶಗಳ ಜಾರಿ.

73. 42, 54, 55, 56 ಅಥವಾ 63ನೆಯ ಪ್ರಕರಣದ ಮೇರೆಗೆ ಹೊರಿಡಿಸಿದ ಆದೇಶಗಳು ಕಾರ್ಯಗತವಾಗುವಂತೆ ನೋಡಿಕೊಳ್ಳುವುದು ಪೊಲೀಸರ ಕರ್ತವ್ಯ.

74. ಪೊಲೀಸು ಅಧಿಕಾರಿಯು ಯಾವಾಗ ವಾರೆಂಟ್ ಇಲ್ಲದೇ ದಸ್ತಗಿರಿ ಮಾಡಬಹುದು.

75. ಕ್ಲೇಮು ಮಾಡದ ಸ್ವತ್ತನ್ನು ಪೊಲೀಸು ವಶಕ್ಕೆ ತೆಗೆದುಕೊಳ್ಳುವುದು.

76. ಪೊಲೀಸು ಅಧಿಕಾರಿಯು ಅಲೆಯುತ್ತಿರುವ ದನಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳಬಹುದು.

77. ವರಿಷ್ಠ ಪೊಲೀಸು ಅಧಿಕಾರಿಯು ತನಗಿಂತ ಕೆಳಗಿನವರಿಗೆ ವಿಧಿಸಲಾದ ಕರ್ತವ್ಯಗಳನ್ನು ತಾನೇ ನೆರವೇರಿಸುವುದು ಇತ್ಯಾದಿ.

## ಅಧ್ಯಾಯ – VII

## ಜೂಜಿನ ನಿರೋಧ

78. ಕೆಲವು ಬಗೆಯ ಜೂಜುಗಳನ್ನು ಪ್ರಾರಂಭಿಸುವುದು, ಇತ್ಯಾದಿ.

79. ಸಾಮಾನ್ಯ ಜೂಜಿನ ಮನೆಯನ್ನು ಇಡುವುದು, ಇತ್ಯಾದಿ

80. ಸಾಮಾನ್ಯ ಜೂಜಿನ ಮನೆಯಲ್ಲಿ ಜೂಜಾಟ, ಇತ್ಯಾದಿ.

81. ಜೂಜಿನ ಮನೆಗೆ ಪೊಲೀಸು ಅಧಿಕಾರಿಗಳ ಪ್ರವೇಶ, ಝಡತಿ, ಇತ್ಯಾದಿ.

82. ಸಾಮಾನ್ಯ ಜೂಜಾಟದ ಮನೆಯನ್ನು ಇಟ್ಟುಕೊಂಡಿರುವ ಬಗ್ಗೆ ಅಥವಾ ಅಲ್ಲಿ ಜೂಜಾಡುವ ಬಗ್ಗೆ ಅನುಮಾನಿಸಿದ್ದು ರುಜುವಾತು.

83. 78, 79, 80ನೆಯ ಪ್ರಕರಣಗಳ ಮೇರೆಗೆ ಅಪರಾಧ ಸಿದ್ಧಪಟ್ಟ ಬಳಿಕ, ಜೂಜಾಟದ ಉಪಕರಣಗಳನ್ನು ನಾಶಪಡಿಸಬಹುದು.

84. ಹಣಕ್ಕಾಗಿ ಆಟವಾಡುವ ಬಗ್ಗೆ ರುಜುವಾತು ಮಾಡುವುದು ಅಪರಾಧ ಸಿದ್ಧಪಡಿಸುವುದಕ್ಕಾಗಿ ಅನಗತ್ಯ.

85. ಸಾಕ್ಷಿಗಳೆಂದು ಪರೀಕ್ಷಿಸಲಾದ ಸಂಬಂಧಪಟ್ಟ ವ್ಯಕ್ತಿಗಳಿಗೆ ರಕ್ಷಣೆ.

86. ಮಾಹಿತಿ ಕೊಟ್ಟವನಿಗೆ ಜುಲ್ಮಾನೆಯ ಭಾಗದ ಸಂದಾಯ.

87. ಸಾರ್ವಜನಿಕ ಬೀದಿಗಳಲ್ಲಿ ಜೂಜಾಟ.

88. ಸಾರ್ವಜನಿಕ ಸ್ಥಳಗಳಲ್ಲಿ ಜೂಜಾಡುತ್ತಿರುವ ವ್ಯಕ್ತಿಗಳನ್ನು ವಾರಂಟಿಲ್ಲದೆ ದಸ್ತಗಿರಿ ಮಾಡಲು ಅಧಿಕಾರ.

89. ಜೂಜಾಟಕ್ಕಾಗಿ ಬೀದಿಗಳಲ್ಲಿ ಸೇರುವುದು.

90. ಯಾವುದೇ ಸಮಾಚಾರ ಅಥವಾ ಮಾಹಿತಿಯನ್ನು ಮುದ್ರಿಸುವುದು, ಪ್ರಕಟಿಸುವುದು ಅಥವಾ ಹಂಚುವುದು.

91. ಕಂಪನಿಗಳಿಂದ ಅಪರಾಧಗಳು.

## ಅಧ್ಯಾಯ – VIII

## ಅಪರಾಧಗಳು ಮತ್ತು ದಂಡನೆಗಳು

92. ಕೆಲವು ಬೀದಿ ಅಪರಾಧಗಳಿಗೆ ಮತ್ತು ಉಪದ್ರವಕ್ಕೆ ದಂಡನೆ.

93. ಪ್ರಾಣಿಗಳನ್ನು ಹಿಂಸಿಸುವುದಕ್ಕಾಗಿ ದಂಡನೆ.

94. ಬುದ್ಧಿಪೂರ್ವಕ ಅತಿಕ್ರಮಣಕ್ಕಾಗಿ ದಂಡನೆ.

95. ಬೆಂಕಿಯ ಸುಳ್ಳು ಭಯ ಸೂಚನೆ ಅಥವಾ ಅಗ್ನಿಸೂಚಕಕ್ಕೆ ಹಾನಿ

96. ಸೂರ್ಯಾಸ್ತ ಮತ್ತು ಸೂರ್ಯೋದಯದ ಮಧ್ಯ ಕಾಲದಲ್ಲಿ ಸಂಶಯಾಸ್ಪದ ಸನ್ನಿವೇಶಗಳಲ್ಲಿ ಕಂಡುಬರುವಿಕೆ.

97. ಅಧಿಕಾರವಿಲ್ಲದೇ ಆಯುಧವನ್ನು ಇಟ್ಟುಕೊಳ್ಳುವುದು.

98. ಸ್ವತ್ತಿನ ಸ್ವಾಧೀನತೆಗೆ ಇರುವ ಸಮಾಧಾನಕರ ವಿವರಣೆ ಕೊಡಲಾಗಿದೆ.

99. ಕಳವಿನದೆಂದು ಶಂಕಿಸಲಾದ ವಸ್ತುವಿನ ಸ್ವಾಧೀನತೆಯ ಬಗ್ಗೆ ಅಥವಾ ಅದನ್ನು ಒಪ್ಪಿಸುವ ಬಗ್ಗೆ ಪೊಲೀಸಿಗೆ ವರದಿಕೊಡಲು ಗಿರಿವಿದಾರ ಮೊದಲಾದವರ ತಪ್ಪುವಿಕೆ.

100. ಅಂತಹ ಸ್ವತ್ತಿನ ಕರಗಿಸುವಿಕೆ ಇತ್ಯಾದಿ.

101. ಮಗುವಿನಿಂದ ಒತ್ತೆ ತೆಗೆದುಕೊಳ್ಳುವುದು.

102. ಸಾರ್ವಜನಿಕ ವಿನೋದಸ್ಥಳ ಇತ್ಯಾದಿಗಳಲ್ಲಿ ಅವ್ಯಸ್ಥಿತ ವರ್ತನೆಗಾಗಿ ಅನುಮತಿಕೊಟ್ಟಿರುವುದಕ್ಕಾಗಿ ಜುಲ್ಮಾನೆ.

103. 31ನೆಯ ಪ್ರಕರಣದ ಮೇರೆಗಿನ ಆದೇಶಗಳ ಉಲ್ಲಂಘನೆಗಾಗಿ ದಂಡ.

104. ನೌಕರರು ಮಾಡಿದ ಕಾರ್ಯಗಳಿಗಾಗಿ ಸಾರ್ವಜನಿಕ ಮನರಂಜನೆಯ ಸ್ಥಳದ ಲೈಸೆನ್ಸುದಾರನ ಹೊಣೆ.

105. ಸಾರ್ವಜನಿಕ ಮನರಂಜನೆಯ ಸ್ಥಳದ ಸಂಬಂಧದಲ್ಲಿ ಲೈಸೆನ್ಸು ತೆಗೆದುಕೊಳ್ಳದೆ ಇರುವಿಕೆಗೆ ಅಥವಾ ಲೈಸೆನ್ಸ್‌ನ್ನು ಉಲ್ಲೇಖಿತ ಅವಧಿಯೊಳಗಾಗಿ ನವೀಕರಿಸದೇ ಇರುವಿಕೆಗೆ ದಂಡ.

106. 30ನೆಯ ಪ್ರಕರಣದ ಮೇರೆಗಿನ ಆದೇಶವನ್ನು ಪಾಲಿಸದಿರುವಿಕೆಗೆ ದಂಡ.

107. 33 ಅಥವಾ 34ನೆಯ ಪ್ರಕರಣದ ಮೇರೆಗಿನ ನಿಯಮ, ಇತ್ಯಾದಿಗಳ ಉಲ್ಲಂಘನೆಗಾಗಿ ದಂಡ.

108. 35, 38 ಅಥವಾ 39ನೆಯ ಪ್ರಕರಣಗಳ ಮೇರೆಗಿನ ನಿಯಮಗಳ ಅಥವಾ ಆದೇಶಗಳ ಉಲ್ಲಂಘನೆಗಾಗಿ ದಂಡ.

109. 36ನೆಯ ಅಥವಾ 37ನೆಯ ಪ್ರಕರಣದ ಮೇರೆಗಿನ ಆದೇಶಗಳ ಉಲ್ಲಂಘನೆಗಾಗಿ ದಂಡ.

110. 40ನೆಯ ಪ್ರಕರಣದ ಮೇರೆಗಿನ ಆದೇಶ ಅಥವಾ 41ನೆಯ ಪ್ರಕರಣದ ಮೇರೆಗಿನ ಆದೇಶದ ಉಲ್ಲಂಘನೆಗಾಗಿ ದಂಡ.

111. 42ನೆಯ ಪ್ರಕರಣದ ಮೇರೆಗೆ ರಚಿಸಲಾದ ವಿನಿಮಯದ ಉಲ್ಲಂಘನೆಗಾಗಿ ದಂಡ.

112. 70ನೆಯ ಪ್ರಕರಣದ ಮೇರೆಗಿನ ಆದೇಶಗಳ ಉಲ್ಲಂಘನೆಗಾಗಿ ದಂಡ.

113. 54, 55, 56 ಅಥವಾ 63ನೆಯ ಪ್ರಕರಣದ ಮೇರೆಗಿನ ಆದೇಶನಗಳ ಉಲ್ಲಂಘನೆಗಾಗಿ ದಂಡ.

114. ಅಲ್ಲಿಂದ ಹೊರಗೆ ಹೋಗಲು ವ್ಯಕ್ತಿಗೆ ನಿರ್ದೇಶಿಸಲಾದ ಸ್ಥಳವನ್ನು ಅವನು ಪ್ರವೇಶಿಸಿದ್ದಕ್ಕಾಗಿ ದಂಡ.

115. 62ನೆಯ ಪ್ರಕರಣದ (3) ನೇಯ ಉಪಪ್ರಕರಣಕ್ಕನುಸಾರವಾಗಿ ವಶವಾಗಲು ತಪ್ಪಿದುದಕ್ಕಾಗಿ

ದಂಡ.

116. 64ನೆಯ ಪ್ರಕರಣದ ಮೇರೆಗಿನ ಆದೇಶಗಳ ಉಲ್ಲಂಘನೆಗಾಗಿ ದಂಡ.

117. ವಿಶೇಷ ಪೊಲೀಸ್ ಅಧಿಕಾರಿಯಾಗಿ ಕೆಲಸ ಮಾಡಲು ನಿರ್ಲಕ್ಷಿಸುವುದು ಅಥವಾ ನಿರಾಕರಿಸುವುದು.

118. ಸುಳ್ಳು ಹೇಳಿಕೆ ಇತ್ಯಾದಿಗಳನ್ನು ಮಾಡುವುದಕ್ಕೆ ಮತ್ತು ಪೊಲೀಸ್ ಅಧಿಕಾರಿಯ ದುರ್ವರ್ತನೆಯ ಬಗ್ಗೆ ದಂಡ.

119. ನೇಮಕದ ಅಥವಾ ಪದದ ಸರ್ಟಿಫಿಕೇಟು, ಅಥವಾ ಇತರ ವಸ್ತುವನ್ನು ಒಪ್ಪಿಸಲು ತಪ್ಪಿದರೆ ದಂಡ.

120. ಪೊಲೀಸ್ ಅಧಿಕಾರಿಯಿಂದ ಪೀಡಾಕಾರಿ ಪ್ರವೇಶ, ಝಡತಿ, ದಸ್ತಗಿರಿ ಇತ್ಯಾದಿಗಳು.

121. ದಸ್ತಗಿರಿ ಮಾಡಿದ ವ್ಯಕ್ತಿಯನ್ನು ಹಾಜರುಪಡಿಸುವಲ್ಲಿ ಪೀಡಾಕಾರಿ ವಿಲಂಬನಕ್ಕೆ ದಂಡ.

122. 72ನೆಯ ಪ್ರಕರಣದ ಮೇರೆಗೆ ಕೊಡಲಾದ ಯಾವುದೇ ನಿದೇಶವನ್ನು ವಿರೋಧಿಸುವುದಕ್ಕೆ ಅಥವಾ ಪಾಲಿಸದಿರುವುದಕ್ಕೆ ದಂಡ.

123. ದ್ರೋಹ ಇತ್ಯಾದಿಗಳನ್ನು ಉಂಟುಮಾಡುವುದಕ್ಕಾಗಿ ದಂಡ.

124. ಅಪರಾಧಿಯು ಕಾನ್ಸ್‌ಟೇಬಲನ ದರ್ಜೆಗಿಂತ ಮೇಲಿನ ಪೊಲೀಸ್ ಅಧಿಕಾರಿಯಾಗಿದ್ದರೆ ಅಧಿಕಾರ ವ್ಯಾಪ್ತಿ

125. ಪೊಲೀಸ್ ಸಮವಸ್ತ್ರದ ಅನಧಿಕೃತ ಉಪಯೋಗಕ್ಕೆ ದಂಡ.

126. ಅಧಿನಿಯಮದ ವಿರುದ್ಧದ ಕೆಲವು ಅಪರಾಧಗಳಿಗಾಗಿ ಪ್ರಾಸಿಕ್ಯೂಷನ್ನು ನಡೆಸುವುದು ಪೊಲೀಸಿನ ವಿವೇಚನೆಯಲ್ಲಿರತಕ್ಕದ್ದು.

127. ಕೆಲವು ಮೊಕದ್ದಮೆಗಳ ಸಂಕ್ಷಿಪ್ತ ಇತ್ಯರ್ಥ.

128. ಇತರ ಅಧಿನಿಯಮಗಳ ಮೇರೆಗಿನ ಅಪರಾಧಗಳ ಸಂಬಂಧದ ಪ್ರಾಸಿಕ್ಯೂಷನ್ನು ಅಬಾಧಿತ.

## ಅಧ್ಯಾಯ – IX

## ಗ್ರಾಮ ಪೊಲೀಸ್

129. ಗ್ರಾಮ ಪೊಲೀಸಿನ ರಚನೆ.

130. ಗ್ರಾಮ ಪೊಲೀಸಿನ ಆಡಳಿತ, ನಿಯಂತ್ರಣ ಮತ್ತು ನಿದೇಶನ ಯಾರಲ್ಲಿ ವಿಹಿತವಾಗಿರುವುದು.

131. ಪ್ರತ್ಯಾಯೋಜಿಸಲು ಅಧಿಕಾರ.

132. ಗ್ರಾಮದಲ್ಲಿ ಗ್ರಾಮ ಪೊಲೀಸ್, ಪೊಲೀಸ್ ಪಟೇಲನ ಚಾರ್ಜಿನಲ್ಲಿರತಕ್ಕದ್ದು.

133. ಪೊಲೀಸ್ ಪಟೇಲನ ಕರ್ತವ್ಯಗಳು.

134. ಗ್ರಾಮ ನೌಕರರ ಮೇಲೆ ಅಧಿಕಾರ.

135. ಸುಲಿಗೆ ಇತ್ಯಾದಿಗಳ ಬಗ್ಗೆ ಮುನ್ನೆಚ್ಚರಿಕೆ, ಇತ್ಯಾದಿ.

136. ಸಂಜ್ಞೇಯ ಅಪರಾಧಗಳನ್ನು ಮಾಡಿದ ಬಗ್ಗೆ ಬಂದ ಮಾಹಿತಿ.

137. ಕರ್ತವ್ಯ ನಿರ್ಲಕ್ಷತೆಗೆ ದಂಡಗಳು ಮತ್ತು ದಂಡನೆ.

138. ಕ್ರಿಮಿನಲ್ ಪ್ರಾಸಿಕ್ಯೂಷನ್ನಿಗೆ ಹೊಣೆಯಾಗಿರುವುದು ಅಬಾಧಿತ.

139. ಗ್ರಾಮದಲ್ಲಿರುವ ಅಪರಾಧಿಯು ತಪ್ಪಿಸಿಕೊಂಡು ಹೋದಾಗ ಅಥವಾ ನಾಪತ್ತೆಯಾದಾಗ ಪೊಲೀಸ್ ಠಾಣೆಯ ಚಾರ್ಜ್‌ನಲ್ಲಿರುವ ಅಧಿಕಾರಿಗೆ ಮಾಹಿತಿ.

140. ಅಸ್ವಾಭಾವಿಕ ಅಥವಾ ಹಠಾತ್ ಮರಣದ ಬಗ್ಗೆ ಅಥವಾ ಗ್ರಾಮದಲ್ಲಿ ಶವ ಕಂಡುಬಂದಾಗ ಮಾಹಿತಿ.

141. ಪೊಲೀಸ್ ಪಟೇಲನು, ಸಂಜ್ಞೇಯ ಅಪರಾಧ ಮಾಡಿರುವನೆಂದು ತಾನು ನಂಬಲು ಕಾರಣವಿರುವ ವ್ಯಕ್ತಿಯನ್ನು ದಸ್ತಗಿರಿ ಮಾಡುವುದು ಮತ್ತು ಅವನನ್ನು ಪೊಲೀಸ್ ಠಾಣೆಗೆ ಕಳಿಸುವುದು ಇತ್ಯಾದಿ.

142. ಕ್ಲೇಮು ಮಾಡದ ಸ್ವತ್ತು.

143. ಪೊಲೀಸ್ ಪಟೇಲನ ಗೈರು ಹಾಜರಿ, ಹಠಾತ್ ಕಾಯಿಲೆ ಇತ್ಯಾದಿ ಪ್ರಸಂಗಗಳಲ್ಲಿ ಉಪಬಂಧ.

## ಅಧ್ಯಾಯ – X

## ರಾಜ್ಯ ರಿಜರ್ವ್ ಪೊಲೀಸ್ ದಳ

144. ಪರಿಭಾಷೆಗಳು.

145. ರಾಜ್ಯ ರಿಜರ್ವ್ ಪೊಲೀಸ್ ದಳದ ರಚನೆ.

146. ದಳದ ಅಧೀಕ್ಷಣೆ, ನಿಯಂತ್ರಣ ಮತ್ತು ಆಡಳಿತ.

147. ಸೇರ್ಪಡೆ.

148. ವರ್ಗಾವಣೆಗಳು.

149. ನೇಮಕದ ಸರ್ಟಿಫಿಕೇಟು.

150. ಕಮಾಂಡೆಂಟನ ಸಾಮಾನ್ಯ ಅಧಿಕಾರಗಳು.

151. ರಾಜ್ಯ ರಿಜರ್ವ್ ಪೊಲೀಸ್ ದಳದವರ ಸಾಮಾನ್ಯ ಕರ್ತವ್ಯಗಳು.

152. ರಿಜರ್ವ್ ಪೊಲೀಸ್ ಅಧಿಕಾರಿಯು ಪೊಲೀಸ್ ಠಾಣೆಯ ಚಾರ್ಜಿನಲ್ಲಿರುವನೆಂದು ಭಾವಿಸಲ್ಪಡುವುದು.

153. ಉಪಬಂಧಗಳಿಗೆ ವಿರೋಧವಾಗಿ ಕೊಟ್ಟ ರಾಜೀನಾಮೆ ಸಂಬಂಧದಲ್ಲಿ ಅಪರಾಧ.

154. ನೇಮಕದ ಸರ್ಟಿಫಿಕೇಟು ಇತ್ಯಾದಿಗಳನ್ನು ಒಪ್ಪಿಸಲು ನಿರಾಕರಿಸುವ ಸಂಬಂಧದಲ್ಲಿರುವ ಅಪರಾಧ.

155. ಅತಿ ಹೇಯವಾದ ಅಪರಾಧಗಳು.

156. ಕಡಿಮೆ ಹೇಯವಾದ ಅಪರಾಧಗಳು.

157. ಅಧಿಕಾರಪಡೆದಿದ್ದ ರಿಜರ್ವ್ ಪೊಲೀಸ್ ಅಧಿಕಾರಿಯು ತನ್ನ ಚಾರ್ಜಿನಲ್ಲಿರುವ ರಿಜರ್ವ್ ಪೊಲೀಸು ಅಧಿಕಾರಿಯಿಂದ ಈ ಅಧಿನಿಯಮದ ಮೇರೆಗೆ ಮಾಡಲಾದ ಅಪರಾಧಗಳ ಮಾಹಿತಿಯನ್ನು ಕೊಡುವುದು.

158. ಕಾರಾವಾಸದ ಸ್ಥಳ ಮತ್ತು ಕಾರಾವಾಸದ ಶಿಕ್ಷೆಯ ಮೇಲೆ ಪದಚ್ಯುತಿಗೆ ಹೊಣೆ.

159. ಲಘು ದಂಡನೆಗಳು.

160. ದಳದವರ ಕಾರ್ಯಗಳ ರಕ್ಷಣೆ.

161. ರಿಜರ್ವ್ ಪೊಲೀಸ್ ಅಧಿಕಾರಿಯು, ಪೊಲೀಸ್ ಅಧಿಕಾರಿಯಾಗಿರುವುದು.

## ಅಧ್ಯಾಯ – XI

### ಸಂಕೀರ್ಣ

162. ಫೀಜು, ಬಹುಮಾನ, ಇತ್ಯಾದಿಗಳ ವಿಲೆ.

163. ನಿಯಮಗಳನ್ನು ರಚಿಸಲು ಸರಕಾರದ ಅಧಿಕಾರ.

164. ಆದೇಶಗಳನ್ನು ಮತ್ತು ಅಧಿಸೂಚನೆಗಳನ್ನು ರುಜುವಾತುಪಡಿಸುವ ರೀತಿ.

165. ನಮೂನೆಯಲ್ಲಿಯ ತಪ್ಪು ಅಥವಾ ಪ್ರಕ್ರಿಯೆಯಲ್ಲಿನ ಅಕ್ರಮದಿಂದ ನಿಯಮಗಳು ಮತ್ತು ಆದೇಶಗಳು ಅಮಾನ್ಯವಾಗುವುದಿಲ್ಲ.

166. 54, 55, 56 ಅಥವಾ 63ನೆಯ ಪ್ರಕರಣಗಳ ಮೇರೆಗೆ ಕೊಟ್ಟ ನಿದೇಶಗಳ ಉಲ್ಲಂಘನೆಯ ಬಗೆಗಿನ ಪ್ರಾಸಿಕ್ಯೂಷನ್ನುಗಳಲ್ಲಿ ಪೂರ್ವಭಾವನೆ.

167. ಖಾಲಿಜಾಗಗಳ ಚಾರ್ಜು ಹೊಂದಿರುವ ಅಥವಾ ಅವುಗಳಿಗೆ ಬರುವ ಅಧಿಕಾರಿಗಳು ಅಧಿಕಾರಗಳನ್ನು ಚಲಾಯಿಸಲು ಸಕ್ಷಮರಾಗಿರುವುದು.

168. ತಾನು ಹೊರಟು ಹೋಗಬೇಕೆಂದು ನಿದೇಶಿಸಲಾದ ಪ್ರದೇಶವನ್ನು ಪ್ರವೇಶಿಸುವ ಅಥವಾ ಅಲ್ಲಿಗೆ ವಾಪಸಾಗುವ ಅನುಮತಿ ಇರುವ ವ್ಯಕ್ತಿಯಿಂದ ಬರೆದು ಕೊಡಲಾದ ಮುಚ್ಚಳಿಕೆಯ

ಮುಟ್ಟುಗೋಲು.

169. ಮ್ಯಾಜಿಸ್ಟ್ರೇಟ್, ಪೊಲೀಸ್ ಅಧಿಕಾರಿ ಅಥವಾ ಸರಕಾರಿ ನೌಕರನ ರಕ್ಷಣೆ.

170. ಮೇಲೆ ಹೇಳಿದಂತೆ ಕರ್ತವ್ಯದ ನೆಪದಲ್ಲಿ ಮಾಡಿದ ಕಾರ್ಯಗಳ ಬಗ್ಗೆ ಸರಕಾರದ ಮಂಜೂರಾತಿ ಇಲ್ಲದೆ ದಾವೆಗಳನ್ನು ಅಥವಾ ಪ್ರಾಸಿಕ್ಯೂಷನ್‌ಗಳನ್ನು ವಿಚಾರಣೆಗೆ ತೆಗೆದುಕೊಳ್ಳತಕ್ಕದ್ದಲ್ಲ.

171. ಲೈಸೆನ್ಸು ಮತ್ತು ಅನುಮತಿಗಳಲ್ಲಿ ಷರತ್ತು ಇತ್ಯಾದಿಗಳನ್ನು ಉಲ್ಲೇಖಿಸತಕ್ಕದ್ದು ಮತ್ತು ಅವುಗಳಿಗೆ ಸಹಿ ಹಾಕತಕ್ಕದ್ದು.

172. ಸಾರ್ವಜನಿಕ ನೋಟಿಸುಗಳನ್ನು ಕೊಡುವ ಬಗೆ.

173. ಸಕ್ಷಮ ಪ್ರಾಧಿಕಾರಿಯ ಸಮ್ಮತಿ ಇತ್ಯಾದಿಗಳನ್ನು ಅವನ ಸಹಿಯೊಂದಿಗಿರುವ ಲಿಖಿತದಿಂದ ರುಜುವಾತು ಪಡಿಸಬಹುದು.

174. ನೋಟೀಸು ಇತ್ಯಾದಿಗಳ ಮೇಲೆ ಮುದ್ರೆಯೊತ್ತುವುದರ ಮೂಲಕ ಸಹಿ ಮಾಡಬಹುದು.

175. ಕೆಲವು ಉಪಬಂಧಗಳ ರದ್ದಿಯಾತಿಯ ಬಗ್ಗೆ ಉಳಿಸುವಿಕೆ.

176. ಚಾತುರ್ಯದ ಆಟಗಳ ಉಳಿಸುವಿಕೆ.

177. ಹಿತಾಸಕ್ತಿಯುಳ್ಳ ವ್ಯಕ್ತಿಗಳು ಯಾವುದೇ ಆದೇಶವನ್ನು ಶೂನ್ಯಗೊಳಿಸಲು, ವಿಪರ್ಯಯಗೊಳಿಸಲು, ಅಥವಾ ಬದಲಾಯಿಸಲು ಸರಕಾರಕ್ಕೆ ಅರ್ಜಿಸಲ್ಲಿಸಬಹುದು.

178. ನಿರಸನ ಮತ್ತು ಉಳಿಸುವಿಕೆಗಳು.

179. ತೊಂದರೆಗಳನ್ನು ನಿವಾರಿಸಲು ಅಧಿಕಾರ.

**ಅನುಸೂಚಿ – I**

**ಅನುಸೂಚಿ – II**

**ಅನುಸೂಚಿ – III**

**ಅನುಸೂಚಿ – IV**

* * * * *

## 1964ರ 4ನೆಯ ಕರ್ನಾಟಕ ಅಧಿನಿಯಮ

(964ರ ಫೆಬ್ರವರಿ ಹದಿಮೂರನೆಯ ತಾರೀಖು ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲು ಪ್ರಕಟಿಸಲ್ಪಟ್ಟಿದೆ.)

## ಕರ್ನಾಟಕ ಪೊಲೀಸು ಅಧಿನಿಯಮ, 1963

(1964ರ ಜನವರಿ ಎಂಟನೆಯ ತಾರೀಖು ರಾಷ್ಟ್ರಪತಿಯ ಅನುಮತಿ ಪಡೆದಿದೆ)

ಕರ್ನಾಟಕ ರಾಜ್ಯದಲ್ಲಿ ಪೊಲೀಸು ದಳವನ್ನು ವಿನಿಯಮನಗೊಳಿಸುವ, ಸಾರ್ವಜನಿಕ ಸುವ್ಯವಸ್ಥೆಯನ್ನು ರಕ್ಷಿಸಿಕೊಂಡು ಬರುವ ಮತ್ತು ಇತರ ವಿಷಯಗಳ ಬಗ್ಗೆ ಏಕರೂಪದ ಕಾನೂನನ್ನು ಬಂಧಿಸುವ ಅಧಿನಿಯಮ.

ಕರ್ನಾಟಕ ರಾಜ್ಯದಲ್ಲಿ ಪೊಲೀಸು ದಳವನ್ನು ವಿನಿಯಮನಗೊಳಿಸುವುದಕ್ಕಾಗಿ ರಾಜ್ಯ ಸರಕಾರದಿಂದ ಮತ್ತು ಅಂಥ ದಳದವರಿಂದ ಅಧಿಕಾರಗಳು ಚಲಾಯಿಸಲ್ಪಡುವುದಕ್ಕಾಗಿ ಮತ್ತು ಪ್ರಕಾರ್ಯಗಳು ನೆರವೇರಿಸಲ್ಪಡುವುದಕ್ಕಾಗಿ, ಸಾರ್ವಜನಿಕ ಸುವ್ಯವಸ್ಥೆಯ ರಕ್ಷಣೆಗಾಗಿ, ಜೂಜಾಟದ ನಿರೋಧಕ್ಕಾಗಿ ಮತ್ತು ಈ ಮುಂದೆ ಕಂಡುಬರುವ ಕೆಲವು ಇತರ ಉದ್ದೇಶಗಳಿಗಾಗಿ ಏಕರೂಪದ ಕಾನೂನನ್ನು ಉಪಬಂಧಿಸುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿನಾಲ್ಕನೆಯ ವರುಷದಲ್ಲಿ, ಕರ್ನಾಟಕ ರಾಜ್ಯದ ವಿಧಾನ ಮಂಡಲದಿಂದ ಈ ಮುಂದೆ ಹೇಳಿರುವಂತೆ ಅಧಿನಿಯಮಿಸಲಾಗಿದೆ :–

### ಅಧ್ಯಾಯ – I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ :–** (1) ಈ ಅಧಿನಿಯಮವನ್ನು, ಕರ್ನಾಟಕ ಪೊಲೀಸು ಅಧಿನಿಯಮ, 1963 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

*(3) ಇದು ರಾಜ್ಯ ಸರಕಾರವು ಸರಕಾರೀ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನೇಮಿಸಬಹುದಾದ ತಾರೀಖಿನಂದು ಜಾರಿಯಲ್ಲಿ ಬರತಕ್ಕದ್ದು.

**2. ಪರಿಭಾಷೆಗಳು :–** ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ, ಈ ಅಧಿನಿಯಮದಲ್ಲಿ, –

(1) "ದನ" ಎಂದರೆ ಹಸುಗಳು, ಎತ್ತುಗಳು, ಹೋರಿಗಳು, ಕರುಗಳು, ಎಮ್ಮೆಗಳು, ಆನೆಗಳು, ಒಂಟೆಗಳು, ಕುದುರೆಗಳು, ಹೆಣ್ಣು ಕುದುರೆಗಳು, ಬೀಜವೊಡೆದ ಕುದುರೆಗಳು, ತಟ್ಟುಗಳು, ಕುದರೆಯ ಗಂಡುಮರಿಗಳು, ಕುದುರೆಯ ಹೆಣ್ಣು ಮರಿಗಳು, ಕತ್ತೆಗಳು, ಹೇಸರುಗತ್ತೆಗಳು, ಹಂದಿಗಳು, ಟಗರುಗಳು, ಹೆಣ್ಣು ಕುರಿಗಳು, ಕುರಿಗಳು, ಕುರಿಮರಿಗಳು, ಆಡುಗಳು ಮತ್ತು ಆಡು ಮರಿಗಳು ;

* ಈ ಅಧಿನಿಯಮವು 1965 ರ ಏಪ್ರಿಲ್ ಎರಡನೆಯ ತಾರೀಖಿನಂದು ಜಾರಿಗೆ ಬಂದಿದೆ.

(2) "ಬೆಂಗಳೂರು ನಗರ" ಎಂದರೆ, ಬೆಂಗಳೂರು ನಗರ ಪೌರ ನಿಗಮದ ಅಧಿನಿಯಮ, 1949ರಲ್ಲಿ (1949ರ ಕರ್ನಾಟಕ ಅಧಿನಿಯಮ ಕ್ರಮಾಂಕ LXIX) ತತ್ಕಾಲದಲ್ಲಿ ಪರಿಭಾಷಿಸಿದಂತೆ ಇರುವ ಬೆಂಗಳೂರು ನಗರದ ಮೇರೆಗಳೊಳಗಿರುವ ಪ್ರದೇಶ ಮತ್ತು ಸರಕಾರವು ಕಾಲಕಾಲಕ್ಕೆ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಉಲ್ಲೇಖಿಸಬಹುದಾದಂಥ ದೂರದಲ್ಲಿರುವ ಅಂಥ ಮೇರೆಗಳಿಗೆ ಹೊಂದಿಕೊಂಡಿರುವ ಇತರೆ ಪ್ರದೇಶಗಳೂ ಸೇರುತ್ತವೆ;

(3) "ಸಾಮಾನ್ಯ ಜೂಜಿನ ಮನೆ" ಎಂದರೆ, ಒಂದು ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ, ಅಥವಾ ಸ್ಥಳದ ಒಡೆಯನ, ಆಧಿಭೋಗದಾರನ ಅಥವಾ ಅದನ್ನು ನೋಡಿಕೊಳ್ಳುವವನ ಅಥವಾ ಅದನ್ನು ಉಪಯೋಗಿಸಲು ಹಕ್ಕುಳ್ಳವನಾಗಿರಲಿ ಇಲ್ಲದಿರಲಿ ಅದನ್ನು ಉಪಯೋಗಿಸುತ್ತಿರುವ ವ್ಯಕ್ತಿಯ ಲಾಭ ಅಥವಾ ಸಂಪಾದನೆ, ಜೂಜಿನ ಉಪಕರಣಗಳನ್ನು ಇಟ್ಟಿರುವ ಅಥವಾ ಉಪಯೋಗಿಸುತ್ತಿರುವ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ ಅಥವಾ ಸ್ಥಳ; ಹಾಗೂ ಅಂಥ ಲಾಭ ಅಥವಾ ಸಂಪಾದನೆಯು ಜೂಜಿನ ಉಪಕರಣಗಳ ಅಥವಾ ಕಟ್ಟಡ ಕೊಠಡಿ, ಡೇರೆ, ಆವರಣ, ವಾಹನ, ನೌಕೆ ಅಥವಾ ಸ್ಥಳದ ಉಪಯೋಗದ ಬಗ್ಗೆ ಚಾರ್ಜಿನ ರೂಪದಲ್ಲಿರುವ ಲಾಭ ಅಥವಾ ಸಂಪಾದನೆಯಾಗಿದ್ದು ಅಥವಾ ಬೇರೆ ಯಾವುದೇ ಪ್ರಕಾರದ್ದಾಗಿದ್ದು ಅಥವಾ ಜೂಜಿನ ಉಪಕರಣಗಳ ಅಥವಾ ಕಟ್ಟಡದ, ಕೊಠಡಿಯ, ಡೇರೆಯ, ಆವರಣದ, ವಾಹನದ, ನೌಕೆಯ ಅಥವಾ ಜೂಜಿನ ಉದ್ದೇಶದ ಸ್ಥಳದ ಉಪಯೋಗದೊಂದಿಗೆ ಸೌಲಭ್ಯದ ಉಪಯೋಗದ ಬಗ್ಗೆ ಚಂದಾ ರೂಪದಲ್ಲಿ ಅಥವಾ ಇತರ ಪಾವತಿಯ ರೂಪದಲ್ಲಿದ್ದುದಾಗಿರತಕ್ಕದ್ದು.

ವಿವರಣೆ :– ಈ ಖಂಡದಲ್ಲಿ 'ವ್ಯಕ್ತಿ' ಎಂಬುವಲ್ಲಿ, ಕಂಪೆನಿ, ಸಂಘ, ಕ್ಲಬ್ ಅಥವಾ ವ್ಯಕ್ತಿಗಳ ಇತರ ನಿಕಾಯ ಅದು ನಿಗಮಿತವಾಗಿರಲಿ ಅಥವಾ ಇಲ್ಲದಿರಲಿ ಒಳಗೊಂಡಿರುತ್ತದೆ.

(4) "ಅಧಿಕೃತ ಪ್ರಾಧಿಕಾರಿ" ಎಂಬ ಪದಗಳಿಗೆ, ಈ ಅಧಿನಿಯಮದ ಉಪಬಂಧಗಳ ಮೇರೆಗಿನ ಯಾವುದೇ ಅಧಿಕಾರದ, ಕರ್ತವ್ಯದ ಅಥವಾ ಪ್ರಕಾರ್ಯದ ಚಲಾವಣೆ ಅಥವಾ ನಿರ್ವಹಣೆಗೆ ಉಪಯೋಗಿಸಲಾಗುವಾಗ ಆ ಪದಕ್ಕೆ,–

(ಎ) 7ನೇ ಪ್ರಕರಣದ ಮೇರೆಗೆ ಬೆಂಗಳೂರು ನಗರ ಮತ್ತು ಇತರ ಪ್ರದೇಶಗಳಿಗಾಗಿ ಪೋಲೀಸು ಕಮೀಷನರು ನೇಮಕವಾಗಿರುವಲ್ಲಿ, ಕಮೀಷನರು ಎಂದೂ,

(ಬಿ) (ಎ) ಖಂಡದಲ್ಲಿ ಉಲ್ಲೇಖಿಸಿದ ಪ್ರದೇಶಗಳನ್ನುಳಿದ ಇತರ ಪ್ರದೇಶಗಳ ಸಂಬಂಧದಲ್ಲಿ, ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಸೂಪರಿಂಟೆಂಡೆಂಟು ಅಥವಾ ಅಪರ ಸೂಪರಿಂಟೆಂಡೆಂಟು;

ಅಥವಾ ಆ ಬಗ್ಗೆ ವಿಶೇಷವಾಗಿ ಸರಕಾರದಿಂದ ಅಧಿಕಾರ ಪಡೆದ ಸಹಾಯಕ ಅಥವಾ ಉಪ ಸೂಪರಿಂಟೆಂಡೆಂಟೂ ಎಂದು ಅಥವಾ

(5) "ಜಿಲ್ಲೆ" ಎಂದರೆ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1898ರ ಉದ್ದೇಶಗಳಿಗಾಗಿ ಜಿಲ್ಲೆ ಎಂದು ರಚಿಸಲಾಗಿರುವ ಪ್ರಾದೇಶಿಕ ವಿಭಾಗ; ಆದರೆ ಅದರಲ್ಲಿ ಬೆಂಗಳೂರು ನಗರ ಅಥವಾ 7ನೆಯ ಪ್ರಕರಣದ (1)ನೆಯ ಉಪಪ್ರಕರಣದ ಮೇರೆಗೆ ನಿರ್ದೇಶಿಸಲಾದ ಯಾವುದೇ ಪ್ರದೇಶವು ಸೇರುವುದಿಲ್ಲ.

(6) (ಎ) "ಜಿಲ್ಲಾ ಮ್ಯಾಜಿಸ್ಟ್ರೇಟ್" ಎಂದರೆ, ಜಿಲ್ಲಾ ಮ್ಯಾಜಿಸ್ಟ್ರೇಟನ ಅಥವಾ ಅಪರ ಜಿಲ್ಲಾ ಮ್ಯಾಜಿಸ್ಟ್ರೇಟನ ಅಧಿಕಾರಗಳನನು ಚಲಾಯಿಸುವ ರೆವಿನ್ಯೂ ಜಿಲ್ಲೆಯ ಡೆಪ್ಯೂಟಿ ಕಮೀಷನರು; ಅಥವಾ ಅಪರ ಜಿಲ್ಲಾ ಮ್ಯಾಜಿಸ್ಟ್ರೇಟು ;

(ಬಿ) "ಸಬ್–ಡಿವಿಜನಲ್ ಮ್ಯಾಜಿಸ್ಟ್ರೇಟ್" ಎಂದರೆ, ಮೊದಲನೆಯ ವರ್ಗದ ಮ್ಯಾಜಿಸ್ಟ್ರೇಟನ ಅಧಿಕಾರಗಳನ್ನು ಚಲಾಯಿಸುವ ರೆವಿನ್ಯೂ ಸಬ್–ಡಿವಿಜನ್ನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮೀಷನರು;

(7) "ಜೂಜಾಡುವುದು" ಎಂಬುದರಲ್ಲಿ ಲಾಟರಿ ಸೇರುವುದಿಲ್ಲ; ಆದರೆ ಕುದುರೆ ಪಂದ್ಯದಲ್ಲಿ ಪಣಕಟ್ಟುವುದು;

(i) ಅಂಥ ಪಂದ್ಯವು ನಡೆಯುವ ದಿನದಂದು; ಮತ್ತು

(ii) ಪಂದ್ಯ ನಡೆಯಲಿರುವ ಪಂದ್ಯ ಪ್ರದೇಶದ ಲೈಸೆನ್ಸುದಾರನು ಪಂದ್ಯ ಪ್ರದೇಶದ ಸಂಬಂಧದಲ್ಲಿ, ಕರ್ನಾಟಕ ರೇಸ್‌ಕೋರ್ಸ್‌ಸ್ ಲೈಸೆನ್ಸು ಕೊಡುವಿಕೆ ಅಧಿನಿಯಮದ (1952ರ ಮೈಸೂರು ಅಧಿನಿಯಮದ viii) 4ನೆಯ ಪ್ರಕರಣದ ಮೇರೆಗೆ ಕೊಡಲಾದ ಲೈಸೆನ್ಸಿನ ನಿರ್ಬಂಧಗಳ ಮೇರೆಗೆ ಈ ಉದ್ದೇಶಗಳಿಗಾಗಿ ಪ್ರತ್ಯೇಕವಾಗಿರಿಸಿರುವ ಆವರಣದಲ್ಲಿ; ಮತ್ತು

(iii) ಅಂಥ ಅವರಣದಲ್ಲಿ ಹಾಜರಿರುವ ವ್ಯಕ್ತಿ ಒಂದು ಕಡೆ ಮತ್ತು ಅಂಥ ಲೈಸೆನ್ಸುದಾರನು ಅಥವಾ ಅಂಥ ಲೈಸೆನ್ಸುದಾರನಿಂದ ಸದರಿ ಲೈಸೆನ್ಸಿನ ನಿರ್ಬಂಧಗಳಿಗನುಸಾರವಾಗಿ ಲೈಸೆನ್ಸು ಪಡೆದುಕೊಂಡ ಇತರ ವ್ಯಕ್ತಿ ಇನ್ನೊಂದು ಕಡೆ – ಈ ರೀತಿ ಅವರಿಬ್ಬರ ನಡುವೆ ಮತ್ತು ಅಂಥ ಲೈಸೆನ್ಸಿನಿಂದ ಅನುಮತಿ ಕೊಡಲ್ಪಡಬೇಕಾದಂಥ ಸಾಧನದಿಂದ ಪಂದ್ಯ ಅಥವಾ ಪಣ ಕಟ್ಟುವುದನ್ನುಳಿದು ಯಾವುದಾದರೂ ಜೂಜಾಟದ ಸಂದರ್ಭದಲ್ಲಿನ ಎಲ್ಲ ಪ್ರಕಾರದ ಪಂದ್ಯ ಅಥವಾ ಪಣ ಕಟ್ಟುವುದು ಸೇರುತ್ತದೆ.

ವಿವರಣೆ :– ಈ ಖಂಡದಲ್ಲಿ.

(i) "ಪಂದ್ಯ ಕಟ್ಟುವುದು ಅಥವಾ ಪಣ ಕಟ್ಟುವುದು' ಎಂಬುದರಲ್ಲಿ, ಪಣಗಳ ವಸೂಲಿ ಅಥವಾ ಅವುಗಳಿಗಾಗಿ ಕೋರಿಕೆ ಅಥವಾ ಅಂಥ ಪಂದ್ಯ ಅಥವಾ ಪಣ ಕಟ್ಟುವುದಕ್ಕೆ ಅಂಥ ವಸೂಲಿ, ಕೋರಿಕೆ, ಸ್ವೀಕಾರ ಅಥವಾ ಹಂಚಿಕೆಗೆ ಸಹಾಯವಾಗಲು ಅಥವಾ ಅನುಕೂಲವಾಗಲು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ ಲಾಭಗಳ ಅಥವಾ ಹಣ ಅಥವಾ ಇತರ ರೂಪದಲ್ಲಿರುವ ಬಹುಮಾನಗಳ ಸ್ವೀಕಾರ, ಅಥವಾ ಹಂಚಿಕೆ ಇವುಗಳು ಸೇರುತ್ತವೆ.

(ii) "ಜೂಜಾಟ" ಎಂಬುದರಲ್ಲಿ ಜೂಜಾಟ ಮತ್ತು ಚಾತುರ್ಯ ಸೇರಿರುವ ಆಟ ಮತ್ತು ಜೂಜಾಟವೆಂದು ಅಥವಾ ಜೂಜಾಟ ಮತ್ತು ಚಾತುರ್ಯ ಸೇರಿರುವುದೆಂದು ನಟಿಸುವ ಆಟ, ಇವುಗಳು ಸೇರುತ್ತವೆ. ಆದರೆ ಅಂಗಸಾಧನೆಯ ಆಟ ಅಥವಾ ಕ್ರೀಡೆ ಇದರಲ್ಲಿ ಸೇರುವುದಿಲ್ಲ.

(8) "ಸರಕಾರ" ಎಂದರೆ, ರಾಜ್ಯ ಸರಕಾರ;

(9) "ಹೆಡ್ ಕಾನ್‌ಸ್ಟೇಬಲ್" ಎಂದರೆ ಕಾನ್‌ಸ್ಟೇಬಲ್‌ನ ಅಥವಾ ಅದರ ಮೇಲಿನ ದರ್ಜೆಯ ಅಧಿಕಾರಿ ಮತ್ತು "ಕಾನ್‌ಸ್ಟೇಬಲ್" ಎಂದರೆ ಅತಿ ಕೆಳಗಿನ ವರ್ಗದ ಪೊಲೀಸ್ ಅಧಿಕಾರಿ;

(10) "ಇನ್ಸ್‌ಪೆಕ್ಟರ್ ಜನರಲ್, ಕಮೀಷನರು, ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್, ಡೆಪ್ಯೂಟಿ ಕಮೀಷನರು, ಅಸಿಸ್ಟೆಂಟ್ ಕಮೀಷನರು, ಸೂಪರಿಂಟೆಂಡೆಂಟು, ಅಪರ ಸೂಪರಿಂಟೆಂಡೆಂಟು" ಎಂದರೆ, ಅನುಕ್ರಮವಾಗಿ ಈ ಅಧಿನಿಯಮದ ಮೇರೆಗೆ ನೇಮಕ ಹೊಂದಿರುವ ಅಥವಾ ನೇಮಕ ಹೊಂದಿರುವರೆಂದು ಭಾವಿಸಲಾಗುವ ಪೊಲೀಸು ಇನ್ಸ್‌ಪೆಕ್ಟರ್ ಜನರಲ್, ಪೊಲೀಸು ಕಮೀಷನರು, ಪೊಲೀಸ್ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್, ಪೊಲೀಸು ಡೆಪ್ಯೂಟಿ ಕಮೀನಷರ್, ಅಸಿಸ್ಟೆಂಟ್ ಕಮೀಷನರು, ಪೊಲೀಸು ಸೂಪರಿಂಟೆಂಡೆಂಟು, ಪೊಲೀಸು ಅಪರ ಸೂಪರಿಂಟೆಂಡೆಂಟು, ಪೊಲೀಸು ಸಹಾಯಕ ಸೂಪರಿಂಟೆಂಡೆಂಟು ಮತ್ತು ಪೊಲೀಸು ಡೆಪ್ಯೂಟಿ ಸೂಪರಿಂಟೆಂಡೆಂಟು;

(11) "ಜೂಜಾಟದ ಉಪಕರಣಗಳು" ಎಂಬುದರಲ್ಲಿ, ಜೂಜಿನ ಪದಾರ್ಥವಾಗಿ ಅಥವಾ ಸಾಧನವಾಗಿ ಉಪಯೋಗಿಸಲಾದ ಅಥವಾ ಉಪಯೋಗಿಸಲು ಉದ್ದೇಶಿಸಲಾದ ಯಾವುದೇ ವಸ್ತು, ಯಾವುದೇ ಜೂಜಾಟದ ಅಭಿಲೇಖ, ಸಾಕ್ಷ್ಯ ಅಥವಾ ರಿಜಿಸ್ಟರಂತೆ ಉಪಯೋಗಿಸಲಾದ ಅಥವಾ ಉಪಯೋಗಿಸಲು ಉದ್ದೇಶಿಸಲಾದ ಯಾವುದೇ ದಸ್ತಾವೇಜು, ಯಾವುದೇ ಜೂಜಾಟದ ಉತ್ಪತ್ತಿಗಳು ಮತ್ತು ಯಾವುದೇ ಜೂಜಾಟದ ಸಂಬಂಧದಲ್ಲಿ ಹಂಚಲಾದ ಅಥವಾ ಹಂಚಲು ಉದ್ದೇಶಿಸಲಾದ ಯಾವುವೇ ಲಾಭಗಳು, ಹಣದ ರೂಪಗಳು ಅಥವಾ ಹಣದ ಅಥವಾ ಬೇರೆ ರೂಪದಲ್ಲಿರುವ ಬಹುಮಾನಗಳು ಒಳಗೊಳ್ಳುತ್ತವೆ.

(12) "ಮುನ್ಸಿಪಾಲಿಟಿ..." ಎಂದರೆ, ಕರ್ನಾಟಕ ರಾಜ್ಯದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಮುನಿಸಿಪಾಲಿಟಿಗಳಿಗೆ ಸಂಬಂಧಿಸಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚಿತವಾದ ಅಥವಾ ರಚಿತವಾಗಿದೆ ಎಂದು ಭಾವಿಸಲಾಗುವ ಮುನಿಸಿಪಾಲಿಟಿ.

(13) "ಸ್ಥಳ" ಎಂಬುದರಲ್ಲಿ ಖಾಯಂ ಆದ ಅಥವಾ ಹಂಗಾಮಿಯಾದ ಕಟ್ಟಡ, ಡೇರೆ, ಮಂಟಪ ಅಥವಾ ಇತರ ನಿರ್ಮಾಣ ಇವು ಆವೃತವಾದ ಅಥವಾ ತೆರೆದ ಯಾವುದೇ ಪ್ರದೇಶ.

(14) "ಸಾರ್ವಜನಿಕ ವಿನೋದ ಸ್ಥಳ" ಎಂದರೆ, ಯಾವ ಸ್ಥಳದಲ್ಲಿ ಸಂಗೀತ, ಹಾಡುಗಾರಿಕೆ, ನರ್ತನ ಅಥವಾ ವಿಹಾರ ಅಥವಾ ಆಟ ಇವುಗಳಿಗಾಗಿರುವ ಅಥವಾ ಇವುಗಳಿಗಾಗಿ ಬೇಕಾಗಿರುವ ಸಾಧನ, ಒದಗಿಸಿರುವ ಮತ್ತು ಸಾರ್ವಜನಿಕರಿಗೆ ಪ್ರವೇಶವಿರುವ ಯಾವುದಾದರೂ ಸ್ಥಳ ಮತ್ತು ಅದರಲ್ಲಿ ಪಂದ್ಯ ಪ್ರವೇಶ, ಸರ್ಕಸ್, ನಾಟಕಶಾಲೆ, ಸಂಗೀತ ಮಂದಿರ, ಬಿಲಿಯರ್ಡ್ ಕೊಠಡಿ, ಬೆಗಾಟೆಲೆ ಕೊಠಡಿ, ವ್ಯಾಯಾಮ ಶಾಲೆ, ಖಡ್ಗಶಾಲೆ, ಈಜುಕೊಳ ಅಥವಾ ನೃತ್ಯಮಂದಿರ ಇವುಗಳು ಒಳಗೊಳ್ಳುತ್ತವೆ.

(15) "ಸಾರ್ವಜನಿಕ ಮನೋರಂಜನೆಯ ಸ್ಥಳ" ಎಂದರೆ, ಸಾರ್ವಜನಿಕರಿಗೆ ಪ್ರವೇಶವುಳ್ಳ ಯಾವುದೇ ತನಕ ಸ್ಥಳ ಮತ್ತು ಅಂಥ ಸ್ಥಳದ ಒಡೆತನವನ್ನು ಹೊಂದಿರುವ ಅಥವಾ ಅದರಲ್ಲಿ ಹಿತಾಸಕ್ತಿಯನ್ನುಳ್ಳ ಅಥವಾ ಅದರ ವ್ಯವಸ್ಥೆಯನ್ನು ನೋಡಿಕೊಳ್ಳುವಂಥ ವ್ಯಕ್ತಿಯಿಂದ ಆ ಆವರಣದಲ್ಲಿ ನೇಮಿಸುವುದಕ್ಕಾಗಿ ಯಾವುದೇ ಆಹಾರ ಅಥವಾ ಪಾನೀಯಗಳನ್ನು ಒದಗಿಸುವ ಯಾವುದೇ ಸ್ಥಳ ಮತ್ತು ಅದರಲ್ಲಿ ಉಪಹಾರ ಗೃಹ, ಊಟದಮನೆ (ಖಾನಾವಳಿ) ಕಾಫಿಮನೆ, ಕಾಫಿಗೃಹ (ಬೂಂದುಮನೆ), ಮದ್ಯಪಾನ ಸ್ಥಳ, ಭೋಜನಗೃಹ, ವಸತಿಗೃಹ, ಹೊಟೇಲು, ತಿಂಡಿ/ಮದ್ಯಅಂಗಡಿ ಅಥವಾ ದ್ರಾಕ್ಷಾ, ಮದ್ಯ, ಬೀರು ಸ್ಪಿರಿಟ್, ಸಾರಾಯಿ, ಹೆಂಡ, ಗಾಂಜ ಅಥವಾ ಬೇರೆ ಪ್ರಕಾರ ಮದ್ಯ ಅಥವಾ ಮಾದಕ ಪದಾರ್ಥ ಅಥವಾ ಯಾವುದೇ ಪ್ರಕಾರದ ಆಹಾರ

ಅಥವಾ ಪಾನೀಯವನ್ನು ಅಂಗಡಿಯಲ್ಲಿ ಅಥವಾ ಅದರ ಬಳಿಯಲ್ಲಿ ಸಾರ್ವಜನಿಕರ ಸೇವನೆಗಾಗಿ ಒದಗಿಸಲಾಗುವ ಅಂಗಡಿಯು ಒಳಗೊಳ್ಳುತ್ತದೆ, ಅಥವಾ ಸೇರುತ್ತದೆ.

(16) "ಪೊಲೀಸು ಅಧಿಕಾರಿ" ಎಂದರೆ, ಈ ಅಧಿನಿಯಮದ ಮೇರೆಗೆ ನೇಮಕ ಮಾಡಲಾದ ಅಥವಾ ಮಾಡಲಾದವನೆಂದು ಭಾವಿಸಲಾಗುವ ಪೊಲೀಸು ದಳದ ಯಾವೊಬ್ಬ ಅಧಿಕಾರಿ ಸದಸ್ಯನು ಮತ್ತು ಅದರಲ್ಲಿ 19 ಅಥವಾ 20ನೆಯ ಪ್ರಕರಣದ ಮೇರೆಗೆ ನೇಮಕವಾದ ವಿಶೇಷ ಅಥವಾ ಅಪರ ಪೊಲೀಸು ಅಧಿಕಾರಿಯೂ ಒಳಗೊಳ್ಳುತ್ತಾನೆ.

(17) "ನಿಯಮಿಸಲಾದ" ಎಂದರೆ, ನಿಯಮಗಳಿಂದ ನಿಯಮಿಸಲಾದುದು;

(18) "ಸಾರ್ವಜನಿಕ ಸ್ಥಳ" ಎಂಬುದರಲ್ಲಿ, ಮುಂಗರೆ, ಪ್ರತಿಯೊಂದು ಸಾರ್ವಜನಿಕ ಕಟ್ಟಡದ ಅಥವಾ ಸ್ಮಾರಕದ ಪ್ರಕಾರ ಮತ್ತು ನೀರು ತೆಗೆದುಕೊಳ್ಳುವುದಕ್ಕಾಗಿ, ಒಗೆಯುವುದಕ್ಕಾಗಿ ಅಥವಾ ಸ್ನಾನಕ್ಕಾಗಿ ಅಥವಾ ವಿಹಾರದ ಉದ್ದೇಶಕ್ಕಾಗಿ ಸಾರ್ವಜನಿಕರಿಗೆ ಪ್ರವೇಶವಿರುವಂಥ ಎಲ್ಲ ಸ್ಥಳಗಳು ಒಳಗೊಳ್ಳುತ್ತವೆ;

(19) "ನಿಯಮಗಳು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳು;

(20) "ಬೀದಿ" ಎಂಬುದರಲ್ಲಿ ಯಾವುದೇ ಹೆದ್ದಾರಿ, ಸೇತುವೆ, ಒಡ್ಡಿನ ಮೇಲಿನ ದಾರಿ, ಸೇತುವೆ ತಾಕದ ದಾರಿ, ವೈಯಡಕ್ ಕಮಾನು, ಹಡಗುಕಟ್ಟೆ ಅಥವಾ ಬಂದರುಕಟ್ಟೆ ಅಥವಾ ಸಾರ್ವಜನಿಕರಿಗೆ ಅವಕಾಶವಿರುವ ಯಾವುದೇ ರಸ್ತೆ, ಓಣಿ, ಕಾಲುದಾರಿ, ಚೌಕ, ಅಂಗಣ, ಸಂದಿ ಅಥವಾ ಹಾದಿ ಅದು ಸಾರ್ವಜನಿಕ ರಸ್ತೆಯಾಗಿರಲಿ ಅಥವಾ ಇಲ್ಲದಿರಲಿ, ಒಳಗೊಳ್ಳುತ್ತದೆ;

(21) "ಅಧೀನ ಪೊಲೀಸು" ಎಂದರೆ, ಇನ್ಸ್‌ಪೆಕ್ಟರನ ದರ್ಜೆಯ ಅಥವಾ ಅವನ ಕೆಳದರ್ಜೆಯ ಪೊಲೀಸು ದಳದ ಅಧಿಕಾರಿಗಳು;

(22) "ವರಿಷ್ಠ ಪೊಲೀಸು" ಎಂದರೆ ಇನ್ಸ್‌ಪೆಕ್ಟರನಿಗಿಂತ ಮೇಲ ದರ್ಜೆಯ ಪೊಲೀಸು ದಳದ ಅಧಿಕಾರಿಗಳು;

(23) "ವಾಹನ" ಎಂದರೆ ಯಾವುದೇ ಗಾಡಿ, ಬಂಡಿ, ವ್ಯಾನು, ಸಾಮಾನು ಗಾಡಿ, ಸಾಮಾನು ಎಳೆಯುವ ಕುದುರೆಗಾಡಿ, ಟ್ರಕ್, ಕೈಗಾಡಿ ಅಥವಾ ಯಾವುದೇ ಬಗೆಯ ಇತರ ವಾಹನ ಮತ್ತು ಅದರಲ್ಲಿ ಬೈಸಿಕಲ್ಲು ಮತ್ತು ಮೂರು ಚಕ್ರದ ಸೈಕಲ್ಲು, ರಿಕ್ಷಾ, ಮೋಟಾರು ಗಾಡಿ, ನೌಕೆ ಅಥವಾ ವಿಮಾನ ಇವುಗಳೂ ಒಳಗೊಳ್ಳುತ್ತವೆ.

(24) ಈ ಅಧಿನಿಯಮದಲ್ಲಿ ಪರಿಭಾಷಿಸದೆ ಇರುವ ಮತ್ತು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ (1898ರ ಕೇಂದ್ರ ಅಧಿನಿಯಮಾಂಕ v) ಯಲ್ಲಿ ಪರಿಭಾಷಿಸಿರುವ ಶಬ್ದಗಳಿಗೆ ಮತ್ತು ಪದಗಳಿಗೆ ಆ ಸಂಹಿತೆಯಲ್ಲಿ ಇರುವ ಅರ್ಥವೇ ಇರತಕ್ಕದ್ದು.

## ಅಧ್ಯಾಯ – II

## ಪೊಲೀಸು ದಳದ ಅಧೀಕ್ಷಣೆ, ನಿಯಂತ್ರಣ ಮತ್ತು ವ್ಯವಸ್ಥೆ

3. **ಇಡೀ ರಾಜ್ಯಕ್ಕಾಗಿ ಒಂದು ಪೊಲೀಸು ದಳ :–** ಇಡೀ ರಾಜ್ಯಕ್ಕಾಗಿ ಒಂದು ಪೊಲೀಸು ದಳ ಇರತಕ್ಕದ್ದು :

ಪರಂತು, ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ನಿಕಟ ಪೂರ್ವದಲ್ಲಿ 1ನೆಯ ಅನುಸೂಚಿಯಲ್ಲಿ ಹೇಳಲಾದ ಅಧಿನಿಯಮಗಳ ಪೈಕಿ ಯಾವುದರ ಮೇರೆಗೆ ರಚಿಸಲಾದ ಪೊಲೀಸು ದಳಗಳ ಅಧಿಕಾರಿಗಳು ಸದರಿ ಪೊಲೀಸ್ ದಳದ ಅಧಿಕಾರಿಗಳೆಂದು ಭಾವಿಸಲ್ಪಡತಕ್ಕದ್ದು.

4. **ಪೊಲೀಸು ದಳದ ಅಧೀಕ್ಷಣೆಯು ಸರಕಾರದಲ್ಲಿ ನಿಹಿತವಾಗಿರುವುದು :–** ರಾಜ್ಯಾದ್ಯಂತ ಪೊಲೀಸು ದಳದ ಅಧೀಕ್ಷಣೆಯು ಸರಕಾರದಲ್ಲಿ ನಿಹಿತವಾದದ್ದು ಅದರಿಂದ ಚಲಾಯಿಸಲಾಗತಕ್ಕದ್ದು ಮತ್ತು ಪೊಲೀಸು ದಳದ ಯಾವನೊಬ್ಬನ ಮೇಲೆ ಯಾವನೇ ಅಧಿಕಾರಿಯು ಚಲಾಯಿಸಬಹುದಾದ ಯಾವುದೇ ನಿಯಂತ್ರಣ, ನಿದೇಶನ ಅಥವಾ ಮೇಲ್ವಿಚಾರಣೆಯು ಅಂಥ ಅಧೀಕ್ಷಣೆಗೊಳಪಟ್ಟು ಚಲಾಯಿಸಲ್ಪಡತಕ್ಕದ್ದು.

5. **ಪೊಲೀಸು ದಳದ ರಚನೆ :–** ಸಂವಿಧಾನದ 309ನೆಯ ಅನುಚ್ಛೇದದ ಮೇರೆಗೆ ಮಾಡಲಾದ ಉಪಬಂಧಗಳಿಗೆ ಮತ್ತು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು,–

(ಎ) ಪೊಲೀಸು ದಳವು ಸರಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ಧರಿಸಬಹುದಾದಷ್ಟು ದರ್ಜೆ ಮತ್ತು ಸಂಖ್ಯೆಯಿಂದೊಡಗೊಂಡಿರತಕ್ಕದ್ದು ಮತ್ತು ನಿರ್ಧರಿಸಬಹುದಾದಂಥ ವ್ಯವಸ್ಥೆ ಮತ್ತು ಅಧಿಕಾರಗಳನ್ನು, ಪ್ರಕಾರ್ಯಗಳನ್ನು ಮತ್ತು ಅಂಥ ಕರ್ತವ್ಯಗಳನ್ನು ಹೊಂದಿರತಕ್ಕದ್ದು;

(ಬಿ) ಪೊಲೀಸು ದಳದ ನೌಕರಿ ಭರ್ತಿ, ಸಂಬಳ, ಭತ್ಯೆಗಳು ಮತ್ತು ಸೇವೆಯ ಎಲ್ಲ ಇತರ ಷರತ್ತುಗಳು ಕಾಲಕಾಲಕ್ಕೆ ನಿಯಮಿಸಬಹುದಾದಂಥವುಗಳಾಗಿರತಕ್ಕದ್ದು :

ಪರಂತು –

(i) 3ನೆಯ ಪ್ರಕರಣದ ಪರಂತುಕದಲ್ಲಿ ಉಲ್ಲೇಖಿಸಿದ ಪೊಲೀಸ್ ದಳಗಳ ಅಧಿಕಾರಿಗಳ ನೌಕರಿಭರ್ತಿ, ಸಂಬಳ ಭತ್ಯೆಗಳು ಮತ್ತು ಸೇವೆಯ ಇತರ ಷರತ್ತುಗಳನ್ನು ವಿನಿಮಯಗೊಳಿಸುವ ನಿಯಮಗಳು ಅಥವಾ ಆದೇಶಗಳು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಬದಲಾಯಿಸುವ ಅಥವಾ ರದ್ದುಗೊಳಿಸುವವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು

(ii) ಈ ಖಂಡದಲ್ಲಿರುವ ಯಾವುದೂ ಭಾರತೀಯ ಪೊಲೀಸು ಮತ್ತು ಭಾರತೀಯ ಪೊಲೀಸ್ ಸೇವೆಯ ಅಧಿಕಾರಿಗಳ ನೌಕರಿಭರ್ತಿ, ಸಂಬಳ, ಭತ್ಯೆಗಳು ಮತ್ತು ಸೇವೆಯ ಷರತ್ತುಗಳಿಗೆ ಅನ್ವಯಿಸತಕ್ಕದ್ದಲ್ಲ.

6. **ಇನ್ಸ್‌ಪೆಕ್ಟರ್ ಜನರಲ್ ಮತ್ತು ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ :–** (1) ಸರಕಾರವು, ಪೊಲೀಸು ದಳದ ನಿರ್ದೇಶನಕ್ಕಾಗಿ ಮತ್ತು ಮೇಲ್ವಿಚಾರಣೆಗಾಗಿ ಇನ್ಸ್‌ಪೆಕ್ಟರ್ ಜನರಲ್, ಪೊಲೀಸನನ್ನು ನೇಮಕ ಮಾಡತಕ್ಕದ್ದು ಮತ್ತು ಅವನು ರಾಜ್ಯ ಸರಕಾರದ ನಿಯಂತ್ರಣಕ್ಕೊಳಪಟ್ಟು ಈ ಅಧಿನಿಯಮದ ಅಥವಾ ಅದರ ಮೇರೆಗೆ ಉಪಬಂಧಿಸಲಾಗುವಂಥ ಅಧಿಕಾರಗಳನ್ನು ಚಲಾಯಿಸತಕ್ಕದು ಮತ್ತು ಅಂಥ ಪ್ರಕಾರ್ಯಗಳನ್ನು ಮತ್ತು

ಕರ್ತವ್ಯಗಳನ್ನು ನೆರವೇರಿಸತಕ್ಕದ್ದು; ಮತ್ತು ಅಂಥ ಪ್ರಕಾರ್ಯಗಳನ್ನು ಮತ್ತು ಅಂಥ ಪ್ರಾಧಿಕಾರವನ್ನು ಹೊಂದಿರತಕ್ಕದ್ದು.

(2) (ಎ) ಸರಕಾರವು ತಾನು ಉಚಿತವೆಂದು ಭಾವಿಸುವಷ್ಟು ಸಂಖ್ಯೆಯ ಡೆಪ್ಯೂಟಿ ಇನ್ಸ್‌ಪೆಕ್ಟರ್ – ಜನರಲ್‌ಗಳನ್ನು ನೇಮಿಸಬಹುದು.

(ಬಿ) ಇನ್ಸ್‌ಪೆಕ್ಟರ್–ಜನರಲ್‌ನ ಯಾವುದೇ ಅಧಿಕಾರಗಳು, ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಮತ್ತು ಪ್ರಾಧಿಕಾರವನ್ನು ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್‌ನು ಚಲಾಯಿಸಬಹುದು, ನೆರವೇರಿಸಬಹುದು ಅಥವಾ ನಿರ್ವಹಿಸಬಹುದೆಂದು ಸರಕಾರವು ನಿರ್ದೇಶಿಸಬಹುದು.

(ಸಿ) ಸರಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಡೆಪ್ಯೂಟಿ ಇನ್ಸ್‌ಪೆಕ್ಟರ್ – ಜನರಲ್‌ನು ಇನ್ಸ್‌ಪೆಕ್ಟರ್ ಜನರಲ್‌ನಿಗೆ ಅವನ ಅಧಿಕಾರಗಳನ್ನು, ಪ್ರಕಾರ್ಯಗಳನ್ನು, ಕರ್ತವ್ಯಗಳನ್ನು, ಜವಾಬ್ದಾರಿಗಳನ್ನು ಮತ್ತು ಪ್ರಾಧಿಕಾರವನ್ನು ನೆರವೇರಿಸುವುದರಲ್ಲಿ, ಚಲಾಯಿಸುವುದರಲ್ಲಿ ಮತ್ತು ನಿರ್ವಹಿಸುವುದರಲ್ಲಿ ಆದೇಶದಲ್ಲಿ ನಿರ್ದೇಶಿಸಬಹುದಾದ ರೀತಿಯಲ್ಲಿ ಮತ್ತು ಆದಷ್ಟು ಮಟ್ಟಿಗೆ ಸಹಾಯ ಮಾಡತಕ್ಕದ್ದು ಮತ್ತು ನೆರವು ನೀಡತಕ್ಕದ್ದು ಎಂದು ಕೂಡಾ ನಿರ್ದೇಶಿಸಬಹುದು.

**7. ಕಮೀಷನರು :–** (1) ಸರಕಾರವು, ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್‌ನ ದರ್ಜೆಗೆ ಕಡಿಮೆಯಲ್ಲದ ಒಬ್ಬ ಪೊಲೀಸು ಅಧಿಕಾರಿಯನ್ನು ಬೆಂಗಳೂರು ನಗರಕ್ಕೆ ಅಥವಾ ಈ ಬಗ್ಗೆ ಸರಕಾರದಿಂದ ಹೊರಡಿಸಲಾದ ಮತ್ತು ಸರಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಬೇರೆ ಯಾವೊಂದು ಪ್ರದೇಶಕ್ಕೆ ಪೊಲೀಸು ಕಮೀಷನರನೆಂದು ನೇಮಕ ಮಾಡಬಹುದು.

(2) ಕಮೀಷನರು, ಈ ಅಧಿನಿಯಮದಿಂದ ಅಥವಾ ಅಧಿನಿಯಮದ ಮೇರೆಗೆ ಉಪಬಂಧಿಸಿರುವಂಥ ಅಥವಾ ಅನ್ಯಥಾ ಸರಕಾರದಿಂದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದೇಶಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದು, ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ಅಂಥ ಜವಾಬ್ದಾರಿಗಳನ್ನು ಮತ್ತು ಪ್ರಾಧಿಕಾರವನ್ನು ಹೊಂದಿರತಕ್ಕದ್ದು :

ಪರಂತು, ಸರಕಾರವು, ಕಮೀಷನರನು ಚಲಾಯಿಸಬೇಕಾದ, ನೆರವೇರಿಸಬೇಕಾದ ಅಥವಾ ನಿರ್ವಹಿಸಬೇಕಾದ, ಯಾವುದೇ ಅಧಿಕಾರ, ಪ್ರಕಾರ್ಯ, ಕರ್ತವ್ಯ, ಜವಾಬ್ದಾರಿಗಳು ಅಥವಾ ಪ್ರಾಧಿಕಾರವು ಇನ್ಸ್‌ಪೆಕ್ಟರ್ ಜನರಲ್ ನಿಯಂತ್ರಣಕ್ಕೊಳಪಟ್ಟು ಚಲಾಯಿಸಲ್ಪಡತಕ್ಕದ್ದು, ನೆರವೇರಿಸಲ್ಪಡತಕ್ಕದ್ದು ಅಥವಾ ನಿರ್ವಹಿಸಲ್ಪಡತಕ್ಕದ್ದು ಎಂದು ನಿರ್ದೇಶಿಸಬಹುದು:

ಮತ್ತು ಪರಂತು, ಈ ಅಧಿನಿಯಮದ ಮೇರೆಗೆ ಯಾವುದೇ ಪ್ರದೇಶಕ್ಕಾಗಿ ಕಮೀಷನರು ನೇಮಕವಾಗಿದ್ದು ಮತ್ತು ಯಾವುದೇ ಅಧಿಕಾರವನ್ನು ಚಲಾಯಿಸಲು ಅಥವಾ ಯಾವುದೇ ಪ್ರಕಾರ್ಯವನ್ನು ಅಥವಾ ಕರ್ತವ್ಯವನ್ನು ನೆರವೇರಿಸಲು ಅಧಿಕಾರ ನೀಡಿರುವಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟನು, ಅಂಥ ಪ್ರದೇಶವು ಅವನ ಪ್ರಾದೇಶಿಕ ಅಧಿಕಾರ ವ್ಯಾಪ್ತಿಗೊಳಪಟ್ಟ ಜಿಲ್ಲೆಯ ಭಾಗವಾಗಿದ್ದರೂ, ಅಂಥ ಪ್ರದೇಶದಲ್ಲಿ ಅದೇ ಅಧಿಕಾರಯನ್ನು ಚಲಾಯಿಸತಕ್ಕದ್ದಲ್ಲ ಅದೇ ಪ್ರಕಾರ್ಯ ಅಥವಾ ಕರ್ತವ್ಯವನ್ನು ನೆರವೇರಿಸತಕ್ಕದ್ದಲ್ಲ.

ಮತ್ತು ಪರಂತು, ಈ ಪ್ರಕರಣದ ಮೇರೆಗೆ ಯಾವ ಪ್ರದೇಶದ ಸಂಬಂಧದಲ್ಲಿ ಕಮೀಷನರ್ ನೇಮಕವಾಗಿದೆಯೋ ಆ ಪ್ರದೇಶದ, ಅದು ಸೂಪರಿಂಟೆಂಡೆಂಟನು ನೇಮಕವಾಗಿರಬಹುದಾದಂಥ ಪ್ರಾದೇಶಿಕ ವ್ಯಾಪ್ತಿಗೊಳಪಟ್ಟ ಜಿಲ್ಲೆಯ ಭಾಗವಾಗಿದ್ದರೂ ಕೂಡ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅನ್ಯಥಾ ಉಪಬಂಧಿಸಿದ ಹೊರತು ಈ ಅಧಿನಿಯಮದ ಯಾವುದಾದರೂ ಉದ್ದೇಶಗಳಿಗಾಗಿ ಸೂಪರಿಂಟೆಂಡೆಂಟಿನ ಚಾರ್ಜಿನಲ್ಲಿರತಕ್ಕದ್ದಲ್ಲ.

**8. ಸೂಪರಿಂಟೆಂಡೆಂಟ್, ಅಪರ, ಸಹಾಯಕ ಮತ್ತು ಡೆಪ್ಯೂಟಿ ಸೂಪರಿಂಟೆಂಡೆಂಟರುಗಳ ನೇಮಕ :–** (1) ಸರಕಾರವು ಪ್ರತಿಯೊಂದು ಜಿಲ್ಲೆಗೆ, ಅಥವಾ ಜಿಲ್ಲೆಯ ಭಾಗಕ್ಕೆ ಅಥವಾ ಒಂದು ಅಥವಾ ಹೆಚ್ಚು ಜಿಲ್ಲೆಗಳಿಗೆ ಒಬ್ಬ ಸೂಪರಿಂಟೆಂಡೆಂಟನನ್ನು ಮತ್ತು ಒಂದು ಅಥವಾ ಹೆಚ್ಚು ಅಪರ ಸೂಪರಿಂಟೆಂಡೆಂಟರನ್ನು ಮತ್ತು ಅದು ಯುಕ್ತವೆಂದು ಭಾವಿಸಬಹುದಾದಷ್ಟು ಪೊಲೀಸ್ ಸಹಾಯಕ ಮತ್ತು ಡೆಪ್ಯೂಟಿ ಸೂಪರಿಂಟೆಂಡೆಂಟರನ್ನು ನೇಮಕ ಮಾಡಬಹುದು.

(2) ಸರಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಪರ ಸೂಪರಿಂಟೆಂಡೆಂಟನನ್ನು, ಅವನು ನೇಮಿಸಲ್ಪಟ್ಟ ಜಿಲ್ಲೆಯಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ, ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನು ಮೇರೆಗೆ ಸೂಪರಿಂಟೆಂಡೆಂಟನು ಚಲಾಯಿಸಬಹುದಾದ ಅಥವಾ ನೆರವೇರಿಸಬಹುದಾದ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು, ಪ್ರಕಾರ್ಯಗಳನ್ನು ಅಥವಾ ಕರ್ತವ್ಯಗಳನ್ನು ಚಲಾಯಿಸಲು ಮತ್ತು ನೆರವೇರಿಸಲು ಅಧಿಕಾರನೀಡಬಹುದು.

(3) ಸೂಪರಿಂಟೆಂಡೆಂಟನು, ಸರಕಾರದ ಪೂರ್ವಮಂಜೂರಿಯೊಂದಿಗೆ, ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ತನಗೆ ಪ್ರದತ್ತವಾದ ಯಾವುದೇ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಸಹಾಯಕ ಅಥವಾ ಡೆಪ್ಯೂಟಿ ಸೂಪರಿಂಟೆಂಡೆಂಟನಿಗೆ ಪ್ರತಿ ನಿಯೋಜಿಸಬಹುದು.

**9. ನಿಸ್ತಂತು ವ್ಯವಸ್ಥೆ ಮತ್ತು ಮೋಟಾರು ಸಾರಿಗೆ ವ್ಯವಸ್ಥೆ ಅಥವಾ ಯಾವುದೇ ವಿಶೇಷ ಕರ್ತವ್ಯಕ್ಕಾಗಿ ಸೂಪರಿಂಟೆಂಡೆಂಟರ ನೇಮಕ :–** ಸರಕಾರವು ಇಡೀ ಕರ್ನಾಟಕ ರಾಜ್ಯಕ್ಕಾಗಿ ಅಥವಾ ಅದರ ಯಾವೊಂದು ಭಾಗಕ್ಕಾಗಿ ತಾನು ಉಚಿತವೆಂದು ಭಾವಿಸುವಂತೆ ಒಬ್ಬ ಅಥವಾ ಹೆಚ್ಚು ಜನ ಪೊಲೀಸು ಸೂಪರಿಂಟೆಂಡೆಂಟರನ್ನು

(1) ಪೊಲೀಸು ನಿಸ್ತಂತು ವ್ಯವಸ್ಥೆಗಾಗಿ,

(2) ಪೊಲೀಸು ಮೋಟಾರು ಸಾರಿಗೆ ವ್ಯವಸ್ಥೆಗಾಗಿ, ಅಥವಾ

(3) ರೈಲ್ವೇ ಪೊಲೀಸ್‌ಗಾಗಿ,

(4) ಸರಕಾರವು ಕಾಲಕಾಲಕ್ಕೆ ಈ ಬಗ್ಗೆ ನಿರ್ಧರಿಸಬಹುದಾದಂಥ ನಿರ್ದಿಷ್ಟ ಕರ್ತವ್ಯಗಳನ್ನು ನೆರವೇರಿಸುವುದಕ್ಕಾಗಿ

– ನೇಮಕಮಾಡಬಹುದು ಮತ್ತು ಹಾಗೇ ನೇಮಕವಾದ ಸೂಪರಿಂಟೆಂಡೆಂಟನು ಸರಕಾರವು ಕಾಲಕಾಲಕ್ಕೆ ಅವನಿಗೆ ವಹಿಸಿಕೊಡಬಹುದಾದಂತಹ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಪ್ರಕಾರ್ಯಗಳನ್ನು ನೆರವೇರಿಸಬಹುದು:

ಪರಂತು, ಅಂತಹ ಅಧಿಕಾರಗಳು ಮತ್ತು ಪ್ರಕಾರ್ಯಗಳು ಇನ್ಸ್‌ಪೆಕ್ಟರ್ ಜನರಲ್‌ನ ನಿಯಂತ್ರಣಕ್ಕೊಳಪಟ್ಟು ಚಲಾಯಿಸಲ್ಪಡತಕ್ಕದ್ದು ಅಥವಾ ನೆರವೇರಿಸಲ್ಪಡತಕ್ಕದ್ದು.

**10. ಪೊಲೀಸು ತರಬೇತು ಶಾಲೆಯ ಅಥವಾ ಕಾಲೇಜಿನ ಪ್ರಿನ್ಸಿಪಾಲ್ :–** ಸರಕಾರವು, ಪೊಲೀಸು ಸೂಪರಿಂಟೆಂಡೆಂಟ ದರ್ಜೆಗೆ ಕಡಿಮೆಯಿಲ್ಲದ ಯಾವುದೇ ಪೊಲೀಸು ಅಧಿಕಾರಿಯನ್ನು, ಪೊಲೀಸು ತರಬೇತಿ ಶಾಲೆಯ ಅಥವಾ ಕಾಲೇಜಿನ ಪ್ರಿನ್ಸಿಪಾಲನನ್ನಾಗಿ ನೇಮಕ ಮಾಡಬಹುದು, ಮತ್ತು ಅವನಿಗೆ ತಾನು ಉಚಿತವೆಂದು ಭಾವಿಸುವಂತಹ ಅಧಿಕಾರಗಳನ್ನು, ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ವಹಿಸಿಕೊಡಬಹುದು.

**11. ಕಮೀಷನರನಿಗೆ ಡೆಪ್ಯೂಟಿಗಳು ಮತ್ತು ಸಹಾಯಕರು :–** (1) ಸರಕಾರವು, ಬೆಂಗಳೂರು ನಗರಕ್ಕಾಗಿ ಅಥವಾ 7ನೆಯ ಪ್ರಕರಣದ (1)ನೆಯ ಉಪಪ್ರಕರಣದ ಮೇರೆಗೆ ಕಮೀಷನರ್‌ನನ್ನು ನೇಮಕ ಮಾಡಿದ ಯಾವುದೇ ಪ್ರದೇಶಕ್ಕಾಗಿ ಸೂಪರಿಂಟೆಂಡೆಂಟನ ದರ್ಜೆಗೆ ಕಡಿಮೆಯಿಲ್ಲದ ಒಬ್ಬ ಅಥವಾ ಹೆಚ್ಚು ಜನ ಡೆಪ್ಯೂಟಿ ಕಮೀಷನರರನ್ನು, ಸೂಪರಿಂಟೆಂಡೆಂಟನನ್ನು ಮತ್ತು ಸಹಾಯಕ ಸೂಪರಿಂಟೆಂಡೆಂಟನ ಅಥವಾ ಡೆಪ್ಯೂಟಿ ಸೂಪರಿಂಟೆಂಡಟನ ದರ್ಜೆಗೆ ಕಡಿಮೆಯಿಲ್ಲದೆ ಒಬ್ಬ ಅಥವಾ ಹೆಚ್ಚು ಪೊಲೀಸು ಅಸಿಸ್ಟೆಂಟ್ ಕಮೀಷನರುಗಳನ್ನು ನೇಮಕಮಾಡಬಹುದು.

(2) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನು ಮೇರೆಗೆ ಕಮೀಷನರು ಚಲಾಯಿಸಬಹುದಾದ ಅಥವಾ ನೆರವೇರಿಸಬಹುದಾದಂತಹ ಯಾವುದೇ ಅಧಿಕಾರಗಳನ್ನು, ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ಅವನ ಆದೇಶಗಳ ಮೇರೆಗೆ ಪ್ರತಿಯೊಬ್ಬ ಅಂತಹ ಡೆಪ್ಯೂಟಿ ಅಥವಾ ಅಸಿಸ್ಟೆಂಟ್ ಕಮೀಷನರು ಈ ಬಗ್ಗೆ ಸರಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗನುಸಾರವಾಗಿ ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು.

ಪರಂತು, 31ನೆಯ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸುವ, ಬದಲಾಯಿಸುವ ಅಥವಾ ರದ್ದುಗೊಳಿಸುವ ಬಗ್ಗೆ ಕಮೀಷನರರಿಂದ ಚಲಾಯಿಸಲಾಗುವ ಅಧಿಕಾರಗಳು, ಡೆಪ್ಯೂಟಿ ಅಥವಾ ಅಸಿಸ್ಟೆಂಟ್ ಕಮೀಷನರಿಂದ ಚಲಾಯಿಸಲ್ಪಡತಕ್ಕದ್ದಲ್ಲ.

**12. ಕೆಳಗಣ ಪೊಲೀಸ್ ನೇಮಕ :–** ಸರಕಾರವು, ಕಾಲಕಾಲಕ್ಕೆ ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು ಇನ್ಸ್‌ಪೆಕ್ಟರುಗಳ ಮತ್ತು ಅದರ ದರ್ಜೆಯ ಕೆಳಗಿನ ಪೊಲೀಸು ಅಧಿಕಾರಿಗಳ ನೇಮಕವು ನಿಯಮಿಸಲಾದ ಪ್ರಾಧಿಕಾರಿಯಿಂದ ಮಾಡಲ್ಪಡತಕ್ಕದ್ದು.

**13. ನೇಮಕದ ಸರ್ಟಿಫಿಕೇಟುಗಳು :–** (1) ಇನ್ಸ್‌ಪೆಕ್ಟರನ ವರ್ಗದ ಮತ್ತು ಅದರ ಕೆಳಗಿನ ವರ್ಗದ ಪ್ರತಿಯೊಬ್ಬ ಪೊಲೀಸು ಅಧಿಕಾರಿಯು ನೇಮಕವಾದಾಗ 1ನೇ ಅನುಸೂಚಿಯಲ್ಲಿ ಉಪಬಂಧಿಸಲಾದ ನಮೂನೆಯಲ್ಲಿ ಒಂದು ಸರ್ಟಿಫಿಕೇಟನ್ನು ಪಡೆಯತಕ್ಕದ್ದು. ಸರಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿದೇಶಿಸುವಂತಹ ಅಧಿಕಾರಿಯ ಮುದ್ರೆಯೊಂದಿಗೆ ಸರ್ಟಿಫಿಕೇಟು ಕೊಡಲ್ಪಡತಕ್ಕದ್ದು.

(2) ನೇಮಕದ ಸರ್ಟಿಫಿಕೇಟು, ಅದರಲ್ಲಿ ಹೆಸರಿಸಿದ ವ್ಯಕ್ತಿಯು ಪೊಲೀಸು ದಳಕ್ಕೆ ಸೇರಿರುವುದು ನಿಂತು ಹೋದಾಗಲೆಲ್ಲ ಅದು ಶೂನ್ಯವಾಗತಕ್ಕದ್ದು ಅಥವಾ ಅಂಥ ದಳದಿಂದ ಅಂಥ ವ್ಯಕ್ತಿಯು ನಿಲಂಬ ಮಾಡಲ್ಪಟ್ಟ ಅವಧಿಯಲ್ಲಿ ಅದು ನಿಷ್ಪ್ರಯೋಜಿತವಾಗಿರುತಕ್ಕದ್ದು.

**14. ಪೊಲೀಸು ಅಧಿಕಾರಿಯ ನಿಲಂಬನದ ಪರಿಣಾಮ :–** ಪೊಲೀಸು ಅಧಿಕಾರಿಯು ತನ್ನ ಪದದಿಂದ ನಿಲಂಬಿತವಾಗಿರುವಾಗ, ಅಂತಹ ಪೊಲೀಸು ಅಧಿಕಾರಿಯಲ್ಲಿ ನಿಹಿತವಾಗಿರುವ ಅಧಿಕಾರಗಳು, ಪ್ರಕಾರ್ಯಗಳು ಮತ್ತು ವಿಶೇಷಾಧಿಕಾರಿಗಳು ನಿಲಂಬಿತವಾಗಿರತಕ್ಕದ್ದು;

ಪರಂತು, ಅಂತಹ ನಿಲಂಬನವಿದ್ದರೂ, ಅಂಥ ವ್ಯಕ್ತಿಯು ಪೊಲೀಸ್ ಅಧಿಕಾರಿಯಾಗಿರುವುದು ನಿಂತು ಹೋಗತಕ್ಕದ್ದಲ್ಲ ಮತ್ತು ಅವನು ನಿಲಂಬಿತನಾಗಿರದಿದ್ದರೆ ಹೇಗೆ ಅವನು ಯಾವ ಪ್ರಾಧಿಕಾರಿಗಳ ನಿಯಂತ್ರಣಕ್ಕೊಳಪಟ್ಟಿರುತ್ತಿದ್ದನೋ ಅಂತಹ ನಿಯಂತ್ರಣಕ್ಕೊಳಪಟ್ಟಿರುವುದು ಮುಂದುವರಿಯತಕ್ಕದ್ದು.

**15. ಕಮೀಷನರನ ಮತ್ತು ಸೂಪರಿಂಟೆಂಡೆಂಟನ ಸಾಮಾನ್ಯ ಅಧಿಕಾರಗಳು :–** ಕಮೀಷನ ಪೊಲೀಸು ಇನ್ಸ್‌ಪೆಕ್ಟರ್ ಜನರಲ್‌ನ ಆದೇಶಗಳಿಗೊಳಪಟ್ಟು ಮತ್ತು ಸೂಪರಿಂಟೆಂಡೆಂಟನು, ಪೊಲೀಸು ಇನ್‌ಸ್ಪೆಕ್ಟರ್ ಜನರಲ್‌ನ ಮತ್ತು ಡೆಪ್ಯೂಟಿ ಇನ್ಸ್‌ಸ್ಪೆಕ್ಟರ್ ಜನರಲ್‌ನ ಆದೇಶಗಳಿಗೊಳಪಟ್ಟು, ಅನುಕ್ರಮವಾಗಿ ತಮ್ಮ ಪ್ರಾಧಿಕಾರದಲ್ಲಿರುವ ಕ್ಷೇತ್ರಗಳಲ್ಲಿ ಶಸ್ತ್ರ ಕವಾಯಿತು, ವ್ಯಾಯಾಮ, ವ್ಯಕ್ತಿಗಳ ಮತ್ತು ಘಟನೆಗಳ ಸಮಿಕ್ಷೆ, ಪರಸ್ಪರ ಸಂಬಂಧ ಕರ್ತವ್ಯಗಳ ಹಂಚಿಕೆ, ಕಾನೂನುಗಳ ಆದೇಶಗಳ ಅಧ್ಯಯನ ಮತ್ತು ವ್ಯವಹರಣೆಯ ರೀತಿಗಳು ಮತ್ತು ಆಡಳಿತ ಸಾಗಿಸುವುದಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳು ಅಥವಾ ತಮ್ಮ ಅಧೀನದಲ್ಲಿರುವ ಪೊಲೀಸು ದಳದವರಿಂದ ಅವರ ಕರ್ತವ್ಯಗಳ ಪಾಲನೆ ಈ ಎಲ್ಲ ವಿಷಯಗಳನ್ನು ನಿರ್ದೇಶಿಸತಕ್ಕದ್ದು ಮತ್ತು ವಿನಿಯಮಿಸತಕ್ಕದ್ದು.

**16. ಜಿಲ್ಲಾ ಮ್ಯಾಜಿಸ್ಟ್ರೇಟನ ಸಾಮಾನ್ಯ ನಿಯಂತ್ರಣಕ್ಕೊಳಪಟ್ಟು ಪೊಲೀಸು ಸೂಪರಿಂಟೆಂಡೆಂಟನು ಜಿಲ್ಲೆಯ ಪೊಲೀಸ್ ಮುಖ್ಯಾಧಿಕಾರಿಯಾಗಿರತಕ್ಕದ್ದು :–** (1) ಪೊಲೀಸು ಸೂಪರಿಂಟೆಂಡೆಂಟನು ತಾನು ಸೂಪರಿಂಟೆಂಡೆಂಟಾಗಿ ನೇಮಕವಾಗಿರುವ ಜಿಲ್ಲೆಯ ಅಥವಾ ಜಿಲ್ಲೆಯ ಭಾಗದ ಪೊಲೀಸ್ ಮುಖ್ಯಾಧಿಕಾರಿಯಾಗಿರತಕ್ಕದ್ದು.

(2) ಜಿಲ್ಲೆಯಲ್ಲಿ ಅಥವಾ ಜಿಲ್ಲೆಯ ಭಾಗದಲ್ಲಿ ಪೊಲೀಸು ಸೂಪರಿಂಟೆಂಡೆಂಟನಿಂದ ನಡೆಸಲ್ಪಡುವ ಪೊಲೀಸು ಆಡಳಿತವು, ಈ ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟನ ಸಾಮಾನ್ಯ ನಿಯಂತ್ರಣಕ್ಕೊಳಪಟ್ಟಿರತಕ್ಕದ್ದು.

(3) ಅಂತಹ ನಿಯಂತ್ರಣವನ್ನು ಚಲಾಯಿಸುವುದರಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟನು, ಈ ಬಗ್ಗೆ ಸರಕಾರವು ರಚಿಸಬಹುದಾದ ನಿಯಮಗಳಿಗೆ ಮತ್ತು ಆದೇಶಗಳಿಗೆ ಒಳಪಟ್ಟರತಕ್ಕದ್ದು.

**17. ಸೂಪರಿಂಟೆಂಡೆಂಟನಿಂದ ವರದಿಯನ್ನು ತರಿಸಿಕೊಳ್ಳಲು ಜಿಲ್ಲಾ ಮ್ಯಾಜಿಸ್ಟ್ರೇಟನ ಅಧಿಕಾರ :–** ಜಿಲ್ಲಾ ಮ್ಯಾಜಿಸ್ಟ್ರೇಟನು, ಅಪರಾಧ, ರೂಢಿಗತ ಅಪರಾಧಿಗಳು, ಅವ್ಯವಸ್ಥೆಯ ನಿವಾರಣೆ, ಸಭೆಗಳ ಮತ್ತು ವಿನೋದಗಳ ಕ್ರಮಗೊಳಿಸುವಿಕೆ, ಪೊಲೀಸು ದಳದ ಹಂಚಿಕೆ, ಸೂಪರಿಂಟೆಂಡೆಂಟನಿಗೆ ಅಧೀನನಾಗಿರುವ ಯಾವನೇ ಪೊಲೀಸು ಅಧಿಕಾರಿಯ ನಡತೆ ಮತ್ತು ಶೀಲ, ಸಹಾಯಕ ಸಾಧನೆಗಳ ಉಪಯೋಗ ಮತ್ತು ಪೊಲೀಸು ದಳದ ಮೇಲೆ ತನಗಿರುವ ನಿಯಂತ್ರಣವನ್ನು ಮುಂದುವರಿಸಲು ಬೇಕಾದ ಎಲ್ಲ ಇತರ ವಿಷಯಗಳು ಮತ್ತು ಸುವ್ಯವಸ್ಥಾ ರಕ್ಷಣೆ ಇವುಗಳಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಸೂಪರಿಂಟೆಂಡೆಂಟನಿಂದ ವಿಶೇಷವಾದ ಅಥವಾ ಸಾಮಾನ್ಯವಾದ ವರದಿಯನ್ನು ತರಿಸಿಕೊಳ್ಳಬಹುದು.

**18. ಜಿಲ್ಲಾ ಮ್ಯಾಜಿಸ್ಟ್ರೇಟರ ಮೇಲ್ವಿಚಾರಣೆಯ ಅಧಿಕಾರ :–** ಸೂಪರಿಂಟೆಂಡೆಂಟನಿಗೆ ಅಧೀನವಾಗಿರುವ ಯಾವೊಬ್ಬ ಪೊಲೀಸು ಅಧಿಕಾರಿಯನ್ನು ಯಾವುದೇ ಸ್ಥಳಕ್ಕೆ ಅಥವಾ ಅವನ ವಿಶೇಷ ಕರ್ತವ್ಯಗಳಿಗಾಗಿ ಕೇವಲ

ಅಸಮರ್ಥನೆಯನ್ನು ಅಥವಾ ಅನರ್ಹತೆಯನ್ನು ಜಿಲ್ಲಾ ಮ್ಯಾಜಿಸ್ಟ್ರೇಟನು ಕಂಡಲ್ಲಿ ಅವನು ಸೂಪರಿಂಟೆಂಡೆಂಟನಿಗೆ, ಯಾವೊಬ್ಬ ಅಧಿಕಾರಿಯ ಬದಲಾಗಿ ತಾನು ವರ್ಗಮಾಡಲು ಶಕ್ತನಾಗಿದ್ದ ಇನ್ನೊಬ್ಬ ಅಧಿಕಾರಿಯನ್ನು ನೇಮಿಸಲು ಆಜ್ಞಾಪಿಸಬಹುದು ಮತ್ತು ಸೂಪರಿಂಟೆಂಡೆಂಟನು ಅಂತಹ ಆಜ್ಞೆಯನ್ನು ಪಾಲಿಸಲು ಬದ್ಧನಾಗಿರತಕ್ಕದ್ದು :

ಪರಂತು, ಸಂಬಂಧಪಟ್ಟ ಪೊಲೀಸು ಅಧಿಕಾರಿಯು ಪೊಲೀಸು ಇನ್ಸ್‌ಪೆಕ್ಟರನ ವರ್ಗಕ್ಕೆ ಕಡಿಮೆಯಿಲ್ಲದವನಾಗಿದ್ದರೆ, ಜಿಲ್ಲಾ ಮ್ಯಾಜಿಸ್ಟ್ರೇಟನು ಅವನ ನಡತೆಯ ಬಗ್ಗೆ ಇನ್ಸ್‌ಪೆಕ್ಟರ್ ಜನರಲ್‌ನಿಗೆ ವರದಿ ಮಾಡಬಹುದು. ಆ ತರುವಾಯ ಇನ್ಸ್‌ಪೆಕ್ಟರ್ ಜನರಲ್‌ನು ಕೈಕೊಳ್ಳಬೇಕಾದ ಕ್ರಮವನ್ನು ನಿರ್ಧರಿಸಬಹುದು ಮತ್ತು ತಾನು ಉಚಿತವೆಂದು ಭಾವಿಸುವಂಥ ಆದೇಶಗಳನ್ನು ಮಾಡಬಹುದು ಮತ್ತು ಅಂತಹ ಕ್ರಮ ಅಥವಾ ಆದೇಶವನ್ನು ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ತಿಳಿಸತಕ್ಕದ್ದು.

**19. ವಿಶೇಷ ಪೊಲೀಸು ಅಧಿಕಾರಿಗಳು :–** (1) ಯಾವುದೇ ಸ್ಥಳದಲ್ಲಿ ಕಾನೂನುವಿರುದ್ಧ ಜನ ಕೂಟ ಸೇರಿದ ಅಥವಾ ದೊಂಬಿ ಅಥವಾ ಶಾಂತಿಭಂಗವಾಗಿದೆ ಎಂದು ಅಥವಾ ಆಗುವುದೆಂದು ಸಕಾರಣದಿಂದ ಶಂಕೆ ಇದೆ ಎಂದು ಮತ್ತು ಆ ಸ್ಥಳದಲ್ಲಿ ಸಾಧಾರಣವಾಗಿ ನಿಯೋಜಿಸಲಾಗಿರುವ ಪೊಲೀಸು ದಳವು, ಅದನ್ನು ನಿರೋಧಿಸಲು ಮತ್ತು ಆ ಸ್ಥಳದಲ್ಲಿರುವ ನಿವಾಸಿಗಳನ್ನು ರಕ್ಷಿಸಲು ಮತ್ತು ಸ್ವತ್ತನ್ನು ಭದ್ರಗೊಳಿಸಲು, ಸಾಕಷ್ಟಿಲ್ಲವೆಂದು ಸಬ್ ಇನ್ಸ್‌ಪೆಕ್ಟರನ ದರ್ಜೆಗೆ ಕಡಿಮೆಯಿಲ್ಲದ ಯಾವುದೇ ಪೊಲೀಸು ಅಧಿಕಾರಿಯ ಆವೇದನದಿಂದ ಕಂಡು ಬಂದರೆ, ಕಮೀಷನರು, ಸೂಪರಿಂಟೆಂಡೆಂಟು ಅಥವಾ ಯಾವನೇ ಪ್ರಥಮ ವರ್ಗದ ಮ್ಯಾಜಿಸ್ಟ್ರೇಟನು ಅಥವಾ ಸರಕಾರದಿಂದ ಈ ಬಗ್ಗೆ ವಿಶೇಷವಾಗಿ ಅಧಿಕಾರನೀಡಲಾದ ಬೇರೆ ಯಾವನೇ ಮ್ಯಾಜಿಸ್ಟ್ರೇಟನು, ತಾನು ಸಹಿ ಹಾಕಿದ ಮತ್ತು ತನ್ನದೇ ಆದ ಮುದ್ರೆಯಿಂದ ಮುದ್ರಿತವಾದ ಲಿಖಿತ ಆದೇಶದ ಮೂಲಕ ಮತ್ತು ತಾನು ಅರ್ಹನೆಂದು ಭಾವಿಸುವಂಥ ಮತ್ತು ಹದಿನೆಂಟು ಮತ್ತು ಐವತ್ತು ವಯೋಮಿತಿಯಲ್ಲಿರುವ ಸಮೀಪದ ನಿವಾಸಿಯಾಗಿರುವ ದೃಢಕಾಯೀ ಗಂಡಸನ್ನು ಕಮೀಷನರು, ಸೂಪರಿಂಟೆಂಡೆಂಟು ಅಥವಾ ಮ್ಯಾಜಿಸ್ಟ್ರೇಟನು ಅವಶ್ಯಕವೆಂದು ಭಾವಿಸುವಂಥ ಕಾಲಕ್ಕೆ ಮತ್ತು ಪರಿಮಿತಿಗಳಲ್ಲಿ ಪೊಲೀಸು ದಳಕ್ಕೆ ಸಹಾಯ ಮಾಡಲು ವಿಶೇಷ ಪೊಲೀಸು ಅಧಿಕಾರಿ ಎಂದು ನೇಮಿಸಬಹುದು.

(2) ಹಾಗೆ ನೇಮಕ ಮಾಡಲಾದ ಪ್ರತಿಯೊಬ್ಬ ವಿಶೇಷ ಪೊಲೀಸು ಅಧಿಕಾರಿಯು, ನೇಮಕವಾದಾಗ,–

(ಎ) ಈ ಬಗ್ಗೆ ಸರಕಾರದಿಂದ ಅನುಮೋದಿತವಾದ ನಮೂನೆಯಲ್ಲಿ ಒಂದು ಸರ್ಟಿಫಿಕೇಟನ್ನು ಪಡೆಯತಕ್ಕದ್ದು;

(ಬಿ) ಸಾಧಾರಣ ಪೊಲೀಸು ಅಧಿಕಾರಿಯು ಹೊಂದಿರುವ ಅಧಿಕಾರಗಳನ್ನು, ವಿಶೇಷಾಧಿಕಾರಗಳನ್ನು ಮತ್ತು ಉನ್ಮುಕ್ತಿಗಳನ್ನು ಹೊಂದಿರತಕ್ಕದ್ದು ಮತ್ತು ಅದೇ ಕರ್ತವ್ಯ ಮತ್ತು ಜವಾಬ್ದಾರಿಗಳಿಗೆ ಬದ್ಧನಾಗಿರತಕ್ಕದ್ದು ಮತ್ತು ಅದೇ ಪ್ರಾಧಿಕಾರಗಳಿಗೆ ಒಳಪಟ್ಟಿರತಕ್ಕದ್ದು.

**20. ಹೆಚ್ಚಿನ ಪೊಲೀಸರ ನೇಮಕ :–** (1) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ನಿರ್ದಿಷ್ಟಪಡಿಸಿದ ಪ್ರಾಧಿಕಾರಿಯು, ನಿರ್ಧರಿಸಬಹುದಾದಂತಹ ದರ್ಜೆಯ ಅಥವಾ ವರ್ಗದ ಹೆಚ್ಚಿನ ಪೊಲೀಸು ಅಧಿಕಾರಿಗಳನ್ನು ಅಂತಹ ಕಾಲದವರೆಗೆ ಮತ್ತು ಸಂಬಳದ ಮೇಲೆ ಅಂತಹ ಉಪಬಂಧಗಳಲ್ಲಿ ಹೇಳಿದ ಉದ್ದೇಶಗಳಿಗಾಗಿ ನಿಯೋಜಿಸಬಹುದು ಅಥವಾ ಪ್ರತಿನಿಯೋಜಿಸಬಹುದು.

(2) ನೇಮಕ ಮಾಡಲಾದ ಪ್ರತಿಯೊಬ್ಬ ಹೆಚ್ಚಿನ ಪೊಲೀಸು ಅಧಿಕಾರಿಯು, ನೇಮಕವಾದಾಗ–

(ಎ) ಸರಕಾರದಿಂದ ಈ ಬಗ್ಗೆ ಅನುಮೋದಿತವಾದ ನಮೂನೆಯಲ್ಲಿ ಒಂದು ಸರ್ಟಿಫಿಕೇಟನ್ನು ಪಡೆಯತಕ್ಕದ್ದು;

(ಬಿ) ಸರ್ಟಿಫಿಕೇಟನ್ನು ವಿಶೇಷವಾಗಿ ನಮೂದಿಸುವಂತೆ ಪೊಲೀಸು ಅಧಿಕಾರಿಗಿರುವ ಎಲ್ಲ ಅಥವಾ ಯಾವುದಾದರೂ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಹೊಂದಿರತಕ್ಕದ್ದು;

(ಸಿ) ಕಮೀಷನರ್‌ನ ಅಥವಾ ಸಂದರ್ಭಾನುಸಾರ ಸೂಪರಿಂಟೆಂಡೆಂಟನ ಆದೇಶಗಳಿಗೆ ಅಧೀನನಾಗಿರತಕ್ಕದ್ದು;

(3) ಅಂಥ ಹೆಚ್ಚಿನ ಪೊಲೀಸು ಅಧಿಕಾರಿಯ ನಿಯೋಜನೆಯ ಅಥವಾ ಪ್ರತಿಯೊಬ್ಬ ಜನೆಯು ಅಂಥ ಪೊಲೀಸು ದಳವನ್ನು ಕೇಳುವ ಯಾವೊಬ್ಬ ವ್ಯಕ್ತಿಯ ಕೋರಿಕೆಯ ಮೇಲೆ ಮಾಡಲ್ಪಡತಕ್ಕದ್ದು ಮತ್ತು ಅಂಥ ನಿಯೋಜನೆಯ ಖರ್ಚು ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ವಿಧಿಯ ಮೂಲಕ ಅಥವಾ ಮೇರೆಗೆ ಉಪಬಂಧಿಸಲಾದ ರೀತಿಯಲ್ಲಿ ವಸೂಲು ಮಾಡಲ್ಪಡತಕ್ಕದ್ದು.

* * *

## ಅಧ್ಯಾಯ – III

## ಪೊಲೀಸು ದಳದ ವಿನಿಯಮನ, ನಿಯಂತ್ರಣ ಮತ್ತು ಶಿಸ್ತು

**21. ಪೊಲೀಸು ಆಡಳಿತದ ಸಲುವಾಗಿ ನಿಯಮಗಳ ರಚನೆ :–** ಸರಕಾರದ ಆದೇಶಗಳಿಗೊಳಪಟ್ಟು, ಇನ್ಸ್‌ಪೆಕ್ಟರ್ ಜನರಲ್‌ನು ಈ ಅಧಿನಿಯಮಕ್ಕೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಅಧಿನಿಯಮಕ್ಕೆ ಅಸಂಗತವಾಗಿಲ್ಲದ ನಿಯಮಗಳನ್ನು ಅಥವಾ ಆದೇಶಗಳನ್ನು,

(ಎ) ತನ್ನ ಅಧೀನಸ್ಥರಿಂದ ಪೊಲೀಸು ದಳದ ಪರಿಶೀಲನೆಯನ್ನು ವಿನಿಯಮನಗೊಳಿಸುವುದಕ್ಕಾಗಿ;

(ಬಿ) ಪೊಲೀಸರಿಗೆ ಒದಗಿಸಬೇಕಾದ ಶಸ್ತ್ರಗಳ, ವಿಶೇಷ ತೊಡುಗೆಗಳ (ಸನ್ನಾಹ) ಬಟ್ಟೆಗಳ ಮತ್ತು ಇತರ ಅವಶ್ಯಕತೆಗಳ ವರ್ಣನೆ ಮತ್ತು ಪ್ರಮಾಣ ಇವುಗಳನ್ನು ನಿರ್ಧರಿಸುವುದಕ್ಕಾಗಿ;

(ಸಿ) ಪೊಲೀಸುದಳದವರ ನಿವಾಸಸ್ಥಳಗಳನ್ನು ನಿಯಮಿಸುವುದಕ್ಕಾಗಿ;

(ಡಿ) ಪೊಲೀಸು ಆಡಳಿತಕ್ಕೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕಾಗಿ ಯಾವುದೇ ಪೊಲೀಸು ನಿಧಿಯ ಸ್ಥಾಪನೆ ಆಡಳಿತ ಮತ್ತು ವಿನಿಮಯಕ್ಕಾಗಿ;

(ಇ) 16ನೆಯ ಪ್ರಕರಣದ ಉಪಬಂಧಗಳಿಗೊಳಪಟ್ಟು ಪೊಲೀಸರ ಹಂಚಿಕೆ, ಚಲನ ಮತ್ತು ಸ್ಥಳ ನಿರ್ದೇಶನದ ವಿನಿಯಮನಕ್ಕಾಗಿ;

(ಎಫ್) ಎಲ್ಲ ದರ್ಜೆಗಳ ಮತ್ತು ವರ್ಗಗಳ ಪೊಲೀಸು ಅಧಿಕಾರಿಗಳಿಗೆ ಕರ್ತವ್ಯಗಳನ್ನು ವಹಿಸಿಕೊಡುವುದಕ್ಕಾಗಿ ಮತ್ತು

(i) ಯಾವ ರೀತಿಯಲ್ಲಿ; ಮತ್ತು

(ii) ಯಾವ ಷರತ್ತುಗಳಿಗೊಳಪಟ್ಟು, ಅವರು ತಮ್ಮ ತಮ್ಮ ಅಧಿಕಾರಗಳನ್ನು, ಮತ್ತು ಕರ್ತವ್ಯಗಳನ್ನು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು ಎಂಬುದನ್ನು ನಿಯಮಿಸುವುದಕ್ಕಾಗಿ;

(ಜಿ) ಪೊಲೀಸರಿಂದ ಗುಪ್ತಸಮಾಚಾರ ಮತ್ತು ಸುದ್ದಿ ಇವುಗಳ ಸಂಗ್ರಹಣೆ ಮತ್ತು ತಿಳುಹಿಸುವಿಕೆ ಇವುಗಳ ವಿನಿಯಮನಕ್ಕಾಗಿ;

(ಎಚ್) ಸಾಮಾನ್ಯವಾಗಿ, ಪೊಲೀಸರನ್ನು ದಕ್ಷರನ್ನಾಗಿ ಮಾಡುವ ಉದ್ದೇಶಕ್ಕಾಗಿ ಮತ್ತು ಅವರ ಕರ್ತವ್ಯಗಳ ದುರುಪಯೋಗ ಅಥವಾ ನಿರ್ಲಕ್ಷತೆಯನ್ನು ತಡೆಗಟ್ಟುವುದಕ್ಕಾಗಿ;

(ಐ) ವಿವಿಧ ಪೊಲೀಸು ಅಧಿಕಾರಿಗಳು ಇಟ್ಟುಕೊಂಡು ಬರಬೇಕಾದ ಪುಸ್ತಕಗಳನ್ನು ಮತ್ತು ರಿಜಿಸ್ಟರುಗಳನ್ನು ಮಾಡಬಹುದು ಮತ್ತು ಒಪ್ಪಿಸಬೇಕಾದ ಪಟ್ಟಿಕೆಗಳನ್ನು ನಿಯಮಿಸುವುದಕ್ಕಾಗಿ;

–ಮಾಡಬಹುದು.

**22. ಇನ್ಸ್‌ಪೆಕ್ಟರ್ ಜನರಲ್‌ನು ವರದಿಗಳನ್ನು ತರಿಸಿಕೊಳ್ಳಬಹುದು :–** ಇನ್ಸ್‌ಪೆಕ್ಟರ್ ಜನರಲ್‌ನು, ಸರಕಾರದ ನಿಯಮಗಳಿಗೆ ಮತ್ತು ಆದೇಶಗಳಿಗೊಳಪಟ್ಟು, ಅಪರಾಧಗಳ ಅಡಗಿಸುವಿಕೆ, ಸುವ್ಯವಸ್ಥೆಯ ರಕ್ಷಣೆ ಮತ್ತು ಅವರ ಕರ್ತವ್ಯಗಳ ನಿರ್ವಹಣೆಗೆ ಸಂಬಂಧಪಟ್ಟು ಅವನ ಅಧೀನಸ್ಥರು ಅವನಿಗೆ ಒಪ್ಪಿಸಬಹುದಾದ ಪಟ್ಟಿಕೆಗಳನ್ನು,

ವರದಿಗಳನ್ನು ಮತ್ತು ತಖ್ತೆಗಳನ್ನು ತರಿಸಿಕೊಳ್ಳಬಹುದು, ಇನ್ಸ್‌ಪೆಕ್ಟರ್ ಜನರಲ್‌ನು, ಮೇಲೆ ಹೇಳಿದ ಉದ್ದೇಶಗಳಿಗಾಗಿ ಅಥವಾ ತನಗೆ ಒದಗಿಸಲಾದ ಮಾಹಿತಿಯ ಪರಿಣಾಮವಾಗಿ ತಾನು ಸಾಮಾನ್ಯವಾಗಿ ಹೊರಡಿಸಿದ ಆದೇಶಗಳನ್ನು ಮತ್ತು ಸರಕಾರವು ನಿರ್ದೇಶಿಸಬಹುದಾದ ಯಾವುದೇ ಆದೇಶಗಳನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್‌ನಿಗೆ ತಿಳುಹಿಸತಕ್ಕದ್ದು.

**23. ಶಿಸ್ತು ಸಂಬಂಧದ ದಂಡಗಳು :–** (1) ಸರಕಾರವು ಮತ್ತು ನಿಯಮಿಸಲಾದ ಅಧಿಕಾರಿಯು, ನಿಯಮಿಸಬಹುದಾದಂತಹ ಷರತ್ತು ಮತ್ತು ನಿರ್ಬಂಧಗಳಿಗೊಳಪಟ್ಟು, ಸರಕಾರದ ಅಥವಾ ನಿಯಮಿಸಲಾದ ಅಧಿಕಾರಿಯ ಅಭಿಪ್ರಾಯದಲ್ಲಿ ಯಾವೊಬ್ಬ ಪೊಲೀಸು ಅಧಿಕಾರಿಯು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಕ್ರೂರನಾಗಿದ್ದಾನೆ, ವಕ್ರನಾಗಿದ್ದಾನೆ, ಅಸಡ್ಡೆಯುಳ್ಳವನಾಗಿದ್ದಾನೆ ಅಥವಾ ನಿರ್ಲಕ್ಷ್ಯವುಳ್ಳವನಾಗಿದ್ದಾನೆಂದು ಅಥವಾ ಅದಕ್ಕೆ ಅನರ್ಹನಾಗಿದ್ದಾನೆಂದು ಅಥವಾ ಶಿಸ್ತುಭಂಗದ ಅಥವಾ ದುರ್ನಡತೆಯ ಅಥವಾ ಬೇರೊಂದು ಸಾಕಷ್ಟು ಕಾರಣಕ್ಕಾಗಿ ದೋಷಿಯಾಗಿದ್ದಾನೆಂದು ಕಂಡುಬಂದರೆ, ಅವನ ಮೇಲೆ ಈ ಕೆಳಕಂಡ ದಂಡಗಳನ್ನು ವಿಧಿಸಬಹುದು, ಎಂದರೆ;

(ಎ) (i) ಖಂಡನೆ;

(ii) ಕ್ಲುಪ್ತ ಕಾಲಿಕ ಹೆಚ್ಚಳಿಕೆಗಳನ್ನು ಅಥವಾ ಪದೋನ್ನತಿಯನ್ನು ತಡೆಹಿಡಿಯುವುದು;

(iii) ರಾಜ್ಯ ಸರಕಾರಕ್ಕೆ ಅಥವಾ ಅಧಿಕಾರಿಯ ಸೇವೆಯನ್ನು ಉಪಯೋಗಿಸಿಕೊಳ್ಳಲು ಎರವಲಾಗಿ ಕೊಡಲ್ಪಟ್ಟಂಥ ಕೇಂದ್ರ ಸರಕಾರಕ್ಕೆ ಬೇರೆ ಯಾವೊಂದು ರಾಜ್ಯ ಸರಕಾರಕ್ಕೆ ಅಥವಾ ಯಾವುದೇ ವ್ಯಕ್ತಿಗೆ ಅಥವಾ ನಿಕಾಯಕ್ಕೆ ಅಥವಾ ಪ್ರಾಧಿಕಾರಿಗೆ (ಆ ಪೊಲೀಸು ಅಧಿಕಾರಿಯ) ಅಲಕ್ಷ್ಯದಿಂದಾಗಿ ಅಥವಾ ಆದೇಶದ ಭಂಗದಿಂದಾಗಿ ಉಂಟಾಗಿರುವ ಯಾವೊಂದು ಹಣ ನಷ್ಟವನ್ನು ಪೂರ್ತಿಯಾಗಿ ಅಥವಾ ಅಂಶಿಕವಾಗಿ ಅವನ ವೇತನದಿಂದ ವಸೂಲಿ;

(iv) ನಿಲಂಬನೆ;

(ಬಿ) (i) ಕೆಳಗಿನ ನೌಕರಿಗೆ, ವರ್ಗಕ್ಕೆ ಅಥವಾ ಹುದ್ದೆಗೆ ಅಥವಾ ಕೆಳಗಿನ ಕಾಲಿಕ ವೇತನ ಶ್ರೇಣಿಗೆ (ಟೈಮ್‌ಸ್ಕೇಲ್) ಅಥವಾ ಕಾಲಿಕ ವೇತನ ಶ್ರೇಣಿಯಲ್ಲಿಯ ಕೆಳಗಿನ ಹಂತಕ್ಕೆ ಇಳಿಸುವುದು;

(ii) ಕಡ್ಡಾಯ ನಿವೃತ್ತಿ;

(iii) ಸೇವೆಯಿಂದ ತೆಗೆದುಹಾಕುವುದು;

(iv) ಸೇವೆಯಿಂದ ವಜಾ

(ಗ) (i) ನಿಯಮಿಸಬಹುದಾದ ರೀತಿಯಲ್ಲಿ ಅವನ ಹೆಸರಿನ ಎದುರಿಗೆ ಅಸಮಾಧಾನ ಸೂಚನೆ;

(ii) ದಂಡನೆಯ ಕವಾಯತು;

(iii) ಹೆಚ್ಚಿನ ಪಹರೆ, ದಣಿಸುವಿಕೆ ಅಥವಾ ಇತರ ಕೆಲಸ;

(iv) ಜುಲ್ಮಾನೆ:

ಪರಂತು, (ಸಿ) ಖಂಡದಲ್ಲಿ ಉಲ್ಲೇಖಿಸಿದ ದಂಡಗಳನ್ನು ಸಬ್ ಇನ್ಸ್‌ಪೆಕ್ಟರನ ದರ್ಜೆಯ ಅಥವಾ ಅವನ ಮೇಲಿನ ದರ್ಜೆಯ ಯಾವನೇ ಅಧಿಕಾರಿಗೆ ವಿಧಿಸತಕ್ಕದ್ದಲ್ಲ; ಮತ್ತು ಪರಂತು, ಈ ಕೆಳಗಿನವುಗಳು ಈ ಪ್ರಕರಣದ ಅರ್ಥದಲ್ಲಿ ದಂಡಗಳೆಂದು ಪರಿಗಣಿಸಲ್ಪಡತಕ್ಕದ್ದಲ್ಲ.

(i) ಪೊಲೀಸು ಅಧಿಕಾರಿಯ ಸೇವೆ ಅಥವಾ ಪದ ಅಥವಾ ಅವನ ನೇಮಕದ ನಿಬಂಧನೆಗಳನ್ನು ನಿಯಂತ್ರಿಸುವ ನಿಯಮಗಳ ಅಥವಾ ಆದೇಶಗಳಿಗನುಸಾರವಾಗಿ ಇಲಾಖೆಯ ಪರೀಕ್ಷೆಯನ್ನು ಪೊಲೀಸು ಅಧಿಕಾರಿಯು ಪಾಸು ಮಾಡಲು ತಪ್ಪಿದುದಕ್ಕಾಗಿ ಕ್ಲುಪ್ತಕಾಲಿಕ ಹೆಚ್ಚಿಗೆಯನ್ನು ತಡೆಹಿಡಿಯುವುದು;

(ii) ಪೊಲೀಸು ಅಧಿಕಾರಿಯನ್ನು, ಕಾಲಶ್ರೇಣಿಯಲ್ಲಿರುವ ದಕ್ಷತಾ ಪ್ರತಿಬಂಧಕ ಮಟ್ಟದಲ್ಲಿ ಆ ಪ್ರತಿಬಂಧಕ ಮಟ್ಟವನ್ನು ದಾಟಲು ಅವನ ಅನರ್ಹತೆಯ ಕಾರಣದಿಂದ ನಿಲ್ಲಿಸುವುದು;

(iii) ಯಾವುದೇ ವರ್ಗ, ಶ್ರೇಣಿ ಅಥವಾ ಹುದ್ದೆಗೆ ಪದೋನ್ನತಿಯನ್ನು ಪಡೆಯಲು ಅರ್ಹನಾಗಿರುವ ಪೊಲೀಸು ಅಧಿಕಾರಿಗೆ ಅದು ಕಾಯಂ ಅಥವಾ ಸ್ಥಾನಾಪನ್ನ ಸ್ವರೂಪದ್ದಾಗಿರಲಿ ಅಥವಾ ಅವನ ವಿಷಯವನ್ನು ಪರ್ಯಾಲೋಚಿಸಿದ ನಂತರ ಪದೋನ್ನತಿಯನ್ನು ಕೊಡದೇ ಇರುವುದು;

(iv) ಉನ್ನತವರ್ಗ, ಶ್ರೇಣಿ ಅಥವಾ ಹುದ್ದೆಯಲ್ಲಿ ಸ್ಥಾನಾಪನ್ನನಾಗಿರುವ ಪೊಲೀಸು ಅಧಿಕಾರಿಯನ್ನು ಪರಿಶೀಲನೆಯ ಅನಂತರ ಅವನು ಅಂತಹ ಉನ್ನತವರ್ಗ, ಶ್ರೇಣಿ ಅಥವಾ ಹುದ್ದೆಗೆ ಯುಕ್ತನಾಗಿಲ್ಲವೆಂಬ ಕಾರಣದ ಮೇಲೆ ಅಥವಾ ಅವನ ವರ್ತನೆಗೆ ಸಂಬಂಧವಿರದ ಆಡಳಿತಾತ್ಮಕ ಕಾರಣದ (ಕಾಯಂ ಅಧಿಕಾರಿಯು ರಜೆ ಅಥವಾ ಪ್ರತಿ ನಿಯುಕ್ತಿಯಿಂದ ಹಿಂದಿರುಗಿ ಬಂದುದರ ಅಥವಾ ಯುಕ್ತತರ ಅಧಿಕಾರಿಯ ದೊರಕುವಿಕೆ ಮತ್ತು ಇಂತಹ ಕಾರಣಗಳ ಮೇಲೆ) ಮೇಲೆ ಅವನನ್ನು ಕೆಳಗಿನ ವರ್ಗ, ಶ್ರೇಣಿ ಆಥವಾ ಹುದ್ದೆಗೆ ಹಿಂದಿರುಗಿಸುವುದು;

(v) ಅರ್ಹತಾ ಪರೀಕ್ಷೆಗಾಗಿ ಬೇರೊಂದು ವರ್ಗಶ್ರೇಣಿ, ಅಥವಾ ಹುದ್ದೆಗೆ ನೇಮಕ ಮಾಡಲ್ಪಟ್ಟ ಒಬ್ಬ ಪೊಲೀಸು ಅಧಿಕಾರಿಯನ್ನು ಪರೀಕ್ಷೆಯ ಅವಧಿಯಲ್ಲಿ, ಅಥವಾ ಅದು ಮುಗಿದ ಮೇಲೆ, ಅವನ ನೇಮಕಕ್ಕೆ ಸಂಬಂಧಿಸಿದ ನಿಬಂಧನೆ ಅಥವಾ ಅರ್ಹತಾ ಪರೀಕ್ಷೆಗೆ ಅನ್ವಯಿಸುವ ನಿಯಮ ಮತ್ತು ಆದೇಶಗಳಿಗನುಸಾರವಾಗಿ ಅವನ ಕಾಯಂ ವರ್ಗಕ್ಕೆ, ಶ್ರೇಣಿಗೆ ಅಥವಾ ಪದಕ್ಕೆ ಹಿಂದಿರುಗಿಸುವುದು;

(vi) ಪೊಲೀಸು ಅಧಿಕಾರಿಯ ನಿವೃತ್ತಿವಯಸ್ಸಿಗೆ ಅಥವಾ ನಿವೃತ್ತಿಗೆ ಸಂಬಂಧಿಸಿದ ಉಪಬಂಧಗಳಿಗನುಸಾರವಾಗಿ ಕಡ್ಡಾಯ ನಿವೃತ್ತಿಗೊಳಿಸುವುದು;

(vii) (ಎ) ಒಪ್ಪಂದದ ಮೇರೆಗೆ ನಿಯೋಜಿಸಲಾದ ವ್ಯಕ್ತಿಯ ಸೇವೆಯನ್ನು ಅಂಥ ಒಪ್ಪಂದದ ನಿಬಂಧನೆಗಳಿಗನುಸಾರವಾಗಿ; ಅಥವಾ

(ಬಿ) ಒಪ್ಪಂದದ ಮೇರೆಗಲ್ಲದೆ ಹಂಗಾಮಿಯಾಗಿ ನೇಮಕ ಹೊಂದಿರಲು ನಿಯುಕ್ತನಾದ ವ್ಯಕ್ತಿಯ ಸೇವೆಯನ್ನು, ನೇಮಕದ ಅವಧಿಯು ಗತಿಸಿದ ನಂತರ ಮುಕ್ತಾಯಗೊಳಿಸುವುದು.

(2) (1)ನೆಯ ಉಪಪ್ರಕರಣದಲ್ಲಿರುವುದು ಯಾವುದೂ,–

(ಎ) ಪೊಲೀಸು ಅಧಿಕಾರಿಯು ಆರೋಪಿತನಾಗಿರುವ ಯಾವುದೇ ಅಪರಾಧಕ್ಕಾಗಿ ಅವನು ಕ್ರಿಮಿನಲ್ ಪ್ರಾಸಿಕ್ಯೂಷನ್ನಿಗಾಗಿ ಹೊಣೆಗಾರನಾಗಿರುವುದರ ಮೇಲೆ ಯಾವ ಪ್ರಭಾವವನ್ನು ಬೀರತಕ್ಕದ್ದಲ್ಲ.

(ಬಿ) ಪೊಲೀಸು ಅಧಿಕಾರಿಯು ಯಾವುದರಿಂದ ನಿಯುಕ್ತನಾದನೋ ಅದರ ಅಧೀನವಾದ ಪ್ರಾಧಿಕಾರಿಗೆ ಅವನ್ನು ಕಡ್ಡಾಯವಾಗಿ ನಿವೃತ್ತಿಗೊಳಿಸಲು, ನೌಕರಿಯಿಂದ ತೆಗೆದಹಾಕಲು ಅಥವಾ ವಜಾಮಾಡಲು ಅಧಿಕಾರ ಕೊಡತಕ್ಕದ್ದಲ್ಲ; ಅಥವಾ

(ಸಿ) ಭಾರತೀಯ ಪೊಲೀಸಿನವನಿಗೆ ಮತ್ತು ಭಾರತೀಯ ಪೊಲೀಸು ಸೇವೆಯವನಿಗೆ ಅನ್ವಯಿಸತಕ್ಕದ್ದಲ್ಲ.

**24. ದಂಡನೆಯನ್ನು ವಿಧಿಸುವಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ :–** 23ನೆಯ ಪ್ರಕರಣದ ಮೇರೆಗೆ ಪೊಲೀಸು ಅಧಿಕಾರಿಯ ವಿರುದ್ಧವಾಗಿ ಯಾವುದೇ ದಂಡನೆಯ ಆದೇಶವನ್ನು ಮಾಡಬೇಕಾದಾಗ, ನಿಯಮಗಳಿಂದ ನಿಯಮಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು;

ಪರಂತು, ಸಂವಿಧಾನದ 311ನೆಯ ಅನುಚ್ಛೇದದ ಉಪಬಂಧಗಳಿಗನುಸಾರವಾಗಲ್ಲದೇ ಯಾವನೇ ಪೊಲೀಸು ಅಧಿಕಾರಿಯನ್ನು ದರ್ಜೆ ಕಡಿಮೆ ಮಾಡುವ, ತೆಗೆದು ಹಾಕುವ ಅಥವಾ ವಜಾ ಮಾಡುವ ಆದೇಶವನ್ನು ಮಾಡತಕ್ಕದ್ದಲ್ಲ.

**25. ಅಪೀಲುಗಳನ್ನು ಮತ್ತು ಪುನರೀಕ್ಷಣೆ :–** (1) 23ನೆಯ ಪ್ರಕರಣದ ಮೇರೆಗೆ ಪೊಲೀಸು ಅಧಿಕಾರಿಯ ವಿರುದ್ಧ ಮಾಡಿದ ಆದೇಶದ ಮೇಲೆ ಸರಕಾರಕ್ಕೆ ಅಥವಾ ಸರಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಉಲ್ಲೇಖಿಸಬಹುದಾದಂತಹ ಅಧಿಕಾರಿಗೆ ಅಪೀಲು ಇರತಕ್ಕದ್ದು:

ಪರಂತು ವಿಧಿಸಿದ ದಂಡನೆಗಳು, 23ನೆಯ ಪ್ರಕರಣದ (1)ನೆಯ ಉಪಪ್ರಕರಣದ (ಸಿ) ಖಂಡದ (2) ಮತ್ತು (iii) ಉಪಖಂಡಗಳಲ್ಲಿ ಉಲ್ಲೇಖಿಸಿದವುಗಳಾದಲ್ಲಿ ಯಾವ ಅಪೀಲೂ ಅಗತಕ್ಕದ್ದಲ್ಲ.

(2) ಸರಕಾರವು ತಾನಾಗಿಯೇ ಅಥವಾ ಮೊಕದ್ದಮೆಯ ಅಭಿಲೇಖಗಳನ್ನು ತರಿಸಿಕೊಂಡ ತರುವಾಯ 23ನೆಯ ಪ್ರಕರಣದ ಅಥವಾ ಈ ಪ್ರಕರಣದ (1)ನೆಯ ಉಪಪ್ರಕರಣದ ಮೇರೆಗೆ ಇನ್ಸ್‌ಪೆಕ್ಟರ್ ಜನರಲ್‌ನಿಂದ ಅಥವಾ ಅವನಿಗೆ ಅಧೀನನಾಗಿರುವ ಯಾವನೇ ಅಧಿಕಾರಿಯಿಂದ ಮಾಡಲಾದ ಆದೇಶವನ್ನು ಪರಿಷ್ಕರಿಸಬಹುದು, ಮತ್ತು

(ಎ) ಆದೇಶವನ್ನು ಸ್ಥಿರೀಕರಿಸಬಹುದು, ಮಾರ್ಪಾಟು ಮಾಡಬಹುದು ಅಥವಾ ತಳ್ಳಿಹಾಕಬಹುದು;

(ಬಿ) ಯಾವುದೇ ದಂಡವನ್ನು ವಿಧಿಸಬಹುದು ಅಥವಾ ಆದೇಶದಿಂದ ವಿಧಿಸಲಾದ ದಂಡವನ್ನು ತಳ್ಳಿಹಾಕಬಹುದು, ಕಡಿಮೆ ಮಾಡಬಹುದು, ಸ್ಥಿರೀಕರಿಸಬಹುದು ಅಥವಾ ಹೆಚ್ಚಿಸಬಹುದು;

(ಸಿ) ಮೊಕದ್ದಮೆಯ ಸಂದರ್ಭದಲ್ಲಿ ಅದಕ್ಕೆ ಉಚಿತವೆಂದು ತೋರುವ ಮುಂದೆ ಕೈಕೊಳ್ಳಬೇಕಾದ ಕ್ರಮ ಅಥವಾ ವಿಚಾರಣೆಯನ್ನು ನಿರ್ದೇಶಿಸಿ ಆದೇಶ ಮಾಡಿದ ಪ್ರಾಧಿಕಾರಿಗೆ ಅಥವಾ ಬೇರೊಂದು ಪ್ರಾಧಿಕಾರಿಗೆ ಮೊಕದ್ದಮೆಯನ್ನು ವಾಪಸ್ಸು ಕಳಿಸಬಹುದು,

(ಡಿ) ಅದಕ್ಕೆ ಸೂಕ್ತವೆನಿಸುವ ಇತರ ಆದೇಶಗಳನ್ನು ಮಾಡಬಹುದು; ಪರಂತು,–

(i) ದಂಡವನ್ನು ವಿಧಿಸುವ ಅಥವಾ ಅದನ್ನು ಹೆಚ್ಚಿಸುವ ಆದೇಶವನ್ನು, ಸಂಬಂಧಿತ ವ್ಯಕ್ತಿಗೆ ಅಂಥ ಹೆಚ್ಚಿನ ದಂಡನೆ ಬಗ್ಗೆ ಅವನು ಮಾಡಿಕೊಳ್ಳಬಯಸುವ ಮನವಿಯನ್ನು ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟ ಹೊರತು, ಮಾಡತಕ್ಕದ್ದಲ್ಲ;

(ii) ಸರಕಾರವು, ವಿಚಾರಣೆಯು ನಡೆಯದೇ ಇರುವ ಮೊಕದ್ದಮೆಯಲ್ಲಿ, 23ನೆಯ ಪ್ರಕರಣದ (1)ನೇ ಉಪಪ್ರಕರಣದ (ಖ) ಉಪಖಂಡದ (i) ರಿಂದ (iv) ರವರೆಗಿನ ಖಂಡಗಳಲ್ಲಿ ಉಲ್ಲೇಖಿಸಿದ ದಂಡಗಳ ಪೈಕಿ ಯಾವುದನ್ನಾದರೂ ವಿಧಿಸಲು ಉದ್ದೇಶಿಸಿದಲ್ಲಿ ಅದು ಅಂಥ ವಿಚಾರಣೆಯು ನಡೆಸಲ್ಪಡತಕ್ಕದ್ದೆಂದು ನಿರ್ದೇಶಿಸತಕ್ಕದ್ದು ಮತ್ತು ಅನಂತರ ಅಂತಹ ವಿಚಾರಣೆಯ ವ್ಯವಹರಣೆಗಳನ್ನು ಪರ್ಯಾಲೋಚಿಸಿ ಮತ್ತು ಸಂಬಂಧಿತ ವ್ಯಕ್ತಿಗೆ ಅಂಥ ದಂಡನೆಯ ಬಗ್ಗೆ ಅವನು ಮಾಡಿಕೊಳ್ಳಬಯಸುವ ಯಾವುದೇ ಮನವಿಯನ್ನು ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟ ತರುವಾಯ ಅದಕ್ಕೆ ಸೂಕ್ತವೆನಿಸುವ ಆದೇಶಗಳನ್ನು ಮಾಡಬಹುದು.

**26. ಪೊಲೀಸು ಅಧಿಕಾರಿಗಳು ಕೆಲಸದ ಮೇಲಿದ್ದಾರೆಂದು ಭಾವಿಸಲ್ಪಡುವುದು ಮತ್ತು ರಾಜ್ಯದ ಯಾವುದೇ ಭಾಗದಲ್ಲಿ ನಿಯೋಜಿಸಲ್ಪಡಲು ಬದ್ಧರಾಗಿರುವುದು :–** (1) ರಜೆಯಲ್ಲಿರದ ಅಥವಾ ನಿಲಂಬನೆಯಲ್ಲಿರುವ ಪ್ರತಿಯೊಂದು ಪೊಲೀಸು ಅಧಿಕಾರಿಯು, ಈ ಅಧಿನಿಯಮದ ಎಲ್ಲ ಉದ್ದೇಶಗಳಿಗಾಗಿ ಯಾವಾಗಲೂ ಕೆಲಸದ ಮೇಲಿದ್ದಾನೆಂದು ಭಾವಿಸತಕ್ಕದ್ದು ಮತ್ತು ರಾಜ್ಯದ ಒಂದು ಭಾಗದಲ್ಲಿ ಕೆಲಸದ ಮೇಲೆ ನಿಯೋಜಿತನಾಗಿರುವ ಪೊಲೀಸು ಅಧಿಕಾರಿಯು, ಅಥವಾ ಪೊಲೀಸು ನಿಕಾಯವು ಅಥವಾ ಅದಕ್ಕೆ ಸೇರಿದ ಯಾವನೊಬ್ಬನು, ಯಾವುದೇ ಕಾಲದಲ್ಲಿ ಸರಕಾರವು ಅಥವಾ ಇನ್‌ಸ್ಪೆಕ್ಟರ್ ಜನರಲ್‌ನು ಹಾಗೇ ನಿರ್ದೇಶಿಸದರೆ, ರಾಜ್ಯದ ಇತರ ಯಾವುದೇ ಭಾಗದಲ್ಲಿ ಪೊಲೀಸು ಕೆಲಸದ ಮೇಲೆ ಅವನ ಸೇವೆಯನ್ನು ಅಗತ್ಯವಿರಬಹುದಾದವರೆಗೆ ನಿಯೋಜಿಸಲ್ಪಡಬಹುದು.

(2) ಇನ್‌ಸ್ಪೆಕ್ಟರ್ ಜನರಲ್‌ನು, ಅತ್ಯಂತ ಜರೂರಿ ಸಂದರ್ಭಗಳನ್ನುಳಿದು, (1)ನೆಯ ಉಪಪ್ರಕರಣದ ಮೇರೆಗೆ ಯಾವುದೇ ಸಂಖ್ಯೆಯ ಪೊಲೀಸು ಅಧಿಕಾರಿಗಳಿಗೆ ಅಥವಾ ಅದರ ನಿಕಾಯಕ್ಕೆ ಕೊಡಬೇಕಾದ ಉದ್ದೇಶಿತ ನಿರ್ದೇಶನದ ಸಕಾಲಿಕ ತಿಳುವಳಿಕೆಯನ್ನು ಕಮೀಷನರಿಗೆ, ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಮತ್ತು ಡೆಪ್ಯೂಟಿ ಇನ್‌ಸ್ಪೆಕ್ಟರ್ ಜನರಲ್‌ನಿಗೆ ಕೊಡತಕ್ಕದ್ದು. ಮತ್ತು ರಹಸ್ಯವು ಅಗತ್ಯವಿದ್ದ ಹೊರತು, ಅಂತಹ ನಿರ್ದೇಶನದ ಕಾರಣಗಳು ವಿವರಿಸಲ್ಪಡತಕ್ಕದ್ದು; ಆ ತರುವಾಯ ಸದರಿ ಅಧಿಕಾರಿಗಳು ಮತ್ತು ಅವರ ಅಧೀನಸ್ಥರು ಅಂಥ ನಿದೇಶನದ ಮುಂದುವರಿಕೆಗೆ ಎಲ್ಲ ಸೂಕ್ತ ಕ್ರಮವನ್ನು ಕೈಕೊಳ್ಳತಕ್ಕದ್ದು.

**27. ಯಾವ ಷರತ್ತುಗಳ ಮೇಲೆ ಪೊಲೀಸು ಅಧಿಕಾರಿಯು ರಾಜೀನಾಮೆಯನ್ನು ಕೊಡಬಹುದು :–** (1) ಕಮೀಷನರನ, ಡೆಪ್ಯೂಟಿ ಇನ್ಸ್‌ಸ್ಪೆಕ್ಟರ್ ಜನರಲ್‌ನ ಅಥವಾ ಈ ಬಗ್ಗೆ ಇನ್ಸ್‌ಸ್ಪೆಕ್ಟರ್ ಜನರಲ್‌ನಿಂದ ಅಧಿಕಾರನೀಡಲಾದ ಬೇರೆ ಯಾವೊಬ್ಬ ಪೊಲೀಸು ಅಧಿಕಾರಿಯ ಲಿಖಿತ ಅನುಮತಿಯ ಹೊರತು, ಇನ್‌ಸ್ಪೆಕ್ಟರನ ದರ್ಜೆಯ ಅಥವಾ ಅವನ ದರ್ಜೆಗೆ ಕಡಿಮೆಯಿರುವ ಪೊಲೀಸು ಅಧಿಕಾರಿಯು ತನ್ನ ಪದಕ್ಕೆ ರಾಜೀನಾಮೆಯನ್ನು ಕೊಡತಕ್ಕದ್ದಲ್ಲ ಅಥವಾ ಅದರ ಸಂಬಂಧದಲ್ಲಿಯ ಕರ್ತವ್ಯಗಳಿಂದ ವಿಮುಖನಾಗತಕ್ಕದ್ದಲ್ಲ.

ಪರಂತು, (2)ನೆಯ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಅಂಥ ಯಾವೊಬ್ಬ ಪೊಲೀಸು ಅಧಿಕಾರಿಗೆ, ಅವನು ಅಂಥ ಪೊಲೀಸು ಅಧಿಕಾರಿಯಂತೆ (ನಾತೆಯಿಂದ) ಸರಕಾರಕ್ಕೆ ಅಥವಾ ಪೊಲೀಸು ನಿಧಿಗೆ

ಬಾಕಿಯಾಗಿರುವ ಯಾವುದೇ ಋಣವನ್ನು ಪೂರ್ತಿಯಾಗಿ ತೀರಿಸುವವರೆಗೆ, ಅಂಥ ಅನುಮತಿಯನ್ನು ಕೊಡತಕ್ಕದ್ದಲ್ಲ.

(2) ಅಂಥ ಯಾವೊಬ್ಬ ಪೊಲೀಸು ಅಧಿಕಾರಿಯು, ಅವನು ಪೊಲೀಸು ಸೇವೆಯಲ್ಲಿ ಮುಂದುವರೆಯಲು ಅನಾರೋಗ್ಯ ಅಥವಾ ಮಾನಸಿಕ ಅಥವಾ ದೈಹಿಕ ಅಶಕ್ತತೆಯ ಕಾರಣದಿಂದ ಅನರ್ಹನಾಗಿದ್ದಾನೆಂದು ಘೋಷಿಸುವ ಜಿಲ್ಲೆಯಲ್ಲಿ ನಿಯಮಿಸಲಾದ ವೈದ್ಯಾಧಿಕಾರಿಯಿಂದ ಒಂದು ಸರ್ಟಿಫಿಕೇಟನ್ನು ಹಾಜರುಪಡಿಸಿದರೆ, ಮತ್ತು ಅಂಥ ಪೊಲೀಸು ಅಧಿಕಾರಿಯಂತೆ ಅವನು ಸರಕಾರಕ್ಕೆ ಅಥವಾ ಪೊಲೀಸು ನಿಧಿಗೆ ಬಾಕಿಯಾಗಿರುವ ಯಾವುದೇ ಋಣವನ್ನು ತೀರಿಸಿದರೆ ಅಥವಾ ಅದನ್ನು ಸಂದಾಯ ಮಾಡುವ ಬಗ್ಗೆ ತೃಪ್ತಿಕರವಾದ ಜಾಮೀನನ್ನು ಕೊಟ್ಟರೆ, ಅವನಿಗೆ ರಾಜೀನಾಮೆಯನ್ನು ಕೊಡಲು ಅವಶ್ಯಕವಾದ ಲಿಖಿತ ಅನುಮತಿಯನ್ನು ಕೂಡಲೇ ಕೊಡಬಹುದು.

(3) ಸದರಿ ಪೊಲೀಸು ಅಧಿಕಾರಿಯು ರಾಜೀನಾಮೆಯನ್ನು ಕೊಟ್ಟರೆ ಅಥವಾ ಈ ಪ್ರಕರಣವನ್ನು ಉಲ್ಲಂಘಿಸಿ ತನ್ನ ಪದದ ಕರ್ತವ್ಯಗಳಿಂದ ವಿಮುಖನಾದರೆ ಅಥವಾ, ಅವನು, ಪೊಲೀಸು ಇನ್ಸ್‌ಪೆಕ್ಟರ್ ಜನರಲ್‌ನ ಅಥವಾ ಕಮೀಷನರನ ಆದೇಶದ ಮೇಲೆ ಅವನಿಗೆ ಆಗ ಬರಬೇಕಾದ ಎಲ್ಲ ಸಂಬಳದ ಬಾಕಿಯ ಮುಟ್ಟುಗೋಲಿಗೆ ಬದ್ದನಾಗಿರತಕ್ಕದ್ದು. ಈ ಮುಟ್ಟುಗೋಲು, ಸದರಿ ಅಧಿಕಾರಿಯು ಈ ಅಧಿನಿಯಮದ 118ನೆಯ ಪ್ರಕರಣದ ಮೇರೆಗೆ ಅಥವಾ ಜಾರಿಯಲ್ಲಿರುವ ಬೇರೆ ಯಾವುದೇ ವಿಧಿಯ ಮೇರೆಗೆ ಗುರಿಯಾಗಬಹುದಾದ ದಂಡದ ಜೊತೆಗೆ ಇರತಕ್ಕದ್ದು.

**28. ಪೊಲೀಸು ಅಧಿಕಾರಿಯು ವ್ಯಾಪಾರ ಇತ್ಯಾದಿಗಳಲ್ಲಿ ತೊಡಗಿರಕೂಡದು :–** (1) ಸಂದರ್ಭಾನುಸಾರ ಕಮೀಷನರ್‌ನ ಅಥವಾ ಇನ್ಸ್‌ಪೆಕ್ಟರ್ ಜನರಲ್‌ನ ಅಥವಾ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್‌ನ ಅಥವಾ ಸರಕಾರದ ಅನುಮತಿ ಇಲ್ಲದೆ, ಯಾವ ಪೊಲೀಸು ಅಧಿಕಾರಿಯೂ, ವ್ಯಾಪಾರದಲ್ಲಿ ತೊಡಗಿರತಕ್ಕದ್ದಲ್ಲ ಅಥವಾ ಯಾವುದೇ ಭೂ ವ್ಯವಹಾರದಲ್ಲಿ ಅಥವಾ ಯಾವುದೇ ಪ್ರಕಾರದ ವಾಣಿಜ್ಯ ವ್ಯವಹಾರದಲ್ಲಿ ಮುಖ್ಯಸ್ಥನಾಗಿ ಅಥವಾ ಅಭಿಕರ್ತನಾಗಿ ಸಂಬಂಧವನ್ನು ಹೊಂದಿರತಕ್ಕದ್ದಲ್ಲ ಅಥವಾ ಕ್ರಿಮಿನಲ್ ನ್ಯಾಯಾಲಯದ ಆದೇಶದ ಮೇಲೆ ಮಾರಲಾಗುವ ಸ್ವತ್ತಿಗಾಗಿ ಸವಾಲು ಮಾಡತಕ್ಕದ್ದಲ್ಲ; ಅಥವಾ ಇತರ ಪೊಲೀಸು ಅಧಿಕಾರಿಯೊಡನೆ ಹಣದ ವ್ಯವಹಾರವನ್ನಿಟ್ಟುಕೊಂಡಿರತಕ್ಕದ್ದಲ್ಲ.

(2) ಯಾವ ಪೊಲೀಸು ಅಧಿಕಾರಿಯೂ, ಇನ್ಸ್‌ಪೆಕ್ಟರ್ ಜನರಲ್‌ನ ಲಿಖಿತ ಅನುಮತಿ ಇಲ್ಲದೇ, ತನ್ನ ಪದದ ಹೊರತಾಗಿ ಅಥವಾ ಅಂಥ ಪೊಲೀಸು ಅಧಿಕಾರಿಯ ಕರ್ತವ್ಯಗಳಿಲ್ಲದ ಇತರ ಯಾವುದೇ ಪದವನ್ನು ಸ್ವೀಕರಿಸತಕ್ಕದ್ದಲ್ಲ ಅಥವಾ ಯಾವುದೇ ವೃತ್ತಿಯನ್ನು ಆಚರಿಸತಕ್ಕದ್ದಲ್ಲ ಅಥವಾ ಯಾವುದೇ ನೌಕರಿಯಲ್ಲಿ ತೊಡಗಿರತಕ್ಕದ್ದಲ್ಲ.

**ವಿವರಣೆ:–** (1)ನೆಯ ಮತ್ತು (2)ನೆಯ ಉಪಪ್ರಕರಣಗಳಲ್ಲಿರುವ ನಿಷೇಧಗಳು, ಪೊಲೀಸು ಅಧಿಕಾರಿಯು ರಜೆಯಲ್ಲಿರುವಾಗ ಅಥವಾ ನಿಲಂಬಿತನಾಗಿರುವಾಗ ಮತ್ತು ಕೆಲಸದಲ್ಲಿರುವಾಗ ಅನ್ವಯಿಸತಕ್ಕದ್ದು.

**29. ಪೊಲೀಸು ಅಧಿಕಾರಿಯಾಗಿರುವುದು ಕೊನೆಗೊಂಡಾಗ ಸರ್ಟಿಫಿಕೇಟು, ಶಸ್ತ್ರ, ಇತ್ಯಾದಿಗಳನ್ನು ವಾಪಸ್ಸು ಕೊಡುವುದು :–** (1) ಯಾವುದೇ ಕಾರಣದಿಂದ ಪೊಲೀಸು ಅಧಿಕಾರಿಯಾಗಿರುವುದು ಕೊನೆಗೊಂಡಾಗ ಅಂಥ ಪ್ರತಿಯೊಬ್ಬ ವ್ಯಕ್ತಿಯು, ಕೂಡಲೇ ಅವನ ನೇಮಕ ಅಥವಾ ಪದದ ಸರ್ಟಿಫಿಕೇಟನ್ನು ಅಥವಾ ಅವನ ಪದಕ್ಕೆ

ಸಂಬಂಧಪಟ್ಟ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನೆರವೇರಿಸಲು ಅವನಿಗೆ ಒದಗಿಸಲಾದ ಶಸ್ತ್ರ, ವಿಶೇಷ ತೊಡುಗೆ, ಬಟ್ಟೆ ಮತ್ತು ಇತರ ಅವಶ್ಯಕ ವಸ್ತುಗಳನ್ನು ತಾನು ಅಧೀನನಾಗಿರುವ ಮತ್ತು ಅವುಗಳನ್ನು ಸ್ವೀಕರಿಸಲು ಕಮೀಷನರ್‌ನಿಂದ ಅಥವಾ ಡೆಪ್ಯೂಟಿ ಇನ್‌ಸ್ಪೆಕ್ಟರ್ ಜನರಲ್‌ನಿಂದ, ಪೊಲೀಸು ತರಬೇತಿ ಶಾಲೆ ಅಥವಾ ಕಾಲೇಜಿನ ಪ್ರಿನ್ಸಿಪಾಲನಿಂದ ಅಥವಾ ಸೂಪರಿಂಟೆಂಡೆಂಟನಿಂದ ಅಧಿಕಾರಪಡೆದ ಅಧಿಕಾರಿಗೆ ಕೂಡಲೇ ವಾಪಸುಕೊಡತಕ್ಕದ್ದು.

(2) ಯಾವನೇ ಮ್ಯಾಜಿಸ್ಟ್ರೇಟನು, ಮತ್ತು ಆ ಕಾಲದಲ್ಲಿ ಅಭಿಲೇಖಿಸಲಾದ ವಿಶೇಷ ಕಾರಣಗಳಿಗಾಗಿ, ಕಮೀಷನರ್ ಅಥವಾ ಡೆಪ್ಯೂಟಿ ಇನ್‌ಸ್ಪೆಕ್ಟರ್ ಜನರಲ್, ಅಥವಾ ಪೊಲೀಸ್ ತರಬೇತಿ ಶಾಲೆಯ ಅಥವಾ ಕಾಲೇಜಿನ ಪ್ರಿನ್ಸಿಪಾಲ ಸೂಪರಿಂಟೆಂಡೆಂಟ ಅಥವಾ ಅಸಿಸ್ಟೆಂಟ್ ಸೂಪರಿಂಟೆಂಡೆಂಟರು ಅಥವಾ ಡೆಪ್ಯೂಟಿ ಸೂಪರಿಂಟೆಂಡೆಂಟ್ ಹಾಗೆ ಒಪ್ಪಿಸಿ ಕೊಂಡರೆ ಇರುವಂಥ ಯಾವುದೇ ಸರ್ಟಿಫಿಕೇಟು, ಶಸ್ತ್ರ, ವಿಶೇಷ ತೊಡುಗೆಗಳು, ಬಟ್ಟೆ ಅಥವಾ ಇತರ ಅವಶ್ಯಕ ವಸ್ತು, ಅವುಗಳು ಕಂಡು ಬರಬಹುದಾದ ಸ್ಥಳಗಳನ್ನು ಝಡತಿ ಮಾಡಲು ಮತ್ತು ವಶಪಡಿಸಿಕೊಳ್ಳಲು ವಾರಂಟನ್ನು ಹೊರಡಿಸಬಹುದು. ಹೊರಡಿಸಲಾದ ಪ್ರತಿಯೊಂದು ವಾರಂಟು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1898ರ ಉಪಬಂಧಗಳಿಗನುಸಾರವಾಗಿ, ಪೊಲೀಸು ಅಧಿಕಾರಿಯಿಂದ, ಅಥವಾ ವಾರಂಟನ್ನು ಹೊರಡಿಸುವ ಮ್ಯಾಜಿಸ್ಟ್ರೇಟ್ (ದಂಡಾಧಿಕಾರಿ) ಕಮೀಷನರು, ಡೆಪ್ಯೂಟಿ ಇನ್‌ಸ್ಪೆಕ್ಟರ್ ಜನರಲ್, ಪೊಲೀಸು ತರಬೇತಿ ಶಾಲೆಯ ಅಥವಾ ಕಾಲೇಜಿನ ಪ್ರಿನ್ಸಿಪಾಲ, ಸೂಪರಿಂಟೆಂಡೆಂಟ್ ಅಥವಾ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್, ಅಥವಾ ಡೆಪ್ಯೂಟಿ ಸೂಪರಿಂಟೆಂಡೆಂಟ್, ಹಾಗೆ ನಿರ್ದೇಶಿಸಿದರೆ, ಬೇರೆ ಯಾವನೇ ವ್ಯಕ್ತಿಯಿಂದ, ಜಾರಿ ಮಾಡಲ್ಪಡತಕ್ಕದ್ದು.

(3) ವ್ಯಕ್ತಿಗೆ ಒದಗಿಸಲಾಗಿದ್ದು ಅದು ಸಂದರ್ಭಾನುಸಾರ ಇನ್‌ಸ್ಪೆಕ್ಟರ್ ಜನರಲ್ ಅಥವಾ ಕಮೀಷನರ ಆದೇಶಗಳ ಮೇರೆಗೆ ಅವನ ಸ್ವತ್ತಾಗಿದ್ದರೆ ಅದಕ್ಕೆ, ಈ ಪ್ರಕರಣದಲ್ಲಿರುವ ಯಾವುದೂ ಅದಕ್ಕೆ ಅನ್ವಯಿಸತಕ್ಕದ್ದಲ್ಲ.

**30. ಪೊಲೀಸು ಅಧಿಕಾರಿಗಳಿಗೆ ಒದಗಿಸಲಾದ ಆವರಣಗಳ ಆಧಿಭೋಗ ಮತ್ತು ಅವುಗಳನ್ನು ತೆರವು ಮಾಡುವ ಹೊಣೆ :–** (1) ಸರಕಾರದಿಂದ ಪೊಲೀಸು ಅಧಿಕಾರಿಯ ವಾಸಕ್ಕಾಗಿ ಒದಗಿಸಲಾದ ಯಾವುದೇ ಆವರಣವನ್ನು ಆಧಿಭೋಗಕ್ಕೆ ತೆಗೆದುಕೊಳ್ಳುವ ಯಾವನೇ ಪೊಲೀಸು ಅಧಿಕಾರಿಯು.

(ಎ) ಸರಕಾರದಿಂದ ಸಾಮಾನ್ಯವಾಗಿ ಅಥವಾ ವಿಶೇಷ ಸಂದರ್ಭಗಳಲ್ಲಿ ಉಲ್ಲೇಖಿಸಲಾಗುವಂತಹ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಅದರಲ್ಲಿ ವಾಸಿಸತಕ್ಕದ್ದು ಮತ್ತು

(ಬಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಏನೇ ಇದ್ದರೂ, ಅದನ್ನು ತಾನು ಪೊಲೀಸು ಅಧಿಕಾರಿಯಾಗಿರುವುದು ಕೊನೆಗೊಂಡಾಗ ಅಥವಾ ಸರಕಾರವು ಈ ಬಗ್ಗೆ ಅವಶ್ಯಕ ಮತ್ತು ಯುಕ್ತವೆಂದು ಪರ್ಯಾಲೋಚಿಸುವಾಗ ಅದನ್ನು ತೆರವು ಮಾಡತಕ್ಕದ್ದು.

(2) (1)ನೆಯ ಉಪಪ್ರಕರಣದ ಮೇರೆಗೆ ತೆರವು ಮಾಡಲು ಬದ್ಧನಾಗಿರುವ ಅಥವಾ ಅಗತ್ಯಪಡಿಸಲಾಗಿರುವ ಯಾವನೇ ವ್ಯಕ್ತಿಯು, ಹಾಗೆ ಮಾಡಲು ತಪ್ಪಿದರೆ, ಸರಕಾರವು ಅಥವಾ ಅದರಿಂದ ಈ ಬಗ್ಗೆ ಪ್ರಾಧಿಕೃತನಾದ ಯಾವನೇ ಅಧಿಕಾರಿಯು, ಆವರಣವನ್ನು ತೆರವುಮಾಡಲು ಅಂಥ ಅಧಿಕಾರಿಗೆ ಆದೇಶ ಮಾಡಬಹುದು ಮತ್ತು ಯಾವನೇ ಪೊಲೀಸು ಅಧಿಕಾರಿಯು ಅವಶ್ಯಕವಿರುವ ಸಹಾಯದೊಂದಿಗೆ ಆವರಣದಲ್ಲಿ ಪ್ರವೇಶ ಮಾಡಲು ಮತ್ತು ಅಲ್ಲಿ ಕಂಡಬರುವ ಯಾವನೇ ವ್ಯಕ್ತಿಯನ್ನು ಹೊರಗೆ ಹಾಕಲು ಮತ್ತು ಆವರಣದ

ಸ್ವಾಧೀನವನ್ನು ಪಡೆಯಲು ಮತ್ತು ನಿರ್ದೇಶದಲ್ಲಿ ಉಲ್ಲೇಖಿಸಲಾದ ಯಾವನೇ ವ್ಯಕ್ತಿಗೆ ಅದನ್ನು ಒಪ್ಪಿಸಿಕೊಡಲು ನಿರ್ದೇಶಿಸಬಹುದು.

## ಅಧ್ಯಾಯ – IV

## ಪೊಲೀಸು ವಿನಿಯಮ

**31. ಸಂಚಾರವನ್ನು ಕ್ರಮಗೊಳಿಸುವುದು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಸುವ್ಯವಸ್ಥೆಯನ್ನು ರಕ್ಷಿಸುವುದು ಇತ್ಯಾದಿಗಳಿಗಾಗಿ ಆದೇಶಗಳನ್ನು ಮಾಡಲು ಅಧಿಕಾರ :–** (1) ಕಮೀಷನರ್ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್ ಅನುಕ್ರಮವಾಗಿ ತಮ್ಮ ತಮ್ಮ ಚಾರ್ಜಿನಲ್ಲಿರುವ ಪ್ರದೇಶಗಳಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಈ ಕೆಳಗಿನವುಗಳ ಬಗ್ಗೆ ಈ ಅಧಿನಿಯಮಕ್ಕೆ ಅಸಂಬದ್ಧವಿರದ ಆದೇಶಗಳನ್ನು ಮಾಡಬಹುದು, ಬದಲಾಯಿಸಬಹುದು ಅಥವಾ ರದ್ದುಗೊಳಿಸಬಹುದು.

(ಎ) ಹಡಗುಕಟ್ಟೆ, ಬಂದರುಕಟ್ಟೆಗಳಲ್ಲಿ ಮತ್ತು ಇಳಿದಾಣಗಳಲ್ಲಿ, ಬಸ್‌ನಿಲ್ದಾಣಗಳಲ್ಲಿ, ಮತ್ತು ರೈಲು ನಿಲ್ದಾಣಗಳ ಹೊರಭಾಗದಲ್ಲಿ ಪ್ರಯಾಣಿಕರ ಸಾಮಾನುಗಳನ್ನು ಸಾಗಿಸುವುದಕ್ಕಾಗಿ ನಿಯೋಜಿತರಾಗಬಯಸುವ ವ್ಯಕ್ತಿಗಳಿಗೆ ಲೈಸೆನ್ಸು ಕೊಡುವುದಕ್ಕಾಗಿ ಮತ್ತು ಅವರನ್ನು ನಿಯಂತ್ರಿಸುವುದಕ್ಕಾಗಿ ಮತ್ತು ಹಾಗೆ ನಿಯೋಜಿತರಾದ ಅಂತಹ ವ್ಯಕ್ತಿಗಳ ದುಡಿಮೆಗಾಗಿ ಚಾರ್ಜನ್ನು ಗೊತ್ತು ಮಾಡುವುದಕ್ಕಾಗಿ ಮತ್ತು ಆ ಚಾರ್ಜಿನ ದರಗಳನ್ನು ಜಾರಿಗೆ ತರುವುದರ ಸಲುವಾಗಿ;

(ಬಿ) ಬೀದಿಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ವಾಹನಗಳು ಯಾವ ಷರತ್ತಿಗೊಳಪಟ್ಟು ನಿಲ್ಲಿಸಬೇಕೆಂಬುದನ್ನು ಮತ್ತು ವಾಹನ ಮತ್ತು ದನಗಳನ್ನು ನಿಲ್ಲಿಸುವುದಕ್ಕಾಗಿ ಬೀದಿಗಳನ್ನು ನಿಲ್ಲಿಸುವ ಸ್ಥಳಗಳಾಗಿ ಉಪಯೋಗಿಸಬೇಕೆಂಬುದನ್ನು ಕ್ರಮಗೊಳಿಸುವುಕ್ಕಾಗಿ;

(ಸಿ) ಬೀದಿಯಲ್ಲಿ ವಾಹನಗಳ ಮೇಲೆ ಉಪಯೋಗಿಸಬೇಕಾದ ದೀಪಗಳ ಸಂಖ್ಯೆ ಮತ್ತು ಅವು ಇರಬೇಕಾದ ಸ್ಥಳ ಮತ್ತು ಅಂಥ ದೀಪಗಳನ್ನು ಉಪಯೋಗಿಸಬೇಕಾದ ವೇಳೆಯನ್ನು ನಿಯಮಿಸುವುದು;

(ಡಿ) ರಾಷ್ಟ್ರೀಯ ಜಲಮಾರ್ಗಗಳಲ್ಲದ ಪ್ರಾದೇಶಿಕ ಜಲಮಾರ್ಗಗಳಲ್ಲಿ ಅಥವಾ ಒಳನಾಡಿನ ಜಲಮಾರ್ಗಗಳಲ್ಲಿ ನೌಕೆ ಅಥವಾ ದೋಣಿಯ ಮೇಲೆ ಯಾವುದೇ ಚಿತ್ರಗಳನ್ನು, ಜಾಹೀರಾತುಗಳನ್ನು, ವಾರ್ತಾ ಫಲಕಗಳನ್ನು ಅಥವಾ ಸಾರ್ವಜನಿಕ ನೋಟೀಸುಗಳನ್ನ ಪ್ರದರ್ಶಿಸುವುದಕ್ಕಾಗಿ ಲೈಸೆನ್ಸು ಕೊಡುವುದು, ಪ್ರದರ್ಶನವನ್ನು ನಿಯಂತ್ರಿಸುವುದು ಅಥವಾ ನಿಷೇಧಿಸುವುದು;

(ಇ) ಈ ಬಗ್ಗೆ ಅವನು ನಿಯಮಿಸಬಹುದಾದಂತಹ ವಿನಿಮಯಗಳಿಗೊಳಪಟ್ಟ ಹೊರತು ಬೀದಿಗಳಲ್ಲಿ ಅಥವಾ ಕೆಲವು ನಿರ್ದಿಷ್ಟ ಬೀದಿಗಳಲ್ಲಿ ಪಶುಗಳನ್ನು ಯಾವ ವೇಳೆಗಳಲ್ಲಿ ಹಿಡಿದುಕೊಂಡು ಹೋಗುವುದನ್ನು, ಹೊಡೆದುಕೊಂಡು ಹೋಗುವುದನ್ನು ನಡೆಯಿಸಿಕೊಂಡು ಹೋಗುವುದನ್ನು ಅಥವಾ ಸಾಗಿಸುವುದನ್ನು ಕ್ರಮಗೊಳಿಸುವುದು;

(ಎಫ್) ಯಾವುದೇ ಆನೆ, ಅಥವಾ ವನ್ಯ ಅಥವಾ ಅಪಾಯಕರ ಪ್ರಾಣಿಯನ್ನು ಯಾವುದೇ ಬೀದಿ ಅಥವಾ ಸಾರ್ವಜನಿಕ ಸ್ಥಳದಿಂದ ಅಥವಾ ಅಲ್ಲಿ ಹಿಡಿದುಕೊಂಡು ಹೋಗುವುದನ್ನು, ಹೊಡೆದುಕೊಂಡು ಹೋಗುವುದನ್ನು ನಡೆಯಿಸಿಕೊಂಡು ಹೋಗುವುದನ್ನು, ಅಥವಾ ಸಾಗಿಸುವುದನ್ನು ಕ್ರಮಗೊಳಿಸುವುದು;

(ಜಿ) ಚೌಬೀನೆ, ಸಾರುವೆ ಕಟ್ಟಡದ ಕಂಬಗಳು, ಏಣಿಗಳು, ಕಬ್ಬಿಣದ ದೂಲಗಳು, ತೊಲೆಗಳು ಅಥವಾ ಕಂಬಗಳು, ಬಾಯ್ಲರ್ ಅಥವಾ ಸಾಗಿಸಲು ಕಷ್ಟಸಾಧ್ಯವಾದ ಇತರ ವಸ್ತುಗಳನ್ನು ಬೀದಿಗಳಲ್ಲಿ ಸಾಗಿಸುವ ರೀತಿ ಮತ್ತು ವಿಧಾನವನ್ನು ಮತ್ತು ಅಂತಹ ಸಾಗಾಣಿಕೆಯ ರಸ್ತೆ ಮತ್ತು ವೇಳೆಯನ್ನು ಕ್ರಮಗೊಳಿಸುವುದು ಮತ್ತು ನಿಯಂತ್ರಣಗೊಳಿಸುವುದು;

(ಹೆಚ್) ಬೀದಿಗಳಲ್ಲಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಸಿಡಿಮದ್ದು ಅಥವಾ ಇತರ ಸ್ಫೋಟಕ ವಸ್ತುವನ್ನು ಒಯ್ಯುವುದರ ಬಗ್ಗೆ ಲೈಸೆನ್ಸು ಕೊಡುವುದು, ನಿಯಂತ್ರಿಸುವುದು ಅಥವಾ ನೆರೆಹೊರೆಯ ನಿವಾಸಿಗಳಿಗೆ ಅಥವಾ ಪ್ರಯಾಣಿಕರಿಗೆ ಅಡಚಣೆ, ಅನಾನುಕೂಲ, ಕಿರುಕುಳ, ನಷ್ಟದ ಸಂಭವ, ಅಪಾಯ ಅಥವಾ ಹಾನಿಯನ್ನು ತಡೆಗಟ್ಟುವುದನ್ನು ನಿಷೇಧಿಸುವುದು.

(ಐ) ಕೆಲವು ನಿರ್ದಿಷ್ಟ ಬೀದಿಗಳು ಮತ್ತು ನಿರ್ದಿಷ್ಟ ಕಾಲದಲ್ಲಿ ಹೊರತು ಮತ್ತು ಅವನು ಈ ಬಗ್ಗೆ ನಿಯಮಿಸಬಹುದಾದ ವಿನಿಯಮಗಳಿಗೊಳಪಟ್ಟು, ಯಾವುದೇ ಬೀದಿಯಲ್ಲಿ ಅಂಟು ಜಾಡ್ಯದಿಂದ ಅಥವಾ ಸಾಂಕ್ರಾಮಿಕ ರೋಗದಿಂದ ಬಳಲುತ್ತಿರುವ ವ್ಯಕ್ತಿಗಳ ಅಥವಾ ಪ್ರಾಣಿಗಳ ಮತ್ತು ಪ್ರಾಣಿಗಳ ಮೃತದೇಹಗಳ ಅಥವಾ ಅವುಗಳ ಭಾಗಗಳ ಮತ್ತು ಮೃತ ವ್ಯಕ್ತಿಗಳ ಶವಗಳ ತೆರೆದಿಡುವಿಕೆಯನ್ನು ಅಥವಾ ಸಾಗಿಸುವಿಕೆಯನ್ನು ನಿಷೇಧಿಸುವುದು.

(ಜೆ) ಈ ಬಗ್ಗೆ ಅವನು ರಚಿಸಬಹುದಾದ ನಿಯಮಗಳಿಗೊಳಪಟ್ಟಲ್ಲದೇ ದಿನದ ಕೆಲವು ವೇಳೆಯಲ್ಲಿ ಹೊಲಸು ಅಥವಾ ಅಸಹ್ಯ ವಸ್ತು ಅಥವಾ ಪದಾರ್ಥಗಳನ್ನು ಕೆಲವು ಬೀದಿಗಳಲ್ಲಿ ಮನೆಗಳಿಂದ ಕಟ್ಟಡಗಳಿಂದ ಅಥವಾ ಅವುಗಳೊಳಗೆ ಅಂಥ ಬೀದಿಗಳ ಮೂಲಕ ತೆಗೆದುಕೊಂಡು ಹೋಗತಕ್ಕದ್ದಲ್ಲ, ಸಾಗಿಸತಕ್ಕದ್ದಲ್ಲವೆಂದು ನಿಯಮಿಸುವುದು;

(ಕೆ) ಪ್ರಾಣಿಗಳ ವಧೆಗೆ, ಪ್ರಾಣಿಗಳ ಮೃತದೇಹಗಳನ್ನು ಅಥವಾ ತೊಗಲುಗಳನ್ನು ಸ್ವಚ್ಛ ಮಾಡುವುದಕ್ಕೆ, ದುರ್ವಾಸನೆಯ ಅಥವಾ ಹೊಲಸಿನ ಕೆಡುಕುಮಾಡುವ ಅಥವಾ ಅಸಹ್ಯ ಪದಾರ್ಥಗಳನ್ನು ಕೂಡಿ ಹಾಕುವುದಕ್ಕೆ ಮತ್ತು ಮಲಮೂತ್ರ ವಿಸರ್ಜನೆಗೆ ಸ್ಥಳಗಳನ್ನು ಪ್ರತ್ಯೇಕಿಸಿಡುವುದು;

(ಎಲ್) ಮನುಷ್ಯ ಅಥವಾ ಪ್ರಾಣಿ ಅಥವಾ ಪಕ್ಷಿಗಳಲ್ಲಿ ಅಂಟು ಜಾಡ್ಯ ಅಥವಾ ಸಾಂಕ್ರಾಮಿಕ ರೋಗ ಇರುವಾಗ ಅಥವಾ ಸಂಭವಿಸುವ ಭಯ ಇರುವಾಗ ರೋಗವನ್ನು ನಿರೋಧಿಸಲು ಅಥವಾ ಅದು ಹರಡದಂತೆ ತಡೆಯಲು, ರಾಜ್ಯ ಸರಕಾರವು ನಿರ್ದೇಶಿಸಿದಂತೆ ಅಥವಾ ಅನುಮೋದಿಸಿದಂತೆ ಆ ಆವರಣಗಳ ಅಧಿಭೋಗದಾರನು ಮತ್ತು ಅವರ ನಿವಾಸಿಗಳು ಅವುಗಳನ್ನು ಸ್ವಚ್ಛಗೊಳಿಸುವುದು ಮತ್ತು ನಿಸ್ಸಾಂಕ್ರಾಮಿತಗೊಳಿಸುವುದು ಮತ್ತು ಮೃತಪಟ್ಟಿರುವ ಅಥವಾ ಮೃತಪಟ್ಟಿವೆ ಎಂದು ಭಾವಿಸಲಾಗುವ ವ್ಯಕ್ತಿಗಳನ್ನು ಅಥವಾ ಪ್ರಾಣಿಗಳನ್ನು ಪ್ರತ್ಯೇಕವಾಗಿ ಇರಿಸುವುದು ಮತ್ತು ಅವುಗಳ ವ್ಯವಸ್ಥೆ ನೋಡಿಕೊಳ್ಳುವುದು.

(ಎಂ) ನೀರಿನ ಯಾವುದೇ ಮೂಲ, ಸರಬರಾಜು ಅಥವಾ ಪಾತ್ರವನ್ನು ಪೂರ್ತಿಯಾಗಿ ಅಥವಾ ಕೆಲವು ಉದ್ದೇಶಗಳಿಗಾಗಿ ಮುಚ್ಚುವುದನ್ನು ಅಥವಾ ಉಪಯೋಗಿಸದೇ ಇರುವುದನ್ನು ಅಥವಾ ಕೆಲವು ಉದ್ದೇಶಗಳಿಗಾಗಿ ಮಾತ್ರ ಅದರ ಉಪಯೋಗವನ್ನು ಪರಿಮಿತಗೊಳಿಸುವುದನ್ನು ನಿರ್ದೇಶಿಸುವುದು ನಿದೇಶಿಸುವುದು ಮತ್ತು ಅವು ಅಥವಾ ಅವುಗಳಲ್ಲಿರುವ ನೀರು ಮಲಿನವಾಗದಂತೆ ಏರ್ಪಡಿಸುವುದು;

(ಎನ್) ಬೀದಿಯಲ್ಲಿ ಅಥವಾ ಬೀದಿಯ ಸಮೀಪದಲ್ಲಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಸಂಗೀತ ನುಡಿಸುವುದನ್ನು, ಡೊಳ್ಳು, ಡಂಗುರ, ಅಥವಾ ಇತರ ಸಂಗೀತ ಉಪಕರಣಗಳನ್ನು ಬಾರಿಸುವುದನ್ನು ಮತ್ತು ಕೊಂಬು ಅಥವಾ ಗದ್ದಲವನ್ನುಂಟುಮಾಡುವ ಇತರ ಉಪಕರಣಗಳನ್ನು ಊದುವುದನ್ನು ಅಥವಾ ಶಬ್ದಮಾಡುವುದನ್ನು ಕುರಿತು ಲೈಸೆನ್ಸು ಕೊಡುವುದು, ನಿಯಂತ್ರಿಸುವುದು, ಅಥವಾ ನೆರೆಹೊರೆಯ ನಿವಾಸಿಗಳಿಗ ಅಥವಾ ಪ್ರಯಾಣಿಕರಿಗೆ ಅಡಚಣೆ, ಅನಾನುಕೂಲ, ಕಿರುಕುಳ, ನಷ್ಟ ಸಂಭವ, ಅಪಾಯ ಅಥವಾ ಹಾನಿಯುಂಟಾಗದಂತೆ, ನಿಷೇಧಿಸುವುದು;

(ಒ) ಬೀದಿಗಳಲ್ಲಿ ಅಥವಾ ಅವುಗಳುದ್ದಕ್ಕೂ ಇರುವ ಅಥವಾ ಜನಕೂಟಗಳಲ್ಲಿ ಮತ್ತು ಮೆರವಣಿಗೆಗಳಲ್ಲಿ ಸೇರಿರುವ ವ್ಯಕ್ತಿಗಳ ನಡತೆ, ಮತ್ತು ವರ್ತನೆ ಅಥವಾ ಕಾರ್ಯವನ್ನು ಕ್ರಮಗೊಳಿಸುವುದು ಮತ್ತು ಮೆರವಣಿಗೆಗಳ ಸಂಬಂಧದಲ್ಲಿ, ಅವು ಹೋಗಬೇಕಾದ ಮಾರ್ಗಗಳು, ಅನುಸರಿಸಬೇಕಾದ ಕ್ರಮ ಮತ್ತು ಕಾಲಗಳನ್ನು ನಿಯಮಿಸುವುದು;

(ಪಿ) ಬೀದಿಯಲ್ಲಿ ಅಥವಾ ಅದರ ಭಾಗದಲ್ಲಿ ಅಡ್ಡಲಾಗಿ ಯಾವುದೇ ಹಗ್ಗ ಅಥವಾ ಕಂಬ ಕಟ್ಟುವುದು ಅಥವಾ ಇಡುವುದು ಅಥವಾ ಸಂಚಾರಕ್ಕೆ ಅಥವಾ ಬೆಳಕು ಮತ್ತು ಗಾಳಿಯ ಅನಿರ್ಬಂಧಿತ ಪ್ರವೇಶಕ್ಕೆ ಅಡ್ಡಿಯನ್ನುಂಟುಮಾಡುವ ಯಾವುದೇ ಚಾಚು ಅಥವಾ ಕಟ್ಟಡದ ನಿರ್ಮಾಣವನ್ನು ನಿಷೇಧಿಸುವುದು;

(ಕ್ಯೂ) ಅವನು ರಚಿಸಬಹುದಾದ ಯುಕ್ತ ನಿಯಮಗಳ ಮೇರೆಗಲ್ಲದೇ ಯಾವುದೇ ಬೀದಿಯಲ್ಲಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಕಟ್ಟಡದ ಸಾಮಾನುಗಳನ್ನು ಅಥವಾ ಇತರ ವಸ್ತುಗಳನ್ನು ಇಡುವುದನ್ನು ಅಥವಾ ಯಾವುದೇ ಕುದುರೆ ಅಥವಾ ಇತರ ಪ್ರಾಣಿಗಳನ್ನು ಕಟ್ಟುವುದನ್ನು ಅಥವಾ ಹಿಡಿದಿರಿಸುವುದನ್ನು ನಿಷೇಧಿಸುವುದು;

(ಆರ್) (i) ಸರಕಾರದ ನೌಕರರು ಅಥವಾ ಆ ಬಗ್ಗೆ ಯುಕ್ತ ರೀತಿಯಿಂದ ಪ್ರಾಧಿಕೃತರಾದ ಪೌರಸಭಾ ಅಧಿಕಾರಿಗಳಲ್ಲದ ಇತರ ವ್ಯಕ್ತಿಗಳಿಂದ ಬೀದಿಗಳನ್ನು ಮತ್ತು ಸಾರ್ವಜನಿಕ ಸ್ಥಳಗಳನ್ನು ಮತ್ತು ಅವುಗಳಿಗೆ ಹೊಂದಿಕೊಂಡಿರುವ ಕಟ್ಟಡಗಳ ಹೊರಭಾಗಗಳನ್ನು ದೀಪಗಳಿಂದ ಅಲಂಕರಿಸುವುದಕ್ಕೆ;

(ii) ಬೀದಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿ ಬಂಡೆಗೆ ಸುರಂಗ ಹಾಕಿ ಒಡೆಯುವುದಕ್ಕೆ ಅಥವಾ ಭೂಮಿಯನ್ನು ಅಗೆಯುವುದಕ್ಕೆ;

(iii) ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ಸಾರ್ವಜನಿಕ ಮನರಂಜನೆಯ ಸ್ಥಳಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿ ಧ್ವನಿ ವರ್ಧಕವನ್ನು ಉಪಯೋಗಿಸುವುದಕ್ಕೆ;

ಲೈಸೆನ್ಸು ಕೊಡುವುದು, ಅವುಗಳನ್ನು ನಿಯಂತ್ರಿಸುವುದು, ಅಥವಾ ನೆರೆಹೊರೆಯ ನಿವಾಸಿಗಳಿಗೆ ಅಥವಾ ಪ್ರಯಾಣಿಕರಿಗೆ ಅಡಚಣೆ, ಅನಾನುಕೂಲ, ಕಿರುಕುಳ, ತೊಂದರೆ, ಅಪಾಯ ಅಥವಾ ಹಾನಿಯುಂಟಾಗದಂತೆ ನಿಷೇಧಿಸುವುದು.

(ಎಸ್) ಯುಕ್ತವೆಂದು ಕಂಡು ಬರುವ ವಿನಾಯಿತಿಗಳಿಗೆ ಹೊರತಾಗಿ ಪಾಳು ಬಿದ್ದ ಕಟ್ಟಡಗಳಿಂದ ಅಥವಾ ಇತರ ಕಾರಣಗಳಿಂದುಂಟಾಗುವ ಅಪಾಯದ ಸಂದರ್ಭದಲ್ಲಿ ಕೆಲವು ಬೀದಿಗಳಲ್ಲಿ ಅಥವಾ ಸ್ಥಳಗಳನ್ನು ತಾತ್ಕಾಲಿಕವಾಗಿ ಮುಚ್ಚುವುದು;

(ಟಿ) ಪ್ರಯಾಣಿಕರಿಗೆ, ನೆರೆಹೊರೆಯವರಿಗೆ ಅಥವಾ ಸಾರ್ವಜನಿಕರಿಗೆ ಅಪಾಯ ಉಂಟಾಗಬಹುದಾದಂತಹ ಕಟ್ಟಡಗಳ, ವೇದಿಕೆಗಳ ಮತ್ತು ಇತರ ನಿರ್ಮಾಣಗಳ ರಚನೆ, ದುರಸ್ತಿ, ಮತ್ತು ಕೆಡವಿ ಹಾಕುವುದರಿಂದ ವ್ಯಕ್ತಿಗಳಿಗೆ ಮತ್ತು ಸ್ವತ್ತಿಗೆ ಕೆಡಕಾಗದಂತೆ ರಕ್ಷಿಸುವುದು;

(ಯು) ಅವನು, ಈ ಬಗ್ಗೆ ರಚಿಸಬಹುದಾದ ಯುಕ್ತ ನಿಯಮಗಳಿಗೊಳಪಟ್ಟಿಲ್ಲದೇ ಬೀದಿ ಅಥವಾ ಕಟ್ಟಡದಲ್ಲಿ ಅಥವಾ ಅವುಗಳ ಮೇಲೆ ಅಥವಾ ಅವುಗಳಿಂದ ಐವತ್ತು ಅಡಿಗಳ ಒಳಗೆ ಹುಲ್ಲು ಅಥವಾ ಇತರ ವಸ್ತುವಿಗೆ ಬೆಂಕಿ ಹಚ್ಚುವುದು ಅಥವಾ ಅದನ್ನು ಉರಿಸುವುದು ಅಥವಾ ಉತ್ಸವಾಗ್ನಿಯನ್ನು ಹಚ್ಚುವುದು ಅಥವಾ ಬೇಕಂದೇ ಬಂದೂಕನ್ನು (ಅಗ್ನಿ–ಶಸ್ತ್ರವನ್ನು) ಅಥವಾ ಗಾಳಿ ಕೋವಿಯನ್ನು (ಏಯರ್‌ಗನ್) ಹಾರಿಸುವುದು, ಪಟಾಕಿ ಅಥವಾ ಸಿಡಿ ಮದ್ದುಗಳನ್ನು ಬಿಡುವುದು ಅಥವಾ ಎಸೆಯುವುದು ಅಥವಾ ಆಕಾಶಬುಟ್ಟಿಯನ್ನುರಿಸುವುದು ಅಥವಾ ಆಕಾಶಬಾಣವನ್ನು ಮೇಲಕ್ಕೆ ಕಳುಹಿಸುವುದು ಅಥವಾ ದೀಪವನ್ನು ಅಥವಾ ಉರಿಯುವ ಇತರ ಸಾಧನಗಳನ್ನು ತೂಗು ಹಾಕಲು ಬೀದಿಯ ಪಕ್ಕದಲ್ಲಿ ಅಥವಾ ಅಡ್ಡಲಾಗಿ ಯಾವುದೇ ಕಂಬ ಅಥವಾ ಇತರ ವಸ್ತುಗಳನ್ನು ಇಡುವುದು, ಇವುಗಳನ್ನು ನಿಷೇಧಿಸುವುದು;

(ವಿ) ಯಾವುದೇ ಶವ ವಿಲೇವಾರಿ ಸ್ಥಳ, ಯಾವುದೇ ಧರ್ಮಶಾಲೆ, ಅಥವಾ ಗ್ರಾಮದ ಬಾಗಿಲು ಅಥವಾ ಸಾರ್ವಜನಿಕರು ಸೇರುವ ಇತರ ಸ್ಥಳ – ಇವುಗಳ ವೇಳೆಯನ್ನು ಮತ್ತು ರೀತಿಯನ್ನು ಅನುಕೂಲಗಳ ಮತ್ತು ಅವಕಾಶದ ಸಮಾನ ಮತ್ತು ಯುಕ್ತ ಪ್ರಯೋಜನ ಪಡೆಯುವುಕ್ಕಾಗಿ ವಿನಿಯಮನಗೊಳಿಸುವುದು ಮತ್ತು ಅಲ್ಲಿಗೆ ಹೋಗುವ ಜನರು ಸುವ್ಯವಸ್ಥಿತ ರೀತಿಯಲ್ಲಿ ನಡೆದುಕೊಳ್ಳುವಂತೆ ಮಾಡುವುದು.

(ಡಬ್ಲ್ಯೂ) (i) ಸಾರ್ವಜನಿಕ ವಿನೋದ ಅಥವಾ ಮನರಂಜನೆಯ ಸ್ಥಳಗಳಿಗೆ ಲೈಸೆನ್ಸು ಕೊಡುವುದು ಅಥವಾ ಅವುಗಳನ್ನು ನಿಯಂತ್ರಿಸುವುದು.

(ii) ನೆರೆಹೊರೆಯ ನಿವಾಸಿಗಳಿಗೆ ಅಥವಾ ಪ್ರಯಾಣಿಕರಿಗೆ, ಅಡಚಣೆ, ಅನಾನುಕೂಲ, ಕಿರುಕುಳ, ನಷ್ಟಸಂಭವ, ಅಪಾಯ ಅಥವಾ ಹಾನಿಯನ್ನು ನಿರೋಧಿಸುವುದಕ್ಕಾಗಿ ಸಾರ್ವಜನಿಕ ವಿನೋದ ಅಥವಾ ಮನರಂಜನೆ ಅಥವಾ ಸಭೆ ಇವುಗಳಿಗೆ ಸ್ಥಳ ಏರ್ಪಡಿಸುವುದನ್ನು ನಿಷೇಧಿಸುವುದು.

(iii) ಸಾರ್ವಜನಿಕ ವಿನೋದ ಅಥವಾ ಮನರಂಜನೆಯ ಸ್ಥಳಗಳಲ್ಲಿ ಒಳಹೋಗುವ ಮತ್ತು ಹೊರಬರುವ ಮಾರ್ಗಗಳನ್ನು ವಿನಿಯಮನಗೊಳಿಸುವುದು ಮತ್ತು ಅಲ್ಲಿ ಸಾರ್ವಜನಿಕ ಸುರಕ್ಷಣೆಯನ್ನು ಕಾಪಾಡಲು ಮತ್ತು ಗಲಭೆಯಾಗದಂತೆ ನೋಡಿಕೊಳ್ಳಲು ಏರ್ಪಾಡು ಮಾಡುವುದು.

(ಎಕ್ಸ್) (i) ಉಲ್ಲೇಖಿಸಬಹುದಾದ ವಿನಾಯಿತಿಗಳೊಂದಿಗೆ, ಸಾರ್ವಜನಿಕ ವಿನೋದಕ್ಕಾಗಿ ಮೇಲಾ ಮತ್ತು ತಮಾಷೆಗಳನ್ನೂ ಒಳಗೊಂಡು ಸಂಗೀತ, ನೃತ್ಯ, ಅಣಕ ಅಥವಾ ನಾಟಕ ಅಥವಾ ಇತರ ಪ್ರದರ್ಶನಗಳಿಗೆ ಲೈಸೆನ್ಸ್ ಕೊಡುವುದು ಅಥವಾ ಅವುಗಳನ್ನು ನಿಯಂತ್ರಿಸುವುದು,

(ii) ಸಾರ್ವಜನಿಕ ಸುವ್ಯವಸ್ಥೆ, ಸಭ್ಯತೆ ಅಥವಾ ನೈತಿಕತೆಯ ಹಿತದೃಷ್ಟಿಯಿಂದ ಅಥವಾ ಸಾರ್ವಜನಿಕ ಹಿತದೃಷ್ಟಿಯಿಂದ ಅಂಥ ಪ್ರದರ್ಶನಗಳಲ್ಲಿ ಕಲಾಕಾರರ ನಿಯೋಜನೆಯನ್ನು ಮತ್ತು ಕಲಾಕಾರರ ಮತ್ತು ಪ್ರೇಕ್ಷಕರ ವರ್ತನೆಯನ್ನು ವಿನಿಮಯನಗೊಳಿಸುವುದು

(iii) ಸರಕಾರದಿಂದ ನೇಮಿಸಲಾದ ಮಂಡಲಿಯಿಂದ, ಅಥವಾ ಈ ಬಗ್ಗೆ ಕಮೀಷನರು ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ನೇಮಿಸಲಾದ ಸಲಹಾ ಮಂಡಲಿಯಿಂದ ಅಂಥ ಪ್ರದರ್ಶನದ ಪೂರ್ವಭಾವಿ ಪರಿಶೀಲನೆ;

(iv) ಅಂಥ ಪ್ರದರ್ಶನಗಳನ್ನು ಏರ್ಪಡಿಸಬಹುದಾದ ವೇಳೆಗಳನ್ನು ಮತ್ತು ಸ್ಥಳಗಳನ್ನು ವಿನಿಯಮಗೊಳಿಸುವುದು;

(ವೈ) ಸಾರ್ವಜನಿಕ ವಿನೋದ ಸ್ಥಳಗಳಿಗೆ ಪ್ರವೇಶಕ್ಕಾಗಿರುವ ಯಾವುದೇ ಟಿಕೇಟು ಅಥವಾ ಪಾಸು ಅವು ಯಾವುದೇ ಹೆಸರಿನಿಂದ ಕರೆಯಲ್ಪಡಲಿ ಅವುಗಳ ಮಾರಾಟವನ್ನು ವಿನಿಯಮಗೊಳಿಸುವುದು ಅಥವಾ ನಿಷೇಧಿಸುವುದು;

(ಜಡ್) ಈ ಅಧಿನಿಯಮದ ಮೇರೆಗೆ ತೆಗೆದುಕೊಳ್ಳಬೇಕೆಂದು ಕೋರುವ ಅಥವಾ ಅಗತ್ಯಪಡಿಸಸಲಾಗಿರುವ ಯಾವುದೇ ಲೈಸೆನ್ಸು ಅಥವಾ ಅನುಮತಿಯನ್ನು ಪಡೆದುಕೊಳ್ಳಲು ಅನುಸರಿಸಬೇಕಾದ ಪ್ರಕ್ರಿಯೆಯನ್ನು ನಿಯಮಿಸುವುದು, ಮತ್ತು ಅಂಥ ಲೈಸೆನ್ಸು ಅಥವಾ ಅನುಮತಿಗೆ ವಿಧಿಸಬೇಕಾದ ಫೀಜನ್ನು ಗೊತ್ತುಪಡಿಸುವುದು:

ಪರಂತು, ಈ ಉಪಪ್ರಕರಣದ ಮೇರೆಗೆ ಮಾಡಲಾದ ಆದೇಶಗಳ ಮೇರೆಗೆ ಕೈಕೊಂಡ ಯಾವುದೇ ಕ್ರಮವು ಅಥವಾ ಅಂತಹ ಆದೇಶದ ಮೇರೆಗೆ ಲೈಸೆನ್ಸು ಕೊಡುವಿಕೆಯು, ಸರಕಾರದ ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಟ್ಟಿರತಕ್ಕದ್ದು,

(2) (i) (1)ನೆಯ ಉಪಪ್ರಕರಣದ (ಎ) ಮತ್ತು (ಬಿ) ಖಂಡಗಳ ಮೇರೆಗಿನ ಆದೇಶಗಳನ್ನು ಮಾಡುವ, ಬದಲಾಯಿಸುವ ಅಥವಾ ರದ್ದುಪಡಿಸುವ ಅಧಿಕಾರವು, ಸರಕಾರದ ನಿಯಂತ್ರಣಕೊಳಪಟ್ಟಿರತಕ್ಕದ್ದು.

(ii) (1)ನೆಯ ಉಪಪ್ರಕರಣದ ಉಳಿದ ಖಂಡಗಳ ಮೇರೆಗೆ ಆದೇಶಗಳನ್ನು ಮಾಡುವ, ಬದಲಾಯಿಸುವ ಅಥವಾ ರದ್ದುಪಡಿಸುವ ಅಧಿಕಾರ, ಸರಕಾರದ ಪೂರ್ವ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು;

(3) (1)ನೆಯ ಉಪಪ್ರಕರಣದ (ವಿ) ಖಂಡದ ಮೇರೆಗೆ ಮೃತ ದೇಹಗಳನ್ನು ವಿಲೇಗಾಗಿ ಉಪಯೋಗಿಸುವ ಸ್ಥಳದ ಬಗ್ಗೆ ಮಾಡಲಾಗುವ ಪ್ರತಿಯೊಂದು ಆದೇಶವು, ಸಾಮಾನ್ಯ ಮತ್ತು ರೂಢಿಗತ ಸಂಪ್ರದಾಯ ಮತ್ತು ವೈಯಕ್ತಿಕ ಸಂದರ್ಭಗಳಲ್ಲಿ ಮೃತ ದೇಹದ ಶೀಘ್ರ ವಿಲೇವಾರಿಯ ಅವಶ್ಯಕತೆಗಳಿಗೂ ಗಮನ ಕೊಡುತ್ತ, ಮಾಡಲ್ಪಡತಕ್ಕದ್ದು.

(4) (1)ನೆಯ ಉಪಪ್ರಕರಣದ (ಎಲ್) ಖಂಡದ ಅಧಿಕಾರದ ಮೇರೆಗೆ ಮಾಡಲಾದ ಪ್ರತಿಯೊಂದು ಆದೇಶವು, ಸರಕಾರಕ್ಕೆ ಅಥವಾ ಈ ಬಗ್ಗೆ ಸರಕಾರವು ನೇಮಕ ಮಾಡಬಹುದಾದಂತಹ ಪ್ರಾಧಿಕಾರಿಗೆ ಕೂಡಲೇ ವರದಿ ಮಾಡಲ್ಪಡತಕ್ಕದ್ದು.

(5) ಈ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶದ, ಯಾವುದೇ ಸ್ಥಳದ ಸಾರ್ವಜನಿಕ ಆರೋಗ್ಯ, ಅನುಕೂಲತೆ ಅಥವಾ ಸುರಕ್ಷತೆಗೆ ಸಂಬಂಧಪಟ್ಟಿರುವಷ್ಟರಮಟ್ಟಿಗೆ, ಅಂತಹ ಸ್ಥಳದಲ್ಲಿರುವ ಮುನಿಸಿಪಾಲಿಟಿ ಅಥವಾ ಇತರ ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮತ್ತು ಅಂತಹ ಕಾನೂನಿನ ಮೇರೆಗೆ ರಚಿಸಲಾದ ಯವುದೇ ನಿಯಮ, ವಿನಿಯಮನ ಅಥವಾ ಉಪಕಾನೂನಿನ ಉಪಬಂಧಗಳಿಗೊಳಪಟ್ಟಿರತಕ್ಕದ್ದು.

(6) ಈ ಪ್ರಕರಣದ ಮೇಲೆ ಆದೇಶಗಳನ್ನು ಮಾಡುವ, ಬದಲಾಯಿಸುವ ಅಥವಾ ರದ್ದುಪಡಿಸುವ ಅಧಿಕಾರವು, ಮೈಸೂರು ಸಾಮಾನ್ಯ ಖಂಡಗಳ ಅಧಿನಿಯಮ 1899ರ 28ನೆಯ ಪ್ರಕರಣದ ಉಪಬಂಧಗಳಿಗನುಸಾರವಾಗಿ ಪೂರ್ವ ಪ್ರಕಟಣೆಯ ನಂತರ ಆದೇಶಗಳು ಮಾಡಲ್ಪಡುವ, ಬದಲಾಯಿಸಲ್ಪಡುವ

ಅಥವಾ ರದ್ದು ಮಾಡಲ್ಪಡುವ ಷರತ್ತಿಗೆ ಒಳಪಟ್ಟಿರತಕ್ಕದ್ದು ಮತ್ತು ಈ ಪ್ರಕರಣದ ಮೇರೆಗೆ ಮಾಡಲಾದ ಪ್ರತಿಯೊಂದು ಆದೇಶವನ್ನು ಬದಲಾವಣೆಯ್ನನ್ನು ಅಥವಾ ರದ್ದುಪಡಿಸುವುದು ಸರಕಾರೀ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಅದರಿಂದ ಬಂಧಿತವಾದ ಸ್ಥಳ ಪ್ರದೇಶದಲ್ಲಿ ಅದರ ಪ್ರತಿಗಳನ್ನು, ಅವು ನಿರ್ದಿಷ್ಟವಾಗಿ ಸಂಬಂಧಪಟ್ಟಿರುವ ಕಟ್ಟಡ, ರಚನೆ, ಕಾಮಗಾರಿ ಅಥವಾ ಸಂದರ್ಭಾನುಸಾರ ಸ್ಥಳದ ಸಮೀಪದಲ್ಲಿ ಎದ್ದು ಕಾಣುವ ಸ್ಥಳಗಳಲ್ಲಿ ಅಂಟಿಸುವುದರ ಮೂಲಕ ಅಥವಾ ಡಂಗುರ ಹೊಡೆದು ಘೋಷಿಸುವ ಮೂಲಕ ಅಥವಾ ಆದೇಶ, ನಿಯಮವನ್ನು ಮಾಡುವ, ಬದಲಾಯಿಸುವ ಅಥವಾ ರದ್ದುಪಡಿಸುವ ಪ್ರಾಧಿಕಾರವು ಉಚಿತವೆಂದು ಭಾವಿಸುವಂತಹ ಸ್ಥಳೀಯ ವೃತ್ತ ಪತ್ರಿಕೆಗಳಲ್ಲಿ ಆಂಗ್ಲ ಭಾಷೆಯಲ್ಲಿ ಅಥವಾ ಸ್ಥಳೀಯ ಭಾಷೆಯಲ್ಲಿ ಅದನ್ನು ಜಾಹೀರಾತು ಪಡಿಸುವುದರ ಮೂಲಕ ಅಥವಾ ಇವುಗಳಲ್ಲಿ ಯಾವುದೇ ಎರಡು ಅಥವಾ ಹೆಚ್ಚು ರೀತಿಗಳಲ್ಲಿ ಅಥವಾ ಅದು ಯೋಗ್ಯವೆಂದು ಭಾವಿಸುವಂತಹ ಯಾವುದೇ ಇತರ ಸಾಧನದ ಮೂಲಕ, ಪ್ರಕಟಿಸತಕ್ಕದ್ದು;

ಪರಂತು, ಕಮೀಷನರನಿಗೆ ಅಥವಾ ಸಂದರ್ಭವಿದ್ದ ಹಾಗೆ ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಅಂತಹ ಆದೇಶಗಳನ್ನು ಅಥವಾ ಅವುಗಳಲ್ಲಿ ಬದಲಾವಣೆಯನ್ನು ಅಥವಾ ಅವುಗಳ ರದ್ದು ಪಡೆಯನ್ನು ಕೂಡಲೇ ಜಾರಿಗೆ ತರುವುದರ ಅವಶ್ಯಕತೆ ಇರುವ ಪರಿಸ್ಥಿತಿ ಇದೆ ಎಂದು ಮನದಟ್ಟಾದರೆ, ಪೂರ್ವಭಾವಿ ಪ್ರಕಟಣೆ ಇಲ್ಲದೆಯೇ ಅಂತಹ ಯಾವುದೇ ಆದೇಶಗಳು ಮಾಡಲ್ಪಡಬಹುದು, ಬದಲಾವಣೆ ಮಾಡಲ್ಪಡಬಹುದು ಅಥವಾ ರದ್ದುಗೊಳಿಸಬಹುದು.

(7) ಈ ಪ್ರಕರಣದಲ್ಲಿ ಈ ಹಿಂದೆ ಏನೇ ಇದ್ದರೂ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ಆದೇಶದಲ್ಲಿ ಏನೇ ಇರಬಹುದಾಗಿದ್ದರೂ ಕೆಟ್ಟ ನಡತೆಯವನೆಂದು ಇದ್ದರೂ ಅಥವಾ ಅದರ ಮೇರೆಗೆ ಕುಪ್ರಸಿದ್ಧನಾದ ಯಾವನೇ ವ್ಯಕ್ತಿಯು ಸಾರ್ವಜನಿಕ ವಿನೋದ ಅಥವಾ ಮನರಂಜನೆಯ ಸ್ಥಳವನ್ನು ನಡೆಯಿಸಿಕೊಂಡು ಹೋಗುವುದಕ್ಕೆ ಲೈಸೆನ್ಸು ನಿರಾಕರಿಸುವುದು ಅಥವಾ ಅದನ್ನು ನಿಷೇಧಿಸುವುದು ಸಕ್ಷಮ ಪ್ರಾಧಿಕಾರಿಗೆ ಸದಾ ಕಾನೂನು ಸಮ್ಮತವಾಗಿರತಕ್ಕದ್ದು.

**32. ಬೀದಿಗಳಲ್ಲಿ ಅಡ್ಡಗಟ್ಟುಗಳನ್ನು ನಿರ್ಮಿಸಲು ಅಧಿಕಾರ :–** ಕಮೀಷನರು ಮತ್ತು ಸೂಪರಿಂಟೆಂಡೆಂಟು, ಅನುಕ್ರಮವಾಗಿ ಅವರ ಚಾರ್ಜ್‌ನಲ್ಲಿರುವ ಪ್ರದೇಶಗಳಲ್ಲಿ, ತನ್ನ ಅಭಿಪ್ರಾಯದಲ್ಲಿ ಅಂತಹ ಕ್ರಮವು ಅವಶ್ಯಕವಿರುವಾಗಲೆಲ್ಲ, ಅಂತಹ ಯಾವುದೇ ಬೀದಿಯಲ್ಲಿ ಸಂಚರಿಸುವ ವಾಹನಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಲು, ಅಡ್ಡಗಟ್ಟುಗಳನ್ನು ನಿರ್ಮಿಸುವುದಕ್ಕೆ ತಾನು ಯೋಗ್ಯನೆಂದು ಭಾವಿಸುವಂತಹ ಪೊಲೀಸು ಅಧಿಕಾರಿಯನ್ನು ಅಧಿಕೃತಗೊಳಿಸಬಹುದು ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದಾದರೂ ಕಾನೂನಿನ ಉಪಬಂಧಗಳು ಅಂಥ ಯಾವುದಾದರೂ ವಾಹನದ ಸಂಬಂಧದಲ್ಲಿ ಅಥವಾ ಅದರ ಚಾಲಕನಿಂದ ಅಥವಾ ವಾಹನದ ಚಾರ್ಜ್‌ನಲ್ಲಿರುವ ವ್ಯಕ್ತಿಯಿಂದ ಉಲ್ಲಂಘಿಸಲ್ಪಟ್ಟಿಲ್ಲವೆಂಬುದನ್ನು ಸ್ವತಃ ಮನದಟ್ಟು ಮಾಡಿಕೊಳ್ಳಬಹುದು, ಸದರಿ ಪ್ರಾಧಿಕಾರಿಯು ಅಂತಹ ಅಡ್ಡಗಟ್ಟುಗಳ ಉಪಯೋಗವನ್ನು ಕ್ರಮಗೊಳಿಸುವುದರ ಸಲುವಾಗಿ, ತಾನು ಉಚಿತವೆಂದು ಭಾವಿಸುವಂತಹ ಆದೇಶಗಳನ್ನು ಮಾಡಬಹುದು.

**33. ಪ್ರತ್ಯೇಕಿಸಲ್ಪಟ್ಟ ಸ್ಥಳಗಳಲ್ಲಿ ಹೊರತು ಮೃತದೇಹದ ವಿಲೆಯ ನಿಷೇಧಕ್ಕೆ ನಿಯಮಗಳನ್ನು ರಚಿಸಲು ಅಧಿಕಾರ :–** (1) ಸಕ್ಷಮ ಪ್ರಾಧಿಕಾರಿಯು, ಮೃತದೇಹವನ್ನು ವಿಲೇ ಮಾಡುವ ಉದ್ದೇಶಕ್ಕಾಗಿ ಪ್ರತ್ಯೇಕಿಸಿಟ್ಟ ಸ್ಥಳಗಳನ್ನು ಬಿಟ್ಟು ಬೇರೆ ಸ್ಥಳಗಳಲ್ಲಿ ಮೃತದೇಹವನ್ನು ಸುಡುವುದರ ಮೂಲಕ, ಹೂಳುವುದರ ಮೂಲಕ ಅಥವಾ ಬೇರೆ ರೀತಿಯಲ್ಲಿ ವಿಲೆ ಮಾಡುವುದನ್ನು ನಿಷೇಧಿಸಿ ಕಾಲಕಾಲಕ್ಕೆ ನಿಯಮಗಳನ್ನು ರಚಿಸಬಹುದು:

ಪರಂತು, ಸ್ಥಳಗಳನ್ನು ಪ್ರತ್ಯೇಕಿಸಿಟ್ಟಿರದ ಅಂತಹ ಯಾವುದೇ ಪಟ್ಟಣ ಅಥವಾ ಸ್ಥಳದ ಬಗ್ಗೆ ಅಂತಹ ಯಾವ ನಿಯಮಗಳನ್ನು ರಚಿಸತಕ್ಕದ್ದಲ್ಲ.

ಮತ್ತು ಪರಂತು, ಸಕ್ಷಮ ಪ್ರಾಧಿಕಾರಿಯು ಅಥವಾ ಈ ಬಗ್ಗೆ ಪ್ರಾಧಿಕೃತನಾದ ಯಾವನೇ ಅಧಿಕಾರಿಯು, ಯಾವೊಬ್ಬ ವ್ಯಕ್ತಿಯಿಂದ ಅಥವಾ ಅದಕ್ಕೆ ಅಥವಾ ಅವನಿಗೆ ಆವೇದನ ಮಾಡಿಕೊಳ್ಳಲಾದಾಗ ಮತ್ತು ಸಂಬಂಧಪಟ್ಟ ಪ್ರದೇಶದ ಆರೋಗ್ಯಧಿಕಾರಿಯೊಡನೆ ಅಥವಾ ಸಾರ್ವಜನಿಕ ಆರೋಗ್ಯ ಇಲಾಖೆಯ ಇತರ ನಿಯಮಿಸಲಾದ ಅಧಿಕಾರಿಯೊಡನೆ ಸಮಾಲೋಚಿಸಿದ ಬಳಿಕ, ಯುಕ್ತ ಪ್ರಾಧಿಕಾರಿಯು ಅಥವಾ ಅಧಿಕಾರಿಯು ಮೃತದೇಹವನ್ನು ವಿಲೇಮಾಡುವುದು ಸಂಚಾರಕ್ಕೆ ಅಡಚಣೆ ಮಾಡುವುದಿಲ್ಲ ಅಥವಾ ಸಾರ್ವಜನಿಕ ಶಾಂತಿಗೆ ಭಂಗವನ್ನುಂಟುಮಾಡುವುದಿಲ್ಲ ಅಥವಾ ಇತರ ಯಾವುದೇ ಕಾರಣಕ್ಕಾಗಿ ಆಕ್ಷೇಪಣೀಯವಾಗಿಲ್ಲವೆಂದು ಅಭಿಪ್ರಾಯಪಡುವುದಾದರೆ ಅಂತಹ ವ್ಯಕ್ತಿಗೆ, ಯಾವನೇ ಮೃತ ವ್ಯಕ್ತಿಯ ದೇಹವನ್ನು ಹಾಗೆ ಪ್ರತ್ಯೇಕವಾಗಿರಿಸಿದ ಸ್ಥಳವಲ್ಲದ ಇತರ ಸ್ಥಳದಲ್ಲಿ ವಿಲೇ ಮಾಡಲು ಅನುಮತಿಯನ್ನು ಕೊಡಬಹುದು.

(2) (1)ನೆಯ ಉಪಪ್ರಕರಣದ ಮೇರೆಗೆ ರಚಿಸಲಾದ ಯಾವುದೇ ನಿಯಮಗಳು, ವಿವಿಧ ಜಾತಿಗಳ ಅಥವಾ ಜಾತಿಗಳಿಗೆ ಸೇರಿದ ಪಂಗಡದವರ ಮೃತದೇಹಗಳ ವಿಲೆಗಾಗಿ ಪ್ರತ್ಯೇಕಿಸಿಡಲಾದ ಸ್ಥಳಗಳನ್ನು ಉಲ್ಲೇಖಿಸತಕ್ಕದ್ದು.

(3) ಅಂಥ ಎಲ್ಲ ನಿಯಮಗಳು ಎರಡು ತಿಂಗಳಿಗೆ ಕಡಿಮೆಯಿಲ್ಲದ ಅವಧಿಯ ಪೂರ್ವ ಪ್ರಕಟಣೆಯ ಷರತ್ತುಗಳಿಗೊಳಪಟ್ಟಿರತಕ್ಕದ್ದು ಮತ್ತು ಸಂಬಂಧಪಟ್ಟ ಪ್ರದೇಶದ ಆರೋಗ್ಯ ಅಧಿಕಾರಿಯೊಡನೆ ಅಥವಾ ಸಾರ್ವಜನಿಕ ಆರೋಗ್ಯ ಇಲಾಖೆಯ ಇತರ ನಿಯಮಿಸಲಾದ ಅಧಿಕಾರಿಯೊಡನೆ ಸಮಾಲೋಚಿಸಿದ ಬಳಿಕ, ರಚಿಸಲ್ಪಡತಕ್ಕದ್ದು.

ವಿವರಣೆ :– ಈ ಪ್ರಕರಣದ ಉದ್ದೇಶಕ್ಕಾಗಿ, ಮೃತದೇಹದ ವಿಲೆಗಾಗಿ ಪ್ರತ್ಯೇಕಿಸಿಟ್ಟ ಸ್ಥಳ ಎಂದರೆ, ಅಂತಹ ಉದ್ದೇಶಕ್ಕಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ರೂಢಿ, ಬಳಕೆ ಅಥವಾ ಕಾನೂನಿನ ಮೇರೆಗೆ ಪ್ರತ್ಯೇಕಿಸಿಟ್ಟ ಸ್ಥಳ.

**34. ಸಾರ್ವಜನಿಕರಿಗೆ ನಿದೇಶನವನ್ನು ಕೊಡಲು ಕಮೀಷನರ್ ಅಥವಾ ಸೂಪರಿಂಟೆಂಡೆಂಟನ ಮತ್ತು ಇತರ ಅಧಿಕಾರಿಯ ಅಧಿಕಾರ :–** ತಮ್ಮ ತಮ್ಮ ಚಾರ್ಜಿನಲ್ಲಿರುವ ಪ್ರದೇಶಗಳಲ್ಲಿ, ಕಮೀಷನರು ಮತ್ತು ಅವನ ನಿರ್ದೇಶನಗಳಿಗೊಳಪಟ್ಟು ಸಬ್ ಇನ್ಸ್‌ಪೆಕ್ಟರ್‌ನ ದರ್ಜೆಗೆ ಕಡಿಮೆಯಿಲ್ಲದ ಪ್ರತಿಯೊಬ್ಬ ಪೊಲೀಸು ಅಧಿಕಾರಿಯು, ಮತ್ತು ಸೂಪರಿಂಟೆಂಡೆಂಟನು ಮತ್ತು ಅವನ ಆದೇಶಗಳಿಗೊಳಪಟ್ಟು ಆ ಬಗ್ಗೆ ಸರಕಾರವು ಉಲ್ಲೇಖಿಸಬಹುದುದಾದಂತಹ ದರ್ಜೆಗೆ ಕಡಿಮೆಯಾದ ಯಾವನೇ ಪೊಲೀಸು ಅಧಿಕಾರಿಯು, ಕಾಲಕಾಲಕ್ಕೆ ಸಂದರ್ಭ ಒದಗಿಬಂದಾಗ, ಆದರೆ 31ನೆಯ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶದ ಉಲ್ಲಂಘನೆಯಾಗದಂತೆ ಈ ಕೆಳಗಿನವುಗಳ ಬಗ್ಗೆ ಅವಶ್ಯವಿರುವ ಬಾಯಿಮಾತಿನ ಅಥವಾ ಅಂತಹ ಎಲ್ಲ ಲಿಖಿತ ಆದೇಶಗಳನ್ನು ಮಾಡಬಹುದು :–

(ಎ) ಬೀದಿಯಲ್ಲಿ ಅಥವಾ ಬೀದಿಯುದ್ದಕ್ಕೂ ಮೆರವಣಿಗೆ ಹೋಗುವ ಅಥವಾ ಸಭೆ ಸೇರುವ ವ್ಯಕ್ತಿಗಳ ನಡತೆ, ವರ್ತನೆ ಅಥವಾ ಕಾರ್ಯವನ್ನು ನಿರ್ದೇಶಿಸುವುದು;

(ಬಿ) ಅಂತಹ ಮೆರವಣಿಗೆಗಳು ಹೋಗಬಹುದಾದ ಅಥವಾ ಹೋಗಕೂಡದ ಮಾರ್ಗಗಳನ್ನು ಮತ್ತು ಕಾಲಗಳನ್ನು ನಿಯಮಿಸುವುದು;

(ಸಿ) ಮೆರವಣಿಗೆಗಳು ಮತ್ತು ಸಭೆಗಳು ನಡೆಯುವ ಸಮಯದಲ್ಲಿ ಮತ್ತು ಪೂಜಾ ಸ್ಥಳಗಳಲ್ಲಿ ಸಮೀಪದಲ್ಲಿ ಪೂಜೆ ನಡೆಯುವ ಸಮಯದಲ್ಲಿ ಮತ್ತು ಯಾವುದೇ ಬೀದಿ ಅಥವಾ ಸಾರ್ವಜನಿಕ ಸ್ಥಳ ಅಥವಾ ಸಾರ್ವಜನಿಕರು ಸೇರುವ ಸ್ಥಳಗಳಲ್ಲಿ ಜನ ಸಂದಣಿಯಾಗುವ ಅಥವಾ ಅಡಚಣೆಯಾಗಬಹುದಾದ ಎಲ್ಲ ಪ್ರಸಂಗಗಳಲ್ಲಿ ಅಡಚಣೆಗಳನ್ನು ನಿರೋಧಿಸುವುದು;

(ಡಿ) ಎಲ್ಲ ಬೀದಿ, ಹಡಗುಕಟ್ಟೆ, ಇವುಗಳ ಮೇಲೆ ಮತ್ತು ಅಲ್ಲಿ ಮತ್ತು ಸಾರ್ವಜನಿಕ ಸ್ನಾನದ, ಒಗೆಯುವ ಮತ್ತು ಇಳಿಯುವ ಸ್ಥಳಗಳಲ್ಲಿ ಮತ್ತು ಅವುಗಳ ಒಳಗೆ, ಜಾತ್ರೆ, ದೇವಾಲಯ ಮತ್ತು ಸಾರ್ವಜನಿಕರು ಸೇರುವ ಇತರ ಎಲ್ಲ ಸ್ಥಳಗಳಲ್ಲಿ ಸುವ್ಯವಸ್ಥೆಯನ್ನು ಕಾಪಾಡುವುದು;

(ಇ) ಯಾವುದೇ ಬೀದಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಅಥವಾ ಅದರ ಹತ್ತಿರ ಸಂಗೀತ ನುಡಿಸುವುದು ಅಥವಾ ಹಾಡುವುದು, ಅಥವಾ ಡೊಳ್ಳು, ಡಂಗುರ ಮತ್ತು ಇತರ ಉಪಕರಣಗಳನ್ನು ಬಾರಿಸುವುದು ಮತ್ತು ಕಹಳೆ ಅಥವಾ ಇತರ ಗದ್ದಲವನ್ನುಂಟುಮಾಡುವ ಇತರ ಉಪಕರಣಗಳನ್ನು ಶಬ್ದಮಾಡುವುದು, ಊದುವುದು ಅಥವಾ ಇವುಗಳನ್ನು ವಿನಿಯಮನ ಮಾಡುವುದು ಮತ್ತು ನಿಯಂತ್ರಿಸುವುದು.

(ಎಫ್) ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಅಥವಾ ಅದರ ಸಮೀಪದಲ್ಲಿ ಅಥವಾ ಸಾರ್ವಜನಿಕ ಮನೋರಂಜನೆಯ ಸ್ಥಳದಲ್ಲಿ ಧ್ವನಿವರ್ಧಕದ ಉಪಯೋಗವನ್ನು ವಿನಿಯಮನಗೊಳಿಸುವುದ ಮತ್ತು ನಿಯಂತ್ರಿಸುವುದು;

(ಜಿ) ಈ ಅಧಿನಿಯಮದ 31, 33, 35 ರಿಂದ 39ರ ವರೆಗಿನ ಮತ್ತು 41 ಮತ್ತು 43ನೆಯ ಪ್ರಕರಣಗಳ ಮೇರೆಗೆ ಸಕ್ಷಮ ಪ್ರಾಧಿಕಾರಿಯಿಂದ ಮಾಡಲಾದ ಯಾವುದೇ ಆದೇಶಕ್ಕೊಳಪಟ್ಟು ಮತ್ತು ಅದನ್ನು ಮುಂದುವರಿಸುತ್ತ ಯುಕ್ತ ಆದೇಶಗಳನ್ನು ಮಾಡುವುದು.

**35. ಅವ್ಯವಸ್ಥೆಯನ್ನು ವಿರೋಧಿಸುವುದರ ಸಲುವಾಗಿ ಕೆಲವು ಕಾರ್ಯಗಳನ್ನು ನಿಷೇಧಿಸಲು ಅಧಿಕಾರ :–** (1) ಕಮೀಷನರು ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟನು ಅನುಕ್ರಮವಾಗಿ ಅವರ ಚಾರ್ಜಿನಲ್ಲಿರುವ ಪ್ರದೇಶಗಳಲ್ಲಿ ಸಾರ್ವಜನಿಕ ಶಾಂತಿ ಅಥವಾ ಸಾರ್ವಜನಿಕ ಸುರಕ್ಷತೆಯನ್ನು ಕಾಪಾಡುವುದಕ್ಕಾಗಿ ತಾನು ಅವಶ್ಯಕವೆಂದು ಪರ್ಯಾಲೋಚಿಸುವಂತಹ ಕಾಲದಲ್ಲಿ ಮತ್ತು ಆ ವರೆಗೆ ಸಾರ್ವಜನಿಕವಾಗಿ ಪ್ರಕಟಿಸುವ ಅಥವಾ ವೈಯಕ್ತಿಕವಾಗಿ ತಿಳಿಸುವ ಅಧಿಸೂಚನೆಯ ಮೂಲಕ ಯಾವುದೇ ನಗರದಲ್ಲಿ, ಪಟ್ಟಣಗಳಲ್ಲಿ, ಗ್ರಾಮದಲ್ಲಿ ಅಥವಾ ಸ್ಥಳದಲ್ಲಿ ಅಥವಾ ಅಂತಹ ನಗರ, ಪಟ್ಟಣ, ಗ್ರಾಮ ಅಥವಾ ಸ್ಥಳದ, ನೆರೆಹೊರೆಯಲ್ಲಿ,

(ಎ) ಶಸ್ತ್ರಗಳು, ದೊಣ್ಣೆಗಳು, ಕತ್ತಿಗಳು, ಈಟಿಗಳು, ಗದೆಗಳು, ಬಂದೂಕುಗಳು, ಬಾಕುಗಳು, ಕೋಲುಗಳು ಅಥವಾ ಲಾಠಿಗಳನ್ನು, ಅಥವಾ ದೈಹಿಕ ಹಿಂಸೆಯನ್ನುಂಟು ಮಾಡುವ ಇತರ ಯಾವುದೇ ವಸ್ತುವನ್ನು ಒಯ್ಯುವುದನ್ನು;

(ಬಿ) ಯಾವುದೇ ಸಂರಕ್ಷಾರ ಪದಾರ್ಥ ಅಥವಾ ಸ್ಫೋಟಕಗಳ ಒಯ್ಯುವಿಕೆಯನ್ನು;

(ಸಿ) ಕಲ್ಲುಗಳನ್ನು ಅಥವಾ ಇತರ ಕ್ಷಿಪಣಿಗಳನ್ನು ಎಸೆಯುವ ಅಥವಾ ವೇಗದಿಂದ ಒಗೆಯುವ ಸಾಧನಗಳ ಅಥವಾ ಉಪಕರಣಗಳ ಒಯ್ಯುವಿಕೆಯನ್ನು ಶೇಖರಿಸುವುದನ್ನು ಮತ್ತು ತಯಾರಿಸುವುದನ್ನು,

(ಡಿ) ವ್ಯಕ್ತಿಗಳ ಅಥವಾ ಅವರ ಶವಗಳ ಅಥವಾ ಆಕೃತಿಗಳ ಅಥವಾ ಪ್ರತಿಕೃತಿಗಳ ಪ್ರದರ್ಶನ ಮಾಡುವುದನ್ನು;

(ಇ) ಅಂತಹ ಪ್ರಾಧಿಕಾರಿಯ ಅಭಿಪ್ರಾಯದಲ್ಲಿ ಸಭ್ಯತೆ ಅಥವಾ ನೀತಿಯನ್ನು ಅತಿಕ್ರಮಿಸಬಹುದಾದ ಅಥವಾ ಸಾರ್ವಜನಿಕ ಸುವ್ಯವಸ್ಥೆಗೆ ಬಾಧೆಯನ್ನುಂಟುಮಾಡಬಹುದಾದ ಅಥವಾ ರಾಜ್ಯದ ಭದ್ರತೆಯನ್ನು ಕುಗ್ಗಿಸ

(ಕಡೆಗಣಿಸ) ಬಹುದಾದ ಅಥವಾ ಅಪರಾಧವನ್ನು ಮಾಡಲು ಪ್ರಚೋದಿಸಬಹುದಾದ ಬಹಿರಂಗ ಘೋಷಣೆಗಳನ್ನು ಮಾಡುವುದು, ಹಾಡುಗಳನ್ನು ಹಾಡುವುದು, ಸಂಗೀತವನ್ನು ನುಡಿಸುವುದು, ಆವೇಶ ಭಾಷಣ ಮಾಡುವುದು, ಇಂಗಿತ ಸೂಚನೆಗಳ ಅಥವಾ ಅಂಕ ನಿರೂಪಣೆಗಳನ್ನು ಉಪಯೋಗ ಮಾಡುವುದು ಮತ್ತು ಚಿತ್ರಗಳನ್ನು, ಸಂಕೇತಗಳನ್ನು, ಭಿತ್ತಿಪತ್ರ ಅಥವಾ ಇತರ ಯಾವುದೇ ವಸ್ತು ಅಥವಾ ಪದಾರ್ಥವನ್ನು ತಯಾರಿಸುವುದು, ಪ್ರದರ್ಶಿಸುವುದು ಅಥವಾ ಪ್ರಸಾರ ಮಾಡುವುದನ್ನು ನಿಷೇಧಿಸಬಹುದು.

(2) ಯಾವೊಬ್ಬ ವ್ಯಕ್ತಿಯು ಅಂತಹ ನಿಷೇಧವನ್ನು ಉಲ್ಲಂಘಿಸಿ ಅಂತಹ ಯಾವೊಂದು ವಸ್ತುವಿನಿಂದ ಸಜ್ಜಿತವಾಗಿ ಹೋದರೆ, ಅಥವಾ ಯಾವುದೇ ಕ್ಷಾರಕ ಪದಾರ್ಥ ಸ್ಫೋಟಕ ಅಥವಾ ಕ್ಷಿಪಣಿಯನ್ನು ಒಯ್ದರೆ, ಅವನು ಯಾವೊಬ್ಬ ಪೊಲೀಸು ಅಧಿಕಾರಿಯಿಂದ ನಿಶಸ್ತ್ರಗೊಳಿಸಲ್ಪಡಲು ಅಥವಾ ಅವನ ಬಳಿ ಇರುವ ಕ್ಷಾರಕ ಪದಾರ್ಥ ಅಥವಾ ಸ್ಫೋಟಕ ಅಥವಾ ಕ್ಷಿಪಣಿಯನ್ನು ವಶಕ್ಕೆ ತೆಗೆದುಕೊಳ್ಳಲ್ಪಡಲು ಬದ್ಧನಾಗಿರತಕ್ಕದ್ದು ಮತ್ತು ಹಾಗೆ ವಶಪಡಿಸಿಕೊಳ್ಳಲಾದ ವಸ್ತು, ಕ್ಷಾರಕ ಪದಾರ್ಥ, ಸ್ಫೋಟಕ ಅಥವಾ ಕ್ಷಿಪಣಿಯು ಸರಕಾರಕ್ಕೆ ಮುಟ್ಟುಗೋಲಾಗತಕ್ಕದ್ದು.

(3) (1)ನೆಯ ಉಪಪ್ರಕರಣದ ಮೇರೆಗೆ ಶಕ್ತಗೊಳಿಸಲಾದ ಪ್ರಾಧಿಕಾರಿಯು, ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವುದರ ಸಲುವಾಗಿ ಲಿಖಿತ ಆದೇಶದ ಮೂಲಕ ಅದು ಅವಶ್ಯಕವೆಂದು ಪರ್ಯಾಲೋಚಿಸುವ ಕಾಲದಲ್ಲಿ ಮತ್ತು ಆವರೆಗೆ ಯಾವುದೇ ಸಭೆ ಅಥವಾ ಮೆರವಣಿಗೆಯನ್ನೂ ನಿಷೇಧಿಸಬಹುದು:

ಪರಂತು, ಅಂತಹ ಯಾವುದೇ ನಿಷೇಧವು ಸರಕಾರದ ಮಂಜೂರಿ ಇಲ್ಲದೇ ಹದಿನೈದು ದಿನಗಳಿಗಿಂತ ಹೆಚ್ಚು ಕಾಲ ಜಾರಿಯಲ್ಲಿರತಕ್ಕದ್ದಲ್ಲ.

(4) (1)ನೆಯ ಉಪಪ್ರಕರಣದ ಮೇರೆಗೆ ಶಕ್ತಗೊಳಿಸಲಾದ ಪ್ರಾಧಿಕಾರಿಯು, ಬಹಿರಂಗ ನೋಟೀಸು ಕೊಡುವುದರ ಮೂಲಕ ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ಯಾವುದೇ ಬೀದಿ ಅಥವಾ ಸಾರ್ವಜನಿಕ ಸ್ಥಳವನ್ನು ತಾತ್ಕಾಲಿಕವಾಗಿ ಮೀಸಲಾಗಿರಿಸಲೂಬಹುದು ಮತ್ತು ಅಂತಹ ಪ್ರಾಧಿಕಾರಿಯಿಂದ ನಿಯಮಿಸಬಹುದಾದ ಷರತ್ತುಗಳ ಮೇರೆಗಲ್ಲದೆ ಹಾಗೆ ಮೀಸಲಾಗಿರಿಸಲಾದ ಪ್ರದೇಶವನ್ನು ಜನರು ಪ್ರವೇಶಿಸದಂತೆ ನಿಷೇಧಿಸಲೂ ಬಹುದು.

**36. ಸಂಗೀತ, ಶಬ್ದ ಅಥವಾ ಗದ್ದಲಗಳ ಮುಂದುವರಿಕೆಯ ನಿರೋಧ ಇತ್ಯಾದಿಗಳಿಗೆ ಅಧಿಕಾರ :–** ರಾಜ್ಯ ಸರ್ಕಾರವು ಈ ಪ್ರಕರಣದ ಉಪಬಂಧಗಳನ್ನು ಸರಕಾರೀ ರಾಜ್ಯಪತ್ರದಲ್ಲಿ ಅಧಿಸೂಚನೆ ಕೊಟ್ಟು ಅನ್ವಯಿಸಿದ ಪ್ರದೇಶದಲ್ಲಿ ಅಧಿಕಾರ ವ್ಯಾಪ್ತಿಯುಳ್ಳ ಕಮೀಷನರು, ಸೂಪರಿಂಟೆಂಡೆಂಟ್ ಸಹಾಯಕ ಸೂಪರಿಂಟೆಂಡೆಂಟೂ ಅಥವಾ ಡೆಪ್ಯೂಟಿ ಸೂಪರಿಂಟೆಂಡೆಂಟೂ ಅಥವಾ ಮೊದಲನೆಯ ವರ್ಗದ ಯಾವನೇ ಮ್ಯಾಜಿಸ್ಟ್ರೇಟೂ, ಪೊಲೀಸು ಸ್ಟೇಷನ್ನಿನ ಚಾರ್ಜಿನಲ್ಲಿರುವ ಅಧಿಕಾರಿಯ ವರದಿ ಅಥವಾ ತಾನು ಪಡೆದ ಇತರ ಮಾಹಿತಿಯ ಮೇರೆಗೆ ಸಾರ್ವಜನಿಕರಿಗೆ ಅಥವಾ ನೆರಹೊರೆಯಲ್ಲಿ ವಾಸಿಸುವ ಅಥವಾ ಸ್ವತ್ತನ್ನು ಅಧಿಭೋಗಿಸುವ ಯಾವುದೇ ವ್ಯಕ್ತಿಗಳಿಗೆ ಉಂಟಾಗುವ ಕಿರುಕುಳ, ಗಲಭೆ, ಅಸೌಕರ್ಯ ಅಥವಾ, ಕ್ಷತಿ, ಅಥವಾ ನಷ್ಟಸಂಭವವನ್ನು ನಿರೋಧಿಸಲು ಹಾಗೆ ಮಾಡುವುದು ಅವಶ್ಯಕವೆಂದು ಮನದಟ್ಟಾದರೆ, ಅವನು ಲಿಖಿತ ಆದೇಶದ ಮೂಲಕ

(ಎ) ಯಾವುದೇ ಆವರಣದಲ್ಲಿ ಅಥವಾ ಮೇಲೆ

(i) ಯಾವುದೇ ಹಾಡುಗಾರಿಕೆಯ ಅಥವಾ ಸಂಗೀತದ;

(ii) ಧ್ವನಿಯನ್ನುಂಟುಮಾಡುವ ಅಥವಾ ಪುನರ್ಧ್ವನಿಸುವ ಸಾಮರ್ಥ್ಯವುಳ್ಳ ಯಾವುದೇ ಉಪಕರಣ, ಜೋಡಣೆ ಅಥವಾ ಸಲಕರಣೆಯನ್ನು ಅಥವಾ ಸಾಧನವನ್ನು ಬಾರಿಸುವ, ಬಡಿಯುವ, ಕಟಯುವ, ಊದುವ ಅಥವಾ ಯಾವುದೇ ರೀತಿಯಲ್ಲಿ ಉಪಯೋಗಿಸುವ ಕಾರಣದಿಂದ ಉಂಟಾಗುವ ಶಬ್ದಗಳ ಮುಂದುವರಿಯುವಿಕೆಯನ್ನು, ಅಥವಾ

(ಬಿ) ಯಾವುದೇ ಆವರಣದಲ್ಲಿ ಅಥವಾ ಮೇಲೆ ಗದ್ದಲವನ್ನುಂಟು ಮಾಡುವ ಅಥವಾ ಗದ್ದಲದಲ್ಲಿ ಪರಿಣಮಿಸುವ ಯಾವುದೇ ವ್ಯಾಪಾರ, ವೃತ್ತಿ ಅಥವಾ ಕ್ರಿಯೆಯ ನಡೆಯಿಸುವಿಕೆಯನ್ನು,

ನಿರೋಧಿಸಲು, ನಿಷೇಧಿಸಲು, ನಿಯಂತ್ರಿಸಲು ಅಥವಾ ಕ್ರಮಗೊಳಿಸಲು ತಾನು ಅವಶ್ಯಕವೆಂದು ಪರ್ಯಾಲೋಚಿಸುವ ನಿದೇಶನಗಳನ್ನು ಯಾವನೇ ವ್ಯಕ್ತಿಗೆ ಕೊಡಬಹುದು.

(2) (1)ನೆಯ ಉಪಪ್ರಕರಣದ ಮೇರೆಗೆ ಶಕ್ತಗೊಳಿಸಲಾದ ಪ್ರಾಧಿಕಾರಿಯು, ತಾನಾಗಿಯೇ ಅಥವಾ ಒಂದನೆಯ ಉಪಪ್ರಕರಣದ ಮೇರೆಗೆ ಮಾಡಲಾದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯ ಆವೇದನದ ಮೇಲೆ ಅಂತಹ ಯಾವುದೇ ಆದೇಶವನ್ನು ರದ್ದುಗೊಳಿಸಬಹುದು, ಮಾರ್ಪಾಡು ಮಾಡಬಹುದು ಅಥವಾ ಬದಲಾಯಿಸಬಹುದು:

ಪರಂತು, ಅಂತಹ ಯಾವುದೇ ಆವೇದನವನ್ನು ಇತ್ಯರ್ಥಗೊಳಿಸುವುದಕ್ಕೆ ಮೊದಲು, ಸದರಿ ಪ್ರಾಧಿಕಾರಿಯು, ತನ್ನ ಮುಂದೆ ಆವೇದನಕಾರನು ಸ್ವತಃ ಅಥವಾ ವಕೀಲನ ಮೂಲಕ ಹಾಜರಾಗಲು ಮತ್ತು ಆದೇಶದ ವಿರುದ್ಧ ಕಾರಣ ತೋರಿಸಲು ಅವಕಾಶಕೊಡತಕ್ಕದ್ದು ಮತ್ತು ಅದು ಅಂತಹ ಆದೇಶವನ್ನು ಪೂರ್ಣವಾಗಿ ಅಥವಾ ಭಾಗಶಃ ತಿರಸ್ಕರಿಸಿದರೆ ಅಂತಹ ತಿರಸ್ಕಾರದ ಕಾರಣಗಳನ್ನು ಅಭಿಲೇಖಿಸತಕ್ಕದ್ದು.

**37. ಧ್ವನಿವರ್ಧಕ ಇತ್ಯಾದಿಗಳ ಉಪಯೋಗಕ್ಕೆ ಲೈಸೆನ್ಸುಕೊಡುವುದು :–** (1) 36ನೆಯ ಪ್ರಕರಣದ ಉಪಬಂಧಗಳಿಗೆ ಮತ್ತು 31ನೆಯ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶಗಳಿಗೆ ಒಳಪಟ್ಟು, ಯಾವನೇ ವ್ಯಕ್ತಿಯು

(i) ಯಾವುದೇ ಆವರಣದಲ್ಲಿ ಅಥವಾ ಮೇಲೆ ಯಾವುದೇ ಸಂಗೀತ ಅಥವಾ ಇತರ ಶಬ್ದದ ಧ್ವನಿಯನ್ನು ವರ್ಧಿಸುವುದರ ಸಲುವಾಗಿ, ಯಾವುದೇ ಧ್ವನಿವರ್ಧಕವನ್ನು ಅಥವಾ ಇತರ ಸಲಕರಣೆಯನ್ನು, ಅಂತಹ ಆವರಣದಿಂದ ಐವತ್ತು ಅಡಿಗಳಾಚೆ ಕೇಳುವ ಮಟ್ಟದಲ್ಲಿ ಅಥವಾ ಅಷ್ಟು ಗಟ್ಟಿಯಾಗಿ;

(ii) ಯಾವುದೇ ತೆರೆದ ಸ್ಥಳದಲ್ಲಿ ಯಾವುದೇ ಸಂಗೀತದ ಅಥವಾ ಇತರ ಶಬ್ದದ ಧ್ವನಿಯನ್ನು ವರ್ಧಿಸುವುದರ ಸಲುವಾಗಿ, ಯವುದೇ ಧ್ವನಿವರ್ಧಕವನ್ನು ಅಥವಾ ಇತರ ಸಲಕರಣೆಗಳನ್ನು ಅಂತಹ ಸಂಗೀತವು ಅಥವಾ ಇತರ ಶಬ್ದವು ಉಂಟಾಗುವ ಅಥವಾ ಪ್ರತಿಧ್ವನಿಸುವ ಸ್ಥಳದಿಂದ ಇನ್ನೂರು ಅಡಿಗಳಾಚೆ ಕೇಳುವ ಮಟ್ಟದಲ್ಲಿ ಅಥವಾ ಅಷ್ಟು ಗಟ್ಟಿಯಾಗಿ, ಸೂಪರಿಂಟೆಂಡೆಂಟನಿಂದ ಅಥವಾ ರಾಜ್ಯ ಸರಕಾರವು ಸರಕಾರೀ ರಾಜಪತ್ರದಲ್ಲಿ ಈ ಬಗ್ಗೆ ಅಧಿಸೂಚನೆಯ ಮೂಲಕ ಉಲ್ಲೇಖಿಸಬಹುದಾದಂತಹ ಸ್ಥಳೀಯ ಪ್ರದೇಶದಲ್ಲಿ ಅಂತಹ ಬೇರೆ ಅಧಿಕಾರಿಯಿಂದ ಕೊಡಲ್ಪಟ್ಟ ಲೈಸೆನ್ಸಿನ ಷರತ್ತುಗಳವರೆಗೆ ಮತ್ತು ಅನುಸಾರವಾಗಿದ್ದಲ್ಲದೆ ಉಪಯೋಗಿಸತಕ್ಕದ್ದಲ್ಲ ಅಥವಾ ಬಳಸತಕ್ಕದ್ದಲ್ಲ.

(2) (1)ನೆಯ ಉಪಪ್ರಕರಣದ ಉಪಬಂಧಗಳು, ಸರಕಾರವು ಸರಕಾರೀ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಉಲ್ಲೇಖಿಸಬಹುದಾದಂತಹ ಪ್ರದೇಶಕ್ಕೆ ಮತ್ತು ಅಂತಹ ತಾರೀಖಿನಿಂದ ಅನ್ವಯಿಸುವುದಾಗಿರತಕ್ಕದ್ದು. ಯಾವುದೇ ಪ್ರದೇಶಕ್ಕೆ (1)ನೆಯ ಉಪಪ್ರಕರಣವನ್ನು ಅನ್ವಯಿಸಿದಾಗ, ಬೇರೆ ಯಾವುದೇ ವಿಧಿಯಲ್ಲಿ ಏನೇ ಇದ್ದರೂ, ಯಾವ ಸ್ಥಳೀಯ ಪ್ರಾಧಿಕಾರಿಯೂ, ಯಾವುದೇ ಸಂಗೀತದ ಅಥವಾ ಇತರ ಶಬ್ದದ ಧ್ವನಿಯನ್ನು

ವರ್ಧಿಸಲು ಧ್ವನಿವರ್ಧಕಗಳನ್ನು ಅಥವಾ ಇತರ ಸಲಕರಣೆಗಳನ್ನು ಉಪಯೋಗಿಸುವುದಕ್ಕಾಗಿ ಲೈಸೆನ್ಸು ಕೊಡಲು ಸಕ್ಷಮವಾಗಿರತಕ್ಕದ್ದಲ್ಲ.

**38. ದೊಂಬಿ ಇತ್ಯಾದಿಗಳನ್ನು ನಿರೋಧಿಸಲು ಆದೇಶಗಳ ಹೊರಡಿಸುವಿಕೆ :–** (1) ಯಾವುದೇ ದೊಂಬಿ ಅಥವಾ ತೀವ್ರವಾದ ಶಾಂತಿಭಂಗವನ್ನು ತಡೆಯುವುದಕ್ಕಾಗಿ ಅಥವಾ ಅದನ್ನು ದಮನ ಮಾಡುವುದಕ್ಕಾಗಿ ಕಮೀಷನರು ಅಥವಾ ಅವನ ಗೈರುಹಾಜರಿಯಲ್ಲಿ ಮತ್ತು ಅವನ ನಿಯಂತ್ರಣಕ್ಕೊಳಪಟ್ಟು ಪೊಲೀಸು ಡೆಪ್ಯೂಟಿ ಕಮೀಷನರು ಮತ್ತು ಸೂಪರಿಂಟೆಂಡೆಂಟೂ ಅವರುಗಳ ಚಾರ್ಜಿನಲ್ಲಿರುವ ಪ್ರದೇಶಗಳಲ್ಲಿ ಯಾವುದೇ ಕಟ್ಟಡ ಅಥವಾ ಸ್ಥಳವನ್ನು ತಾತ್ಕಾಲಿಕವಾಗಿ ಮುಚ್ಚಬಹುದು ಅಥವಾ ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು ಮತ್ತು ಅಲ್ಲಿಂದ ಎಲ್ಲ ವ್ಯಕ್ತಿಗಳನ್ನು ಅಥವಾ ಯಾವುದೇ ವ್ಯಕ್ತಿಯನ್ನು ಹೊರತುಪಡಿಸಬಹುದು, ಅಥವಾ ತಾನು ಉಚಿತವೆಂದು ಭಾವಿಸುವಂತಹ ವ್ಯಕ್ತಿಗಳನ್ನು ಮಾತ್ರ ಮತ್ತು ಅಂತಹ ನಿಬಂಧನೆಗಳ ಮೇಲೆ ಪ್ರವೇಶಿಸಲು ಅವಕಾಶ ಕೊಡಬಹುದು, ಈ ಮೂಲಕ ನಿಹಿತವಾದ ಪ್ರಾಧಿಕಾರವನ್ನು ಚಲಾಯಿಸುತ್ತ ಆದೇಶಗಳನ್ನು ಮಾಡುವ ಪ್ರಾಧಿಕಾರಿಯು ಮಾಡಬಹುದಾದ ಮತ್ತು ಅಧಿಸೂಚಿಸಬಹುದಾದಂತಹ ಆದೇಶಗಳಿಗನುಗುಣವಾಗಿ ವರ್ತಿಸಲು ಎಲ್ಲ ಸಂಬಂಧಪಟ್ಟ ವ್ಯಕ್ತಿಗಳು ಬದ್ಧವಾಗಿರತಕ್ಕದ್ದು.

(2) (1)ನೆಯ ಉಪಪ್ರಕರಣದ ಮೇರೆಗೆ ತೆಗೆದುಕೊಳ್ಳಲಾದ ಕ್ರಮದ ಕಾರಣದಿಂದ ಅಂತಹ ಕಟ್ಟಡ ಅಥವಾ ಸ್ಥಳದ ವಿಧಿಬದ್ಧ ಆಧಿಭೋಗದಾರನಿಗೆ ಗಣನೀಯವಾದ ನಷ್ಟ ಅಥವಾ ಕ್ಷತಿಯುಂಟಾದರೆ, ಅಂತಹ ಕ್ರಮವನ್ನು ಕೈಕೊಂಡ ದಿನದಿಂದ ಒಂದು ತಿಂಗಳೊಳಗಾಗಿ ಅವನು ಸಂಬಂಧಪಟ್ಟ ಪ್ರಾಧಿಕಾರಿಗೆ ಆವೇದನ ಮಾಡಿಕೊಂಡಾಗ, ಅಂತಹ ಕ್ರಮವು ಅಂತಹ ಪ್ರಾಧಿಕಾರಿಯ ಅಭಿಪ್ರಾಯದಲ್ಲಿ ಅಂತಹ ಕಟ್ಟಡವನ್ನು ಅಥವಾ ಸ್ಥಳವನ್ನು ಯಾವ ಉಪಯೋಗಕ್ಕಾಗಿ ಬಳಸಿಕೊಳ್ಳಲಾಯಿತೋ ಅಥವಾ ಬಳಸಿಕೊಳ್ಳಲು ಉದ್ದೇಶಿಸಲಾಯಿತೋ ಆ ಕಾರಣದಿಂದ ಅಥವಾ ಅದಕ್ಕೆ ಪ್ರವೇಶಾವಕಾಶ ಪಡೆದಿದ್ದ ವ್ಯಕ್ತಿಗಳ ದುರ್ವರ್ತನೆಯಿಂದ ಅಂತಹ ಕ್ರಮವು ಅವಶ್ಯವಾಗಿದ್ದಿತೆಂದು ತಿಳಿಯಲ್ಪಟ್ಟಿದ್ದ ಹೊರತು, ಅಂತಹ ನಷ್ಟ ಅಥವಾ ಕ್ಷತಿಯ ಬಗ್ಗೆ ಯುಕ್ತವಾದ ಪರಿಹಾರವನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

(3) (2)ನೆಯ ಉಪಪ್ರಕರಣದ ಮೇರೆಗಿನ ಯಾವುದೇ ಪ್ರಸಂಗದ ಸಂಬಂಧದಲ್ಲಿ ಸಂದಾಯಮಾಡಬೇಕಾದ ಮೊಬಲಗು (ಏನಾದರೂ ಇದ್ದರೆ) ಮತ್ತು ಅದು ಸಂದಾಯವಾಗಬೇಕಾದ ವ್ಯಕ್ತಿ ಇವುಗಳ ಬಗ್ಗೆ ವಿವಾದ ಏನದರೂ ಉದ್ಭವಿಸಿದ ಸಂದರ್ಭದಲ್ಲಿ, ಅಂತಹ ವಿಚಾರವು ಮೊದಲನೆಯ ವರ್ಗದ ಮ್ಯಾಜಿಸ್ಟ್ರೇಟನ ಅಧಿಕಾರಗಳನ್ನು ಚಲಾಯಿಸುವ ಮತ್ತು ಪ್ರಕಾರ್ಯಗಳನ್ನು ನೆರವೇರಿಸುವ ನ್ಯಾಯಿಕ ಅಧಿಕಾರಿಯಿಂದ ತೀರ್ಮಾನಿಸಲ್ಪಡತಕ್ಕದ್ದು.

**39. ಸಮಾರಂಭ ಇತ್ಯಾದಿಗಳಲ್ಲಿ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗಲು ಆದೇಶಗಳನ್ನು ಹೊರಡಿಸುವುದು :–** (1) ಯಾವುದೇ ಬೀದಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ವಾಸ್ತವಿಕ ಅಥವಾ ಉದ್ದೇಶಿತ ಮತೀಯ ಅಥವಾ ಸಾಂಪ್ರದಾಯಿಕ ಅಥವಾ ಸಾಮೂಹಿಕ ದರ್ಶನ ಅಥವಾ ಪ್ರದರ್ಶನ ಅಥವಾ ಯೋಜಿತ ಜನಸಮೂಹ ಇವುಗಳಲ್ಲಿ ಸೇರುವಿಕೆ ಅಥವಾ ಇವುಗಳನ್ನು ನಡೆಸುವುದರಿಂದ ಅಥವಾ ಅವುಗಳಲ್ಲಿ ಭಾಗವಹಿಸುವುದರಿಂದ ತೀವ್ರವಾದ ಶಾಂತಿಭಂಗಕ್ಕೆ ಕಾರಣವಾಗಬಹುದಾದ ವಿವಾದ ಅಥವಾ ವಾದಾಂಶವಿದೆ ಎಂದು ಸಕ್ಷಮ ಪ್ರಾಧಿಕಾರಿಗೆ ಕಂಡುಬಂದರೆ, ಅಂತಹ ಪ್ರಾಧಿಕಾರಿಯು ಅದರಲ್ಲಿ ಹಿತಸಂಬಂಧವಿರುವ ಪಕ್ಷಗಳ ಮತ್ತು ವ್ಯಕ್ತಿಗಳ ಮೇಲೆ ತೋರುವ ವಿಧಿಬದ್ಧ ಹಕ್ಕು ಮತ್ತು ಸುಸ್ಥಾಪಿತ ಆಚರಣೆಗಳನ್ನು ಅನುಲಕ್ಷಿಸಿ ಸಂಬಂಧಪಟ್ಟ ವ್ಯಕ್ತಿಗಳು, ಪರಸ್ಪರವಾಗಿ ಮತ್ತು ಸಾರ್ವಜನಿಕರೊಡನೆ ಹೇಗೆ ವರ್ತಿಸಬೇಕೆಂಬುದರ ಬಗ್ಗೆ ಆ

ಪರಿಸ್ಥಿತಿಯಲ್ಲಿ ತಾನು ಅವಶ್ಯ ಮತ್ತು ಯುಕ್ತವೆಂದು ಭಾವಿಸುವಂತಹ ಆದೇಶಗಳನ್ನು ಕೊಡಬಹುದು. ಅಂತಹ ಪ್ರತಿಯೊಂದು ಆದೇಶವು, ಅದು ಜಾರಿಗೆ ಬರಬೇಕಾಗಿರುವ ಪಟ್ಟಣ ಅಥವಾ ಸ್ಥಳದಲ್ಲಿ ಪ್ರಕಟಿಸಲ್ಪಡತಕ್ಕದ್ದು ಮತ್ತು ಸಂಬಂಧಪಟ್ಟ ಎಲ್ಲ ವ್ಯಕ್ತಿಗಳು ಅದನ್ನು ಅನುಸರಿಸಲು ಬದ್ಧರಾಗಿರತಕ್ಕದ್ದು.

(2) (1)ನೆಯ ಉಪಪ್ರಕರಣದ ಮೇರೆಗಿನ ಯಾವುದೇ ಆದೇಶವು ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯದಿಂದ ಮಾಡಿದ ಡಿಕ್ರಿ, ನಿರ್ಬಂಧಾಜ್ಞೆ ಅಥವಾ ಆದೇಶಕ್ಕೊಳಪಟ್ಟಿರತಕ್ಕದ್ದು ಮತ್ತು ಸದರಿ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯ ಹಕ್ಕು ಮತ್ತು ಕರ್ತವ್ಯಗಳ ಸಂಬಂಧದಲ್ಲಿ ಹಿತಸಂಬಂಧವಿರುವ ವ್ಯಕ್ತಿಯ ದೂರು, ದಾವೆ ಅಥವಾ ಆವೇದನದ ಮೇಲೆ ಅಂತಹ ಆದೇಶವು ಅಂತಹ ನ್ಯಾಯಾಲಯವು ಮಾಡಿದ ತೀರ್ಪು, ಡಿಕ್ರಿ, ನಿರ್ಬಂಧಾಜ್ಞೆ ಅಥವಾ ಆದೇಶ ಅಸಂಗತವಾಗಿದೆ ಎಂದು ಆದೇಶವನ್ನು ಮಾಡಿದ ಅಧಿಕಾರಿಗೆ ಕಂಡುಬಂದರೆ ಅದು ಹಿಂತೆಗೆದು ಕೊಳ್ಳಲ್ಪಡತಕ್ಕದ್ದು ಅಥವಾ ಮಾರ್ಪಾಟು ಮಾಡಲ್ಪಡತಕ್ಕದ್ದು.

**40. ವಿನೋದ ಸ್ಥಳಗಳಲ್ಲಿ ಮತ್ತು ಸಾರ್ವಜನಿಕ ಸಭೆಗಳಲ್ಲಿ ಅವ್ಯವಸ್ಥೆ ಇತ್ಯಾದಿಗಳು ಸಂಭವಿಸದಂತೆ ಪೊಲೀಸರು ಏರ್ಪಾಟು ಮಾಡುವುದು :–** (1) ಯಾವುದೇ ಸಾರ್ವಜನಿಕ ವಿನೋದದ ಸ್ಥಳಗಳಲ್ಲಿ ಸಾರ್ವಜನಿಕರು ಆಮಂತ್ರಿಸಲ್ಪಟ್ಟ ಅಥವಾ ಸಾರ್ವಜನಿಕರಿಗೆ ಪ್ರವೇಶಾವಕಾಶವಿರುವ ಯಾವುದೇ ಸಮ್ಮೇಳನ ಅಥವಾ ಸಭೆಯಲ್ಲಿ ನೆರೆದ ವ್ಯಕ್ತಿಗಳಿಗೆ ಉಂಟಾಗುವ ತೀವ್ರವಾದ ಗಲಭೆ, ಕಾನೂನುಭಂಗ ಅಥವಾ ಸ್ಪಷ್ಟವಾಗಿ ಕಂಡು ಬರುವ ಪ್ರತ್ಯಕ್ಷ ಮತ್ತು ಆಸನ್ನ ಅಪಾಯವನ್ನು ತಡೆಗಟ್ಟುವ ಉದ್ದೇಶಕ್ಕಾಗಿ, ಅಂತಹ ವಿನೋದ ಸ್ಥಳ ಅಥವಾ ಸಮ್ಮೇಳನ ಅಥವಾ ಸಭೆಯಲ್ಲಿ ಹಾಜರಿರುವ ಕಾನ್‌ಸ್ಟೇಬಲ್‌ನಿಗಿಂತ ವರಿಷ್ಠ ದರ್ಜೆಯಲ್ಲಿರುವ ಹಿರಿಯ ಪೊಲೀಸು ಅಧಿಕಾರಿಯು, ವಿಧಬದ್ಧವಾಗಿ ಮಾಡಲಾಗಿರುವ ನಿಯಮಗಳಿಗೆ ಮತ್ತು ಆದೇಶಗಳಿಗೆ ಒಳಪಟ್ಟು, ಅಂತಹ ವಿನೋದಸ್ಥಳ ಅಥವಾ ಅಂತಹ ಸಮ್ಮೇಳನ ಅಥವಾ ಸಭೆಗೆ ಸಾರ್ವಜನಿಕರ ಪ್ರವೇಶದ ರೀತಿಯ ಬಗ್ಗೆ ಮತ್ತು ಅದರ ಕಾರ್ಯಕ್ರಮಗಳು ಶಾಂತಿಯುತವಾಗಿ ಮತ್ತು ಕಾನೂನುಬದ್ಧವಾಗಿ ನಡೆಯುವಂತೆ ಮಾಡುವುದರ ಸಲುವಾಗಿ ಮತ್ತು ಅಲ್ಲಿಯ ಸಾರ್ವಜನಿಕ ಸುರಕ್ಷತೆಯನ್ನು ಕಾಪಾಡುವುದರ ಸಲುವಾಗಿ ತಾನು ಅವಶ್ಯವೆಂದು ಪರ್ಯಾಲೋಚಿಸುವಂತಹ ಯುಕ್ತ ನಿದೇಶಗಳನ್ನು ಕೊಡಬಹುದು ಮತ್ತು ಅಂತಹ ಯುಕ್ತವಾದ ಪ್ರತಿಯೊಂದು ನಿದೇಶವನ್ನು ಅನುಸರಿಸಲು ಎಲ್ಲ ವ್ಯಕ್ತಿಗಳು ಬದ್ಧರಾಗಿರತಕ್ಕದ್ದು.

(2) (1)ನೆಯ ಉಪಪ್ರಕರಣದ ಉಪಬಂಧಗಳನ್ನು ಮತ್ತು ಅದರ ಮೇರೆಗೆ ಮಾಡಲಾದ ಯಾವುದೇ ನಿದೇಶವನ್ನು ಕಾರ್ಯಗತ ಮಾಡುವುದರ ಉದ್ದೇಶಕ್ಕಾಗಿ ಅಂತಹ ಪ್ರತಿಯೊಂದು ವಿನೋದ ಸ್ಥಳ ಅಥವಾ ಅಂತಹ ಸಮ್ಮೇಳನ ಅಥವಾ ಅಂತಹ ಸಭೆಗೆ ಪೊಲೀಸು ನಿರ್ಬಂಧಿತ ಪ್ರವೇಶಾವಕಾಶವನ್ನು ಹೊಂದಿರತಕ್ಕದ್ದು.

**41. ಅವ್ಯವಸ್ಥೆಯನ್ನುಂಟು ಮಾಡುವ ಜನರು ಆವರಣಗಳನ್ನು ಉಪಯೋಗಿಸುವುದನ್ನು ನಿಲ್ಲಿಸುವುದು :–** ಸರಕಾರವು, ಸರಕಾರೀ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಪ್ರಕರಣವನ್ನು ಅನ್ವಯಿಸಿರುವಂಥ ನಗರ, ಪಟ್ಟಣ ಅಥವಾ ಗ್ರಾಮದ ಯಾವುದೇ ಮನೆಯು ಯವುದೇ ಪ್ರಕಾರದ ಅವ್ಯವಸ್ಥೆಯುಂಟು ಮಾಡುವ ಜನರ ಸಾಮೂಹಿಕ ವಸತಿಗೃಹ ಅಥವಾ ಅವರು ಸೇರುವ ಸ್ಥಳವಾಗಿ ನೆರೆಹೊರೆಯ ನಿವಾಸಿಗಳಿಗೆ ಕಿರುಕುಳವನ್ನುಂಟು ಮಾಡತಕ್ಕದ್ದದಾಗಿ ಉಪಯೋಗಿಸಲಾಗುತ್ತಿದೆ ಎಂದು ಅದರ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕಮೀಷನರಿಗೆ, ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಅಥವಾ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟನಿಗೆ ದೂರು ಬಂದಾಗ, ಸದರಿ ಕಮೀಷನರು ಅಥವಾ ಮ್ಯಾಜಿಸ್ಟ್ರೇಟು ದೂರಿನ ಬಗ್ಗೆ ಜವಾಬು ಕೊಡಲು ಮನೆಯ ಒಡೆಯನನ್ನು ಅಥವಾ ಬಾಡಿಗೆದಾರನನ್ನು ಕರೆಯಿಸಬಹುದು ಮತ್ತು ಮನೆಯನ್ನು ಹಾಗೆ ಉಪಯೋಗಿಸಲಾಗುತ್ತಿದೆ ಎಂದು ಮನದಟ್ಟಾದರೆ, ಹಾಗೆ ಉಪಯೋಗಿಸಲಾಗುತ್ತಿರುವ ಮನೆಯ ಒಡೆಯನಿಗೆ ಅಥವಾ ಅದರ ಬಾಡಿಗೆದಾರನಿಗೆ

ಅದನ್ನು, ಆದೇಶದಲ್ಲಿ ನಿರೂಪಿಸಬಹುದಾದ ಯುಕ್ತ ಅವಧಿಯೊಳಗಾಗಿ ಅಂಥ ಉಪಯೋಗವನ್ನು ನಿಲ್ಲಿಸಲು ಆದೇಶ ಮಾಡಬಹುದು.

**42. ಜಾತ್ರೆ ಇತ್ಯಾದಿಗಳಲ್ಲಿ ಸಾಂಕ್ರಾಮಿಕ ರೋಗಗಳ ಹರಡುವಿಕೆಯನ್ನು ನಿರೋಧಿಸಲು ವಿಶೇಷ ಕ್ರಮಗಳು :–** (1) ಕಮೀಷನರ್‌ನಿಗೆ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಅವರವರ ಚಾರ್ಜಿನಲ್ಲಿರುವ ಪ್ರದೇಶದಲ್ಲಿ ಯಾತ್ರೆ, ಜಾತ್ರೆ ಅಥವಾ ಅಂಥ ಇತರ ಸಂದರ್ಭಗಳ ಕಾರಣದಿಂದಾಗಿ ಹೆಚ್ಚು ಸಂಖ್ಯೆಯ ಜನಸ್ತೋಮ ಸೇರಿದ ಅಥವಾ ಅಂಥ ಇತರ ಸಂದರ್ಭಗಳ ಕಾರಣದಿಂದಾಗಿ ಹೆಚ್ಚು ಸಂಖ್ಯೆಯ ಜನಸ್ತೋಮ ಸೇರಿದ ಅಥವಾ ಸೇರುವ ಸಂಭವವಿರುವುದರಿಂದ ಯಾವುದೇ ಪ್ರದೇಶದಲ್ಲಿ ಸಾಂಕ್ರಾಮಿಕ ರೋಗವು ತಲೆದೋರಿದೆ, ಅಥವಾ ತಲೆದೋರುವ ಸಂಭವವಿದೆಯೆಂದು ಕಂಡುಬರುವ ಪ್ರಸಂಗಗಳಲ್ಲಿ ಅವನು ಇಂಥ ರೋಗವು ತಲೆದೋರುವುದನ್ನು ಅಥವಾ ಹರಡುವುದನ್ನು ನಿರೋಧಿಸುವುದಕ್ಕಾಗಿ ತಾನು ಅವಶ್ಯವೆಂದು ಭಾವಿಸುವ ವಿಶೇಷ ಕ್ರಮಗಳನ್ನು ಕೈಕೊಳ್ಳಬಹುದು ಮತ್ತು ಸಾರ್ವಜನಿಕ ಪ್ರಕಟಣೆಯ ಮೂಲಕ, ಸಂಬಂಧಪಟ್ಟ ಆರೋಗ್ಯ ಅಧಿಕಾರಿಯೊಡನೆ ಅಥವಾ ನಿಯಮಿಸಲಾದ ಸಾರ್ವಜನಿಕ ಇಲಾಖೆಯ ಅಧಿಕಾರಿಯೊಡನೆ ಸಮಾಲೋಚಿಸಿದ ಬಳಿಕ, ಅಂತಹ ರೋಗ ತಲೆದೋರುವುದನ್ನು ಅಥವಾ ಅದರ ಹರಡುವಿಕೆಯನ್ನು ನಿರೋಧಿಸುವುದರ ಸಲುವಾಗಿ ಸದರಿ ಸ್ಥಳದ ನಿವಾಸಿಗಳಿಂದ ಮತ್ತು ಅಲ್ಲಿ ಹಾಜರಿರುವವರಿಂದ ಅಥವಾ ಅಲ್ಲಿಗೆ ಹೋಗುವವರಿಂದ ಅಥವಾ ವಾಪಸಾಗುವುದರಿಂದ ಪಾಲಿಸಬೇಕಾಗುವ ವಿನಿಮಯಗಳನ್ನು ನಿಯಮಿಸಬಹುದು.

(2) ಜನಸಮೂಹ ಸೇರುವ ಸ್ಥಳದಲ್ಲಿ ಮತ್ತು ಅದರ ಸಮೀಪದಲ್ಲಿ ನೈರ್ಮಲ್ಯ ವ್ಯವಸ್ಥೆಗಳಿಗಾಗಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗುವುದರ ಸಲುವಾಗಿ ತಗಲುವ ವೆಚ್ಚಗಳ ನಿರ್ವಹಣೆಯ ಬಗ್ಗೆ (1)ನೆಯ ಉಪಪ್ರಕರಣದ ಮೇರೆಗೆ ಬರುವ ವ್ಯಕ್ತಿಗಳ ಮೇಲೆ ಯುಕ್ತವಾದ ಫೀಜನ್ನು ಕಮೀಷನರ ಅಥವಾ ಸೂಪರಿಂಟೆಂಡೆಂಟನ ಅಧ್ಯಪೇಕ್ಷೆಯ ಮೇರೆಗೆ ಜಿಲ್ಲಾ ಮ್ಯಾಜಿಸ್ಟ್ರೇಟನು ನಿರ್ಧರಿಸುವುದು ಮತ್ತು ವಿಧಿಸುವುದು ವಿಧಿಬದ್ಧವಾಗಿರತಕ್ಕದ್ದು.

(3) ಜನ ಸಮೂಹ ಸೇರುವ ಸ್ಥಳವು ಪೌರನಿಕಾಯದ ಅಧಿಕಾರ ವ್ಯಾಪ್ತಿಗೊಳಪಟ್ಟ ಪ್ರದೇಶದ ಪರಿಮಿತಿಯಲ್ಲಿರುವಾಗ, ಸದರಿ ಉದ್ದೇಶಕ್ಕೆ ಅವಶ್ಯವಾಗತಕ್ಕಂಥ ಮೊಬಲಗನ್ನು ಆ ಪೌರ ನಿಕಾಯದಿಂದ ವಸೂಲು ಮಾಡಿಕೊಳ್ಳಲ್ಪಡಬಹುದು.

**43. ತೊಂಡು ನಾಯಿಗಳ ನಾಶ :–** ಕಮೀಷನರು ಮತ್ತು ಸೂಪರಿಂಟೆಂಡೆಂಟರು ಅವರವರ ಚಾರ್ಜಿನಲ್ಲಿರುವ ಪ್ರದೇಶಗಳಲ್ಲಿ ಕಾಲಕಾಲಕ್ಕೆ ಸಾರ್ವಜನಿಕ ನೋಟೀಸಿನ ಮೂಲಕ ಮತ್ತು ಸಂಬಂಧಪಟ್ಟ ಪ್ರದೇಶದ ಆರೋಗ್ಯಾಧಿಕಾರಿಯೊಡನೆ ಅಥವಾ ನಿಯಮಿಸಲಾದ ಜನಾರೋಗ್ಯ ಇಲಾಖೆಯ ಇತರ ಅಧಿಕಾರಿಯೊಡನೆ ಸಮಾಲೋಚಿಸಿ ಬಳಿಕ, ಸದರಿ ನೋಟೀಸಿನಲ್ಲಿ ಉಲ್ಲೇಖಿಸಬಹುದಾದ ಅವಧಿಯಲ್ಲಿ ಬೀದಿಗಳಲ್ಲಿ ಅಥವಾ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಅಲೆಯುತ್ತಿರುವುದಾಗಿ ಕಂಡುಬಂದ ಯಾವುದೇ ತೊಂಡು ನಾಯಿಗಳನ್ನು ನಾಶಪಡಿಸಬಹುದೆಂದು ಉದ್ಘೋಷಿಸಬಹುದು, ಮತ್ತು ಅಂತಹ ಅವಧಿಯಲ್ಲಿ ಹಾಗೆ ಕಂಡುಬಂದ ಯಾವುದೇ ನಾಯಿಯನ್ನು ಆ ಪ್ರಕಾರ ನಾಶಪಡಿಸಬಹುದು.

(2) (1)ನೆಯ ಉಪಪ್ರಕರಣದ ಮೇರೆಗೆ ಶಕ್ತಗೊಳಿಸಲಾದ ಪ್ರಾಧಿಕಾರಿಯು ಸಾರ್ವಜನಿಕ ನೋಟೀಸಿನ ಮೂಲಕ ಬೀದಿಯಲ್ಲಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಮತ್ತು ಯಾವ ವ್ಯಕ್ತಿಯ ಜೊತೆಗಿರದ ಪ್ರತಿಯೊಂದು ನಾಯಿಯನ್ನು, ಬಾಯಿಗೆ, ಅದು ಉಸಿರಾಡಿಸಲು ಮತ್ತು ಕುಡಿಯಲು ಅಡಚಣೆಯಾಗದ ಹಾಗೆ ಕಚ್ಚಲು ಬಾರದಂತೆ ಪರಿಣಾಮಕಾರಿಯಾದ ರೀತಿಯಲ್ಲಿ ಕುಕ್ಕೆ ಹಾಕತಕ್ಕದ್ದೆಂದು ಅಗತ್ಯಪಡಿಸಬಹುದು ಮತ್ತು ಅಂತಹ

ನೋಟೀಸು ಜಾರಿಯಲ್ಲಿರುವ ಅವಧಿಯಲ್ಲಿ ಅದರೊಡೆಯನ ಆವರಣದ ಆಚೆಗೆ ಯಾವುದೇ ಬೀದಿಯಲ್ಲಿ ಅಥವಾ ಸ್ಥಳದಲ್ಲಿ ಕುಕ್ಕೆ ಇಲ್ಲದೇ ಅಲೆಯುತ್ತಿರುವ ಯಾವುದೇ ನಾಯಿಯನ್ನು ಪೊಲೀಸರು ನಾಶಪಡಿಸಬಹುದು ಅಥವಾ ಸ್ವಾಧೀನಕ್ಕೆ ತೆಗೆದುಕೊಂಡು ಹಿಡಿದಿರಿಸಬಹುದು:

ಪರಂತು, ಆದರೆ ನಿಜವೆಂದು ಕಂಡುಬರುವ ಒಡೆಯನ ಹೆಸರು ಮತ್ತು ವಿಳಾಸವುಳ್ಳ ಕೊರಳ ಪಟ್ಟಿಯನ್ನು ಹೊಂದಿರುವ ಯಾವುದೇ ನಾಯಿಯು ಕಂಡುಬಂದರೆ, ಅದನ್ನು ಅದಕ್ಕೆ ಹುಚ್ಚು ಹಿಡಿದಿದ್ದ ಹೊರತು ಕೂಡಲೇ ನಾಶಪಡಿಸತಕ್ಕದ್ದಲ್ಲ. ಆದರೆ ಅದನ್ನು ಹಿಡಿದಿಟ್ಟಿರುವ ಬಗ್ಗೆ ಅಂಚೆಯ ಮೂಲಕ ಅಥವಾ ಬೇರೆ ರೀತಿಯಲ್ಲಿ ಅಂತಹ ಒಡೆಯನಿಗೆ ಕೂಡಲೇ ತಿಳುಹಿಸತಕ್ಕದ್ದು.

(3) ಒಡೆಯನು ಕುಕ್ಕೆಯನ್ನು ಒದಗಿಸದೇ ಮತ್ತು ಅದನ್ನು ಹಾಗೆ ಹಿಡಿದಿಟ್ಟ ಬಗೆ ಎಲ್ಲ ವೆಚ್ಚಗಳನ್ನು ಕೊಡದೆ ಇರುವ ಮತ್ತು ಪೂರ್ತಿ ಮೂರುದಿನಗಳ ಅವಧಿಯ ವರೆಗೆ (2)ನೆಯ ಉಪಪ್ರಕರಣದ ಮೇರೆಗೆ ಹಿಡಿದಿಟ್ಟ ಯಾವುದೇ ನಾಯಿಯನ್ನು ನಾಶಪಡಿಸಬಹುದು ಅಥವಾ ಸಕ್ಷಮ ಪ್ರಾಧಿಕಾರಿಯ ಮಂಜೂರಿಯೊಂದಿಗೆ ಮತ್ತು ಆದೇಶದ ಮೇರೆಗೆ ಮಾರಬಹುದು.

(4) (3)ನೆಯ ಉಪಪ್ರಕರಣದ ಮೇರೆಗೆ ಯಾವುದೇ ನಾಯಿಯ ಮಾರಾಟದ ಉತ್ಪತ್ತಿಗಳನ್ನು ಅದನ್ನು ಹಿಡಿದಿರಿಸಲಾದ ಬಗ್ಗೆ ತಗುಲಿದ ವೆಚ್ಚಗಳನ್ನು ಸಾಧ್ಯವಿದ್ದ ಮಟ್ಟಿಗೆ ತುಂಬಿಕೊಳ್ಳಲು ವಿನಿಯೋಗಿಸತಕ್ಕದ್ದು ಮತ್ತು ಉಳಿಕೆ ಏನಾದರೂ ಇದ್ದರೆ, ಅದು ರಾಜ್ಯದ ಸಂಚಿತ ನಿಧಿಗೆ ಸೇರತಕ್ಕದ್ದು.

(5) ಈ ಪ್ರಕರಣದ ಮೇರೆಗೆ ಯಾವುದೇ ನಾಯಿಯನ್ನು ನಾಶಪಡಿಸಿದ ಅಥವಾ ಹಿಡಿದಿಟ್ಟ ಸಂದರ್ಭದಲ್ಲಿ ತಗುಲಿದ ಯಾವುದೇ ವೆಚ್ಚಗಳನ್ನು (4)ನೆಯ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ಅದರ ಒಡೆಯನಿಗೆ ಸಕ್ಷಮ ಪ್ರಾಧಿಕಾರಿಯಿಂದ ವಾರಂಟು ಹೊರಡಿಸಿ, ಅಂತಹ ವಾರಂಟು ದಂಡ ಪ್ರಕ್ರಿಯಾ ಸಂಹಿತೆ 1898, 386ನೆಯ ಪ್ರಕರಣದ ಮೇರೆಗೆ ಹೊರಡಿಸಲಾದ ವಾರಂಟೆಂಬಂತೆ ಅವನಿಂದ ವಸೂಲು ಮಾಡಿಕೊಳ್ಳಬಹುದು.

**44. ಬಾಧೆಪಡುತ್ತಿರುವ ಅಥವಾ ನಿರುಪಯುಕ್ತ ಪ್ರಾಣಿಗಳ ನಾಶ :–** (1) ಯಾವುದೇ ಪೊಲೀಸು ಅಧಿಕಾರಿಯು, ಯಾವುದೇ ಬೀದಿಯಲ್ಲಿ ಅಥವಾ ಪೂಜಾ ಸ್ಥಳವಲ್ಲದ ಇತರ ಯಾವುದೇ ಬೀದಿಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ಹೋರಿ ಅಥವಾ ಹಸು ಅಲ್ಲದ ಮತ್ತು ತನ್ನ ಅಭಿಪ್ರಾಯದಲ್ಲಿ ಅದನ್ನು ಹಿಂಸೆ ಇಲ್ಲದೇ ಸಾಗಿಸುವುದು ಸಾಧ್ಯವಿಲ್ಲದಷ್ಟು ರೋಗಗ್ರಸ್ತ ಸ್ಥಿತಿಯಲ್ಲಿರುವ ಅಥವಾ ತೀವ್ರ ಗಾಯಗೊಂಡಿರುವ ಮತ್ತು ಅಂತಹ ದೈಹಿಕ ಸ್ಥಿತಿಯಲ್ಲಿರುವ ಯಾವುದೇ ಪ್ರಾಣಿಯನ್ನು ಕಂಡರೆ, ಅದನ್ನು, ಅದರ ಒಡೆಯನು ದೊರಕದಿದ್ದರೆ ಅಥವಾ ಆ ಪ್ರಾಣಿಯ ನಾಶಕ್ಕೆ ಒಡೆಯನು ಸಮ್ಮತಿಸದಿದ್ದರೆ ಕೂಡಲೇ ಆ ಪ್ರಾಣಿಯು ಇರುವ ಪ್ರದೇಶದ ಚಾರ್ಜ್‌ನಲ್ಲಿರುವ ಪಶುವೈದ್ಯ ಅಧಿಕಾರಿಯನ್ನು ಕರೆಯಿಸತಕ್ಕದು ಮತ್ತು ಆ ಪಶುವೈದ್ಯಾಧಿಕಾರಿಯು ಅದು ಸಾಯುವಷ್ಟು ಗಾಯಗೊಂಡಿದೆ ಎಂದು ಅಥವಾ ಜೀವಂತವಾಗಿರಿಸುವುದರಿಂದ ಹಿಂಸೆಯಾಗುತ್ತದೆ ಎಂಬುವಷ್ಟು ತೀವ್ರವಾಗಿ ಗಾಯಗೊಂಡಿದೆ ಅಥವಾ ಅಷ್ಟೊಂದು ರೋಗಗ್ರಸ್ತ ಸ್ಥಿತಿಯಲ್ಲಿದೆ ಅಥವಾ ಅಂತಹ ದೈಹಿಕ ಸ್ಥಿತಿಯಲ್ಲಿದೆ ಎಂದು ಪ್ರಮಾಣೀಕರಿಸಿದರೆ, ಆ ಪೊಲೀಸು ಅಧಿಕಾರಿಯು, ಒಡೆಯನ ಸಮ್ಮತಿ ಇಲ್ಲದೇ ಆ ಪ್ರಾಣಿಯನ್ನು ನಾಶಪಡಿಸಬಹುದು ಅಥವಾ ನಾಶಪಡಿಸುವಂತೆ ಮಾಡಬಹುದು:

ಪರಂತು, ಆ ಪ್ರಾಣಿಯು ಇರುವ ಸ್ಥಳದಿಂದ ಅದಕ್ಕೆ ವಿಶೇಷ ಬಾಧೆಯುಂಟಾಗದಂತೆ ಅದನ್ನು ಸಾಗಿಸಬಹುದು ಎಂದು ಪಶುವೈದ್ಯ ಅಧಿಕಾರಿಯು ಅಭಿಪ್ರಾಯಪಟ್ಟರೆ ಮತ್ತು ಆ ಪ್ರಾಣಿಯ ಒಡೆಯನು ಅಥವಾ ಅದರ ಚಾರ್ಜಿನಲ್ಲಿರುವ ವ್ಯಕ್ತಿಯು ಅಥವಾ ಅವರಿಲ್ಲದಿರುವಾಗ ಆ ಸ್ಥಳದಲ್ಲಿರುವ ಬೇರೆ ಯಾವನೊಬ್ಬ ವ್ಯಕ್ತಿಯು,

ಪಶುವೈದ್ಯ ಅಧಿಕಾರಿಯು ಯುಕ್ತವೆಂದು ಭಾವಿಸುವ ಅವಧಿಯೊಳಗಾಗಿ, ಅದನ್ನು ಪಶುವೈದ್ಯ ಆಸ್ಪತ್ರೆಗೆ ಅಥವಾ ಪಿಂಜರಾಪೋಲಿಗೆ ಸಾಗಿಸಲು ಒಪ್ಪಿಸಿದ್ದನಾಗಿದ್ದರೆ ಪಶುವೈದ್ಯ ಅಧಿಕಾರಿಯು, ಅಂಥ ಒಡೆಯನಿಗೆ ಪ್ರಾಣಿಯ ಚಾರ್ಜಿನಲ್ಲಿದ್ದ ವ್ಯಕ್ತಿಗೆ ಅಥವಾ ಅಂಥ ಇತರ ವ್ಯಕ್ತಿಗೆ ಅದನ್ನು ಸಾಗಿಸಲು ಅವಕಾಶ ಕೊಡತಕ್ಕದ್ದು, ಮತ್ತು ಒಡೆಯನು, ಪ್ರಾಣಿಯ ಚಾರ್ಜ್‌ನಲ್ಲಿರುವ ವ್ಯಕ್ತಿಯು ಅಥವಾ ಇಂಥ ಇತರ ವ್ಯಕ್ತಿಯು ಆ ಪ್ರಾಣಿಯನ್ನು ಸಾಗಿಸಲು ಒಪ್ಪದಿದ್ದರೆ ಅಥವಾ ಸಾಗಿಸಲು ತಪ್ಪಿದರೆ ಪಶುವೈದ್ಯ ಅಧಿಕಾರಿಯು ಆ ಪ್ರಾಣಿಯನ್ನು ನಾಶಮಾಡುವುದಕ್ಕೆ ಮುಂಚೆಯೇ ಅದು ಇರುವ ಸ್ಥಳದಿಂದ ತಾನು ಯೋಗ್ಯವೆಂದು ತಿಳಿಯುವಂಥ ಬೇರೊಂದು ಸ್ಥಳಕ್ಕೆ ಅದನ್ನು ಸಾಗಿಸುವಂತೆ ಪೊಲೀಸ್ ಅಧಿಕಾರಿಗೆ, ನಿರ್ದೇಶಿಸಬಹುದು:

ಮತ್ತು, ಪರಂತು, ಅಂಥ ಪ್ರಾಣಿಯನ್ನು ಬೀದಿಯಲ್ಲಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ನಾಶಪಡಿಸುವುದಾದರೆ, ಸಾಧ್ಯವಿರುವ ಮಟ್ಟಿಗೆ ಅದನ್ನು ನಾಶಪಡಿಸುವಾಗ ಸಾರ್ವಜನಿಕರ ದೃಷ್ಟಿಯಿಂದ ಮರೆ ಮಾಡತಕ್ಕದ್ದು:

ಮತ್ತು ಪರಂತ್ತೂ, ಯಾವುದೇ ರೋಗಗ್ರಸ್ತ ಪ್ರಾಣಿಯನ್ನು ಯಾವುದೇ ಸ್ಥಳದಲ್ಲಿ ನಾಶಪಡಿಸುವ ಅಥವಾ ನಾಶಪಡಿಸುವಂತೆ ಮಾಡುವುದಕ್ಕೆ ಮುಂಚೆ, ಸಂಬಂಧಪಟ್ಟ ಪ್ರದೇಶದ ಆರೋಗ್ಯ ಅಧಿಕಾರಿ ಅಥವಾ ನಿಯಮಿಸಲಾದ ಸಾರ್ವಜನಿಕರ ಆರೋಗ್ಯ ಇಲಾಖೆಯ ಇತರ ಅಧಿಕಾರಿಯೊಂದಿಗೆ ಸಮಾಲೋಚಿಸತಕ್ಕದ್ದು.

(2) ಸರಕಾರವು ತಾನು ಯೋಗ್ಯವೆಂದು ಭಾವಿಸುವಂಥ ವ್ಯಕ್ತಿಗಳನ್ನು ಪಶುವೈದ್ಯ ಅಧಿಕಾರಿಗಳನ್ನಾಗಿ ನೇಮಕ ಮಾಡಬಹುದು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಅವರು ಚಾರ್ಜಿನಲ್ಲಿರತಕ್ಕ ಅವರು ಚಾರ್ಜಿನಲ್ಲಿರಬೇಕಾದ ಪ್ರದೇಶಗಳನ್ನು ಘೋಷಿಸಬಹುದು.

**45. ಈ ಅಧ್ಯಾಯದ ಮೇರೆಗಿನ ಅಧಿಕಾರಗಳು ಜಿಲ್ಲಾ ಮ್ಯಾಜಿಸ್ಟ್ರೇಟನ ನಿಯಂತ್ರಣಕ್ಕೊಳಪಟ್ಟು ಸೂಪರಿಂಟೆಂಡೆಂಟನಿಂದ ಮತ್ತು ರಾಜ್ಯ ಸರಕಾರದ ನಿಯಂತ್ರಣಕ್ಕೊಳಪಟ್ಟು ಕಮೀಷನರನಿಂದ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ಚಲಾಯಿಸಲ್ಪಡತಕ್ಕದ್ದು :–** ಅಧಿಕಾರವನ್ನು ಚಲಾಯಿಸಲು ಸರಕಾರದಿಂದ ವಿಶೇಷವಾಗಿ ಶಕ್ತಗೊಳಿಸಲಾಗಿರದ ಸೂಪರಿಂಟೆಂಡೆಂಟನಿಗೆ ಅಥವಾ ಅವನಿಗೆ ಅಧೀನವಾದ ಯಾವನೇ ಅಧಿಕಾರಿಗೆ ಈ ಅಧ್ಯಾಯದಿಂದ ಪ್ರದತ್ತವಾದ ಪ್ರತಿಯೊಂದು ಅಧಿಕಾರಯು, ಜಿಲ್ಲಾ ಮ್ಯಾಜಿಸ್ಟ್ರೇಟನ ಆದೇಶಗಳಿಗೊಳಪಟ್ಟು ಅವನಿಂದ ಚಲಾಯಿಸಲ್ಪಡತಕ್ಕದ್ದು ಮತ್ತು ಈ ಅಧ್ಯಾಯದ ಮೇರೆಗೆ ಮಾಡಲಾದ ಎಲ್ಲ ನಿಯಮಗಳು, ವಿನಿಯಮಗಳು ಮತ್ತು ಆದೇಶಗಳು, ಅವು ಕಮೀಷನರ್‌ನಿಂದ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ಮಾಡಲ್ಪಟ್ಟಿದ್ದರೆ, ಕಾಲಕಾಲಕ್ಕೆ ಸರಕಾರವು ಈ ಬಗ್ಗೆ ಮಾಡಬಹುದಾದಂಥ ನಿಯಮಗಳಿಗೆ ಮತ್ತು ಆದೇಶಗಳಿಗೆ ಒಳಪಟ್ಟಿರತಕ್ಕದ್ದು ಮತ್ತು ಈ ಬಗ್ಗೆ ವಿಶೇಷವಾಗಿ ಶಕ್ತಗೊಳಿಸಲಾದ ಸೂಪರಿಂಟೆಂಡೆಂಟನಿಂದ ಮಾಡಲ್ಪಟ್ಟಿದ್ದರೆ 16ನೆಯ ಪ್ರಕರಣದ ಉಪಬಂಧಗಳಿಗೊಳಪಟ್ಟಿರತಕ್ಕದ್ದು.

## ಅಧ್ಯಾಯ – V

### ಸಾರ್ವಜನಿಕರ ಸುವ್ಯವಸ್ಥೆ ಮತ್ತು ರಾಜ್ಯದ ನೆಮ್ಮದಿಯನ್ನು ರಕ್ಷಿಸುವುದಕ್ಕಾಗಿ ವಿಶೇಷ ಕ್ರಮಗಳು

**1. ಹೆಚ್ಚಿನ ಪೊಲೀಸು ನಿಯೋಜನೆ, ಅದರ ಖರ್ಚಿನ ವಸೂಲಿ ಮತ್ತು ದೊಂಬಿ ಪರಿಹಾರ, ಅದರ ನಿರ್ಧರಣೆ ಮತ್ತು ವಸೂಲಿ.**

**46. ವ್ಯಕ್ತಿಯ ಆವೇದನದ ಮೇಲೆ ಹೆಚ್ಚಿನ ಪೊಲೀಸು ನಿಯೋಜನೆ :–** (1) ಯಾವನೇ ವ್ಯಕ್ತಿಯ ಆವೇದನದ ಮೇಲೆ ಕಮೀಷನರು ಅಥವಾ ಸೂಪರಿಂಟೆಂಡೆಂಟು ಶಾಂತಿಯನ್ನು ಕಾಪಾಡಲು ಸುವ್ಯವಸ್ಥೆಯನ್ನು ರಕ್ಷಿಸಲು ಅಥವಾ ಯಾವುದೇ ವಿಶಿಷ್ಟ ವರ್ಗದ ಅಥವಾ ವರ್ಗಗಳ ಅಪರಾಧಗಳ ಸಂಬಂಧದಲ್ಲಿ ಈ ಅಧಿನಿಯಮದ ಅಥವಾ ಇತರ ಯಾವುದೇ ಅಧಿನಿಯಮದ ಉಪಬಂಧಗಳನ್ನು ಆಚರಣೆಗೆ ತರಲು ಅಥವಾ ಅವನ ಚಾರ್ಜಿನಲ್ಲಿರುವ ಪ್ರದೇಶದ ಯಾವುದೇ ಸ್ಥಳದಲ್ಲಿ ಇತರ ಯಾವುದೇ ಪೊಲೀಸು ಕರ್ತವ್ಯಗಳನ್ನು ನೆರವೇರಿಸಲು ಹೆಚ್ಚು ಸಂಖ್ಯೆಯಲ್ಲಿ ಪೊಲೀಸರನ್ನು ಪ್ರತಿನಿಯೋಜಿಸಬಹುದು.

(2) ಅಂಥ ಹೆಚ್ಚಿನ ಪೊಲೀಸನ್ನು ಆವೇದನ ಮಾಡಿಕೊಳ್ಳುವ ವ್ಯಕ್ತಿಯ ಖರ್ಚಿನ ಮೇಲೆ ನಿಯೋಜಿಸತಕ್ಕದ್ದು ಆದರೆ, ಅದು ಪೊಲೀಸು ಪ್ರಾಧಿಕಾರದ ಆದೇಶಗಳಿಗೊಳಪಟ್ಟಿರತಕ್ಕದ್ದು ಮತ್ತು ನೇಮಕ ಮಾಡುವ ಪ್ರಾಧಿಕಾರಿಯು ಉಚಿತವೆಂದು ಪರ್ಯಾಲೋಚಿಸುವಂಥ ಅವಧಿಯವರೆಗೆ ನಿಯೋಜಿತ ವಾಗಿರತಕ್ಕದ್ದು.

(3) ಅಂತಹ ಹೆಚ್ಚಿನ ಪೊಲೀಸನ್ನು ಯಾವ ವ್ಯಕ್ತಿಯ ಆವೇದನದ ಮೇಲೆ ಮಾಡಲಾಗಿದ್ದಿತೋ ಅವನು, ಯಾವುದೇ ಕಾಲಕ್ಕೆ ಹೆಚ್ಚಿನ ಪೊಲೀಸನ್ನು ನಿಯೋಜಿಸಲು ಯಾವ ಪ್ರಾಧಿಕಾರಿಗೆ ಆವೇದನ ಮಾಡಿಕೊಳ್ಳಲಾಗಿದ್ದಿತೋ ಆ ಪ್ರಾಧಿಕಾರಿಗೆ ಸದರಿ ಪೊಲೀಸನ್ನು ವಾಪಸ್ಸು ಕರೆಯಿಸಿಕೊಳ್ಳಲು ಒಂದು ಬರಹದ ವಿನಂತಿ ಮಾಡಿಕೊಂಡರೆ, ಅಂಥ ಕೋರಿಕೆಯನ್ನು ಕೊಟ್ಟ ತಾರೀಖಿನಿಂದ ಒಂದು ತಿಂಗಳಿಗೆ ಮೀರದ ಸಂದರ್ಭಾನುಸಾರ ಸರಕಾರವು ಅಥವಾ ನೇಮಕ ಮಾಡುವ ಪ್ರಾಧಿಕಾರಿಯು ನಿರ್ಧರಿಸಬಹುದಾದ ಅವಧಿಯಿಂದ ಅವನನ್ನು ಅಂಥ ವೆಚ್ಚದಿಂದ ಮುಕ್ತಗೊಳಿಸತಕ್ಕದ್ದು.

**47. ದೊಡ್ಡ ಕಾಮಗಾರಿಗಳಲ್ಲಿ ಮತ್ತು ಅಲ್ಲಿಯ ನಿಯೋಜಕರ ವರ್ತನೆಯ ಬಗ್ಗೆ ಆಶಂಕೆ ಇರುವ ಸಂದರ್ಭದಲ್ಲಿ ಹೆಚ್ಚಿನ ಪೊಲೀಸರ ನೇಮಕ :–** (1) ಸರಕಾರಕ್ಕೆ ಅಥವಾ ಶಕ್ತ ಪ್ರಾಧಿಕಾರಿಗೆ

(ಎ) ನಡೆಸಲ್ಪಡುತ್ತಿರುವ ಯಾವುದೇ ದೊಡ್ಡ ಕಾಮಗಾರಿಯು ಅಥವಾ ನಡೆಸಲಾಗುತ್ತಿರುವ ಯಾವುದೇ ಸಾರ್ವಜನಿಕ ವಿನೋದವು ಸಂಚಾರಕ್ಕೆ ಅಡಚಣೆ ಉಂಟು ಮಾಡಬಹುದಾಗಿದೆ ಅಥವಾ ಹೆಚ್ಚು ಜನರನ್ನು ಆಕರ್ಷಿಸಬಹುದಾಗಿದೆ ಎಂದು ಕಂಡುಬಂದರೆ ಅಥವಾ

(ಬಿ) ಯಾವುದೇ ಸ್ಥಳದಲ್ಲಿ ಯಾವುದೇ ರೈಲ್ವೆ, ಕಾಲುವೆ, ಅಥವಾ ಇತರ ಸಾರ್ವಜನಿಕ ಕಾಮಗಾರಿ, ಅಥವಾ ನಿರ್ಮಾಣವಾಗುತ್ತಿರುವ ಅಥವಾ ಚಾಲ್ತಿ ಇರುವ ಯಾವುದೇ ತಯಾರಿಕೆ ಅಥವಾ ವಾಣಿಜ್ಯ ಸಂಸ್ಥೆಯಲ್ಲಿ ನಿಯೋಜಿತವಾಗಿರುವ ವ್ಯಕ್ತಿಗಳ ವರ್ತನೆಯು ಅಥವಾ ವರ್ತನೆಯ ಬಗ್ಗೆ ಸಕಾರಣಿಕೆ ಶಂಕೆಯು ಅಂಥ ಸ್ಥಳದಲ್ಲಿ ಹೆಚ್ಚಿನ ಪೊಲೀಸಿನ ನಿಯೋಜನೆಯನ್ನು ಅಗತ್ಯಪಡಿಸುವುದು ಎಂದು ಕಂಡುಬಂದರೆ ಸರ್ಕಾರವು ಅಥವಾ ಶಕ್ತ ಪ್ರಾಧಿಕಾರಿಯು ತಾನು ಉಚಿತವೆಂದು ಪರ್ಯಾಲೋಚಿಸುವಂಥ ಹೆಚ್ಚಿನ ಪೊಲೀಸನ್ನು ಸದರಿ ಸ್ಥಳದಲ್ಲಿ ಪ್ರತಿನಿಯೋಜಿಸಬಹುದು ಮತ್ತು ಅದು ಅಂಥ ಅವಶ್ಯಕತೆಯು ಮುಂದುವರಿಯುವುದೆಂದು ಅದಕ್ಕೆ ಕಂಡುಬರುವಷ್ಟು ಅವಧಿಯವರೆಗೆ ಸದರಿ ಪೊಲೀಸನ್ನು ಅಂಥ ಸ್ಥಳದಲ್ಲಿ ನಿಯೋಜಿಸಿ ಇಡಬಹುದು.

(2) ಅಂಥ ಹೆಚ್ಚಿನ ಪೊಲೀಸು, ಕಾಮಗಾರಿ, ವಿನೋದ, ತಯಾರಿಕೆ ಅಥವಾ ಸಂಸ್ಥೆ, ಯಾವ ವ್ಯಕ್ತಿಯಿಂದ ನಿರ್ಮಿಸಲ್ಪಟ್ಟಿರುತ್ತದೆಯೋ, ನಡೆಸಲ್ಪಡುತ್ತಿದೆಯೋ ಅಥವಾ ನಡೆಯಿಸಿಕೊಂಡು ಬರಲಾಗುತ್ತದೆಯೋ ಅಂಥ ವ್ಯಕ್ತಿಯ ಖರ್ಚಿನ ಮೇಲೆ ನಿಯೋಜಿಸಲ್ಪಡತಕ್ಕದ್ದು ಮತ್ತು ಅಂಥ ವ್ಯಕ್ತಿಯು ಸಂದರ್ಭಾನುಸಾರ, ಸರಕಾರವು ಅಥವಾ ಅಧಿಕಾರ ಪ್ರಾಧಿಕಾರಿಯು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ದರದ ಮೇರೆಗೆ ಮತ್ತು ಕಾಲದಲ್ಲಿ ಅದರ ಖರ್ಚನ್ನು ಸಂದಾಯ ಮಾಡತಕ್ಕದ್ದು.

**48. 46 ಮತ್ತ 47ನೆಯ ಪ್ರಕರಣದ ಮೇರೆಗೆ ನಿಯೋಜಿಸಲಾದ ಹೆಚ್ಚಿನ ಪೊಲೀಸಿನ ಖರ್ಚಿನ ವಸೂಲಿ :–** 46 ಮತ್ತು 47ನೆಯ ಪ್ರಕರಣಗಳ ಮೇರೆಗೆ ಯಾವುದೇ ವಿವಾದದ ಸಂದರ್ಭದಲ್ಲಿ, ಸಂದಾಯ ಮಾಡಬೇಕಾದ ಮೊಬಲಗಿನ ಬಗ್ಗೆ ಮತ್ತು ಯಾವ ವ್ಯಕ್ತಿಯಿಂದ ಅದು ಸಂದಾಯವಾಗಬೇಕೆಂಬುದರ ಬಗ್ಗೆ ಜಿಲ್ಲಾ ಮ್ಯಾಜಿಸ್ಟ್ರೇಟನ ತೀರ್ಮಾನವು ನಿರ್ಣಾಯಕವಾಗಿರತಕ್ಕದ್ದು ಮತ್ತು ಹಾಗೆ ನಿಗದಿಯಾದ ಮೊಬಲಗು ಜಿಲ್ಲಾ ಮ್ಯಾಜಿಸ್ಟ್ರೇಟನ ಕೋರಿಕೆಯ ಮೇಲೆ ರೆವಿನ್ಯೂ ಜಿಲ್ಲೆಯ ಡೆಪ್ಯೂಟಿ ಕಮೀಷನರನಿಂದ ಅದಕ್ಕೆ ಉತ್ತರದಾಯಿ ಎಂದು ಕಂಡು ಬರುವ ವ್ಯಕ್ತಿಯಿಂದ ಅದು ಬರಬೇಕಾದ ಭೂ ಕಂದಾಯದ ಬಾಕಿ ಎಂಬಂತೆ ವಸೂಲು ಮಾಡಲ್ಪಡತಕ್ಕದ್ದು.

**49. ಸಾರ್ವಜನಿಕ ಶಾಂತಿಗೆ ವಿಶೇಷ ಅಪಾಯದ ಸಂದರ್ಭಗಳಲ್ಲಿ ಹೆಚ್ಚಿನ ಪೊಲೀಸಿನ ನಿಯೋಜನೆ :–** (1) ಸರಕಾರದ ಅಭಿಪ್ರಾಯದಲ್ಲಿ ಯಾವುದೇ ಪ್ರದೇಶವು ಗಲಭೆ ಅಥವಾ ಅಪಾಯದ ಸ್ಥಿತಿಯಲ್ಲಿದೆ ಅಥವಾ ಅಲ್ಲಿಯ ನಿವಾಸಿಗಳ ಅಥವಾ ನಿವಾಸಿಗಳು ಒಂದು ವಿಶಿಷ್ಟ ಭಾಗದ ವರ್ತನೆಯಿಂದ ಹೆಚ್ಚಿನ ಪೊಲೀಸನ್ನು ಹಂಗಾಮಿಯಾಗಿ ನಿಯೋಜಿಸುವುದು ಯುಕ್ತವೆಂದು ಕಂಡುಬಂದರೆ, ಅದು ಸರಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ

(ಎ) ಹೆಚ್ಚಿನ ಪೊಲೀಸನ್ನು ನಿಯೋಜಿಸಬಹುದಾದ (ಈ ಮುಂದೆ "ಗಲಭೆ ಪ್ರದೇಶ" ವೆಂದು ಕರೆಯಲಾದ) ಪ್ರದೇಶ;

(ಬಿ) ಹೆಚ್ಚಿನ ಪೊಲೀಸನ್ನು ನಿಯೋಜಿಸಬೇಕಾದ ಅವಧಿ; ಇವುಗಳನ್ನು ಉಲ್ಲೇಖಿಸಬಹುದು:

ಪರಂತು, (ಬಿ) ಖಂಡದಲ್ಲಿ ಗೊತ್ತುಪಡಿಸಲಾದ ಅವಧಿಯು, ಸರಕಾರದ ಅಭಿಪ್ರಾಯದಲ್ಲಿ ಅಂಥ ಅವಧಿಯನ್ನು ವಿಸ್ತರಿಸುವುದು ಸಾರ್ವಜನಿಕ ಹಿತದ ದೃಷ್ಟಿಯಿಂದ ಅವಶ್ಯವಾಗಿದ್ದರೆ, ಅದು ಅದನ್ನು ಕಾಲಕಾಲಕ್ಕೆ ವಿಸ್ತರಿಸಬಹುದು. ಹೆಚ್ಚಿನ ಪೊಲೀಸಿನ ಖರ್ಚು, ಈ ಪ್ರಕರಣದ ಮೇರೆಗೆ ವಿಧಿಸಲಾದ ಕರವಾಗಿರತಕ್ಕದು ಮತ್ತು ಅದನ್ನು ಮುಂಬರುವ ಉಪಪ್ರಕರಣಗಳಲ್ಲಿ ನಿಯಮಿಸಬಹುದಾದ ರೀತಿಯಲ್ಲಿ ವಸೂಲು ಮಾಡಿಕೊಳ್ಳತಕ್ಕದ್ದು.

(2) (1)ನೆಯ ಉಪಪ್ರಕರಣದ (ಎ) ಮತ್ತು (ಬಿ) ಖಂಡದ ಮೇರೆಗಿನ ಸರಕಾರದ ತೀರ್ಮಾನ ಅಂತಿಮವಾಗಿರತಕ್ಕದ್ದು.

(3) ಅಂಥ ಅಧಿಸೂಚನೆಯನ್ನು ಹೊರಡಿಸಿದ ತರುವಾಯ, ಸರಕಾರವು

(ಎ) ಗಲಭೆ ಪ್ರದೇಶವು ಪೌರಸಭಾ ನಿಕಾಯದ ಅಧಿಕಾರವ್ಯಾಪ್ತಿಯಲ್ಲಿದ್ದಲ್ಲಿ ಪೌರಸಭಾ ನಿಕಾಯವನ್ನು, ರೆವೆನ್ಯೂ ಜಿಲ್ಲೆಯ ಡೆಪ್ಯೂಟಿ ಕಮೀಷನರನನ್ನು ಅಥವಾ ಇತರ ಯಾವುದೇ ಪ್ರಾಧಿಕಾರಿಯನ್ನು

(ಬಿ) ಗಲಭೆ ಪ್ರದೇಶವು (ಎ) ಖಂಡದಲ್ಲಿ ಉಲ್ಲೇಖಿಸಿದ ಪ್ರದೇಶದ ಹೊರಗೆ ಇದ್ದಲ್ಲಿ ರೆವಿನ್ಯೂ ಜಿಲ್ಲೆಯ ಡೆಪ್ಯೂಟಿ ಕಮೀಷನರನನ್ನು ಅಥವಾ ಇತರ ಯಾವುದೇ ಪ್ರಾಧಿಕಾರಿಯನ್ನು ಅಂಥ ಹೆಚ್ಚಿನ ಪೊಲೀಸಿನ ಖರ್ಚನ್ನು ಪೂರ್ಣತಃ ಅಥವಾ ಭಾಗಶಃ ಸಾಮಾನ್ಯವಾಗಿ ಗಲಭೆ ಪ್ರದೇಶದಲ್ಲಿ ನಿವಾಸಿಸುವ ಎಲ್ಲ ವ್ಯಕ್ತಿಗಳಿಂದ ಅಥವಾ ಅಂತಹ ವ್ಯಕ್ತಿಗಳ ಯಾವುದೇ ವಿಶಿಷ್ಟ ಭಾಗ ಅಥವಾ ಪಂಗಡಗಳಿಂದ ಅಥವಾ ವರ್ಗ ಅಥವಾ ವರ್ಗಗಳಿಂದ ಸರಕಾರವು ನಿರ್ದೇಶಿಸಬಹುದಾದಂಥ ದಾಮಾಷೆಯಲ್ಲಿ ವಸೂಲು ಮಾಡಲು ಅಗತ್ಯಪಡಿಸಬಹುದು:

ಪರಂತು, ಅಂತಹ ಖರ್ಚನ್ನು ಪೌರಸಭಾ ನಿಕಾಯವು ವಸೂಲು ಮಾಡಿಕೊಳ್ಳಲು ನಿರ್ದೇಶಿಸಿರುವಲ್ಲಿ, ಅಂತಹ ವೆಚ್ಚದ ಮೊಬಲಗಿನ ಶೇಕಡಾ ಮೂರಕ್ಕೆ ಮೀರದಷ್ಟು ಹೆಚ್ಚಿನ ಮೊಬಲಗು ಕೂಡಾ ವಸೂಲಾಗುವುದಾಗಿರತಕ್ಕದ್ದು.

(4) (i) ಎಲ್ಲಾ ಅಥವಾ ಸರಕಾರವು ನಿದೇಶಿಸುವಂಥ ಪೌರ ವಿಭಾಗಗಳಲ್ಲಿ ಉಪವಿಭಾಗಗಳಲ್ಲಿ ಅಥವಾ ಅವುಗಳ ಭಾಗಗಳಲ್ಲಿ ವಿಧಿಸುವ ಮತ್ತು ಹಾಕುವ ಸಾಮಾನ್ಯ ಅಥವಾ ಸ್ವತ್ತಿನ ತೆರಿಗೆಯನ್ನು ಹೆಚ್ಚಿಸುವ ಮೂಲಕ ಅಂತಹ ಖರ್ಚನ್ನು ಅಥವಾ ಹೆಚ್ಚಿನ ಮೊಬಲಗನ್ನು ವಸೂಲು ಮಾಡಿಕೊಳ್ಳಲು ಪೌರನಿಕಾಯವನ್ನು ಸರಕಾರವು ಅಗತ್ಯಪಡಿಸಬಹುದು, ಈ ಉಪಪ್ರಕರಣದ ಮೇರೆಗೆ ವಿಧಿಸಲಾದ ಸಾಮಾನ್ಯ ಅಥವಾ ಸ್ವತ್ತಿನ ಕರದ ಪ್ರತಿಯೊಂದು ಹೆಚ್ಚಳವನ್ನು ಅದಕ್ಕೆ ಹೊಣೆಯಾಗಿರುವ ಪ್ರತಿಯೊಬ್ಬ ವ್ಯಕ್ತಿಯಿಂದ ಸಾಮಾನ್ಯ ಅಥವಾ ಸ್ವತ್ತಿನ ಕರವು ಅವನಿಮದ ಬರಬೇಕಾಗಿದೆ ಎಂಬ ರೀತಿಯಲ್ಲಿಯೇ ಪೌರನಿಕಾಯವು ವಸೂಲು ಮಾಡಿಕೊಳ್ಳತಕ್ಕದ್ದು.

ಸಂಬಂಧಪಟ್ಟ ಪೌರಸಭಾ ಅಧಿನಿಯಮದ ಉಪಬಂಧಗಳು ಅಂತಹ ಯಾವುದೇ ಹೆಚ್ಚಳಕ್ಕೆ ಅದು ಸದರಿ ಅಧಿನಿಯಮದ ಮೇರೆಗೆ ವಿಧಿಸಲಾದ ಸಾಮಾನ್ಯ ಅಥವಾ ಸ್ವತ್ತಿನ ಭಾಗವಾಗಿದೆ ಎಂಬಂತೆ ಅನ್ವಯಿಸತಕ್ಕದ್ದು. ಅಂತಹ ಹೆಚ್ಚಳವು ಅಂತಹ ಪೌರವಿಭಾಗಗಳಲ್ಲಿ ಅಥವಾ ಉಪವಿಭಾಗಗಳಲ್ಲಿ ಅಥವಾ ಅವುಗಳ ಭಾಗಗಳಲ್ಲಿ ಇರುವ ಸ್ವತ್ತುಗಳ ಮೇಲಿನ ಸಾಮಾನ್ಯ ಅಥವಾ ಸ್ವತ್ತಿನ ಕರದೊಂದಿಗೆ ಇರುವ ಚಾರ್ಜಾಗಿರತಕ್ಕದ್ದು.

(ii) ಅಂತಹ ಖರ್ಚನ್ನು ಮತ್ತು ಹೆಚ್ಚಿನ ಮೊಬಲಗನ್ನು 3ನೆಯ ಉಪ ಪ್ರಕರಣದ ಮೇರೆಗೆ ಅದಕ್ಕೆ ಹೊಣೆಯಾಗಿರುವ ಪ್ರತಿಯೊಬ್ಬ ವ್ಯಕ್ತಿಯಿಂದ ಸರಕಾರವು ನಿರ್ದೇಶಿಸಬಹುದಾದ ರೀತಿಯಲ್ಲಿ ವಸೂಲು ಮಾಡಿಕೊಳ್ಳಲು ಕೂಡಾ ಪೌರ ನಿಕಾಯವನ್ನು ಸರಕಾರವು ಅಗತ್ಯಪಡಿಸಬಹುದು.

(iii) ಅಂತಹ ಕರವನ್ನು ವಿಧಿಸಲು ಮತ್ತು ಪಡೆಯಲು ಅಥವಾ ಅಂತಹ ವಸೂಲಿಯನ್ನು ಮಾಡಲು ಪೌರನಿಕಾಯವು ತಪ್ಪಿದ್ದಲ್ಲಿ, ಸರಕಾರವು ಅಂತಹ ಕರವನ್ನು ವಿಧಿಸಲು ಮತ್ತು ಪಡೆಯಲ ಅಥವಾ ಅಂತಹ ವಸೂಲಿಯನ್ನು ಮಾಡಲು ಆ ರೆವಿನ್ಯೂ ಜಿಲ್ಲೆಯ ಡೆಪ್ಯೂಟಿ ಕಮೀಷನರನಿಗೆ ನಿರ್ದೇಶಿಸಬಹುದು.

(5) ಈ ಪ್ರಕರಣದ ಮೇರೆಗೆ ರೆವೆನ್ಯೂ ಜಿಲ್ಲೆಯ ಡೆಪ್ಯೂಟಿ ಕಮೀಷನರ್‌ನಿಂದ ಅಥವಾ ಇತರ ಪ್ರಾಧಿಕಾರಿಯಿಂದ ವಸೂಲಾಗುವುದಾಗಿರುವ ಪ್ರತಿಯೊಂದು ಮೊಬಲಗು ಅದಕ್ಕೆ ಹೊಣೆಯಾದ ವ್ಯಕ್ತಿಯಿಂದ ಬರಬೇಕಾದ ಭೂ ಕಂದಾಯದ ಬಾಕಿ ಎಂಬಂತೆ–ವಸೂಲು ಆಗುವುದಾಗಿರತಕ್ಕದ್ದು.

(6) ಅಂತಹ ಹೆಚ್ಚಿನ ಪೊಲೀಸಿನ ಖರ್ಚಿನ ಯಾವುದೇ ಭಾಗವನ್ನು ವಹಿಸುವ ಹೊಣೆಯಿಂದ ಯಾವೊಬ್ಬ ವ್ಯಕ್ತಿಯನ್ನು ಆದೇಶದ ಮೂಲಕ ಸರಕಾರವು ವಿನಾಯಿತಿಗೊಳಿಸುವುದು ವಿಧಿಬದ್ಧವಾಗಿರತಕ್ಕದ್ದು

(7) ಸರಕಾರವು ಈ ಪ್ರಕರಣದ ಮೇರೆಗೆ ವಿಧಿಸಿದ ಖರ್ಚಿನ ಸಂದಾಯದ ಅವಧಿಯನ್ನು ಅಂತಹ ಹೆಚ್ಚಿನ ಪೊಲೀಸರನ್ನು ವಾಸ್ತವಿಕವಾಗಿ ನಿಯೋಜಿಸಲಾದ ಅವಧಿಯಿಂದಾಚೆಗೆ ಐದು ವರುಷಗಳಿಗೆ ಹೆಚ್ಚಾಗದಂತೆ ವಿಸ್ತರಿಸುವುದು ಕಾನೂನುಬದ್ಧವಾಗಿರತಕ್ಕದ್ದು.

(8) ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ಮುಂಚೆ ಅಥವಾ ತರುವಾಯ (4)ನೆಯ ಅಥವಾ (5)ನೆಯ ಉಪಪ್ರಕರಣದ ಮೇರೆಗೆ ಪೌರನಿಕಾಯವು ವಸೂಲು ಮಾಡಿಕೊಂಡು ಒಟ್ಟು ಮೊಬಲಗಿನಿಂದ ಖರ್ಚಿನ ಮೊಬಲಗನ್ನು ಸರಕಾರಕ್ಕೆ ಸಂದಾಯ ಮಾಡತಕ್ಕದ್ದು ಮತ್ತು ಶುಲ್ಕ ಏನಾದರೂ ಉಳಿದರೆ, ಅದನ್ನು ಸಂಬಂಧಪಟ್ಟ ಪೌರಸಭಾ ಅಧಿನಿಯಮದ ಮೇರೆಗೆ ರಚಿತವಾದ ಪೌರನಿಧಿಗೆ ಜಮೆ ಮಾಡತಕ್ಕದ್ದು. ಅಂತಹ ಖರ್ಚಿನ ಮೊಬಲಗನ್ನು ಪ್ರತಿಮೂರು ತಿಂಗಳಿಗೊಂದು ಸಲ ಸರಕಾರಕ್ಕೆ ಸಂದಾಯ ಮಾಡತಕ್ಕದ್ದು.

**ವಿವರಣೆ:–** ಈ ಪ್ರಕರಣದಲ್ಲಿ ಯಾವುದೇ ಪ್ರದೇಶದ ಸಂಬಂಧದಲ್ಲಿ "ನಿವಾಸಿಗಳು' ಎಂಬ ಪದವು, ಅಂತಹ ಪ್ರದೇಶದಲ್ಲಿ ಭೂಮಿಯನ್ನು ಅಥವಾ ನಿಕರ ಸ್ಥಿರಸ್ವತ್ತನ್ನು ಸ್ವತ್ತು ಅಥವಾ ತಮ್ಮ ಅಭಿಕರ್ತರ ಅಥವಾ ನೌಕರರ ಮೂಲಕ ಅಧಿಭೋಗಿಸುವ ಅಥವಾ ಹೊಂದಿರುವ ವ್ಯಕ್ತಿಗಳನ್ನು ಮತ್ತು ಅಂಥ ಪ್ರದೇಶದಲ್ಲಿ ಇರುವ ಭೂಮಿಯನ್ನು ಹೊಂದಿರುವುದರಿಂದ ಅಥವಾ ಆಧಿಭೋಗಿಸುವವರಿಂದ ಸ್ವತಃ ಅಥವಾ ತಮ್ಮ ಅಭಿಕರ್ತರ ಅಥವಾ ನೌಕರರ ಮೂಲಕ ಗೇಣಿಯನ್ನು ವಸೂಲು ಮಾಡುವ ಭೂ ಮಾಲೀಕರನ್ನು, ಅವರು ವಾಸ್ತವಿಕವಾಗಿ ಅಲ್ಲಿ ವಾಸಿಸದಿದ್ದರೂ ಕೂಡಾ, ಒಳಗೊಳ್ಳುತ್ತದೆ.

**50. ಕಾನೂನು ವಿರುದ್ಧವಾದ ಜನ ಸಮೂಹದಿಂದ ಕ್ಷತಿಯ ಬಗ್ಗೆ ಪರಿಹಾರವನ್ನು ವಸೂಲು ಮಾಡುವ ಬಗ್ಗೆ:–** (1) ವಿಧಿವಿರುದ್ಧವಾದ ಜನಸಮೂಹದ ಸಾಂಪ್ರದಾಯಿಕ ಉದ್ದೇಶ ಸಾಧನೆಯಲ್ಲಿ ಮಾಡಿದ ಯಾವುದೇ ಕಾರ್ಯದಿಂದ ಯಾವುದೇ ಸ್ವತ್ತಿಗೆ ನಷ್ಟ ಉಂಟಾದಾಗ ಅಥವಾ ಹಾನಿಯುಂಟಾದಾಗ, ಅಥವಾ ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಮರಣ ಸಂಭವಿಸಿದಾಗ ಅಥವಾ ತೀವ್ರ ಗಾಯ ಉಂಟಾದಾಗ, ಸರಕಾರವು, ಸರಕಾರೀ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ

(ಎ) ತನ್ನ ಅಭಿಪ್ರಾಯದಲ್ಲಿ ಕಾನೂನು ವಿರುದ್ಧವಾದ ಜನ ಸಮೂಹವು ಸೇರಿದ್ದ (ಈ ಮುಂದೆ "ಗಲಭೆ ಪ್ರದೇಶ" ಎಂದು ಕರೆದಿರುವ) ಪ್ರದೇಶವನ್ನು; ಮತ್ತು

(ಬಿ) ಅಂತಹ ಕಾನೂನುವಿರುದ್ಧವಾದ ಜನ ಸಮೂಹವು ಸೇರಿದ್ದ ತಾರೀಖು ಅಥವಾ ಅವಧಿಯನ್ನ; ಉಲ್ಲೇಖಿಸಬಹುದು.

(2) (1)ನೆಯ ಉಪ ಪ್ರಕರಣದ (ಎ) ಮತ್ತು (ಬಿ) ಖಂಡಗಳ ಮೇರೆಗಿನ ಸರಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

(3) (1)ನೆಯ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿದ ಮೇಲೆ, ಜಿಲ್ಲಾ ಮ್ಯಾಜಿಸ್ಟ್ರೇಟನು ತಾನು ಅವಶ್ಯವೆಂದು ಭಾವಿಸುವ ವಿಚಾರಣೆಯ ತರುವಾಯ, ಮೇಲೆ ಹೇಳಿದ ನಷ್ಟ ಅಥವಾ ಹಾನಿ ಅಥವಾ ಮರಣ ಅಥವಾ ತೀವ್ರ ಗಾಯದ ಬಗ್ಗೆ ವ್ಯಕ್ತಿಗಳಿಗೆ ತನ್ನ ಅಭಿಪ್ರಾಯದಲ್ಲಿ ಕೊಡಬೇಕಾದ ಪರಿಹಾರದ ಮೊಬಲಗನ್ನು ನಿರ್ಧರಿಸಬಹುದು, ಪರಿಹಾರದ ಮೊಬಲಗು ಈ ಪ್ರಕರಣದ ಮೇರೆಗೆ ವಿಧಿಸಿದ ಕರವಾಗಿರತಕ್ಕದ್ದು ಮತ್ತು ಮುಂಬರುವ ಉಪಪ್ರಕರಣಗಳಲ್ಲಿ ನಿಯಮಿಸಿದ ರೀತಿಯಲ್ಲಿ ವಸೂಲು ಮಾಡಕೊಳ್ಳಲ್ಪಡತಕ್ಕದ್ದು.

(1) ಜಿಲ್ಲಾ ಮ್ಯಾಜಿಸ್ಟ್ರೇಟನು :–

(ಎ) ಗಲಭೆ ಪ್ರದೇಶವು, ಪೌರನಿಕಾಯದ ಅಧಿಕಾರ ವ್ಯಾಪ್ತಿಯಲ್ಲಿದ್ದರೆ, ಪೌರ ನಿಕಾಯವು, ಆ ರೆವಿನ್ಯೂ ಜಿಲ್ಲೆಯ ಡೆಪ್ಯೂಟಿ ಕಮೀಷನರನನ್ನು ಅಥವಾ ಇತರ ಯಾವುದೇ ಪ್ರಾಧಿಕಾರಿಯನ್ನು;

(ಬಿ) (ಎ) ಖಂಡದಲ್ಲಿ ಉಲ್ಲೇಖಿಸಿದ ಪ್ರದೇಶದ ಹೊರಗಿರುವ ಯಾವುದೇ ಗಲಭೆ ಪ್ರದೇಶದಲ್ಲಿ ಆ ರೆವಿನ್ಯೂ ಜಿಲ್ಲೆಯ ಡೆಪ್ಯೂಟಿ ಕಮೀಷನರನನ್ನು ಅಥವಾ ಇತರ ಯಾವುದೇ ಪ್ರಾಧಿಕಾರಿಯನ್ನು;

– (3)ನೆಯ ಉಪಪ್ರಕರಣದ ಮೇರೆಗೆ ನಿರ್ಧರಿಸಲಾದ (ಈ ಮುಂದೆ "ಪರಿಹಾರದ ಮೊಬಲಗು" ಎಂದು ಕರೆದಿರುವ) ಮೊಬಲಗನ್ನು, ಪೂರ್ತಿಯಾಗಿ ಅಥವಾ ಭಾಗಶಃ ಮತ್ತು ಪೌರನಿಕಾಯವು ಅಂಥ ಮೊಬಲಗನ್ನು ವಸೂಲು ಮಾಡಿಕೊಳ್ಳಲು ಅಗತ್ಯಪಡಿಸಲ್ಪಟ್ಟಿರುವಲ್ಲಿ, ಮೊಬಲಗಿನ ಶೇಕಡಾ 3ಕ್ಕೆ ಮೀರದಷ್ಟು (ಈ ಮುಂದೆ "ಪೌರ ವಸೂಲಿ ಖರ್ಚು" ಎಂದು ನಿರ್ದೇಶಿಸಿರುವ) ಹೆಚ್ಚಿನ ಮೊಗಲಗನ್ನು, ಗಲಭೆ ಪ್ರದೇಶದ ನಿವಾಸಿಗಳಾದ ಸಾಮಾನ್ಯವಾಗಿ ಎಲ್ಲ ವ್ಯಕ್ತಿಗಳಿಂದ ಅಥವಾ ವಿಶೇಷವಾಗಿ ಜಿಲ್ಲಾ ಮ್ಯಾಜಿಸ್ಟ್ರೇಟನು

ನಿರ್ದೇಶಿಸುವಂತಹ ಸದರಿ ಪ್ರದೇಶದಲ್ಲಿರುವ ಯಾವುದೇ ನಿರ್ದಿಷ್ಟ ಪಂಗಡ ಅಥವಾ ಪಂಗಡದವರು ಅಥವಾ ಅಂತಹ ವ್ಯಕ್ತಿಗಳ ವರ್ಗ ಅಥವಾ ವರ್ಗಗಳಿಂದ ಮತ್ತು ಅಂತಹ ದಾಮಾಷೆಯಲ್ಲಿ, ವಸೂಲು ಮಾಡಲು ಅಗತ್ಯಪಡಿಸಬಹುದು.

(5) (I) ಜಿಲ್ಲಾ ಮ್ಯಾಜಿಸ್ಟ್ರೇಟನು, ಪರಿಹಾರ ಮೊಬಲಗನ್ನು ಮತ್ತು ಪೌರ ನಿಕಾಯದ ವಸೂಲಿ ಖರ್ಚನ್ನು, ಗಲಭೆ ಪ್ರದೇಶದಲ್ಲಿ ವಿಧಿಸಬಹುದಾದ ಮತ್ತು ಪಡೆಯಬಹುದಾದ ಸಾಮಾನ್ಯ ಅಥವಾ ಸ್ವತ್ತಿನ ಕರಕ್ಕೆ ಅದನ್ನು ಹೆಚ್ಚಿಸುವುದರ ಮೂಲಕ ವಸೂಲು ಮಾಡಿಕೊಳ್ಳಲು ಸಂಬಂಧಪಟ್ಟ ಪೌರನಿಕಾಯವನ್ನು ಅಗತ್ಯಪಡಿಸಬಹುದು. ಈ ಉಪಪ್ರಕರಣದ ಮೇರೆಗೆ ಸಾಮಾನ್ಯ ಅಥವಾ ಸ್ವತ್ತಿನ ಕರಕ್ಕೆ ವಿಧಿಸಲಾದ ಪ್ರತಿಯೊಂದು ಹೆಚ್ಚಳವನ್ನು ಅದಕ್ಕೆ ಹೊಣೆಯಾಗಿರುವ ಪ್ರತಿಯೊಬ್ಬ ವ್ಯಕ್ತಿಯಿಂದ ಬರಬೇಕಾದ ಸಾಮಾನ್ಯ ಅಥವಾ ಸ್ವತ್ತಿನ ಕರದ ರೀತಿಯಲ್ಲಿಯೇ, ಸಂಬಂಧಪಟ್ಟ ಪೌರನಿಕಾಯವು ವಸೂಲು ಮಾಡಿಕೊಳ್ಳತಕ್ಕದ್ದು. ಸಂಬಂಧಪಟ್ಟ ಪೌರ ಸಭಾ ಅಧಿನಿಯಮದ ಉಪಬಂಧಗಳು ಯಾವುದೇ ಅಂತಹ ಹೆಚ್ಚಳಕ್ಕೆ ಸಂಬಂಧಪಟ್ಟ ಪೌರ ಸಭಾ ಅಧಿನಿಯಮದ ಮೇರೆಗೆ ವಿಧಿಸಲಾಗುವ ಸಾಮಾನ್ಯ ಅಥವಾ ಸ್ವತ್ತಿನ ಕರದ ಭಾಗವೆಂಬಂತೆ ಅನ್ವಯಿಸತಕ್ಕದ್ದು. ಅಂತಹ ಹೆಚ್ಚಳವೂ, ಸದರಿ ಪ್ರದೇಶದಲ್ಲಿರುವ ಸ್ವತ್ತುಗಳ ಮೇಲಿನ ಸಾಮಾನ್ಯ ಅಥವಾ ಸ್ವತ್ತಿನ ಕರದೊಂದಿಗೆ ಚಾರ್ಜಾಗಿರತಕ್ಕದ್ದು.

(ii) ಜಿಲ್ಲಾ ಮ್ಯಾಜಿಸ್ಟ್ರೇಟು, (4)ನೆಯ ಉಪಪ್ರಕರಣದ ಮೇರೆಗೆ ಪರಿಹಾರದ ಮೊಬಲಗನ್ನು ಮತ್ತು ಪೌರಸಭಾ ವಸೂಲಿ ಖರ್ಚನ್ನು ಹೊಣೆಗಾರನಾಗಿರುವ ಪ್ರತಿಯೊಬ್ಬ ವ್ಯಕ್ತಿಯಿಂದ ಸಂಬಂಧಪಟ್ಟ ಪೌರನಿಕಾಯವು ತಾನು ನಿರ್ದೇಶಿಸಬಹುದಾದಂತಹ ರೀತಿಯಲ್ಲಿ ಪೌರ ವಸೂಲು ಮಾಡಬೇಕೆಂದು ಅಗತ್ಯಪಡಿಸಲೂಬಹುದು.

(6) ಪೌರನಿಕಾಯವು ಅಂಥ ಯಾವುದೇ ಕರವನ್ನು ವಿಧಿಸಲು ಮತ್ತು ಪಡೆಯಲು ಅಂತಹ ವಸೂಲಿಯನ್ನು ಮಾಡಲು ತಪ್ಪಿದರೆ, ಸರಕಾರವು, ಆ ಜಿಲ್ಲೆಯ ಡೆಪ್ಯೂಟಿ ಕಮೀಷನರನಿಗೆ ಅಂತಹ ಕರವನ್ನು ವಿಧಿಸಲು ಮತ್ತು ಪಡೆಯುವ ಅಥವಾ ಅಂತಹ ವಸೂಲಿಯನ್ನು ಮಾಡಲು ನಿರ್ದೇಶಿಸಬಹುದು.

(7) ರೆವಿನ್ಯೂ ಜಿಲ್ಲೆಯ ಡೆಪ್ಯೂಟಿ ಕಮೀಷನರನಿಂದ ಅಥವಾ ಈ ಪ್ರಕರಣದ ಮೇರೆಗೆ ಇತರ ಪ್ರಾಧಿಕಾರಿಯಿಂದ ವಸೂಲು ಆಗಬೇಕಾದ ಪ್ರತಿಯೊಂದು ಮೊಬಲಗು, ಭೂ ಕಂದಾಯದ ಬಾಕಿ ಎಂಬಂತೆ ವಸೂಲು ಆಗಿರುವುದಾಗಿರತಕ್ಕದ್ದು.

(8) (5) ಅಥವಾ (6)ನೆಯ ಉಪಪ್ರಕರಣದ ಮೇರೆಗೆ ಪೌರನಿಕಾಯದಿಂದ ವಸೂಲು ಮಾಡಲಾದ ಒಟ್ಟು ಮೊಬಲಗಿನಲ್ಲಿ ಪೌರಸಭಾ ವಸೂಲಿ ಖರ್ಚನ್ನು ಅದರ ದಾಮಾಷಾ ಪ್ರಮಾಣದಲ್ಲಿ ಮುರಿದುಕೊಳ್ಳತಕ್ಕದ್ದು ಮತ್ತು (3)ನೆಯ ಉಪಪ್ರಕರಣದ ಮೇರೆಗೆ ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ನಿರ್ಧರಿಸಲಾದ ಪರಿಹಾರ ಮೊಬಲಗಿಗಿಂತ ಹೆಚ್ಚಲ್ಲದ ಮೊಬಲಗನ್ನು ಅದಕ್ಕೆ ಹಕ್ಕುಳ್ಳವರಾಗಿರುವ ವ್ಯಕ್ತಿಗಳಿಗೆ ಪರಿಹಾರದ ಸಂದಾಯದ ಸಲುವಾಗಿ ಅವನಿಗೆ ಕೊಡತಕ್ಕದ್ದು ಮತ್ತು ಉಳಿಕೆ ಏನಾದರೂ ಇದ್ದರೆ, ಅದನ್ನು ಸಂಬಂಧಪಟ್ಟ ಪೌರಸಭಾ ಅಧಿನಿಯಮದ ಮೇರೆಗೆ ರಚಿತವಾದ ಪೌರನಿಧಿಗೆ ಜಮೆ ಮಾಡತಕ್ಕದ್ದು. ಅಂಥ ಮೊಬಲಗು ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ಸಂದಾಯವಾಗತಕ್ಕದ್ದು.

(9) ಜಿಲ್ಲಾ ಮ್ಯಾಜಿಸ್ಟ್ರೇಟನು ಪರಿಹಾರ ಮೊಬಲಗಿನ ಯಾವುದೇ ಅಂಶದ ಸಂದಾಯದ ಹೊಣೆಯಿಂದ ಯಾವನೇ ವ್ಯಕ್ತಿಯನ್ನು ಆದೇಶದ ಮೂಲಕ ವಿನಾಯಿತಿಗೊಳಿಸುವುದು ವಿಧಿಬದ್ಧವಾಗಿರತಕ್ಕದ್ದು.

(10) ಸರಕಾರವು, (ಎ) ತಾನಾಗಿಯೇ, ಅಥವಾ (ಬಿ) ಜಿಲ್ಲಾ ಮ್ಯಾಜಿಸ್ಟ್ರೇಟನು ವಿನಾಯಿತಿಯನ್ನು ಮಂಜೂರು ಮಾಡುವ ಅಥವಾ ನಿರಾಕರಿಸುವ ಆದೇಶವನ್ನು ಮಾಡಿದ ತಾರೀಖಿನಿಂದ ಮೂವತ್ತು

ದಿನಗಳೊಳಗಾಗಿ ಯಾವೊಬ್ಬ ವ್ಯಕ್ತಿಯ ಮಾಡಿದ ಆವೇಧನದ ಮೇಲೆ, ಅಂತಹ ಆದೇಶವನ್ನು ತಳ್ಳಿಹಾಕಬಹುದು ಅಥವಾ ಮಾರ್ಪಡಿಸಬಹುದು.

**ವಿವರಣೆ :–** ಈ ಪ್ರಕರಣದಲ್ಲಿ ಯಾವುದೇ ಗಲಭೆ ಪ್ರದೇಶದ ಸಂಬಂಧದಲ್ಲಿ "ನಿವಾಸಿಗಳು' ಎಂಬ ಪದವು, ಅಂತಹ ಪ್ರದೇಶದಲ್ಲಿ ಭೂಮಿಯನ್ನು ಅಥವಾ ಇತರ ಸ್ಥಿರ ಸ್ವತ್ತನ್ನು ಸ್ವಂತ ಅಥವಾ ತಮ್ಮ ಅಭಿಕರ್ತರ ಅಥವಾ ನೌಕರರ ಮೂಲಕ ಆಧಿಭೋಗಿಸುವ ಅಥವಾ ಹೊಂದಿರುವ ವ್ಯಕ್ತಿಗಳನ್ನು ಮತ್ತು ಅಂಥ ಪ್ರದೇಶದಲ್ಲಿ ಇರುವ ಭೂಮಿಯನ್ನು ಹೊಂದಿರುವುದರಿಂದ ಅಥವಾ ಆಧಿಭೋಗಿಸುವವರಿಂದ ಸ್ವತಃ ಅಥವಾ ತಮ್ಮ ಅಭಿಕರ್ತರ ಅಥವಾ ನೌಕರರ ಮೂಲಕ ಗೇಣಿಯನ್ನು ವಸೂಲು ಮಾಡಲು ಭೂ ಮಾಲೀಕರನ್ನು, ಅವರು ವಾಸ್ತವಿಕವಾಗಿ ಅಲ್ಲಿ ವಾಸಿಸದಿದ್ದರೂ ಕೂಡ ಒಳಗೊಳ್ಳುತ್ತದೆ.

**51. ವ್ಯಕ್ತಿಗಳಿಗೆ ಜಿಲ್ಲಾ ಮ್ಯಾಜಿಸ್ಟ್ರೇಟನು ಪರಿಹಾರವನ್ನು ಕೊಡುವುದು ಅಥವಾ ಹಂಚುವುದು :–** (1) 50ನೆಯ ಪ್ರಕರಣದ (3) ರಿಂದ (8) ರ ವರೆಗಿನ ಉಪ ಪ್ರಕರಣಗಳ ಮೇರೆಗೆ ಪರಿಹಾರವೆಂದು ವಸೂಲು ಮಾಡಲಾದ ಎಲ್ಲ ಅಥವಾ ಯಾವುದೇ ಮೊಬಲಗುಗಳನ್ನು ಸದರಿ ನಷ್ಟ ಅಥವಾ ಹಾನಿ ಅಥವಾ ಮರಣ ಅಥವಾ ತೀವ್ರಗಾಯದ ಸಂಬಂಧದ ಪರಿಹಾರಕ್ಕೆ ತಾನು ಹಕ್ಕುಳ್ಳವರೆಂದು ಜಿಲ್ಲಾ ಮ್ಯಾಜಿಸ್ಟ್ರೇಟನು ಭಾವಿಸುವ ಯಾವನೇ ವ್ಯಕ್ತಿಗೆ ಅಥವಾ ಎಲ್ಲ ಅಥವಾ ಯಾವುದೇ ವ್ಯಕ್ತಿಗಳಿಗೆ ಅವನು ಕೊಡುವುದು ಅಥವಾ ಹಂಚುವುದು ವಿಧಿಬದ್ಧವಾಗಿರತಕ್ಕದ್ದು.

(2) 50ನೆಯ ಪ್ರಕರಣದ (1)ನೆಯ ಉಪಪ್ರಕರಣದ ಮೇರೆಗೆ ಸರಕಾರವು, ಅಧಿಸೂಚನೆ ಹೊರಡಿಸಿದ ತಾರೀಖನಿಂದ ನಲವತ್ತೈದು ದಿನಗಳೊಗಳಗಾಗಿ ಕ್ಲೇಮು ಮಾಡಿದಲ್ಲದೆ ಮತ್ತು ಅಂತಹ ಪರಿಹಾರವನ್ನು ಕೇಳುವ ವ್ಯಕ್ತಿಯು ಅಥವಾ ಯಾವನೇ ವ್ಯಕ್ತಿಯ ಮರಣದ ಸಂಬಂಧದಲ್ಲಿ ಅಂತಹ ಕ್ಲೇಮು ಮಾಡುತ್ತಿರುವಲ್ಲಿ, ಆ ವ್ಯಕ್ತಿಯೂ ಕೂಡಾ ಸದರಿ ನಷ್ಟ ಹಾನಿ, ಮರಣ ಅಥವಾ ತೀವ್ರಗಾಯ ಇವುಗಳಿಗೆ ಕಾರಣನಾದ ಪ್ರಸಂಗಗಳ ಬಗ್ಗೆ ಅಪವಾದದಿಂದ ಮುಕ್ತನಾಗಿದ್ದಾನೆಂದು ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದ ಹೊರತು, ಈ ಪ್ರಕರಣದ ಮೇರೆಗೆ ಯಾವ ಪರಿಹಾರವನ್ನು ಕೊಡತಕ್ಕದ್ದಲ್ಲ.

(3) ಮರಣ ಅಥವಾ ತೀವ್ರಗಾಯದ ಸಂಬಂಧದಲ್ಲಿ 50ನೆಯ ಪ್ರಕರಣದ ಮೇರೆಗೆ ಯಾವನೇ ವ್ಯಕ್ತಿಗೆ ಸಂದೇಯವಿರುವ ಪರಿಹಾರವು ಯಾವರೀತಿಯಲ್ಲಿಯೂ ವರ್ಗಾಯಿಸುತಕ್ಕದ್ದಲ್ಲ; ಅಥವಾ ಹೊಣೆಗೀಡಾಗತಕ್ಕದ್ದಲ್ಲ ಅಥವಾ ಜಪ್ತಿಗೆ ಗುರಿಯಾಗತಕ್ಕದ್ದಲ್ಲ ಅಥವಾ ವಿಧಿಪ್ರವರ್ತನೆಯಿಂದ ಅದಕ್ಕೆ ಹಕ್ಕುಳ್ಳವನಲ್ಲದ ಯಾವನೇ ವ್ಯಕ್ತಿಗೆ ದೊರೆಯತಕ್ಕದ್ದಲ್ಲ ಅಥವಾ ಅದನ್ನು ಯಾವುದೇ ಕ್ಲೇಮಿನ ಬಗ್ಗೆ ವಜಾ ಮಾಡಿಕೊಳ್ಳತಕ್ಕದ್ದಲ್ಲ.

(4) ಈ ಅಥವಾ ಹಿಂದಿನ ಪ್ರಕರಣದ ಮೇರೆಗೆ ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ಮಾಡಲಾದ ಪ್ರತಿಯೊಂದು ನಿದೇಶವು ಮತ್ತು ಆದೇಶವು ಸರಕಾರದ ಪುನರೀಕ್ಷಣೆಗೆ ಒಳಪಟ್ಟಿರತಕ್ಕದ್ದು ಆದರೆ, ಮೇಲೆ ಹೇಳಿದುದನ್ನುಳಿದು ಅದು ಅಂತಿಮವಾಗಿರತಕ್ಕದ್ದು.

(5) ಈ ಪ್ರಕರಣದ ಮೇರೆಗೆ ಯಾವುದೇ ನಷ್ಟ, ಅಥವಾ ಕ್ಷತಿಯ ಬಗ್ಗೆ ಪರಿಹಾರವನ್ನು ಕೊಡಲಾಗಿದೆಯೋ ಅದರ ಸಂಬಂಧದಲ್ಲಿ ಸರಕಾರದ ಅಥವಾ ಸರಕಾರದ ಯಾವನೇ ಅಧಿಕಾರಿಯ ವಿರುದ್ಧ ಯಾವ ಸಿವಿಲ್ ದಾವೆಯೂ ನಡೆಯತಕ್ಕದ್ದಲ್ಲ.

**52. ಜಿಲ್ಲಾ ಮ್ಯಾಜಿಸ್ಟ್ರೇಟನು ಸರಕಾರದ ಆದೇಶಗಳ ಮೇರೆಗೆ ಪ್ರಕಾರ್ಯಗಳನ್ನು ನೆರೆವೇರಿಸುವುದು :–** ಜಿಲ್ಲಾ ಮ್ಯಾಜಿಸ್ಟ್ರೇಟನು, ಈ ಬಗ್ಗೆ ಸರಕಾರದ ಯಾವುದೇ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು 50 ಮತ್ತು 51ನೆಯ ಪ್ರಕರಣಗಳ ಮೇರೆಗೆ ತನ್ನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

**53. ಹೆಚ್ಚಿನ ಪೊಲೀಸಿನ ಖರ್ಚಿನ ಮತ್ತು ವಿಧಿವಿರುದ್ಧ ಜನ ಸಮೂಹ ಸೇರಿರುವುದರಿಂದುಂಟಾದ ನಷ್ಟದ ಬಗೆಗಿನ ಪರಿಹಾರದ ದಾಮಾಷಾ ವಸೂಲಿ :–** (1) ಮನೆಬಾಡಿಗೆ ಮತ್ತು ಸ್ಥಳಾವಕಾಶ ನಿಯಂತ್ರಣಕ್ಕೆ ಸಂಬಂಧಿಸಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, 49ನೆಯ ಪ್ರಕರಣದ (4)ನೆಯ ಉಪಪ್ರಕರಣದಲ್ಲಿ ನಿರ್ದೇಶಿಸಿರುವ ಹೆಚ್ಚಿನ ಮೊಬಲಗು ಒಳಗೊಂಡು ಹೆಚ್ಚಿನ ಪೊಲೀಸಿನ ಖರ್ಚನ್ನು (ಈ ಮುಂದೆ "ಹೆಚ್ಚು ಖರ್ಚು" ಎಂದು ಕರೆದಿರುವ) ಅಥವಾ ಪರಿಹಾರದ ಮೊಬಲಗು ಮತ್ತು ಪೌರಸಭಾ ವಸೂಲಿ ಖರ್ಚು (ಈ ಮುಂದೆ "ದೊಂಬಿಕರ" ಎಂದು ಕರೆದಿರುವ) ಇವುಗಳನ್ನು 49 ಅಥವಾ 50ನೆಯ ಪ್ರಕರಣಗಳ ಉಪಬಂಧಗಳ ಮೇರೆಗೆ ಸಾಮಾನ್ಯ ಅಥವಾ ಸ್ವತ್ತಿನ ಕರಕ್ಕೆ ಹೆಚ್ಚುಗೆಯಾಗಿ ಸಂದರ್ಭಾನುಸಾರ ಪೌರನಿಕಾಯವು ಅಥವಾ ಆ ರೆವೆನ್ಯೂ ಜಿಲ್ಲೆಯ ಡೆಪ್ಯೂಟಿ ಕಮೀಷನರು ವಸೂಲು ಮಾಡಿಕೊಳ್ಳುವುದು ಅಗತ್ಯವಿದ್ದಲ್ಲಿ ಯಾವುದೇ ಆವರಣದ ಬಗ್ಗೆ ಹೆಚ್ಚಿನ ಖರ್ಚಿನ ಅಥವಾ ದೊಂಬಿಕರದ ಏನೊಂದು ಭಾಗವನ್ನು ಭೂಮಾಲೀಕನಿಂದ ವಸೂಲು ಮಾಡಿ ಕೊಂಡಿರುವಲ್ಲಿ ಅವನು ಅಂಥ ಭಾಗದ ಶೇಕಡಾ 75 ರಷ್ಟನ್ನು ಸಂದರ್ಭಾನುಸಾರ 49ನೆಯ ಪ್ರಕರಣದ (1)ನೆಯ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಲಾದ ಅವಧಿಯಲ್ಲಿ ಅಥವಾ 50ನೆಯ ಪ್ರಕರಣದ (1)ನೆಯ ಉಪಪ್ರಕರಣದ (ಖ) ಖಂಡದಲ್ಲಿ ಉಲ್ಲೇಖಿಸಲಾದ ತಾರೀಖಿನಂದು ಅಥವಾ ಆ ಅವಧಿಯ ಬಹುಭಾಗದಲ್ಲಿ ಅಂತಹ ಆವರಣದ ಆಧಿಭೋಗದಲ್ಲಿರುವ ಬಾಡಿಗೆದಾರನಿಂದ (2)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ರೀತಿಯಲ್ಲಿ ವಸೂಲು ಮಾಡಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

(2) (1)ನೆಯ ಉಪಪ್ರಕರಣದಲ್ಲಿ ನಿರ್ದೇಶಿಸಲಾದ ಮೊಬಲಗು ಮತ್ತು ಅದರಲ್ಲಿ ನಿರ್ದೇಶಿಸಿದ ಬಾಡಿಗೆದಾರನಿಂದ ವಸೂಲು ಆಗಬೇಕಾದ ಮೊಬಲಗು, ಅವನು ತಾನು ಆಧಿಭೋಗದಲ್ಲಿದ್ದ ಆವರಣದ ಬಗ್ಗೆ ಸಂದಾಯ ಮಾಡಬೇಕಾದ ಬಾಡಿಗೆಯು ಪೂರ್ತಿ ಆವರಣವನ್ನು ಬಾಡಿಗೆಗೆ ಕೊಟ್ಟಿದ್ದರೆ ವಸೂಲು ಮಾಡಿಕೊಳ್ಳುತ್ತಿದ್ದ ಒಟ್ಟು ಬಾಡಿಗೆಯ ಮೊಬಲಗಿಗೆ ಇರುವ ದಾಮಾಷಾ ಪ್ರಮಾಣದಲ್ಲಿಯೇ ಇರತಕ್ಕದ್ದು, ಮತ್ತು ಅದು ಸಮನಾದ ನಾಲ್ಕು ಕಂತುಗಳಿಗೆ ಕಡಿಮೆ ಇಲ್ಲದಂತೆ ವಸೂಲು ಮಾಡಿಕೊಳ್ಳುವುದಾಗಿರತಕ್ಕದ್ದು.

**54. (ii) ಗುಂಪುಗಳನ್ನು ಚದುರಿಸುವುದು ಮತ್ತು ಕೆಲವು ಅಪರಾಧಿಗಳ ಸಿದ್ಧ ದೋಷಿಗಳಾದ ವ್ಯಕ್ತಿಗಳನ್ನು ಸಾಗಿಸುವುದು :–** ಕೂಟಗಳನ್ನು ಮತ್ತು ಜನಸಮೂಹಗಳನ್ನು ಚದುರಿಸುವುದು ಬೆಂಗಳೂರು ನಗರದಲ್ಲಿ ಮತ್ತು 7ನೆಯ ಉಪಪ್ರಕರಣದ ಮೇರೆಗೆ ಕಮೀಷನರ್‌ನನ್ನು ನೇಮಕ ಮಾಡಲಾದ ಪ್ರದೇಶದಲ್ಲಿ ಕಮೀಷನರನಿಗೆ ಮತ್ತು ಜಿಲ್ಲೆಯಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ, ಮ್ಯಾಜಿಸ್ಟ್ರೇಟನಿಗೆ ಅಥವಾ ಈ ಬಗ್ಗೆ ಸರ್ಕಾರದಿಂದ ವಿಶೇಷವಾಗಿ ಶಕ್ತಗೊಳಿಸಲಾದ ಸೂಪರಿಂಟೆಂಡೆಂಟನಿಗೆ ತನ್ನ ಚಾರ್ಜಿನಲ್ಲಿರುವ ಪ್ರದೇಶದಲ್ಲಿ ಯಾವುದೇ ಗುಂಪು ಅಥವಾ ಜನಗಳ ಸಮೂಹವು ಮುಕ್ಕಾಮು ಮಾಡುವುದರ ಮೂಲಕ ಅದರ ಚಲನವು ಅಪಾಯವನ್ನು ಅಥವಾ ಭಯವನ್ನುಂಟುಮಾಡುವುದು ಅಥವಾ ಅಂತಹ ಗುಂಪು ಅಥವಾ ಸಮೂಹವು ಅಥವಾ ಅದರ ವ್ಯಕ್ತಿಗಳು ವಿಧಿವಿರುದ್ಧವಾದ ಯುಕ್ತಿಗಳನ್ನು ಹೊಂದಿದವರಾಗಿದ್ದಾರೆಂಬ ಯುಕ್ತ ಸಂಶಯವನ್ನುಂಟುಮಾಡುವುದು ಅಥವಾ ಉಂಟು ಮಾಡುವ ಉದ್ದೇಶವಿರುವುದು, ಕಂಡುಬಂದರೆ ಅಂತಹ ಅಧಿಕಾರಿಯು ಅಂತಹ ಗುಂಪಿನ ಅಥವಾ ಸಮೂಹದ ನಾಯಕರು ಅಥವಾ ಮುಖ್ಯಸ್ಥರು ಎಂದು ಕಂಡು ಬಂದರೆ ಅಂತಹ ಅಧಿಕಾರಿಯು ಅಂತಹ ಗುಂಪಿನ ಅಥವಾ ಸಮೂಹದ ನಾಯಕರು ವ್ಯಕ್ತಿಗಳಿಗೆ ಸಂಬೋಧಿಸಿದ ಅಧಿಸೂಚನೆಯ ಮೂಲಕ ಹತ್ತು ಡಂಗುರದ ಮೂಲಕ ಅಥವಾ ಅಂತಹ ಅಧಿಕಾರಿಯು ಉಚಿತವೆಂದು ಭಾವಿಸುವಂತಹ ರೀತಿಯಲ್ಲಿ ಅದನ್ನು ಪ್ರಸಿದ್ಧಿಪಡಿಸುವುದರ ಮೂಲಕ ಹಿಂಸೆ ಅಥವಾ ಭಯವನ್ನು ನಿವಾರಿಸಲು ಅವಶ್ಯವೆಂದು ತೋರುವ ರೀತಿಯಲ್ಲಿ

ಅಂತಹ ಗುಂಪಿನ ಅಥವಾ ಸಮೂಹದ ವ್ಯಕ್ತಿಗಳು ವರ್ತಿಸಬೇಕೆಂದು ಅಥವಾ ಚದುರಬೇಕೆಂದು ಮತ್ತು ಅವರಲ್ಲಿ ಪ್ರತಿಯೊಬ್ಬರು ಅಂತಹ ಅಧಿಕಾರಿಯ ಅಧಿಕಾರ ವ್ಯಾಪ್ತಿಗೊಳಪಟ್ಟಿರುವ ಸ್ಥಳೀಯ ಪರಿಮಿತಿಯಿಂದ ಅಥವಾ ಅದಕ್ಕೆ ಹೊಂದಿಕೊಂಡಿರುವ ಪ್ರದೇಶ ಮತ್ತು ಜಿಲ್ಲೆ ಅಥವಾ ಜಿಲ್ಲೆಗಳು ಅಥವಾ ಅವುಗಳ ಯಾವುದೇ ಭಾಗ ಇವುಗಳಿಂದ ಅವನು ಉಲ್ಲೇಖಿಸಬಹುದಾದಂತಹ ಕಾಲದೊಳಗಾಗಿ ಹೊರಗೆ ಹೋಗಬೇಕೆಂದು ಮತ್ತು ಸಂದರ್ಭಾನುಸಾರ ಅಂತಹ ಪ್ರದೇಶ ಅಥವಾ ಪ್ರದೇಶಗಳ ಮತ್ತ ಅವುಗಳಿಗೆ ಹೊಂದಿಕೊಂಡಿರುವ ಜಿಲ್ಲೆ ಅಥವಾ ಜಿಲ್ಲೆಗಳ ಒಳಗೆ ಪ್ರವೇಶಿಸಬಾರದೆಂದು ಮತ್ತು ಯಾವ ಸ್ಥಳದಿಂದ ಹೊರಗೆಹೋಗಬೇಕೆಂದು ಆದೇಶವಾಗಿತ್ತೋ ಆ ಸ್ಥಳಕ್ಕೆ ಪುನಃ ಬರಕೂಡದೆಂದು ನಿರ್ದೇಶಿಸಬಹುದು.

**55. ಅಪರಾಧಗಳನ್ನು ಮಾಡಲಿರುವ ವ್ಯಕ್ತಿಗಳನ್ನು ಸಾಗಿಸುವುದು :–** ಬೆಂಗಳೂರು ನಗರದಲ್ಲಿ ಮತ್ತು 7ನೆಯ ಪ್ರಕರಣದ ಮೇರೆಗೆ ಕಮೀಷನರ್‌ನ್ನು ನೇಮಕ ಮಾಡಿದ ಇತರೆ ಪ್ರದೇಶಗಳಲ್ಲಿ, ಕಮೀಷನರನಿಗೆ, ಮತ್ತು ಸರಕಾರವು ಅಧಿಸೂಚನೆಯಿಂದ ಈ ಪ್ರಕರಣದ ಉಪಬಂಧವನ್ನು ಅನ್ವಯಿಸುವ ಇತರ ಪ್ರದೇಶ ಅಥವಾ ಪ್ರದೇಶಗಳಲ್ಲಿ, ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ, ಅಥವಾ ಅಧಿಕಾರ ವ್ಯಾಪ್ತಿಯುಳ್ಳ ಮತ್ತು ಈ ಬಗ್ಗೆ ವಿಶೇಷವಾಗಿ ಸರಕಾರದಿಂದ ಶಕ್ತಗೊಳಿಸಲಾದ ಸಬ್–ಡಿವಿಜನಲ್ ಮ್ಯಾಜಿಸ್ಟ್ರೇಟನಿಗೆ,

(ಎ) ಯಾವನೇ ವ್ಯಕ್ತಿಯ ಚಲನಗಳು ಅಥವಾ ಕಾರ್ಯಗಳು ವ್ಯಕ್ತಿಗೆ ಅಥವಾ ಸ್ವತ್ತಿಗೆ ಭಯ, ಅಪಾಯ ಅಥವಾ ಹಾನಿಯುಂಟು ಮಾಡುತ್ತಿವೆ ಅಥವಾ ಮಾಡುವಂತಿವೆಯೆಂದು; ಅಥವಾ

(ಬಿ) ಅಂಥ ವ್ಯಕ್ತಿಯು ಬಲಪ್ರಯೋಗ ಅಥವಾ ಹಿಂಸೆಯನ್ನೊಳಗೊಂಡ ಯಾವುದೇ ಅಪರಾಧವನ್ನು ಅಥವಾ ಭಾರತೀಯ ದಂಡನೀತಿ ಸಂಹಿತೆಯ XII, XVI ಅಥವಾ XVII ಅಧ್ಯಾಯದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಮಾಡುವಲ್ಲಿ ಅಂಥ ಅಪರಾಧಕ್ಕೆ ಪರೋಕ್ಷ ಸಹಾಯ ನೀಡುವಲ್ಲಿ ತೊಡಗಿದ್ದಾನೆಂದು ಅಥವಾ ತೊಡಗಿರುವನೆಂದು ಮತ್ತು ಅಂಥ ಅಧಿಕಾರಿಯ ಅಭಿಪ್ರಾಯದಲ್ಲಿ ಅಂಥ ವ್ಯಕ್ತಿಯಿಂದ ತಮಗೆ ಅಥವಾ ತಮ್ಮ ಸ್ವತ್ತಿನ ಸುರಕ್ಷತೆಯ ಬಗ್ಗೆ ಭಯವುಂಟಾಗುವ ಕಾರಣದಿಂದ ಸಾಕ್ಷ್ಯ ಕೊಡುವುದಕ್ಕೆ ಅವನ ವಿರುದ್ಧವಾಗಿ ಬಹಿರಂಗವಾಗಿ ಸಾಕ್ಷ್ಯ ಕೊಡುವುದಕ್ಕೆ ಮುಂದೆ ಬರಲು ಸಿದ್ಧವಿದೆಯೆಂದು; ಅಥವಾ

(ಸಿ) ಯಾವನೇ ವಲಸೆಗಾರನು ನಿರಂತರವಾಗಿ ವಾಸಿಸುವ ಕಾರಣ ಸಾಂಕ್ರಾಮಿಕ ರೋಗವು ತಲೆದೋರುವ ಸಂಭವವಿದೆಯೆಂದು ಕಂಡುಬಂದರೆ, ಆ ಅಧಿಕಾರಿಯು, ಆ ವ್ಯಕ್ತಿಗೆ ಲಿಖಿತ ಆದೇಶವನ್ನು ಸರಿಯಾಗಿ ತಲುಪಿಸಿ, ಅಥವಾ ಡಂಗುರದ ಮೂಲಕ ತಾನು ಉಚಿತವೆಂದು ಭಾವಿಸುವ ಬೇರೆ ರೀತಿಯಲ್ಲಿ ತಿಳಿಸಿ, ಅಂಥ ವ್ಯಕ್ತಿಯು ಅಥವಾ ವಲಸೆಗಾರನು ಹಿಂಸೆ, ಭಯ ಉಂಟಾಗದಂತೆ ಅಥವಾ ಅಂಥ ರೋಗವು ತಲೆದೋರದಂತೆ ಅಥವಾ ಹರಡದಂತೆ ತಡೆಯಲು ಅವಶ್ಯವೆನಿಸುವ ರೀತಿಯಲ್ಲಿ ವರ್ತಿಸಬೇಕೆಂದು ಅಥವಾ ತನ್ನ ಸ್ಥಳೀಯ ಅಧಿಕಾರ ವ್ಯಾಪ್ತಿಗೊಳಪಟ್ಟ ಪ್ರದೇಶದ ಹೊರಗೆ ಅಥವಾ ಅದಕ್ಕೆ ಹೊಂದಿಕೊಂಡಿರುವ ಯಾವುದೇ ಪ್ರದೇಶದಿಂದ ಮತ್ತು ಯಾವುದೇ ಜಿಲ್ಲೆ ಅಥವಾ ಜಿಲ್ಲೆಗಳಿಂದ ಅಥವಾ ಅವುಗಳ ಭಾಗಗಳಿಂದಾಚೆಗೆ ಸದರಿ ಅಧಿಕಾರಿಯು ಉಲ್ಲೇಖಿಸಬಹುದಾದಂಥ ಮಾರ್ಗವಾಗಿ ಮತ್ತು ಕಾಲದೊಳಗಾಗಿ ಹೊರಟು ಹೋಗಬೇಕೆಂದೂ, ಮತ್ತು ಹಾಗೆ ಹೊರಟು ಹೋಗಲು ನಿರ್ದೇಶಿಸಲಾದ ಸ್ಥಳದಲ್ಲಿ ಮತ್ತೆ ಪ್ರವೇಶಿಸಕೂಡದೆಂದು ಅಥವಾ ಅಲ್ಲಿಗೆ ಮರಳಿ ಬರಕೂಡದೆಂದು, ನಿರ್ದೇಶಿಸಬಹುದು.

**56. ಕೆಲವು ಅಪರಾಧಗಳ ಸಿದ್ಧದೋಷಿಗಳಾದ ವ್ಯಕ್ತಿಗಳನ್ನು ಸಾಗಿಸುವುದು :–** ಯಾವನೇ ವ್ಯಕ್ತಿಯು, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಥವಾ ತರುವಾಯ,

(ಎ) ಭಾರತೀಯ ದಂಡ ನೀತಿ ಸಂಹಿತೆಯ XII, XVI ಅಥವಾ XVII ಅಧ್ಯಾಯಗಳ ಮೇರೆಗಿನ ಯಾವುದೇ ಅಪರಾಧದ ಸಂಬಂಧದಲ್ಲಿ, ಅಥವಾ

(ಬಿ) ಕರ್ನಾಟಕ ಗಣಿಗಳ ಅಧಿನಿಯಮ, 1906 (1906ರ ಕರ್ನಾಟಕ ಅಧಿನಿಯಮ IV) ರ 6ನೆಯ ಅಥವಾ 13ನೆಯ ಪ್ರಕರಣದ ಮೇರೆಗಿನ ಯಾವುದೇ ಅಪರಾಧದ ಸಂಬಂಧದಲ್ಲಿ, ಅಥವಾ

(ಸಿ) ಕರ್ನಾಟಕ ಭಿಕ್ಷಾಟನ ವಿರೋಧ ಅಧಿನಿಯಮ, 1944 (1944ರ ಕರ್ನಾಟಕ ಅಧಿನಿಯಮ XXXIII ರ 19ನೆಯ ಪ್ರಕರಣದ ಮೇರೆಗಿನ ಅಥವಾ ಮುಂಬಯಿ ಭಿಕ್ಷುಕರ ಅಧಿನಿಯಮ 1945 (1945ರ ಮುಂಬಯಿ ಅಧಿನಿಯಮ XXIII)ರ 9ನೆಯ ಪ್ರಕರಣದ ಮೇರೆಗಿನ ಅಥವಾ ವ್ಯಭಿಚಾರ ನಿರೋಧ ಅಧಿನಿಯಮ, 1956 (1956ರ ಕೇಂದ್ರ ಅಧಿನಿಯಮ 104)ರ ಮೇರೆಗಿನ ಯಾವುದೇ ಅಪರಾಧದ ಸಂಬಂಧದಲ್ಲಿ ಎರಡು ಸಲ, ಅಥವಾ

(ಡಿ) ಜೂಜಾಟ ನಿರೋಧದ ಬಗ್ಗೆ ಜಾರಿಯಲ್ಲಿರುವ ಕಾನೂನಿನ ಮೇರೆಗಿನ ಅಥವಾ ಕರ್ನಾಟಕ ಪಾನನಿರೋಧ ಅಧಿನಿಯಮ 1961ರ ಮೇರೆಗಿನ ಯಾವುದೇ ಅಪರಾಧದ ಸಂಬಂಧದಲ್ಲಿ ಮೂರು ವರುಷಗಳ ಅವಧಿಯೊಳಗೆ ಮೂರು ಸಲ ಅಪರಾಧಿಯೆಂದು ಸಿದ್ಧಪಟ್ಟಿರುವಲ್ಲಿ, ಕಮೀಷನರನು, ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಈ ಸಂಬಂಧದಲ್ಲಿ ಸರಕಾರದಿಂದ ವಿಶೇಷವಾಗಿ ಶಕ್ತಗೊಳಿಸಲಾದ ಯಾವೊಬ್ಬ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟನು, ಅಂಥ ವ್ಯಕ್ತಿಯು ಅವನನ್ನು ಅಪರಾಧಿಯೆಂದು ಸಿದ್ಧಪಡಿಸಿದ ತರಹದ ಅಪರಾಧ ಮಾಡುವುದರಲ್ಲಿ ಮತ್ತೆ ತೊಡಗುವ ಸಂಭವವಿದೆಯೆಂದು ನಂಬಲು ಕಾರಣವಿದ್ದರೆ, ಅಂಥ ವ್ಯಕ್ತಿಯು, ತನ್ನ ಸ್ಥಳೀಯ ಅಧಿಕಾರವ್ಯಾಪ್ತಿಗೊಳಪಟ್ಟ ಪ್ರದೇಶದಿಂದ ಹೊರಗೆ ಅಥವಾ ಅಂಥ ಪ್ರದೇಶದ ಮತ್ತು ಅಥವಾ ಅದಕ್ಕೆ ಹೊಂದಿಕೊಂಡಿರುವ ಯಾವುದೇ ಜಿಲ್ಲೆ ಅಥವಾ ಜಿಲ್ಲೆಗಳು ಅವುಗಳ ಯಾವುದೇ ಭಾಗದಿಂದ ಅಧಿಕಾರಿಯು ನಿಯಮಿಸುವ ಮಾರ್ಗವಾಗಿ ಮತ್ತು ಅಂಥ ಕಾಲದೊಳಗಾಗಿ ಹೊರಟುಹೋಗಲು ಮತ್ತು ಯಾವ ಸ್ಥಳದಿಂದ ಹೊರಟು ಹೋಗಲು ಆದೇಶಿಸಲಾಗಿತ್ತೊ ಆ ಸ್ಥಳವನ್ನು ಪ್ರವೇಶಿಸದಿರಲು ಮತ್ತು ಅಲ್ಲಿಗೆ ಮರಳದಿರಲು, ನಿರ್ದೇಶಿಸಬಹುದು.

ವಿವರಣೆ :– ಈ ಪ್ರಕರಣದ ಉದ್ದೇಶಕ್ಕಾಗಿ, ಒಬ್ಬ ವ್ಯಕ್ತಿಯು ಅಪರಾಧಿಯೆಂದು ಸಿದ್ಧಪಡಿಸಲಾದ ತರಹದ ಯಾವುದೇ ಅಪರಾಧ ಎಂದರೆ,

(1) (ಎ) ಖಂಡದಲ್ಲಿ ಹೇಳಿದ ಅಪರಾಧದ ಬಗ್ಗೆ ಅಪರಾಧ ಸಿದ್ಧಪಟ್ಟ ವ್ಯಕ್ತಿಯ ಸಂದರ್ಭದಲ್ಲಿ, ಆ ಖಂಡದಲ್ಲಿ ಹೇಳಿದ ಭಾರತೀಯ ದಂಡನೀತಿ ಸಂಹಿತೇಯ ಯಾವುದೇ ಅಧ್ಯಾಯಗಳಲ್ಲಿ ಬರುವ ಅಪರಾಧ, ಮತ್ತು

(2) (ಸಿ) ಮತ್ತು (ಡಿ) ಖಂಡಗಳಲ್ಲಿ ಹೇಳಿದ ಅಪರಾಧದ ಬಗ್ಗೆ ಅಪರಾಧ ಸಿದ್ಧಪಟ್ಟ ವ್ಯಕ್ತಿಯ ಸಂದರ್ಭದಲ್ಲಿ, ಉಕ್ತ ಖಂಡಗಳಲ್ಲಿ ಕ್ರಮವಾಗಿ ನಿರೂಪಿಸುವ ಈ ಅಧಿನಿಯಮದ ಉಪಬಂಧಗಳಲ್ಲಿ ಬರುವ ಅಪರಾಧ.

**57. 54, 55 ಅಥವಾ 56ನೆಯ ಪ್ರಕರಣಗಳ ಮೇರೆಗಿನ ಆದೇಶಗಳು ಜಾರಿಯಲ್ಲಿರುವ ಅವಧಿ :–** ಯಾವುದೇ ವಿಶಿಷ್ಟ ಪ್ರದೇಶವನ್ನು ಅಥವಾ ಅದಕ್ಕೆ ಹೊಂದಿಕೊಂಡಿರುವ ಯಾವುದೇ ನಿರ್ದಿಷ್ಟ ಪ್ರದೇಶ ಅಥವಾ ಅಂಥ ಪ್ರದೇಶ ಮತ್ತು ಯಾವುವೇ ಜಿಲ್ಲೆ ಅಥವಾ ಜಿಲ್ಲೆಗಳು ಅಥವಾ ಅವುಗಳ ಭಾಗಗಳನ್ನು ಪ್ರವೇಶಿಸಕೂಡದೆಂದು 54, 55 ಅಥವಾ 56ನೆಯ ಪ್ರಕರಣಗಳ ಮೇರೆಗೆ ಮಾಡಿದ ನಿರ್ದೇಶನವು ಅದರಲ್ಲಿ

ಉಲ್ಲೇಖಿಸಿದ ಅವಧಿಯವರೆಗೆ ಇರತಕ್ಕದ್ದು ಮತ್ತು ಯಾವ ಸಂದರ್ಭದಲ್ಲಿಯೂ ಅದನ್ನು ಮಾಡಿದ ತಾರೀಖಿನಿಂದ ಎರಡು ವರ್ಷಗಳ ಅವಧಿಗೆ ಮೀರತಕ್ಕದ್ದಲ್ಲ.

**58. 54, 55 ಅಥವಾ 56ನೆಯ ಪ್ರಕರಣದ ಮೇರೆಗೆ ಆದೇಶವನ್ನು ಮಾಡುವುದಕ್ಕೆ ಮುಂದೆ ಹೇಳಿಕೊಳ್ಳಲು ಅವಕಾಶ ಕೊಡುವುದು :–** 54, 55 ಅಥವಾ 56ನೆಯ ಪ್ರಕರಣದ ಮೇರೆಗೆ ಯಾವನೇ ವ್ಯಕ್ತಿಯ ವಿರುದ್ಧ ಆದೇಶವನ್ನು ಮಾಡುವುದಕ್ಕೆ ಮುಂಚೆ, ಸದರಿ ಯಾವುದೇ ಪ್ರಕರಣಗಳ ಮೇರೆಗೆ ವರ್ತಿಸುವ ಅಧಿಕಾರಿಯು ಅಥವಾ ಅಂಥ ಅಧಿಕಾರಿಯಿಂದ ಪ್ರಾಧಿಕೃತನಾದ ಮತ್ತು ಇನ್ಸ್‌ಪೆಕ್ಟರ್‌ನ ದರ್ಜೆಗೆ ಮೇಲ್ಪಟ್ಟ ಯಾವನೇ ಅಧಿಕಾರಿಯು, ಆ ವ್ಯಕ್ತಿಗೆ, ಅವನ ವಿರುದ್ಧ ಮಾಡಲಾದ ಮುಖ್ಯ ಆರೋಪಗಳ ಸಾಮಾನ್ಯ ಸ್ವರೂಪವನ್ನು ಲಿಖಿತರೂಪವಾಗಿ ತಿಳಿಸತಕ್ಕದ್ದು ಮತ್ತು ಅವುಗಳ ಬಗ್ಗೆ ಅವನು ತನ್ನ ವಿವರಣೆಯನ್ನು ನೀಡಲು ಯುಕ್ತ ಅವಕಾಶ ಕೊಡತಕ್ಕದ್ದು. ಅಂಥ ವ್ಯಕ್ತಿಯು, ತನ್ನಿಂದ ಹಾಜರ್ಪಡಿಸಲಾದ ಸಾಕ್ಷಿಯನ್ನು ಪರೀಕ್ಷಿಸಬೇಕೆಂದು ಆವೇದಿಸಿಕೊಂಡರೆ ಅಂಥ ಪ್ರಾದಿಕಾರಿಯು ಅಥವಾ ಅಧಿಕಾರಿಯು ಅಂಥ ಆವೇದನೆಯು ಕಿರುಕುಳಕೊಡುವ ಅಥವಾ ವಿಲಂಬ ಮಾಡುವ ಉದ್ದೇಶದಿಂದ ಮಾಡಲಾಗಿದೆಯೆಂದು ಕಾರಣಗಳಿವೆಯೆಂದು ಅಂಥ ಪ್ರಾಧಿಕಾರಿಯು ಅಥವಾ ಅಧಿಕಾರಿಯು ಅಭಿಪ್ರಾಯ ಪಟ್ಟು ಕಾರಣಗಳನ್ನು ಬರಹದಲ್ಲಿ ಅಭಿಲೇಖಿಸಿದ್ದ ಹೊರತು, ಅಂಥ ಆವೇದನೆಯನ್ನು ಮಂಜೂರು ಮಾಡತಕ್ಕದ್ದು ಮತ್ತು ಅಂಥ ಸಾಕ್ಷಿಯನ್ನು ಪರೀಕ್ಷಿಸತಕ್ಕದ್ದು. ಅಂಥ ವ್ಯಕ್ತಿಯಿಂದ ಮಂಡಿಸಲ್ಪಟ್ಟ ಯಾವುದೇ ಬರಹದ ಹೇಳಿಕೆಯು ಆ ಮೊಕದ್ದಮೆಯ ಅಭಿಲೇಖನಗಳೊಂದಿಗೆ ಇಡತಕ್ಕದ್ದು. ಅಂಥ ವ್ಯಕ್ತಿಯು, ಈ ಪ್ರಕರಣದ ಮೇರೆಗೆ ವ್ಯವಹರಣೆ ನಡೆಸುವ ಅಧಿಕಾರಿಯ ಸಮ್ಮುಖದಲ್ಲಿ, ತನ್ನ ವಿವರಣೆಯನ್ನು ನೀಡುವ ಅಥವಾ ತಾನು ಹಾಜರ್ಪಡಿಸುವ ಸಾಕ್ಷಿಗಳ ಪರೀಕ್ಷೆ ನಡೆಸುವ ಉದ್ದೇಶಕ್ಕಾಗಿ ವಕೀಲನ ಮೂಲ ಹಾಜರಾಗಲು ಹಕ್ಕುಳ್ಳವನಾಗಿರತಕ್ಕದ್ದು.

(2) (1)ನೆಯ ಉಪಪ್ರಕರಣದ ಮೇರೆಗೆ ವ್ಯವಹರಣೆ ನಡೆಸುವ ಪ್ರಾಧಿಕಾರಿಯು ಅಥವಾ ಅಧಿಕಾರಿಯು 54, 55 ಅಥವಾ 56ನೆಯ ಪ್ರಕರಣದ ಮೇರೆಗೆ ಯಾವ ವ್ಯಕ್ತಿಯ ವಿರುದ್ಧ ಆದೇಶ ಮಾಡಲು ಉದ್ದೇಶಿಸಲಾಗಿದೆಯೋ ಅವನ ಹಾಜರಾತಿಯನ್ನು ದೊರಕಿಸಲು, ಅವನು ಹಾಜರಾಗುವಂತೆ ಮತ್ತು ವಿಚಾರಣೆಯ ಕಾಲದಲ್ಲಿ ಅವನು ಹಾಜರಾತಿಗಾಗಿ ಜಾಮೀನುಗಳೊಂದಿಗೆ ಅಥವಾ ಇಲ್ಲದೆ, ಭದ್ರತಾ ಪತ್ರವನ್ನು ಬರೆದು ಕೊಡುವಂತೆ ಅವನನ್ನು ಅಗತ್ಯಪಡಿಸಬಹುದು, ಅಂಥ ವ್ಯಕ್ತಿಯು ಅಗತ್ಯಪಡಿಸಲಾದಂತಹ ಭದ್ರತಾಪತ್ರವನ್ನು ಬರೆದುಕೊಡಲು ತಪ್ಪಿದರೆ ಅಥವಾ ವಿಚಾರಣೆಯ ಕಾಲದಲ್ಲಿ ಅಂಥ ಅಧಿಕಾರಿಯು ಅಥವಾ ಪ್ರಾಧಿಕಾರಿಯ ಮುಂದೆ ಹಾಜರಾಗಲು ತಪ್ಪಿದ್ದರೆ, ಅಂಥ ಅಧಿಕಾರಿಯು ಅಥವಾ ಪ್ರಾಧಿಕಾರಿಯು ಆ ವಿಚಾರಣೆಯನ್ನು ಮುಂದುವರಿಸುವುದು ಕಾನೂನುಬದ್ಧವಾಗಿರತಕ್ಕದ್ದು ಮತ್ತು ಆಮೇಲೆ ಅವನ ವಿರುದ್ಧ ಮಾಡಬೇಕೆಂದು ಉದ್ದೇಶಿಸಿದ್ದ ಆದೇಶವನ್ನು ಮಾಡಬಹುದು.

**59. ಅಪೀಲು :–** 54, 55 ಅಥವಾ 56ನೆಯ ಪ್ರಕರಣದ ಮೇರೆಗೆ ಮಾಡಲಾದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ಆದೇಶದ ತಾರೀಖಿನಿಂದ ಮೂವತ್ತು ದಿನಗಳೊಳಗಾಗಿ ಸರಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು.

**60. ಆದೇಶಗಳ ಅಂತಿಮತೆ :–** 54, 55 56ನೆಯ ಪ್ರಕರಣದ ಮೇರೆಗೆ ಮಾಡಿದ ಅಥವಾ 59ನೆಯ ಪ್ರಕರಣದ ಮೇರೆಗೆ ಸರಕಾರವು ಮಾಡಿದ ಯಾವುದೇ ಆದೇಶವು, ಅಂಥ ಆದೇಶವನ್ನು ಮಾಡಿದ ಪ್ರಾಧಿಕಾರಿಯು ಅಥವಾ ಅದರಿಂದ ಅಧಿಕೃತನಾದ ಯಾವನೇ ಅಧಿಕಾರಿಯು 58ನೆಯ ಪ್ರಕರಣದ (1)ನೆಯ

ಉಪಪ್ರಕರಣದಲ್ಲಿ ನಿರೂಪಿಸಿದ ಪ್ರಕ್ರಿಯೆಯನ್ನು ಅನುಸರಿಸಿಲ್ಲವೆಂಬ ಅಥವಾ ಅಂಥ ಪ್ರಾಧಿಕಾರಿಯು ತನ್ನ ಆದೇಶವನ್ನು ಮಾಡಲು ಆಧಾರಭೂತವಾದ ಅಂಶವಾವುದೂ ಅದರ ಮುಂದಿರಲಿಲ್ಲವೆಂಬ ಕಾರಣದಿಂದಾಗಿ ಅಥವಾ 55ನೆಯ ಪ್ರಕರಣದ ಮೇರೆಗೆ ತದ್ವಿರುದ್ಧ ಆದೇಶ ಮಾಡಲಾಗಿದ್ದ ವ್ಯಕ್ತಿಯ ವಿರುದ್ಧ ಬಹಿರಂಗವಾಗಿ ಸಾಕ್ಷಿಕೊಡಲು ಸಾಕ್ಷಿಗಳು ಮುಂದೆ ಬರಲು ಸಿದ್ಧವಿಲ್ಲವೆಂದು ಯುಕ್ತ ಪ್ರಾಧಿಕಾರಿಯು ಅಭಿಪ್ರಾಯಪಟ್ಟಿಲ್ಲವೆಂಬ ಕಾರಣದಿಂದಾಗಿ ಅಲ್ಲದೇ, ಯಾವ ನ್ಯಾಯಾಲಯದಲ್ಲಿಯೂ ಪ್ರಶ್ನಿಸಿಸಲ್ಪಡತಕ್ಕದ್ದಲ್ಲ.

**61. ವ್ಯಕ್ತಿಯು ಪ್ರದೇಶವನ್ನು ಬಿಟ್ಟು ಹೋಗಲು ತಪ್ಪಿದರೆ ಮತ್ತು ಅವನನ್ನು ಸಾಗಿಸಿದ ತರುವಾಯ ಅವನು ಪ್ರವೇಶಿಸಿದರೆ ಪ್ರಕ್ರಿಯೆ :–** ಯಾವುದೇ ಪ್ರದೇಶದಿಂದ ಹೊರಟು ಹೋಗಲು 54, 55 ಅಥವಾ 56ನೆಯ ಪ್ರಕರಣದ ಮೇರೆಗೆ ನಿರ್ದೇಶಿಸಲ್ಪಟ್ಟ ಯಾವನೇ ವ್ಯಕ್ತಿಯು

(i) ನಿದೇಶಿಸಿದಂತೆ, ಹೊರಟುಹೋಗಲು ತಪ್ಪಿದರೆ;

(ii) ಹಾಗೆ ಹೊರಟುಹೋಗಿ, ಆದೇಶವನ್ನು ಮಾಡಿದ ಪ್ರಾಧಿಕಾರಿಯ ಲಿಖಿತ ಅನುಮತಿಯಿಲ್ಲದೆ ಆದೇಶದಲ್ಲಿ ಉಲ್ಲೇಖಿಸಿದ ಅವಧಿಯೊಳಗಾಗಿ ಆ ಪ್ರದೇಶವನ್ನು ಪ್ರವೇಶಿಸಿದರೆ, ಸಂಬಂಧಪಟ್ಟ ಪ್ರಾಧಿಕಾರಿಯು, ಅವನನ್ನು ದಸ್ತಗಿರಿ ಮಾಡುವಂತೆ ಮತ್ತು ಆ ಪ್ರದೇಶದಿಂದಾಚೆಗೆ ಯುಕ್ತ ಪ್ರಾಧಿಕಾರಿಯು ಪ್ರತಿಯೊಂದು ಸಂದರ್ಭದಲ್ಲಿ ನಿರ್ದೇಶಿಸುವಂಥ ಸ್ಥಳಕ್ಕೆ, ಅವನನ್ನು ಪೊಲೀಸ್ ಅಭಿರಕ್ಷೆಯಲ್ಲಿ ಸಾಗಿಸುವಂತೆ ಮಾಡಬಹುದು.

**62. ಎಲ್ಲಿಗೆ ಹೊರಟುಹೋಗಲು ವ್ಯಕ್ತಿಗೆ ನಿರ್ದೇಶಿಸಲಾಗಿತ್ತೋ ಅಲ್ಲಿಗೆ ಪ್ರವೇಶಿಸಲು ಅಥವಾ ವಾಪಸಾಗಲು ತಾತ್ಕಾಲಿಕ ಅನುಮತಿ :–** (1) ಸರಕಾರವು, 54, 55 ಮತ್ತು 56ನೆಯ ಪ್ರಕರಣದ ಮೇರೆಗೆ ತತ್ಸಂಬಂಧದಲ್ಲಿ ಆದೇಶ ಮಾಡಲಾಗಿರುವ ವ್ಯಕ್ತಿಗೆ ಅವನು ಯಾವ ಪ್ರದೇಶದಿಂದ ಅಥವಾ ಅದಕ್ಕೆ ಹೊಂದಿಕೊಂಡಿರುವ ಯಾವ ಪ್ರದೇಶ ಮತ್ತು ಜಿಲ್ಲೆ ಅಥವಾ ಜಿಲ್ಲೆಗಳ ಅಥವಾ ಅವುಗಳ ಯಾವುದೇ ಭಾಗದಿಂದ ಹೊರಟುಹೋಗುವಂತೆ ತನಗೆ ನಿರ್ದೇಶಿಸಲಾಗಿತ್ತೋ ಆ ಪ್ರದೇಶವನ್ನು, ತಾನು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಉಲ್ಲೇಖಿಸುವಂಥ ಮತ್ತು ಅಂಥ ವ್ಯಕ್ತಿಯು ಒಪ್ಪಿಕೊಳ್ಳುವಂಥ ಷರತ್ತುಗಳಿಗೊಳಪಟ್ಟು, ಪ್ರವೇಶಿಸಲು ಅಥವಾ ಅಲ್ಲಿಗೆ ವಾಪಸಾಗಲು, ಆದೇಶದ ಮೂಲಕ ಅನುಮತಿ ಕೊಡಬಹುದು ಮತ್ತು ಅಂಥ ಅನುಮತಿಯನ್ನು ಯಾವುದೇ ಕಾಲಕ್ಕೆ ರದ್ದುಪಡಿಸಬಹುದು.

(2) ಯಾವ ಪ್ರದೇಶದಿಂದ ಅಥವಾ ಅದಕ್ಕೆ ಹೊಂದಿಕೊಂಡಿರುವ ಪ್ರದೇಶ ಮತ್ತು ಜಿಲ್ಲೆ ಅಥವಾ ಜಿಲ್ಲೆಗಳ ಅಥವಾ ಅವುಗಳ ಯಾವುದೇ ಭಾಗದಿಂದ ಹೊರಟುಹೋಗಲು ನಿರ್ದೇಶಿಸಲಾಗಿದ್ದ, ವ್ಯಕ್ತಿಗೆ (1)ನೆಯ ಉಪಪ್ರಕರಣದ ಮೇರೆಗೆ ಅಲ್ಲಿ ಪ್ರವೇಶಿಸಲು ಅಥವಾ ಅಲ್ಲಿಗೆ ವಾಪಸಾಗಲು ಅನುಮತಿ ಕೊಡುವಲ್ಲಿ, ವಿಧಿಸಲಾದ ಷರತ್ತುಗಳನ್ನು ಪಾಲಿಸುವನೆಂಬ ಬಗ್ಗೆ ಜಾಮೀನು ಸಹಿತ ಅಥವಾ ಇಲ್ಲದೆ ಒಂದು ಮುಚ್ಚಳಿಕೆ ಮಾಡಿಕೊಳ್ಳಲು ಸರಕಾರವು, ಅವನಿಗೆ ಅಗತ್ಯಪಡಿಸಬಹುದು.

(3) ಯಾವ ಪ್ರದೇಶದಿಂದ ಅಥವಾ ಅದಕ್ಕೆ ಹೊಂದಿಕೊಂಡಿರುವ ಪ್ರದೇಶ ಮತ್ತು ಜಿಲ್ಲೆ ಅಥವಾ ಜಿಲ್ಲೆಗಳು ಅಥವಾ ಅವುಗಳ ಯಾವುದೇ ಭಾಗದಿಂದ ಹೊರಟುಹೋಗಲು ನಿದೇಶಿಸಲಾಗಿದ್ದ ಮತ್ತು (1)ನೆಯ ಉಪಪ್ರಕರಣದ ಮೇರೆಗೆ ಪ್ರವೇಶಿಸಲು ಅಥವಾ ಅಲ್ಲಿಗೆ ವಾಪಸಾಗಲು ಅನುಮತಿ ನೀಡಲಾಗಿದ್ದ ಯಾವನೇ ವ್ಯಕ್ತಿಯು, ಸಂದರ್ಭಾನುಸಾರ ಅಂಥ ಆದೇಶದಲ್ಲಿ ಅಥವಾ ಅದನ್ನು ರದ್ದುಗೊಳಿಸುವ ಆದೇಶದಲ್ಲಿ ಉಲ್ಲೇಖಿಸಲಾದ ಕಾಲಕ್ಕೆ ಮತ್ತು ಸ್ಥಳದಲ್ಲಿ ಮತ್ತು ಅಂಥ ಪ್ರಾಧಿಕಾರಿಗೆ ವಶನಾಗತಕ್ಕದ್ದು.

**63. ಗಡಿಪಾರು ಮಾಡಲು ಸರಕಾರದ ಅಥವಾ ವಿಶೇಷವಾಗಿ ಶಕ್ತಗೊಳಿಸಲಾದ ಅಧಿಕಾರಿಗಳು ಅಧಿಕಾರಗಳು:–** (1) ಸರಕಾರವು, ಅಥವಾ ಆ ಸಂಬಂಧದಲ್ಲಿ ಸರಕಾರದಿಂದ ಶಕ್ತಗೊಳಿಸಲಾದ ಯಾವನೇ ಅಧಿಕಾರಿಯು ಅದೇ ಬಗೆಯ ವಿದ್ಯಮಾನಗಳಲ್ಲಿ ಮತ್ತು ಅದೇ ರೀತಿಯಲ್ಲಿ, ಸಂದರ್ಭಾನುಸಾರ, ಬೆಂಗಳೂರು ನಗರದಲ್ಲಿ ಕಮೀಷನರು ಮತ್ತು ಯಾವುದೇ ಜಿಲ್ಲೆಯಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟನು ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟನು ಅಥವಾ ಸರಕಾರದಿಂದ ಆ ಸಂಬಂಧದಲ್ಲಿ ವಿಶೇಷವಾಗಿ ಶಕ್ತಗೊಳಿಸಲಾದ ಪೊಲೀಸ್ ಸೂಪರಿಂಟೆಂಡೆಂಟನು 54, 55 ಅಥವಾ 56ನೆಯ ಪ್ರಕರಣದ ಮೇರೆಗೆ ಚಲಾಯಿಸಬಹುದಾದಂಥ ಅಧಿಕಾರಗಳನ್ನು, ಸಂದರ್ಭಾನುಸಾರ ಅಂಥ ಗುಂಪುಗಳ ಅಥವಾ ಸಮೂಹದ ಜನರು ಅಥವಾ ವ್ಯಕ್ತಿಗಳು ಅಥವಾ ವಲಸೆಗಾರರು ಅಥವಾ ಸಿದ್ಧದೋಷಿಗಳಾದ ವ್ಯಕ್ತಿಗಳು ಅಂಥ ಸ್ಥಳೀಯ ಪ್ರದೇಶವನ್ನು ಅಥವಾ ಅದಕ್ಕೆ ಹೊಂದಿಕೊಂಡಿರುವ ಅಥವಾ ಇಲ್ಲದಿರುವ ಯಾವುದೇ ಪ್ರದೇಶ ಮತ್ತು ಜಿಲ್ಲೆಗಳು ಅಥವಾ ಅವುಗಳ ಭಾಗಗಳಿಂದ ಹೊರಟು ಹೋಗಬೇಕೆಂದು ಸರಕಾರವು ಅಥವಾ ವಿಶೇಷವಾಗಿ ಶಕ್ತಗೊಳಿಸಲಾದ ಅಧಿಕಾರಿಯು ನಿರ್ದೇಶಿಸುವುದು ವಿಧಿಬದ್ಧವಾಗಿರುವುದೆಂಬ ಆ ಮಾರ್ಪಾಟಿನೊಂದಿಗೆ, ಚಲಾಯಿಸಬಹುದು.

(2) 57, 58, 59, 60, 61 ಮತ್ತು 62ನೆಯ ಪ್ರಕರಣಗಳ ಉಪಬಂಧಗಳು ಉಚಿತ ವ್ಯತ್ಯಾಸಗಳೊಂದಿಗೆ, ಅವು 54, 55 ಅಥವಾ 56ನೆಯ ಪ್ರಕರಣದ ಮೇರೆಗಿನ ಅಧಿಕಾರಗಳ ಚಲಾವಣೆಗೆ ಅನ್ವಯಿಸುವಂತೆಯೇ ಈ ಪ್ರಕರಣದ ಮೇರೆಗಿನ ಯಾವುದೇ ಅಧಿಕಾರಗಳ ಚಲಾವಣೆಗೆ ಅನ್ವಯಿಸತಕ್ಕದ್ದು.

III ಶಿಬಿರಗಳು, ಪೆರೇಡುಗಳು ಇತ್ಯಾದಿಗಳ ನಿಯಂತ್ರಣ ಮತ್ತು ಕೆಲವು ಸಮವಸ್ತ್ರಗಳ ಉಪಯೋಗ.

**64. ಶಿಬಿರಗಳು, ಪೆರೇಡುಗಳು ಇತ್ಯಾದಿಗಳ ನಿಯಂತ್ರಣ ಮತ್ತು ಸಮವಸ್ತ್ರಗಳು ಇತ್ಯಾದಿಗಳ ಉಪಯೋಗದ ಪ್ರತಿಬಂಧ :–** ಸರಕಾರವು, ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡುವುದಕ್ಕಾಗಿ ಇಡೀ ಕರ್ನಾಟಕ ರಾಜ್ಯದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ತರಬೇತು ಹೊಂದುವುದಕ್ಕಾಗಿ ಅಥವಾ ಕವಾಯತು, ಮಾಡುವುದಕ್ಕಾಗಿ ಅಥವಾ ಆಯುಧಗಳನ್ನು ಉಪಯೋಗಿಸಲು ತರಬೇತು ಹೊಂದುವುದಕ್ಕಾಗಿ, ಅಥವಾ ಕವಾಯತು ಮಾಡುವುದಕ್ಕಾಗಿ, ಅಥವಾ ಸೈನಿಕ ಅಂಗಸಾಧನೆಯ ಅಭ್ಯಾಸಕ್ಕಾಗಿ, ಚಲನಕ್ಕಾಗಿ ಅಥವಾ ವಿಸ್ತರಣೆಗಾಗಿ ಅಥವಾ ಮೇಲೆ ಹೇಳಿದಂತೆ ಯಾವುದೇ ಶಿಬಿರ, ಪೆರೇಡು ಅಥವಾ ಮೆರವಣಿಗೆಗಳಲ್ಲಿ ಹಾಜರಿರುವ ಅಥವಾ ಅವುಗಳನ್ನು ನಡೆಸುವ ಅಥವಾ ಅವುಗಳಲ್ಲಿ ಭಾಗವಹಿಸುವ ಉದ್ದೇಶಕ್ಕಾಗಿ ಕೊಡುವ ಎಲ್ಲ ಸಭೆಗಳನ್ನು ಮತ್ತು ಜನ ಸಮೂಹಗಳನ್ನು ನಿಷೇಧಿಸುವುದು ಅಥವಾ ನಿರ್ಬಂಧಿಸುವುದು ಅಗತ್ಯವೆಂದು, ಅದಕ್ಕೆ ಮನದಟ್ಟಾದರೆ, ಅದು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಹಾಗೆ ಮಾಡಬಹುದು.

(2) ಈ ಪ್ರಕರಣದ ಮೇರೆಗೆ ಹೊರಡಿಸಲಾಗುವ ಆದೇಶದಲ್ಲಿ ಉಲ್ಲೇಖಿಸಲಾಗುವ ನಿಕಾಯ ಅಥವಾ ಸಂಸ್ಥೆ ಅಥವಾ ಸಂಘಟನೆಯ ಯಾವನೇ ಸದಸ್ಯನು ಭಾರತದ ಸಶಸ್ತ್ರದಳದವನು ಅಥವಾ ಪೊಲೀಸು ದಳದವನು ಅಥವಾ ಆಯಾ ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ವಿಧಿಯ ಮೇರೆಗೆ ರಚಿತವಾದ ಯಾವುದೇ ದಳದವನು ಧರಿಸಬೇಕಾಗಿರುವ ಯಾವುದೇ ಸಮವಸ್ತ್ರವನ್ನು ಅಥವಾ ಅದರ ಯಾವುದೇ ಭಾಗವನ್ನು ಹೋಲುವ ಯಾವುದೋ ಉಡುಪು ಅಥವಾ ತೊಡುಗೆಯ ವಸ್ತುವನ್ನು ಬಹಿರಂಗವಾಗಿ ಧರಿಸುವುದರಿಂದ ರಾಜ್ಯದ ಭದ್ರತೆಗೆ ಅಥವಾ ಸಾರ್ವಜನಿಕ ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ಧಕ್ಕೆಯುಂಟಾಗುವ ಸಂಭವವಿದೆ ಎಂದು ಸರಕಾರಕ್ಕೆ ಮನದಟ್ಟಾದರೆ ಸರಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಂತಹ ನಿಕಾಯ ಅಥವಾ ಸಂಸ್ಥೆ

ಅಥವಾ ಸಂಘಟನೆಯ ಯಾವನೇ ಸದಸ್ಯನು ಅಂತಹ ಉಡುಪನ್ನು ಅಥವಾ ತೊಡುಗೆಯನ್ನು ವಸ್ತುವನ್ನು ಧರಿಸುವುದನ್ನು ಅಥವಾ ಬಹಿರಂಗವಾಗಿ ಪ್ರದರ್ಶಿಸುವುದನ್ನು ನಿಷೇಧಿಸಬಹುದು ಅಥವಾ ನಿರ್ಬಂಧಿಸಬಹುದು.

(3) (1)ನೆಯ ಮತ್ತು (2)ನೆಯ ಉಪಪ್ರಕರಣಗಳ ಮೇರೆಗಿನ ಪ್ರತಿಯೊಂದು ಸಾಮಾನ್ಯ ಅಥವಾ ವಿಶೇಷ ಆದೇಶವು 172ನೆಯ ಪ್ರಕರಣದ ಮೇರೆಗಿನ ಸಾರ್ವಜನಿಕ ನೋಟೀಸನ್ನು ಪ್ರಕಟಿಸಲು ನಿಯಮಿಸಲಾದ ರೀತಿಯಲ್ಲಿಯೇ ಪ್ರಕಟಿಸಲ್ಪಡತಕ್ಕದ್ದು.

ವಿವರಣೆ :– (2)ನೆಯ ಉಪಪ್ರಕರಣದ ಉದ್ದೇಶಗಳಿಗಾಗಿ ಯಾವುದೇ ಉಡುಪನ್ನು ಅಥವಾ ತೊಡುಗೆಯ ವಸ್ತುವನ್ನು ಸಾರ್ವಜನಿಕರಿಗೆ ಪ್ರವೇಶವಿರುವ ಯಾವುದೇ ಸ್ಥಳದಲ್ಲಿ ಧರಿಸಿದರೆ ಅಥವಾ ಪ್ರದರ್ಶಿಸಿದರೆ, ಅದು ಬಹಿರಂಗವಾಗಿ ಧರಿಸಲ್ಪಟ್ಟಿತು ಅಥವಾ ಪ್ರದರ್ಶಿಸಲ್ಪಟ್ಟಿತು ಎಂದು ಭಾವಿಸಲ್ಪಡತಕ್ಕದ್ದು.

## ಅಧ್ಯಾಯ – VI

## ಪೊಲೀಸರ ನಿರ್ವಾಹಕ ಅಧಿಕಾರಗಳು ಮತ್ತು ಕರ್ತವ್ಯಗಳು

**65. ಪೊಲೀಸು ಅಧಿಕಾರಿಯ ಕರ್ತವ್ಯಗಳು :–** ಪ್ರತಿಯೊಬ್ಬ ಪೊಲೀಸು ಅಧಿಕಾರಿಯು

(ಎ) ಸಕ್ಷಮ ಪ್ರಾಧಿಕಾರಿಯಿಂದ ವಿಧಿಬದ್ಧವಾಗಿ ತನಗೆ ಕೊಡಲಾದ ಪ್ರತಿಯೊಂದು ಸಮನನ್ನು ಶೀಘ್ರವಾಗಿ ಜಾರಿ ಮಾಡುವುದು ಮತ್ತು ಪ್ರತಿಯೊಂದು ವಾರಂಟು ಅಥವಾ ಇತರ ಆದೇಶವನ್ನು ಪಾಲಿಸುವುದು ಮತ್ತು ನಿರ್ವಹಿಸುವುದು ಮತ್ತು ತನ್ನ ವರಿಷ್ಠಾಧಿಕಾರಿಯ ವಿಧಿಬದ್ಧ ಆಜ್ಞೆಗಳನ್ನು ಕಾರ್ಯಗತ ಮಾಡಲು ಎಲ್ಲ ವಿಧಿಬದ್ಧ ರೀತಿಯಲ್ಲಿ ಪ್ರಯತ್ನಿಸುವುದು.

(ಬಿ) ವಿಚಾರಣೀಯ ಅಪರಾಧಗಳು ನಡೆದ ಬಗ್ಗೆ ಅಥವಾ ಅಂತಹ ಅಪರಾಧ ಮಾಡುವ ಸಂಚುಗಳ ಬಗ್ಗೆ ತನ್ನ ಸಾಮರ್ಥ್ಯಾನುಸಾರದ ಮಾಹಿತಿಯನ್ನು, ಸಂಗ್ರಹಿಸುವುದು.

(ಸಿ) ಕಾನೂನಿನ ಮತ್ತು ವರಿಷ್ಠಾಧಿಕಾರಿಗಳ ಆದೇಶಗಳಿಗೆ ಸುಸಂಗತವಾಗಿರುವ ಮತ್ತು ಅಪರಾಧಿಗಳನ್ನು ನ್ಯಾಯಕ್ಕೆ ಗುರಿಪಡಿಸಲು ವಿಹಿತವಾದ ಮಾಹಿತಿಯನ್ನು ಒದಗಿಸುವುದು ಮತ್ತು ಅಂತಹ ಇತರ ಕ್ರಮಗಳನ್ನು ಕೈಕೊಳ್ಳುವುದು;

(ಡಿ) ಅಪರಾಧಗಳ ನಡೆಯುವಿಕೆಯನ್ನು ಪ್ರತಿಬಂಧಿಸುವುದು;

(ಇ) ಸಾರ್ವಜನಿಕರಿಗೆ ಆಗುವ ಕಿರುಕುಳವನ್ನು ಸಾಮರ್ಥ್ಯನುಸಾರ ಪ್ರತಿಬಂಧಿಸುವುದು.

(ಎಫ್) ಯಾರನ್ನು ಹಿಡಿಯಲು ಅವನು ವಿಧಿಬದ್ಧವಾಗಿ ಪ್ರಾಧಿಕೃತನಾಗಿರುವನೋ ಮತ್ತು ಯಾರನ್ನು ಹಿಡಿಯಲು ಸಾಕಷ್ಟು ಕಾರಣವಿದೆಯೋ ಅಂತಹ ಎಲ್ಲ ವ್ಯಕ್ತಿಗಳನ್ನು ಸೂಕ್ತವಲ್ಲದ ವಿಲಂಬ ಮಾಡದೆ ಹಿಡಿಯುವುದು;

(ಜಿ) ಬೇರೊಬ್ಬ ಪೊಲೀಸು ಅಧಿಕಾರಿಯು ಕೋರಿದಾಗ ಅಥವಾ ಅವನ ಕರ್ತವ್ಯ ನಿರ್ವಹಣೆಯಲ್ಲಿ ಅಗತ್ಯವಿರುವಾಗ, ಕಾನೂನುಬದ್ಧವಾಗಿ ಮತ್ತು ಯುಕ್ತವಾಗಿ ಮಾಡಬಹುದಾದ ರೀತಿಯಲ್ಲಿ ಅವನಿಗೆ ಸಹಾಯ ನೀಡುವುದು.

(ಹೆಚ್) ಆಯಾ ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಿಂದ ಅವನಿಗೆ ವಿಧಿಸಲಾದಂಥ ಅವನ ಕರ್ತವ್ಯವಾಗಿರತಕ್ಕದ್ದು ಕರ್ತವ್ಯಗಳನ್ನು ನೆರವೇರಿಸುವುದು;

**66. ಸಾರ್ವಜನಿಕರು ಸೇರುವ ಸ್ಥಳಗಳನ್ನು ಪ್ರವೇಶಿಸಲು ಅಧಿಕಾರ :–** ಪ್ರತಿಯೊಬ್ಬ ಪೊಲೀಸು ಅಧಿಕಾರಿಯೂ ಸರಕಾರದ ಅಥವಾ ಕಾನೂನುಬದ್ಧವಾಗಿ ಪ್ರಾಧಿಕೃತವಾದ ವ್ಯಕ್ತಿಯಿಂದ ಮಾಡಲಾದ ನಿಯಮಗಳಿಗೆ ಮತ್ತು ಆದೇಶಗಳಿಗೆ ಒಳಪಟ್ಟು 65ನೆಯ ಪ್ರಕರಣದಲ್ಲಿ ನಿರ್ದೇಶಿಸಿದ ಯಾವುದೇ ಉದ್ದೇಶಗಳಿಗಾಗಿ ಮದ್ಯ ಅಥವಾ ಮಾದಕ ವಸ್ತುಗಳ ಮಾರಾಟದ ಅಂಗಡಿಯಾಗಿ ಅಥವಾ ಅನೀತಿಯುತ ನೀತಿಗೆಟ್ಟ ಮತ್ತು ಅಸಭ್ಯ ವ್ಯಕ್ತಿಗಳು ಸೇರುವ ಸ್ಥಳವಾಗಿ ಉಪಯೋಗಿಸಲಾಗುತ್ತಿದೆ ಎಂದು ತಾನು ನಂಬಲು ಕಾರಣವಿರುವ ಸಾರ್ವಜನಿಕರು ಸೇರುವ ಯಾವುದೇ ಸ್ಥಳವನ್ನು ವಾರಂಟು ಇಲ್ಲದೆ ಪ್ರವೇಶಿಸಬಹುದು ಮತ್ತು ಪರಿಶೀಲಿಸಬಹುದು.

**67. ಗುಮಾನಿ ವ್ಯಕ್ತಿಗಳನ್ನು ಬೀದಿಯಲ್ಲಿ ಜಪ್ತಿ ಮಾಡಲು ಅಧಿಕಾರ :–** ಬೀದಿಯಲ್ಲಿ ಅಥವಾ ಸಾರ್ವಜನಿಕರು ಸೇರುವ ಸ್ಥಳದಲ್ಲಿ ಯಾವೊಬ್ಬ ವ್ಯಕ್ತಿಯು ಪೊಲೀಸು ಅಧಿಕಾರಿಯು ಸದ್ಭಾವನೆಯಿಂದ ಕಳವಿನ ಸ್ವತ್ತೆಂದು ಶಂಕಿಸಬಹುದಾದ ಯಾವುದೇ ಪದಾರ್ಥವನ್ನು ಹೊಂದಿದ್ದರೆ ಅಥವಾ ಹೊಂದಿದ್ದಂತೆ ತೋರಿದರೆ, ಅಂತಹ ಪೊಲೀಸು ಅಧಿಕಾರಿಯು ಅದನ್ನು ಜಪ್ತಿ ಮಾಡಬಹುದು ಅಥವಾ ಪರೀಕ್ಷಿಸಬಹುದು ಮತ್ತು ಅದರ ಬಗ್ಗೆ ವಿವರಗಳನ್ನು ಕೇಳಬಹುದು ಮತ್ತು, ಅದನ್ನು ಹೊಂದಿದ್ದವನು ಕೊಟ್ಟ ವಿವರವು ಸ್ಪಷ್ಟವಾಗಿ ಸುಳ್ಳಾಗಿದ್ದರೆ ಅಥವಾ ಸಂಶಯಾಸ್ಪದವಾಗಿದ್ದರೆ ಅಂತಹ ವಸ್ತುವನ್ನು ವಶಪಡಿಸಿಕೊಳ್ಳ ಬಹುದು ಮತ್ತು ಈ ಸಂಗತಿಯನ್ನು ಮ್ಯಾಜಿಸ್ಟ್ರೇಟನಿಗೆ ವರದಿ ಮಾಡಬಹುದು, ಆ ಬಳಿಕ ಅವನು ದಂಡ ಪ್ರಕ್ರಿಯಾ ಸಂಹಿತೆ, 1898ರ 523 ಮತ್ತು 525ನೆಯ ಪ್ರಕರಣಗಳಿಗೆ ಅಥವಾ ಬೇರೆ ಯಾವುದೇ ಕಾನೂನಿಗೆ ಅನುಸಾರವಾಗಿ ಕ್ರಮ ಕೈಗೊಳ್ಳತಕ್ಕದ್ದು.

**68. ಸಾರ್ವಜನಿಕರ ಬಗ್ಗೆ ಪೊಲೀಸು ಅಧಿಕಾರಿಗಳ ಕರ್ತವ್ಯಗಳು :–** ಪ್ರತಿಯೊಬ್ಬ ಪೊಲೀಸು ಅಧಿಕಾರಿಯು

(ಎ) ಬೀದಿಗಳಲ್ಲಿ ಇರುವ ದುರ್ಬಲ ಮತ್ತು ನಿಸ್ಸಹಾಯಕ ವ್ಯಕ್ತಿಗಳಿಗೆ ತನ್ನ ಶಕ್ತ್ಯನುಸಾರ ಎಲ್ಲ ಸಹಾಯ ನೀಡುವುದು ಮತ್ತು ಅಪಾಯಕಾರಿಗಳಾಗಿ ಅಥವಾ ತಮ್ಮ ರಕ್ಷಣೆ ಮಾಡಿಕೊಳ್ಳಲು ಅಸಮರ್ಥರಾಗಿ ಅಲೆಯುತ್ತಿರುವ ವ್ಯಕ್ತಿಗಳನ್ನು ಮತ್ತು ಹುಚ್ಚರನ್ನು ತನ್ನ ವಶಕ್ಕೆ ತೆಗೆದುಕೊಳ್ಳುವುದು.

(ಬಿ) ದಸ್ತಗಿರಿಯಾದ ಅಥವಾ ಅಭಿರಕ್ಷೆಯಲ್ಲಿರುವ ಯಾವನೇ ವ್ಯಕ್ತಿಯು ಗಾಯಗೊಂಡಿದ್ದರೆ ಅಥವಾ ಖಾಯಿಲೆಯಾಗಿದ್ದರೆ ಅವನಿಗೆ ಅಗತ್ಯವಾದ ಸಹಾಯವನ್ನು ದೊರಕಿಸಲು ಶೀಘ್ರ ಕ್ರಮಗಳನ್ನು ಕೈಗೊಳ್ಳುವುದು ಮತ್ತು ಅಂತಹ ವ್ಯಕ್ತಿಯನ್ನು ಕಾಯುವಾಗ ಅಥವಾ ಕರೆದೊಯ್ಯುವಾಗ ಅವನ ಸ್ಥಿತಿಯನ್ನು ಗಮನದಲ್ಲಿಡುವುದು;

(ಸಿ) ದಸ್ತಗಿರಿಯಾದ ಅಥವಾ ಅಭಿರಕ್ಷೆಯಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯ ಊಟ ಮತ್ತು ವಸತಿಯ ಬಗ್ಗೆ ವಿಹಿತ ಏರ್ಪಾಡು ಮಾಡುವುದು;

(ಡಿ) ಜಪ್ತಿಗಳನ್ನು ನಡೆಸುವಾಗ ಅನಗತ್ಯವಾದ ಒರಟುತನದಿಂದ ವರ್ತಿಸದಿರುವುದು ಮತ್ತು ಅನಾವಶ್ಯಕ ಕಿರುಕುಳವನ್ನು ಕೊಡದಿರುವುದು;

(ಇ) ಹೆಂಗಸರು ಮತ್ತು ಮಕ್ಕಳೊಂದಿಗೆ ವರ್ತಿಸುವಾಗ ಸಭ್ಯತೆಯಿಂದ ಮತ್ತು ಯೋಗ್ಯ ಸೌಮ್ಯತೆಯಿಂದ ನಡೆದುಕೊಳ್ಳುವುದು;

(ಎಫ್) ಬೆಂಕಿಯಿಂದ ಯಾವುದೇ ನಷ್ಟ ಅಥವಾ ಹಾನಿಯನ್ನು ತಡೆಯಲು ಸಾಧ್ಯವಿದ್ದ ಎಲ್ಲ ಪ್ರಯತ್ನಗಳನ್ನು ಮಾಡುವುದು;

(ಜಿ) ಸಾರ್ವಜನಿಕರಿಗೆ ಯಾವುದೇ ಅಪಘಾತ ಅಥವಾ ಅಪಾಯವನ್ನು ತಪ್ಪಿಸಲು ತನಗೆ ಸಾಧ್ಯವಿದ್ದ ಎಲ್ಲ ಪ್ರಯತ್ನ ಮಾಡುವುದು;

ಆತನ ಕರ್ತವ್ಯವಾಗಿರತಕ್ಕದ್ದು.

**69. ಬೀದಿಗಳಲ್ಲಿ ಸಂಚಾರ ಇತ್ಯಾದಿಗಳನ್ನು ಪೊಲೀಸರು ಕ್ರಮಗೊಳಿಸುವುದು :–** (1) ಪೊಲೀಸು ಅಧಿಕಾರಿಯು

(ಎ) ಬೀದಿಗಳಲ್ಲಿ ಸಂಚಾರವನ್ನು ಕ್ರಮಗೊಳಿಸುವುದು ನಿಯಂತ್ರಿಸುವುದು, ಅಲ್ಲಿಯ ಅಡಚಣೆಗಳನ್ನು ನಿವಾರಿಸುವುದು ಮತ್ತು ತನಗೆ ಸಾಧ್ಯವಿದ್ದ ಮಟ್ಟಿಗೆ ಬೀದಿಗಳಲ್ಲಿ ಮತ್ತು ಬೀದಿಗಳ ಸಮೀಪದಲ್ಲಿ ಈ ಅಧಿನಿಯಮದ ಮೇರೆಗೆ ಅಥವಾ ಜಾರಿಯಲ್ಲಿರುವ ಬೇರೆ ಯಾವುದೇ ಕಾನೂನಿನ ಮೇರೆಗೆ ಮಾಡಿದ ಯಾವುದೇ ನಿಯಮ ಅಥವಾ ಆದೇಶವನ್ನು ಸಾರ್ವಜನಿಕರು ಪಾಲಿಸಬೇಕಾಗಿದ್ದು ಅದರ ಉಲ್ಲಂಘನೆಯಾಗದಂತೆ ತಡೆಯುವುದು;

(ಬಿ) ಬೀದಿಗಳಲ್ಲಿ ಮತ್ತು ಸಾರ್ವಜನಿಕ ಸ್ನಾನ ಸ್ಥಳಗಳಲ್ಲಿ, ಒಗೆಯುವ ಮತ್ತು ಇಳಿಯುವ ಸ್ಥಳಗಳಲ್ಲಿ, ಜಾತ್ರೆಗಳಲ್ಲಿ, ಬಜಾರುಗಳಲ್ಲಿ, ಮಂದಿರಗಳಲ್ಲಿ ಮತ್ತು ಸಾರ್ವಜನಿಕರು ಸೇರುವ ಇತರ ಎಲ್ಲ ಸ್ಥಳಗಳಲ್ಲಿ ಮತ್ತು ಅವುಗಳೊಳಗೆ ಮತ್ತು ಸಾರ್ವಜನಿಕ ಪೂಜಾಕಾಲದಲ್ಲಿ ಸಾರ್ವಜನಿಕ ಪೂಜಾಸ್ಥಳಗಳ ನೆರೆಹೊರೆಯಲ್ಲಿ ಸುವ್ಯಸ್ಥೆಯನ್ನು ಕಾಪಾಡುವುದು.

(ಸಿ) ಸಾರ್ವಜನಿಕ ಸ್ನಾನ ಸ್ಥಳಗಳಲ್ಲಿ ಒಗೆಯುವ ಮತ್ತು ಇಳಿಯುವ ಸ್ಥಳಗಳಲ್ಲಿ, ಸಾರ್ವಜನಿಕ ಹಾಯ್ಗಡದಲ್ಲಿ ಮತ್ತು ನೌಕೆಗಳಲ್ಲಿ ಹೆಚ್ಚಿನ ಜನಸಂದಣಿಯನ್ನು ತಡೆಯುವುದು ಮತ್ತು ತನಗೆ ಸಾಧ್ಯವಿದ್ದ, ಮಟ್ಟಿಗೆ ಅಂತಹ ಯಾವುದೇ ಸ್ಥಳದಲ್ಲಿ ಅಥವಾ ಯಾವುದೇ ನೌಕೆಯಲ್ಲಿ ಸಾರ್ವಜನಿಕರು ಪಾಲಿಸಲು ವಿಧಿಬದ್ಧವಾಗಿ ಮಾಡಿದ ಯಾವುದೇ ನಿಯಮ ಅಥವಾ ಆದೇಶದ ಉಲ್ಲಂಘನೆಯನ್ನು ತಡೆಯುವುದು.

ಅವನ ಕರ್ತವ್ಯವಾಗಿರತಕ್ಕದ್ದು.

**70. ಪೊಲೀಸರ ಯುಕ್ತ ನಿದೇಶನಗಳನ್ನು ಅನುಸರಿಸಲು ವ್ಯಕ್ತಿಗಳು ಬದ್ಧರು :–** ಈ ಅಧಿನಿಯಮದ ಮೇರೆಗೆ ತನ್ನ ಕರ್ತವ್ಯಗಳನ್ನು ಈಡೇರಿಸುವುದರಲ್ಲಿ ಪೊಲೀಸು ಅಧಿಕಾರಿಯು ಕೊಟ್ಟ ಯುಕ್ತ ನಿದೇಶನಗಳನ್ನು ಅನುಸರಿಸಲು ಎಲ್ಲ ವ್ಯಕ್ತಿಗಳು ಬದ್ಧರಾಗಿರತಕ್ಕದ್ದು.

**71. ತಡೆಯಲು, ಸಾಗಿಸಲು ಇತ್ಯಾದಿಗಳ ಬಗ್ಗೆ ಪೊಲೀಸು ಅಧಿಕಾರಿಯ ಅಧಿಕಾರಗಳು :–** 70ನೆಯ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ನಿರ್ದೇಶನವನ್ನು ಅನುಸರಿಸಲು ಪ್ರತಿಭಟಿಸುವ ಅಥವಾ ನಿರಾಕರಿಸುವ ಅಥವಾ ತಪ್ಪುವ ಯಾವನೇ ವ್ಯಕ್ತಿಯನ್ನು ಪೊಲೀಸು ಅಧಿಕಾರಿಯು ತಡೆಹಿಡಿಯಬಹುದು ಅಥವಾ ಸಾಗಿಸಬಹುದು ಮತ್ತು ಅಂತಹ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟನ ಮುಂದೆ ಒಯ್ಯಬಹುದು ಅಥವಾ, ಕ್ಷುದ್ರ ಸಂದರ್ಭಗಳಲ್ಲಿ, ಅಂತಹ ಪ್ರಸಂಗದ ತರುವಾಯ ಅವನನ್ನು ಬಿಟ್ಟುಬಿಡಬಹುದು.

**72. 35, 36 ಅಥವಾ 38ನೆಯ ಪ್ರಕರಣದ ಮೇರೆಗೆ ಹೊರಡಿಸಿದ ಆದೇಶಗಳ ಜಾರಿ :–** 35ನೆಯ ಪ್ರಕರಣದ ಮೇರೆಗೆ ಸರಿಯಾಗಿ ಅಧಿಸೂಚನೆಯನ್ನು ಹೊರಡಿಸಿರುವಾಗ ಅಥವಾ 36ನೆಯ ಅಥವಾ 38ನೆಯ ಪ್ರಕರಣದ ಮೇರೆಗೆ ಆದೇಶವನ್ನು ಮಾಡಿರುವಾಗ ಅದಕ್ಕೆ ವಿರುದ್ಧವಾಗಿ ವರ್ತಿಸುವ ಅಥವಾ ವರ್ತಿಸಲಿರುವ ಯಾವನೇ ವ್ಯಕ್ತಿಯನ್ನು ಆ ಜಿಲ್ಲೆಯ ಯಾವನೇ ಮ್ಯಾಜಿಸ್ಟ್ರೇಟನು ಅಥವಾ ಪೊಲೀಸು ಅಧಿಕಾರಿಯು ಹಾಗೆ ಮಾಡದೇ ಇರಲು ಅಥವಾ ಮಾಡುವುದನ್ನು ನಿಲ್ಲಿಸಲು ಅಗತ್ಯಪಡಿಸುವುದು ಮತ್ತು ನಿರಾಕರಿಸುವ ಅಥವಾ ಉಲ್ಲಂಘಿಸುವ ಸಂದರ್ಭದಲ್ಲಿ ಅಪರಾಧ ಮಾಡುವ ವ್ಯಕ್ತಿಯನ್ನು ದಸ್ತಗಿರಿ ಮಾಡುವುದು, ವಿಧಿಬದ್ಧವಾಗಿರತಕ್ಕದ್ದು. ಅಂತಹ ಮ್ಯಾಜಿಸ್ಟ್ರೇಟನು ಅಥವಾ ಪೊಲೀಸು ಅಧಿಕಾರಿಯು ಅಂತಹ ಅಧಿಸೂಚನೆಯ ಅಥವಾ ಮೇಲೆ ಹೇಳಿದ ಆದೇಶದ ಉಲ್ಲಂಘನೆಯಲ್ಲಿ ಉಪಯೋಗಿಸಿದ ಅಥವಾ ಉಪಯೋಗಿಸಲಿರುವ ಯಾವುದೇ ಪದಾರ್ಥವನ್ನು

ಅಥವಾ ವಸ್ತುವನ್ನು ವಶಪಡಿಸಿಕೊಳ್ಳಲೂ ಬಹುದು ಹಾಗೆ ವಶಪಡಿಸಿಕೊಂಡ ವಸ್ತುವನ್ನು ಆ ಸ್ಥಳದಲ್ಲಿ ಅಧಿಕಾರ ವ್ಯಾಪ್ತಿಯುಳ್ಳ ಯಾವನೇ ಜಿಲ್ಲಾ ಮ್ಯಾಜಿಸ್ಟ್ರೇಟಿನ ಆದೇಶಾನುಸಾರ ವಿಲೇ ಮಾಡತಕ್ಕದ್ದು.

**73. 42, 54, 55, 56 ಅಥವಾ 63ನೆಯ ಪ್ರಕರಣದ ಮೇರೆಗೆ ಹೊರಡಿಸಿದ ಆದೇಶಗಳು ಕಾರ್ಯಗತವಾಗುವಂತೆ ನೋಡಿಕೊಳ್ಳುವುದು ಪೊಲೀಸರ ಕರ್ತವ್ಯ :–** 42, 54, 55, 56 ಅಥವಾ 63ನೆಯ ಪ್ರಕರಣದ ಮೇರೆಗೆ ಯಾವುದೇ ಪ್ರಾಧಿಕಾರಿಯಿಂದ ಮಾಡಲಾದ ಪ್ರತಿಯೊಂದು ವಿನಿಮಯ ಮತ್ತು ನಿರ್ದೇಶವು ಸರಿಯಾಗಿ ಪಾಲಿಸಲಾಗುತ್ತಿದೆ ಎಂಬುದನ್ನು ನೋಡಿಕೊಳ್ಳುವುದು, ತಿಳುವಳಿಕೆ ಇಲ್ಲದೇ ಅದನ್ನ ಪಾಲಿಸಲು ತಪ್ಪುವ ವ್ಯಕ್ತಿಗಳಿಗೆ ಎಚ್ಚರಿಕೆ ಕೊಡುವುದು ಮತ್ತು ಬುದ್ಧಿಪೂರ್ವಕವಾಗಿ ಅದನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯನ್ನು ದಸ್ತಗಿರಿ ಮಾಡುವುದು ಪೊಲೀಸಿನ ಕರ್ತವ್ಯವಾಗಿರತಕ್ಕದ್ದು.

**74. ಪೊಲೀಸು ಅಧಿಕಾರಿಯು ಯಾವಾಗ ವಾರಂಟ್ ಇಲ್ಲದೇ ದಸ್ತಗಿರಿ ಮಾಡಬಹುದು :–** ಪೊಲೀಸು ಅಧಿಕಾರಿಯು ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿತವಾದ ಯಾವ ನಿಯಮದ ಮೇರೆಗೆ ದಂಡನೀಯವಾದ ಮತ್ತು ತತ್ಸಂಬಂಧದಲ್ಲಿ ಬೇರೆಡೆಗೆ ಅಥವಾ ಆಯಾ ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಸ್ಪಷ್ಟ ಉಪಬಂಧವು ಏರ್ಪಟ್ಟಿರದ ಯಾವುದೇ ಸಂಜ್ಞೇಯವಲ್ಲದ ಅಪರಾಧವನ್ನು ಯಾವುದೇ ಬೀದಿಯಲ್ಲಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ತನ್ನ ಸಮ್ಮುಖದಲ್ಲಿ ಮಾಡುತ್ತಿರುವ ಯಾವನೇ ವ್ಯಕ್ತಿಯನ್ನು, ಅಂತಹ ವ್ಯಕ್ತಿಯು,–

(i) ಪೊಲೀಸು ಅಧಿಕಾರಿಯು ಎಚ್ಚರಿಕೆ ಕೊಟ್ಟ ತರುವಾಯವೂ ಅಂತಹ ಅಪರಾಧವನ್ನು ಮಾಡುತ್ತಿದ್ದರೆ; ಅಥವಾ

(ii) ಪೊಲೀಸು ಅಧಿಕಾರಿಯೊಂದಿಗೆ ಪೊಲೀಸು ಠಾಣೆಗೆ ಬರಲು ಅಗತ್ಯಪಡಿಸಿದಾಗ ಜೊತೆಗೆ ಹೋಗಲು ನಿರಾಕರಿಸಿದರೆ,

– ಅವನನ್ನು ವಾರಂಟು ಇಲ್ಲದೆ ದಸ್ತಗಿರಿ ಮಾಡಬಹುದು.

**75. ಕ್ಲೇಮು ಮಾಡದ ಸ್ವತ್ತನ್ನು ಪೊಲೀಸು ವಶಕ್ಕೆ ತೆಗೆದುಕೊಳ್ಳುವುದು :–** ಪೊಲೀಸು

(ಎ) ತಮಗೆ ಸಿಕ್ಕಿದ ಅಥವಾ ಒಪ್ಪಿಸಲಾದ ಕ್ಲೇಮು ಮಾಡಿರದ ಎಲ್ಲ ಸ್ವತ್ತನ್ನು, ಮತ್ತು

(ಬಿ) ಯಾವುದೇ ಸಾರ್ವಜನಿಕ ಬೀದಿಯಲ್ಲಿ ಬಿದ್ದಿರುವ ಎಲ್ಲ ಸ್ವತ್ತನ್ನು, ಅಂತಹ ಸ್ವತ್ತಿನ ಒಡೆಯನು ಅಥವಾ ಅದನ್ನು ವಶದಲ್ಲಿಟ್ಟುಕೊಂಡಿರುವ ವ್ಯಕ್ತಿಯು ಅದನ್ನು ಸಾಗಿಸಲು ನಿರ್ದೇಶಿಸಲ್ಪಟ್ಟಾಗ ಹಾಗೆ ಮಾಡಲು ನಿರಾಕರಿಸಿದರೆ ಅಥವಾ ತಪ್ಪಿದರೆ;

ತಾತ್ಕಾಲಿಕವಾಗಿ ತನ್ನ ವಶಕ್ಕೆ ತೆಗೆದುಕೊಳ್ಳತಕ್ಕದ್ದು.

**76. ಪೊಲೀಸು ಅಧಿಕಾರಿಯು ಅಲೆಯುತ್ತಿರುವ ದನಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳಬಹುದು :–** ಪೊಲೀಸು ಅಧಿಕಾರಿಯು, ಬೀದಿಯಲ್ಲಿ ಅಲೆಯುತ್ತಿರುವ ಯಾವುದೇ ಪಶುವನ್ನು ತನ್ನ ವಶಕ್ಕೆ ತೆಗೆದುಕೊಳ್ಳಬಹುದು ಮತ್ತು ಅದನ್ನು ಅತಿ ಸಮೀಪದ ದನಗಳ ದೊಡ್ಡಿಗೆ ಒಯ್ಯಬಹುದು ಅಥವಾ ಕಳಿಸಬಹುದು

ಮತ್ತು ಒಡೆಯನು ಅಥವಾ ಸಂಬಂಧಪಟ್ಟ ಇತರ ವ್ಯಕ್ತಿಯು ಆ ಬಳಿಕ ಜಾರಿಯಲ್ಲಿರುವ ದನಗಳ ಅತಿಕ್ರಮಣ ಅಧಿನಿಯಮದ ಉಪಬಂಧಗಳಿಗೊಳಪಟ್ಟಿರತಕ್ಕದ್ದು.

**77. ವರಿಷ್ಠ ಪೊಲೀಸು ಅಧಿಕಾರಿಯು ತನಗಿಂತ ಕೆಳಗಿನವರಿಗೆ ವಿಧಿಸಲಾದ ಕರ್ತವ್ಯಗಳನ್ನು ತಾನೇ ನೆರವೇರಿಸಬಹುದು ಇತ್ಯಾದಿ :–** ಕಾನ್‌ಸ್ಟೇಬಲ್‌ಗಿಂತ ವರಿಷ್ಠ ದರ್ಜೆಯ ಪೊಲೀಸು ಅಧಿಕಾರಿಯು, ಕಾನೂನಿನ ಮೂಲಕ ಅಥವಾ ಕಾನೂನುಬದ್ಧ ಆದೇಶದ ಮೂಲಕ ತನ್ನ ಅಧೀನಸ್ಥ ಅಧಿಕಾರಿಗೆ ವಹಿಸಲಾಗಿರುವ ಯಾವುದೇ ಕರ್ತವ್ಯವನ್ನು ನೆರವೇರಿಸಬಹುದು; ಮತ್ತು ಅಂತಹ ಅಧೀನಸ್ಥನಿಗೆ ಯಾವುದೇ ಕರ್ತವ್ಯವನ್ನು ವಿಧಿಸಿರುವ ಸಂದರ್ಭದಲ್ಲಿ ವರಿಷ್ಠನು ತನಗೆ ಅವಶ್ಯವೆಂದು ತೋರಿದಾಗ ಅಂತಹ ಅಧೀನಸ್ಥಾನ ಕ್ರಮಕ್ಕೆ ಅಥವಾ ಕಾನೂನನ್ನು ಪೂರ್ಣತರವಾಗಿ ಅಥವಾ ಅನುಕೂಲಕರವಾಗಿ ಕಾರ್ಯಗತಗೊಳಿಸುವುದಕ್ಕಾಗಿ ಅಥವಾ ಅದರ ಉಲ್ಲಂಘನೆಯು ಆಗದಿರುವುದಕ್ಕಾಗಿ ಅವಶ್ಯ ಅಥವಾ ವಿಹಿತವೆನಿಸಿದಾಗ, ತನ್ನ ಕಾನೂನುಬದ್ಧ ಆಜ್ಞೆಯ ಅಥವಾ ಪ್ರಾಧಿಕಾರದ ಮೇರೆಗೆ ವರ್ತಿಸುವ ಯಾವನೇ ವ್ಯಕ್ತಿಯ ಕಾರ್ಯಕ್ಕೆ ತನ್ನ ಕಾರ್ಯದ ಮೂಲಕ ಸಹಾಯ ಮಾಡಬಹುದು ಪೂರಕವಾಗಿ ವರ್ತಿಸಬಹುದು, ಅದನ್ನು ರದ್ದುಗೊಳಿಸಬಹುದು ಅಥವಾ ನಿರೋಧಿಸಬಹುದು.

## ಅಧ್ಯಾಯ – VII

## ಜೂಜಿನ ನಿರೋಧ

**78. ಕೆಲವು ಬಗೆಯ ಜೂಜುಗಳನ್ನು ಪ್ರಾರಂಭಿಸುವುದು ಇತ್ಯಾದಿ :–**

(1) ಯಾವೊಬ್ಬನು,–

(ಎ) ಯಾವುದೇ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ ಅಥವಾ ಸ್ಥಳದ ಒಡೆಯನು ಅಥವಾ ಆಧಿಭೋಗದಾರನು ಅಥವಾ ಅದನ್ನು ಉಪಯೋಗಿಸುವವನು ಆಗಿದ್ದು ಅದನ್ನು

(i) ಕುದುರೆ ಪಂದ್ಯದ ಮೇಲೆ, ಅಥವಾ

(ii) ಹತ್ತಿ, ಚಿನ್ನ–ಬೆಳ್ಳಿ, ಅಥವಾ ಇತರ ವಸ್ತುವಿನ ಮಾರುಕಟ್ಟೆ ಬೆಲೆಯ ಮೇಲೆ ಅಂತಹ ಬೆಲೆಯನ್ನು ಸೂಚಿಸಲು ಉಪಯೋಗಿಸುವ ಸಂಖ್ಯೆಯ ಅಂಕಗಳ ಮೇಲೆ; ಅಥವಾ

(iii) ಅಂತಹ ಯಾವುದೇ ವಸ್ತುವಿನ ಮಾರುಕಟ್ಟೆಯ ಬೆಲೆಯ ಮೊಬಲಗಿನ ಅಥವಾ ಅದರಲ್ಲಾಗುವ ವ್ಯತ್ಯಾಸಗಳ ಮೇಲೆ ಅಥವಾ ಅಂತಹ ವ್ಯತ್ಯಾಸವನ್ನು ಸೂಚಿಸಲು ಉಪಯೋಗಿಸುವ ಸಂಖ್ಯೆಯ ಅಂಕಗಳ ಮೇಲೆ; ಅಥವಾ

(iv) ಯಾವುದೇ ನಿಧಿಪತ್ರ (ಸ್ಟಾಕ್) ಷೇರಿನ ಮಾರುಕಟ್ಟೆಯ ಬೆಲೆಯ ಮೇಲೆ ಅಥವಾ ಅಂತಹ ಬೆಲೆಯನ್ನು ಸೂಚಿಸಲು ಉಪಯೋಗಿಸುವ ಸಂಖ್ಯೆಯ ಅಂಕಗಳ ಮೇಲೆ; ಅಥವಾ

(v) ಸಾರ್ವಜನಿಕ ಸ್ಥಳವನ್ನು ಉಪಯೋಗಿಸುವ ಯಾವುದೇ ಮೋಟಾರು ವಾಹನದ ನೋಂದಣಿ ಸಂಖ್ಯೆಯ ಮೇಲೆ ಅಥವಾ ನೋಂದಣಿ ಸಂಖ್ಯೆಯ ಅಂಕಗಳ ಮೇಲೆ; ಅಥವಾ

(vi) ಅದೃಷ್ಟವನ್ನು ಅವಲಂಬಿಸಿರುವ ಹಣ ಅಥವಾ ಇತರ ರೂಪದಲ್ಲಿರುವ ಲಾಭಗಳ ಅಥವಾ ಬಹುಮಾನಗಳ ಸ್ವೀಕಾರ ಅಥವಾ ಹಂಚಿಕೆಯಿಂದ ಕೂಡಿರುವ ಯಾವುದೇ ವ್ಯವಹಾರದ ಮೇಲೆ ಅಥವಾ ಪಂದ್ಯ ಅಥವಾ ಪಣದ ಯೋಜನೆಯ ಮೇಲೆ; ಜೂಜಾಟವಾಡುವ ಉದ್ದೇಶಕ್ಕಾಗಿ ತೆರೆದರೆ, ಇಟ್ಟರೆ ಅಥವಾ ಉಪಯೋಗಿಸಿದರೆ; ಅಥವಾ

(ಬಿ) ಅಂತಹ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ, ಅಥವಾ ಸ್ಥಳದ ಒಡೆಯ ಅಥವಾ ಅಧಿಭೋಗದಾರನಾಗಿದ್ದು ಮೇಲೆ ಹೇಳಿದ ಯಾವುದೇ ರೀತಿಯ ಜೂಜಾಟವಾಡುವ ಉದ್ದೇಶಕ್ಕಾಗಿ ಇತರ ಯಾವನೇ ವ್ಯಕ್ತಿಯು ಅದನ್ನು ಅಧಿಭೋಗಿಸಲು, ಇಟ್ಟುಕೊಳ್ಳಲು ಅಥವಾ ಉಪಯೋಗಿಸಲು ತಿಳಿದೂ ಅಥವಾ ಬುದ್ಧಿಪೂರ್ವಕವಾಗಿ ಅನುಮತಿ ಕೊಟ್ಟರೆ, ಅಥವಾ

(ಸಿ) ಮೇಲೆ ಹೇಳಿದ ಯಾವುದೇ ರೀತಿಯಲ್ಲಿ ಜೂಜಾಟವಾಡುವ ಉದ್ದೇಶಕ್ಕಾಗಿ ತೆರೆದ ಆಧಿಭೋಗಿಸಿದ, ಇಟ್ಟುಕೊಂಡ ಅಥವಾ ಉಪಯೋಗಿಸಿದ ಅಂತಹ ಯಾವುದೇ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ ನೌಕೆ ಅಥವಾ ಸ್ಥಳದ ಮೇಲ್ವಿಚಾರಣೆ ಅಥವಾ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರೆ ಅಥವಾ ಅದರ ವ್ಯವಹಾರ ನಡೆಯಿಸುವುದರಲ್ಲಿ ಯಾವುದೇ ರೀತಿಯಲ್ಲಿ ಸಹಾಯ ಮಾಡುತ್ತಿದ್ದರೆ, ಅಥವಾ

(ಡಿ) ಅಂಥ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ ನೌಕೆ ಅಥವಾ ಸ್ಥಳಕ್ಕೆ ಆಗಾಗ ಬರುವ ವ್ಯಕ್ತಿಗಳಿಗೆ ಮೇಲೆ ಹೇಳಿದ ಯಾವುದೇ ವಸ್ತು ರೀತಿಯಲ್ಲಿ ಜೂಜಾಟವಾಡುವ ಉದ್ದೇಶಕ್ಕಾಗಿ, ಸಾಲ ಕೊಡುತ್ತಿದ್ದರೆ ಅಥವಾ ಹಣ ಒದಗಿಸುತ್ತಿದ್ದರೆ, ಅವನು, ಅಪರಾಧ ಸಿದ್ಧಪಟ್ಟ ಬಳಿಕ, ಒಂದು ವರುಷದವರೆಗೆ ವಿಸ್ತರಿಸಬಹುದುದಾದ ಕಾರವಾಸ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು:

ಪಂರತು, ಅಭಿಲೇಖಿಸಬೇಕಾದ ವಿಶೇಷ ಕಾರಣಗಳಿಲ್ಲದಿರುವಾಗ, ಈ ಉಪಪ್ರಕರಣದ ಮೇರೆಗೆ ಯಾವುದೇ ಅಪರಾಧದ ಬಗ್ಗೆ ಅಪರಾಧ ಸಿದ್ಧಪಟ್ಟ ಬಳಿಕ ಅಪರಾಧಿಗೆ ವಿಧಿಸಿದ ದಂಡನೆಯು ಒಂದು ತಿಂಗಳಿಗೆ ಕಡಿಮೆಯಲ್ಲದ ಕಾರಾವಾಸ ಅಥವಾ ಐದು ನೂರು ರೂಪಾಯಿಗಳಿಗೆ ಕಡಿಮೆಯಿಲ್ಲದ ಜುಲ್ಮಾನೆ ಅಥವಾ ಎರಡೂ ಆಗಿರತಕ್ಕದ್ದು.

(2) ಯಾವನೇ ವ್ಯಕ್ತಿಯು, (1)ನೆಯ ಉಪಪ್ರಕರಣದಲ್ಲಿ ನಿರ್ದೇಶಿಸಿದ ಯಾವುದೇ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ, ಅಥವಾ ಸ್ಥಳದಲ್ಲಿ, ಆ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ರೀತಿಯಲ್ಲಿ ಜೂಜಾಟವಾಡುತ್ತಿರುವುದು ಕಂಡುಬಂದರೆ, ಅಥವಾ ಅಂತಹ ಯಾವುದೇ ರೀತಿಯಲ್ಲಿ ಜೂಜಾಟವಾಡುವ ಉದ್ದೇಶಕ್ಕಾಗಿ ಅಲ್ಲಿ ಹಾಜರಿದ್ದರೆ, ಅಪರಾಧ ಸಿದ್ಧಪಟ್ಟ ಬಳಿಕ ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಐದೂನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

ಅಂತಹ ಯಾವುದೇ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ ನೌಕೆ ಅಥವಾ ಸ್ಥಳದಲ್ಲಿ (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ರೀತಿಯಲ್ಲಿ ಜೂಜಾಟ ನಡೆಯುತ್ತಿರುವಾಗ ಅಲ್ಲಿ ಕಂಡು ಬಂದ ಯಾವನೇ ವ್ಯಕ್ತಿಯು, ತದ್ವಿರುದ್ಧ ರುಜುವಾತು ಆಗುವವರೆಗೆ ಅಂತಹ ರೀತಿಯಲ್ಲಿ ಜೂಜಾಟವಾಡುವ ಉದ್ದೇಶಕ್ಕಾಗಿ ಅಲ್ಲಿ ಇದ್ದನೆಂದು ಭಾವಿಸಲ್ಪಡತಕ್ಕದ್ದು.

(3) ಯಾವನೇ ವ್ಯಕ್ತಿಯು, (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವೊಂದು ರೀತಿಯಲ್ಲಿ ಯಾವುದೇ ಸಾರ್ವಜನಿಕ ಬೀದಿಯಲ್ಲಿ ಅಥವಾ ಮಾರ್ಗದಲ್ಲಿ ಅಥವ ಸಾರ್ವಜನಿಕರಿಗೆ ಪ್ರವೇಶವಿರುವ ಅಥವಾ ಪ್ರವೇಶಹೊಂದಲು ಅನುಮತಿಯಿರುವ ಯಾವುದೇ ಸ್ಥಳದಲ್ಲಿ ಜೂಜಾಟವಾಡುತ್ತಿರುವುದು ಕಂಡುಬಂದರೆ, ಅಪರಾಧ ಸಿದ್ಧಪಟ್ಟ ಬಳಿಕ, ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಮೂರು ನೂರು ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

**79. ಸಾಮಾನ್ಯ ಜೂಜಿನ ಮನೆಯನ್ನು ಇಡುವುದು, ಇತ್ಯಾದಿ :–** ಯಾವೊಬ್ಬ ವ್ಯಕ್ತಿಯು,

(ಎ) ಸಾಮಾನ್ಯ ಜೂಜಿನ ಮನೆಯ ಉದ್ದೇಶಕ್ಕಾಗಿ ಯಾವುದೇ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ ಅಥವಾ ಸ್ಥಳವನ್ನು ತೆರೆದರೆ, ಇರಿಸಿದರೆ ಅಥವಾ ಉಪಯೋಗಿಸಿದರೆ;

(ಬಿ) ಅಂತಹ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ ಅಥವಾ ಸ್ಥಳದ ಒಡೆಯನಾಗಿದ್ದು ಅಥವಾ ಆಧಿಭೋಗದಾರನಾಗಿದ್ದು ಅದನ್ನು ಮೇಲೆ ಹೇಳಿದ ಉದ್ದೇಶಕ್ಕಾಗಿ ಬೇರೊಬ್ಬ ವ್ಯಕ್ತಿಯಿಂದ ತೆರೆಯಲು, ಸ್ವಾಧೀನಪಡಿಸಿಕೊಳ್ಳಲು ಇಡಲು ಅಥವಾ ಉಪಯೋಗಿಸಲು ತಿಳಿದೂ ಅಥವಾ ಬುದ್ಧಿಪೂರ್ವಕವಾಗಿ ಅನುಮತಿ ಕೊಟ್ಟರೆ;

(ಸಿ) ಮೇಲೆ ಹೇಳಿದ ಉದ್ದೇಶಕ್ಕಾಗಿ ಪ್ರಾರಂಭಿಸಿದ, ಅಧಿಭೋಗಿಸಿದ, ಇಟ್ಟುಕೊಂಡ ಅಥವಾ ಉಪಯೋಗಿಸಿದ ಅಂತಹ ಯಾವುದೇ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ, ಅಥವಾ ಸ್ಥಳದ ಮೇಲ್ವಿಚಾರಣೆ ಅಥವಾ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರೆ ಅಥವಾ ಅದರ ವ್ಯವಹಾರ ನಡೆಯಿಸುವುದರಲ್ಲಿ ಯಾವುದೇ ರೀತಿಯಲ್ಲಿ ಸಹಾಯ ಮಾಡುತ್ತಿದ್ದರೆ; ಅಥವಾ

(ಡಿ) ಅಂತಹ ಯಾವುದೇ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ ಅಥವಾ ಸ್ಥಳಕ್ಕೆ ಆಗಾಗ ಬರುವ ವ್ಯಕ್ತಿಗಳಿಗೆ ಜೂಜಾಟವಾಡುವ ಉದ್ದೇಶಕ್ಕಾಗಿ, ಸಾಲಕೊಡುತ್ತಿದ್ದರೆ, ಅಥವಾ ಹಣ ಒದಗಿಸುತ್ತಿದ್ದರೆ,

ಅವನು, ಅಪರಾಧ ಸಿದ್ಧಪಟ್ಟ ಬಳಿಕ, ಒಂದು ವರುಷದವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು,–

(ಎ) ಮೊದಲನೆಯ ಅಪರಾಧಕ್ಕಾಗಿ, ಇಂತಹ ಕಾರಾವಾಸವು ಮೂರು ತಿಂಗಳಿಗಿಂತ ಕಡಿಮೆಯಾಗತಕ್ಕದ್ದಲ್ಲ ಮತ್ತು ಜುಲ್ಮಾನೆಯು ಐದುನೂರು ರೂಪಾಯಿಗಳಿಗಿಂತ ಕಡಿಮೆಯಾಗತಕ್ಕದಲ್ಲ;

(ಬಿ) ಎರಡನೆಯ ಅಪರಾಧಕ್ಕಾಗಿ, ಅಂತಹ ಕಾರಾವಾಸವು ಆರು ತಿಂಗಳಿಗಿಂತ ಕಡಿಮೆಯಾಗತಕ್ಕದಲ್ಲ ಮತ್ತು ಜುಲ್ಮಾನೆಯು ಐದು ನೂರು ರೂಪಾಯಿಗಳಿಗಿಂತ ಕಡಿಮೆಯಾಗತಕ್ಕದಲ್ಲ; ಮತ್ತು

(ಸಿ) ಮೂರನೆಯ ಅಥವಾ ತರುವಾಯದ ಅಪರಾಧಕ್ಕಾಗಿ ಅಂತಹ ಕಾರಾವಾಸವು, ಒಂಬತ್ತು ತಿಂಗಳಿಗಿಂತ ಕಡಿಮೆಯಾಗತಕ್ಕದಲ್ಲ ಮತ್ತು ಜುಲ್ಮಾನೆಯು ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಾಗತಕ್ಕದ್ದಲ್ಲ.

**80**. **ಸಾಮಾನ್ಯ ಜೂಜಿನ ಮನೆಯಲ್ಲಿ ಜೂಜಾಟ ಇತ್ಯಾದಿ :–** ಯಾವೊಬ್ಬನು ಸಾಮಾನ್ಯ ಜೂಜಿನ ಮನೆಯಲ್ಲಿ ಜೂಜಾಟವಾಡುತ್ತಿದ್ದುದು ಅಥವಾ ಜೂಜಾಟವಾಡುವ ಉದ್ದೇಶಕ್ಕಾಗಿ ಹಾಜರಿದ್ದುದು ಕಂಡುಬಂದರೆ, ಅವನು ಅಪರಾಧ ಸಿದ್ಧಪಟ್ಟ ಬಳಿಕ, ಒಂದು ವರುಷದವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು,–

(ಎ) ಮೊದಲನೆಯ ಅಪರಾಧಕ್ಕಾಗಿ, ಅಂತಹ ಕಾರಾವಾಸವು ಒಂದು ತಿಂಗಳಿಗಿಂತ ಕಡಿಮೆಯಾಗತಕ್ಕದ್ದಲ್ಲ ಮತ್ತು ಜುಲ್ಮಾನೆಯು ಎರಡು ನೂರು ರೂಪಾಯಿಗಳಿಗಿಂತ ಕಡಿಮೆಯಾಗತಕ್ಕದ್ದಲ್ಲ;

(ಬಿ) ಎರಡನೆಯ ಅಪರಾಧಕ್ಕಾಗಿ, ಅಂತಹ ಕಾರಾವಾಸವು ಮೂರು ತಿಂಗಳಿಗಿಂತ ಕಡಿಮೆಯಾಗತಕ್ಕದ್ದಲ್ಲ ಮತ್ತು ಜುಲ್ಮಾನೆಯು ಎರಡು ನೂರು ರೂಪಾಯಿಗಳಿಗಿಂತ ಕಡಿಮೆಯಾಗತಕ್ಕದ್ದಲ್ಲ; ಮತ್ತು

(ಸಿ) ಮೂರನೆಯ ಅಥವಾ ಆ ತರುವಾಯದ ಅಪರಾಧಕ್ಕಾಗಿ, ಕಾರಾವಾಸವು ಆರು ತಿಂಗಳುಗಳಿಗಿಂತ ಕಡಿಮೆಯಾಗತಕ್ಕದ್ದಲ್ಲ ಮತ್ತು ಜುಲ್ಮಾನೆಯು ಐದು ನೂರು ರೂಪಾಯಿಗಳಿಗಿಂತ ಕಡಿಮೆಯಾಗತಕ್ಕದ್ದಲ್ಲ.

**81. ಜೂಜಿನ ಮನೆಗೆ ಪೋಲೀಸು ಅಧಿಕಾರಿಗಳ ಪ್ರವೇಶ, ಝಡತಿ, ಇತ್ಯಾದಿ :–** ಯಾವೊಬ್ಬ ಪೋಲೀಸು ಅಧಿಕಾರಿಯು,

(i) ಬೆಂಗಳೂರು ನಗರದಲ್ಲಿ, ಲಿಖಿತದಲ್ಲಿ ಸಾಮಾನ್ಯ ಆದೇಶದಿಂದ ಶಕ್ತಗೊಳಿಸಲಾದ ಅಥವಾ ಪ್ರತಿಯೊಂದು ಸಂದರ್ಭದಲ್ಲಿಯೂ ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ಅಥವಾ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟನಿಂದ, ಅಥವಾ ಪೋಲೀಸು ಕಮೀಷನರ್‌ನಿಂದ ಅಥವಾ ಪೋಲೀಸು ಸೂಪರಿಂಟೆಂಡೆಂಟನಿಂದ; ಅಥವಾ ಪೋಲೀಸು ಡೆಪ್ಯೂಟಿ ಕಮೀಷನರ್‌ನಿಂದ ಸಹಾಯಕ ಪೋಲೀಸು ಸೂಪರಿಂಟೆಂಡೆಂಟನಿಂದ ಅಥವಾ ಡೆಪ್ಯೂಟಿ ಸೂಪರಿಂಟೆಂಡೆಂಟನಿಂದ ಅಥವಾ ಪೋಲೀಸು ಸಹಾಯಕ ಕಮೀಷನರ್‌ನಿಂದ ಜಾರಿ ಮಾಡಲಾದ ವಿಶೇಷ ವಾರಂಟ್‌ನ ಮೂಲಕ ಪ್ರಾಧಿಕೃತನಾದ ಪೋಲೀಸು ಸಬ್ ಇನ್ಸ್‌ಪೆಕ್ಟರನ ದರ್ಜೆಗೆ ಕಡಿಮೆಯಲ್ಲದವನಾಗಿದ್ದ, ಮತ್ತು

(ii) ಬೇರೆ ಕಡೆಯಲ್ಲಿ, ಪ್ರತಿಯೊಂದು ಸಂದರ್ಭದಲ್ಲೂ, ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ಅಥವಾ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟನಿಂದ, ಅಥವಾ ಈ ಬಗ್ಗೆ ವಿಶೇಷವಾಗಿ ರಾಜ್ಯ ಸರಕಾರದಿಂದ ಶಕ್ತಗೊಳಿಸಲಾದ ಮ್ಯಾಜಿಸ್ಟ್ರೇಟನಿಂದ ಅಥವಾ ಪೋಲೀಸು ಸೂಪರಿಂಟೆಂಡಂಟನಿಂದ ಅಥವಾ ಸಹಾಯಕ ಅಥವಾ ಡೆಪ್ಯೂಟಿ ಪೋಲೀಸು ಸೂಪರಿಂಟೆಂಡಂಟನಿಂದ ವಿಶೇಷ ವಾರಂಟಿನ ಮೂಲಕ ಪ್ರಾಧಿಕೃತನಾದ ಪೋಲೀಸು ಸಬ್–ಇನ್ಸ್‌ಪೆಕ್ಟರನ ದರ್ಜೆಗೆ ಕಡಿಮೆಯಲ್ಲದವನಾಗಿದ್ದು;

(ಎ) ಸಾಮಾನ್ಯ ಜೂಜಿನ ಮನೆ ಎಂದು ಅಥವಾ 78ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ನಿರ್ದೇಶಿಸಲಾದ ರೀತಿಯಲ್ಲಿ ಜೂಜಾಡುವ ಉದ್ದೇಶಕ್ಕಾಗಿ ಉಪಯೋಗಿಸಲ್ಪಡುತ್ತಿವೆ ಎಂದು ಸಂಶಯಪಡಲಿಕ್ಕೆ ಕಾರಣಗಳಿರುವಂತಹ ಯಾವುದೇ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ ಅಥವಾ ಸ್ಥಳವನ್ನು, ಅವಶ್ಯಕವೆಂದು ಕಂಡುಬರಬಹುದಾದಂತಹ ಜನರ ಸಹಾಯದೊಂದಿಗೆ ರಾತ್ರಿಯಲ್ಲಾಗಲಿ ಅಥವಾ ಹಗಲಿನಲ್ಲಾಗಲಿ, ಮತ್ತು ಅವಶ್ಯವಿದ ಪಕ್ಷದಲ್ಲಿ ಬಲಾತ್ಕರದಿಂದ ಪ್ರವೇಶಿಸುವುದು;

(ಬಿ) ಅವನು ಹಾಗೆ ಪ್ರವೇಶಿಸಿದ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ ಅಥವಾ ಸ್ಥಳವನ್ನು ಅದರಲ್ಲಿ ಜೂಜಾಟದ ಉಪಕರಣಗಳನ್ನು ಬಚ್ಚಿಡಲಾಗಿದೆಯೆಂದು ಸಂಶಯಪಡಲು ಕಾರಣವಿದ್ದಾಗ ಅದರ ಎಲ್ಲಾ ಭಾಗಗಳನ್ನು ಮತ್ತು ಅಲ್ಲಿ ಕಂಡುಬರುವ ವ್ಯಕ್ತಿಗಳನ್ನು ಅವರು ಆಗ ವಾಸ್ತವಿಕವಾಗಿ ಜೂಜಾಡುತ್ತಿರಲಿ ಅಥವಾ ಇಲ್ಲದಿರಲಿ ಝಡತಿ ಮಾಡುವುದು;

(ಸಿ) ಅಂತಹ ಎಲ್ಲ ವ್ಯಕ್ತಿಗಳನ್ನು ಅಭಿರಕ್ಷೆಗೆ ತೆಗೆದುಕೊಳ್ಳುವುದು ಮತ್ತು ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸುವುದು;

(ಡಿ) ಅಲ್ಲಿ ಕಂಡುಬರುವ ಮತ್ತು ಜೂಜಾಟದ ಉದ್ದೇಶಕ್ಕಾಗಿ ಉಪಯೋಗಿಸಲಾಗಿದ್ದುವು ಅಥವಾ ಉಪಯೋಗಿಸಲು ಉದ್ದೇಶಿಸಲಾಗಿದ್ದವು ಎಂದು ಸಯುಕ್ತಿಕವಾಗಿ ಸಂಶಯಪಡಲಾಗುವ ಎಲ್ಲ ಜೂಜಾಟದ ಉಪಕರಣಗಳನ್ನು ಮತ್ತು ಎಲ್ಲ ಹಣವನ್ನೂ ಮತ್ತು ಹಣದ ಭದ್ರತಾ ಪತ್ರಗಳನ್ನು ಮತ್ತು ಬೆಲೆಬಾಳುವ ಪದಾರ್ಥಗಳನ್ನು ವಶಪಡಿಸಿಕೊಳ್ಳುವುದು;

– ಕಾನೂನು ಬದ್ಧವಾಗಿರತಕ್ಕದ್ದು;

ಪರಂತು, ಸಂಬಂಧಪಟ್ಟ ಪೊಲೀಸು ಕಮೀಷನರು, ಅಥವಾ ಡೆಪ್ಯೂಟಿ ಕಮೀಷನರು ಅಥವಾ ಅಸಿಸ್ಟೆಂಟ್ ಪೊಲೀಸು ಕಮೀಷನರು ಅಥವಾ ಮ್ಯಾಜಿಸ್ಟ್ರೇಟರು ಅಥವಾ ಸೂಪರಿಂಟೆಂಡಂಟು, ಅಸಿಸ್ಟೆಂಟ್ ಅಥವಾ ಡೆಪ್ಯೂಟಿ ಪೊಲೀಸು ಸೂಪರಿಂಟೆಂಡಂಟು ತನ್ನ ಸಮಕ್ಷ ಪ್ರಮಾಣಪೂರ್ವಕ ದೂರಿನ ಮೇರೆಗೆ ಮತ್ತು ತಾನು ಅವಶ್ಯಕವೆಂದು ಭಾವಿಸಬಹುದಾದಂತಹ ತನಿಖೆಯನ್ನು ನಡೆಯಿಸಿದಬಳಿಕ, ಸದರಿ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ ಅಥವಾ ಸ್ಥಳವು ಸಾಮಾನ್ಯ ಜೂಜಾಟದ ಮನೆಯೆಂದು ಉಪಯೋಗಿಸಲಾಗುತ್ತಿದೆ ಎಂದು ಸಂಶಯಪಡಲು ಸೂಕ್ತ ಕಾರಣಗಳಿವೆ ಎಂದು ಮನದಟ್ಟಾದ ಹೊರತು, ಯಾವೊಬ್ಬ ಅಧಿಕಾರಿಯನ್ನು ವಿಶೇಷ ವಾರಂಟಿನ ಮೂಲಕ ಅಧಿಕೃತಗೊಳಿಸತಕ್ಕದ್ದಲ್ಲ.

**82. ಸಾಮಾನ್ಯ ಜೂಜಾಟದ ಮನೆಯನ್ನು ಇಟ್ಟುಕೊಂಡಿರುವ ಬಗ್ಗೆ ಅಥವಾ ಅಲ್ಲಿ ಜೂಜಾಟದ ಬಗ್ಗೆ ಅನುಮಾನಿಸಿದ್ದರ ರುಜುವಾತು :–** 81ನೆಯ ಪ್ರಕರಣದ ಮೇರೆಗೆ ಪ್ರವೇಶಿಸಲಾದ ಅಥವಾ ಝಡತಿ ಮಾಡಲಾದ ಯಾವುದೇ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ ಅಥವಾ ಸ್ಥಳದಲ್ಲಿರುವ ಅಥವಾ ಅಲ್ಲಿ ಕಂಡುಬಂದ ವ್ಯಕ್ತಿಯ ಬಳಿಯಲ್ಲಿರುವ ಅಥವಾ ಅಲ್ಲಿ ಕಂಡುಬಂದ ವ್ಯಕ್ತಿಯ ಬಳಿಯಿರುವ ಜೂಜಾಟದ ಯಾವುದೇ ಉಪಕರಣವನ್ನು ವಶಪಡಿಸಿಕೊಂಡಲ್ಲಿ ಮತ್ತು ಹಾಗೆ ವಶಪಡಿಸಿಕೊಂಡ ಇತರ ಯಾವುದೇ ವಸ್ತುವಿನ ಸಂಬಂಧದಲ್ಲಿ, ಒಂದು ವೇಳೆ ನ್ಯಾಯಾಲಯಕ್ಕೆ ಅಂತಹ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ ಅಥವಾ ಸ್ಥಳವನ್ನು ಪ್ರವೇಶಿಸಿದ ಪೊಲೀಸು ಅಧಿಕಾರಿಗೆ, ಯುಕ್ತ ಕಾರಣಗಳಿದ್ದುವೆಂದು ಮನದಟ್ಟಾದರೆ, ಅಂತಹ ಉಪಕರಣವು ಅಥವಾ ಉಪಕರಣ ಅಥವಾ ವಸ್ತುವಿನ ವಶಪಡಿಸಿಕೊಳ್ಳುವಿಕೆಯು, ತದ್ವಿರುದ್ಧವಾದದ್ದು ರುಜುವಾತಾಗುವವರೆಗೆ, ಅಂತಹ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ ಎಂಬುದರ ಬಗ್ಗೆ, ಮತ್ತು ಪೊಲೀಸು ಅಧಿಕಾರಿ ಅಥವಾ ಅವನ ಪ್ರಾಧಿಕಾರದ ಮೇರೆಗೆ ವರ್ತಿಸುವ ಯಾವನೇ ವ್ಯಕ್ತಿಯು ವಾಸ್ತವಿಕವಾಗಿ ಜೂಜಾಟ ನಡೆಯುವುದನ್ನು ನೋಡದಿದ್ದರೂ ಕೂಡ ಅಲ್ಲಿ ಕಂಡುಬಂದ ವ್ಯಕ್ತಿಗಳು ಜೂಜಾಟದ ಉದ್ದೇಶಕ್ಕಾಗಿಯೆ ಅಲ್ಲಿ ಹಾಜರಿದ್ದರೆಂಬುದರ ಬಗ್ಗೆ ಸಾಕ್ಷ್ಯವಾಗಿರತಕ್ಕದ್ದು.

(2) ಯಾವನೇ ವ್ಯಕ್ತಿಯು ಯಾವುದೇ ಸಾಮಾನ್ಯ ಜೂಜಿನ ಮನೆಯಲ್ಲಿ ಜೂಜಾಟ ನಡೆಯುತ್ತಿರುವಾಗ ಕಂಡುಬಂದರೆ, ಅವನು ತದ್ವಿರುದ್ದ ರುಜುವಾತಾಗುವವರೆಗೆ ಜೂಜಾಟದ ಉದ್ದೇಶಕ್ಕಾಗಿ ಅಲ್ಲಿ ಇದ್ದನೆಂದು ಗ್ರಹಿಸತಕ್ಕದ್ದು.

**83. 78, 79 80ನೆಯ ಪ್ರಕರಣಗಳ ಮೇರೆಗೆ ಅಪರಾದ ಸಿದ್ಧಪಟ್ಟ ಬಳಿಕ, ಜೂಜಾಟದ ಉಪಕರಣಗಳನ್ನು ನಾಶಪಡಿಸಬಹುದು :–** 78, 79 ಅಥವಾ 80ನೆಯ ಪ್ರಕರಣದ ಮೇರೆಗೆ ಯಾವನೇ ವ್ಯಕ್ತಿಯ ಅಪರಾಧವು ಸಿದ್ಧಪಟ್ಟ ಬಳಿಕ, ಅಪರಾಧಸಿದ್ಧಪಡಿಸುವ ಮ್ಯಾಜಿಸ್ಟ್ರೇಟನು, ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ ಅಥವಾ ಸ್ಥಳದಲ್ಲಿ ಕಂಡುಬಂದ ಅಥವಾ ಅದರಲ್ಲಿ ಕಂಡುಬಂದ ವ್ಯಕ್ತಿಗಳ ಬಳಿಯಲ್ಲಿರುವ ಎಲ್ಲ ಜೂಜಾಟದ ಉಪಕರಣಗಳನ್ನು ಕೂಡಲೇ ನಾಶಪಡಿಸಬೇಕೆಂದು ಅಥವಾ ಅವು ಸರಕಾರಕ್ಕೆ ಮುಟ್ಟುಗೋಲಾಗಬೇಕೆಂದು, ಆದೇಶಿಸಬಹುದು ಮತ್ತು ಎಲ್ಲ ಅಥವಾ ಹಣದ ಯಾವುದೇ ಭದ್ರತಾ ಪತ್ರಗಳು ಮತ್ತು ಜೂಜಾಟದ ಉಪಕರಣವಲ್ಲದ, ವಶಪಡಿಸಿಕೊಂಡ ಇತರ ವಸ್ತುಗಳು ಮಾರಾಟವಾಗಬೇಕೆಂದು ಮತ್ತು ಆ ಮಾರಾಟದ ಹಣ ಅಲ್ಲಿ ವಶಪಡಿಸಿಕೊಂಡ ಎಲ್ಲ ಹಣದೊಂದಿಗೆ ಸರಕಾರಕ್ಕೆ ಮುಟ್ಟುಗೋಲಾಗಬೇಕೆಂದು ಕೂಡಾ ಆದೇಶಿಸಬಹುದು.

**84. ಹಣಕ್ಕಾಗಿ ಆಟವಾಡುವ ರುಜುವಾತು ಎಂಬ ಅಪರಾಧ ಸಿದ್ಧಪಡಿಸುವುದಕ್ಕೆ ಅನಗತ್ಯ :–** 78ನೆಯ ಪ್ರಕರಣದ (2)ನೆಯ ಉಪಪ್ರಕರಣದ ಅಥವಾ (3)ನೆಯ ಉಪಪ್ರಕರಣದ ಅಥವಾ 80ನೆಯ ಪ್ರಕರಣದ

ಮೇರೆಗಿನ ಅಪರಾಧಕ್ಕೆ ಯಾವೊಬ್ಬ ವ್ಯಕ್ತಿಯನ್ನು ಸಿದ್ಧ ಅಪರಾಧಿಯನ್ನಾಗಿ ಮಾಡುವುದಕ್ಕಾಗಿ, ಅಲ್ಲಿ ಕಂಡುಬಂದ ಯಾವನೇ ವ್ಯಕ್ತಿಯು ಯಾವುದೇ ಹಣಕ್ಕಾಗಿ ಪಂದ್ಯಕ್ಕಾಗಿ, ಹಣಕ್ಕಾಗಿ ಅಥವಾ ಬಾಜಿಗಾಗಿ ಜೂಜಾಡುತ್ತಿದ್ದನೆಂಬುದನ್ನು ರುಜುವಾತುಪಡಿಸುವ ಅವಶ್ಯಕತೆ ಇಲ್ಲ.

**85. ಸಾಕ್ಷಿಗಳೆಂದು ಪರೀಕ್ಷಿಸಲಾದ ಸಂಬಂಧಪಟ್ಟ ವ್ಯಕ್ತಿಗಳಿಗೆ ರಕ್ಷಣೆ :–** ಈ ಅಧಿನಿಯಮಕ್ಕೆ ವಿರುದ್ಧವಾದ ಯಾವುದೇ ಜೂಜಾಟದಲ್ಲಿ ಸಂಬಂಧಪಟ್ಟುಕೊಂಡಿರಬಹುದಾದ, ಮತ್ತು 78ನೆಯ ಪ್ರಕರಣದ (1)ನೆಯ ಉಪಪ್ರಕರಣದ ಮೇರೆಗೆ ಅಥವಾ 79ನೆಯ ಪ್ರಕರಣದ ಮೇರೆಗೆ ಜೂಜಾಟಕ್ಕೆ ಸಂಬಂಧಿಸಿದ ಒಡೆಯನ, ಇಟ್ಟುಕೊಂಡಿರುವವನ ಅಥವಾ ಆಧಿಭೋಗದಾರನ ಅಥವಾ ಇತರ ವ್ಯಕ್ತಿಯ ವಿರುದ್ಧದ ಯಾವುದೇ ಆರೋಪದ ವಿಚಾರಣೆಯಲ್ಲಿ ಮ್ಯಾಜಿಸ್ಟ್ರೇಟನಿಂದ ಅಥವಾ ಅವನ ಸಮಕ್ಷ ಸಾಕ್ಷಿಯೆಂದು ಪರೀಕ್ಷಿಸಲ್ಪಡುವ ಮತ್ತು ಹಾಗೇ ಪರೀಕ್ಷಿಸಲ್ಪಟ್ಟಾಗ ಹಾಗೆ ಪರೀಕ್ಷಿಸಲ್ಪಡುವ ಎಲ್ಲ ವಿಷಯಗಳ ಬಗ್ಗೆ ತನಗೆ ತಿಳಿದಮಟ್ಟಿಗೆ ನಿಜವಾದ ಮತ್ತು ವಿಶ್ವಾಸಾರ್ಹವಾದ ಮಾಹಿತಿ ಕೊಡುವ, ಮತ್ತು ಆ ಬಳಿಕ ಸದರಿ ಮ್ಯಾಜಿಸ್ಟ್ರೇಟನಿಂದ ಆ ಬಗ್ಗೆ ಲಿಖಿತ ಸರ್ಟಿಫಿಕೇಟನ್ನು ಪಡೆಯುವ ಪ್ರತಿಯೊಬ್ಬ ವ್ಯಕ್ತಿಯು, ಅಂಥ ಜೂಜಾಟಕ್ಕೆ ಸಂಬಂಧಿಸಿ ಆ ಮುಂದೆ ಮಾಡಿದ ಯಾವುದೊಂದರ ಬಗ್ಗೆ ಈ ಅಧಿನಿಯಮದ ಮೇರೆಗಿನ ಎಲ್ಲ ಪ್ರಾಸಿಕ್ಯೂಷನ್ನುಗಳಿಂದಲೂ ಮುಕ್ತಗೊಳಿಸಲ್ಪಡತಕ್ಕದ್ದು.

**86. ಮಾಹಿತಿ ಕೊಟ್ಟವನಿಗೆ ಜುಲ್ಮಾನೆಯ ಭಾಗದ ಸಂದಾಯ :–** 78, 79 ಮತ್ತು 80ನೆಯ ಪ್ರಕರಣಗಳ ಉಪಬಂಧಗಳ ಮೇರೆಗೆ ಯಾವುದೇ ಮೊಕದ್ದಮೆಯ ವಿಚಾರಣೆ ಮಾಡುವ ಮ್ಯಾಜಿಸ್ಟ್ರೇಟನು, ಸದರಿ ಯಾವುದೇ ಪ್ರಕರಣಗಳ ಮೇರೆಗೆ ಹಾಕಲಾದ ಯಾವುದೇ ಜುಲ್ಮಾನೆಯ ಅರ್ಧಕ್ಕೆ ಮೀರದಷ್ಟು ಭಾಗವನ್ನು ಅಥವಾ 82ನೆಯ ಪ್ರಕರಣದ ಮೇರೆಗೆ ಹಿಡಿದ ಮತ್ತು ಮುಟ್ಟುಗೋಲಾಗಬೇಕೆಂದು ಆದೇಶಿಸಿದ ವಸ್ತುಗಳ ಪ್ರಾಪ್ತಿಯ ಅಥವಾ ಹಣದ ಯಾವುದೇ ಭಾಗವನ್ನು, ಪೊಲೀಸ್ ಅಧಿಕಾರಿಗಳಿಗೆ ಮತ್ತು ಅಪರಾಧದ ಪತ್ತೆಯಲ್ಲಿ ಅಥವಾ ತನಿಖೆಯಲ್ಲಿ ಸಹಾಯ ನೀಡಿದ ಇತರ ವ್ಯಕ್ತಿಗಳಿಗೆ ಕೊಡಬಹುದು.

**87. ಸಾರ್ವಜನಿಕ ಬೀದಿಗಳಲ್ಲಿ ಜೂಜಾಟ :–** ಯಾವನೊಬ್ಬನು, ಯಾವುದೇ ಸಾರ್ವಜನಿಕ ಬೀದಿಯಲ್ಲಿ ಅಥವಾ ಮಾರ್ಗದಲ್ಲಿ ಅಥವಾ ಸಾರ್ವಜನಿಕರಿಗೆ ಪ್ರವೇಶಿಸಿರುವ ಅಥವಾ ಪ್ರವೇಶಕ್ಕೆ ಅನುಮತಿ ಇರುವ ಯಾವುದೇ ಸ್ಥಳದಲ್ಲಿ ಅಥವಾ ಯಾವುದೇ ಕುದುರೆ ಪಂದ್ಯದ ಸ್ಥಳದಲ್ಲಿ ಜೂಜಾಟವಾಡುತ್ತಿದ್ದರೆ ಅಥವಾ ಜೂಜಾಟವಾಡುತ್ತಿರುವವನೆಂದು ಯುಕ್ತವಾಗಿ ಶಂಕಿಸಲಾದರೆ, ಅಪರಾಧ ಸಿದ್ದಪಟ್ಟ ಮೇಲೆ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಮೂರು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು ಮತ್ತು ಅಂಥ ಜೂಜಾಟವು ಪಂದ್ಯ ಅಥವಾ ಪಣವನ್ನೊಳಗೊಂಡಿದ್ದರೆ, ಹಾಗೆ ಜೂಜಾಡುತ್ತಿರುವ, ಅಂಥಹ ಯಾವನೇ ವ್ಯಕ್ತಿಯು, ಅಪರಾಧ ಸಿದ್ದಪಟ್ಟ ಮೇಲೆ, 80ನೆಯ ಪ್ರಕರಣದಲ್ಲಿ ನಿರ್ದೇಶಿಸಲಿರುವ ರೀತಿಯಲ್ಲಿ ಮತ್ತು ಅಷ್ಟುಮಟ್ಟಿಗೆ ದಂಡನೀಯನಾಗತಕ್ಕದ್ದು ಮತ್ತು ಅವನ ಬಳಿ ಕಂಡುಬಂದ ಎಲ್ಲ ಹಣವು ಸರಕಾರಕ್ಕೆ ಮುಟ್ಟುಗೋಲಾಗತಕ್ಕದ್ದು.

ಮತ್ತು ಅಂಥ ಪೊಲೀಸ್ ಅಧಿಕಾರಿಯು, ಅಂಥ ಸಾರ್ವಜನಿಕ ಬೀದಿಯಲ್ಲಿ, ಮಾರ್ಗದಲ್ಲಿ, ಸ್ಥಳದಲ್ಲಿ ಅಥವಾ ಕುದುರೆ ಪಂದ್ಯದ ಸ್ಥಳದಲ್ಲಿ ಅಥವಾ ತಾನು ಹಾಗೆ ದಸ್ತಗಿರಿ ಮಾಡುವ ವ್ಯಕ್ತಿಗಳ ಮೇಲೆ ಅಥವಾ ಹತ್ತಿರ ದೊರೆತ ಜೂಜಾಟದ ಸಲಕರಣೆಗಳೆಂದು ಯುಕ್ತವಾಗಿ ಶಂಕಿಸಲಾದ ಎಲ್ಲ ವಸ್ತುಗಳನ್ನು ವಶಪಡಿಸಿಕೊಳ್ಳಬಹುದು ಮತ್ತು ಮ್ಯಾಜಿಸ್ಟ್ರೇಟನು, ಅಪರಾಧಿಯ ಅಪರಾಧ ಸಿದ್ದಪಟ್ಟ ಮೇಲೆ, ಅಂಥ ಸಲಕರಣೆಗಳನ್ನು ಕೂಡಲೇ

ನಾಶಪಡಿಸುವಂತೆ ಆದೇಶ ಮಾಡಬಹುದು. ಯಾವನೇ ವ್ಯಕ್ತಿಯ ಮೇಲೆ ಅಥವಾ ಬಳಿ ಯಾವುದೇ ವಸ್ತು ದೊರೆತಾಗ ಮತ್ತು ಅದು ಜೂಜಾಟದ ಸಲಕರಣೆಯೆಂಬುದಾಗಿ ಶಂಕಿಸಲು ಪೊಲೀಸ್ ಅಧಿಕಾರಿಗೆ ಯುಕ್ತ ಆಧಾರಗಳಿದ್ದುವೆಂದು ನ್ಯಾಯಾಲಯಕ್ಕೆ ಮನದಟ್ಟಾದರೆ, ಅಂಥ ವಿದ್ಯಮಾನಗಳು, ತದ್ವಿರುದ್ಧ ರುಜುವಾತಾಗುವವರೆಗೆ ಅಂಥ ವಸ್ತು ಜೂಜಾಟದ ಸಲಕರಣೆಯಾಗಿದ್ದಿತೆಂಬುದಕ್ಕೆ ಮತ್ತು ಯಾವನ ಮೇಲೆ ಅಥವಾ ಬಳಿ ಆ ವಸ್ತು ದೊರಕಿತೋ ಅವನು ಜೂಜಾಟದ ಉದ್ದೇಶಕ್ಕಾಗಿ ಅಲ್ಲಿದ್ದನೆಂಬುದಕ್ಕೆ ಸಾಕ್ಷ್ಯವಾಗಿರತಕ್ಕದ್ದು

**88. ಸಾರ್ವಜನಿಕ ಸ್ಥಳಗಳಲ್ಲಿ ಜೂಜಾಡುತ್ತಿರುವ ವ್ಯಕ್ತಿಗಳನ್ನು ವಾರಂಟಿಲ್ಲದೇ ದಸ್ತಗಿರಿ ಮಾಡಲು ಅಧಿಕಾರ:–** 78ನೆಯ ಪ್ರಕರಣದ (3)ನೆಯ ಉಪಪ್ರಕರಣದ ಅಥವಾ 87ನೆಯ ಪ್ರಕರಣವನ್ನು ಉಲ್ಲಂಘಿಸಿ ಜೂಜಾಡುತ್ತಿರುವ ಅಥವಾ ಜೂಜಾಡುತ್ತಿರುವನೆಂದು ಯುಕ್ತವಾಗಿ ಶಂಕಿಸಬಹುದಾದ ಯಾವನೇ ವ್ಯಕ್ತಿಯನ್ನು ಪೊಲೀಸ್ ಅಧಿಕಾರಿಯು ವಾರಂಟಿಲ್ಲದೇ ದಸ್ತಗಿರಿ ಮಾಡಬಹುದು ಮತ್ತು ಝಡತಿ ಮಾಡಬಹುದು.

**89. ಜೂಜಾಟಕ್ಕಾಗಿ ಬೀದಿಗಳಲ್ಲಿ ಸೇರುವುದು :–** ಯಾವನೊಬ್ಬನು

(1) ಜೂಜಾಟದ ಉದ್ದೇಶಕ್ಕಾಗಿ ಸೇರಿರುವುದರ ಜೊತೆಗೆ ಬೀದಿಯಲ್ಲಿ ಕೂಡಿರುವ ಇತರರೊಂದಿಗೆ ಸೇರುತ್ತಾನೋ, ಅಥವಾ

(2) ಜೂಜಾಟದ ಉದ್ದೇಶಕ್ಕಾಗಿ ಅಂಥ ಸಮೂಹದಲ್ಲಿ ಸೇರುತ್ತಾನೋ ಅವನು, ಅಪರಾಧ ಸಿದ್ಧಪಟ್ಟ ಮೇಲೆ, ಐವತ್ತು ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**90. ಯಾವುದೇ ಸಮಾಚಾರ ಅಥವಾ ಮಾಹಿತಿಯನ್ನು ಮುದ್ರಿಸುವುದು, ಪ್ರಕಟಿಸುವುದು ಅಥವಾ ಹಂಚುವುದು :–** (1) ಯಾವ ವ್ಯಕ್ತಿಯೂ, ಯಾವುದೇ ವೃತ್ತ ಪತ್ರಿಕೆಯನ್ನು, ವೃತ್ತ ಪತ್ರವನ್ನು ಅಥವಾ ಇತರ ಲಿಖಿತವನ್ನು ಅಥವಾ ಯಾವುದೇ ಸಮಾಚಾರ ಅಥವಾ ಮಾಹಿತಿಯನ್ನು ಜೂಜಾಟಕ್ಕೆ ಸಹಾಯ ನೀಡುವ ಅಥವಾ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ, ಮುದ್ರಿಸತಕ್ಕದ್ದಲ್ಲ, ಪ್ರಕಟಿಸತಕ್ಕದ್ದಲ್ಲ, ಮಾರತಕ್ಕದ್ದಲ್ಲ, ಹಂಚತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲಿ ಪರಿಚಾಲನೆ ಮಾಡತಕ್ಕದ್ದಲ್ಲ.

(2) ಯಾವುದೇ ವ್ಯಕ್ತಿಯು, (1)ನೆಯ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಅವನು ಅಪರಾಧ ಸಿದ್ಧಪಟ್ಟ ಮೇಲೆ, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಈ ಪ್ರಕರಣದ ಮೇರೆಗಿನ ಯಾವುದೇ ಅಪರಾಧ ಮಾಡುವ ಉದ್ದೇಶಕ್ಕಾಗಿ ಉಪಯೋಗಿಸಲಿರುವುದಾಗಿ ಯುಕ್ತವಾಗಿ ಶಂಕಿಸಲಾದ ಅಥವಾ ಉಪಯೋಗಿಸಿರುವುದಾಗಿಯೂ ಉಪಯೋಗಿಸಲು ಉದ್ದೇಶಿಸಿರುವ ಎಲ್ಲ ವಸ್ತುಗಳನ್ನು ವಶಪಡಿಸಿಕೊಳ್ಳುವುದಾಗಿ ಯಾವನೇ ಪೊಲೀಸ್ ಅಧಿಕಾರಿಯು ಯಾವುದೇ ಸ್ಥಳವನ್ನು ವಶಪಡಿಸಿಕೊಳ್ಳಬಹುದು ಪ್ರವೇಶಿಸಬಹುದು, ಮತ್ತು ಝಡತಿ ಮಾಡಬಹುದು ಮತ್ತು ಅಂತಹ ಎಲ್ಲ ವಸ್ತುಗಳನ್ನು ವಶಪಡಿಸಿಕೊಳ್ಳಬಹುದು.

(4) (1)ನೆಯ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯನ್ನು ಯಾವನೇ ಪೊಲೀಸ್ ಅಧಿಕಾರಿಯು, ವಾರಂಟಿಲ್ಲದೇ ದಸ್ತಗಿರಿ ಮಾಡಬಹುದು.

**91. ಕಂಪೆನಿಗಳಿಂದ ಅಪರಾಧಗಳು :–** (1) 78, 79 ಅಥವಾ 90ನೆಯ ಪ್ರಕರಣದ ಮೇರೆಗಿನ ಅಪರಾಧವನ್ನು ಮಾಡುವ ವ್ಯಕ್ತಿಯು ಕಂಪೆನಿಯಾಗಿದ್ದರೆ, ಆ ಕಂಪನಿಯು ಮತ್ತು ಅಪರಾಧ ಮಾಡುವ ಕಾಲದಲ್ಲಿ ಆ ಕಂಪನಿಯ ಚಾರ್ಜ್‌ನಲ್ಲಿದ್ದ ಮತ್ತು ಅವರ ವ್ಯವಹಾರವನ್ನು ನಡೆಸುವುದಕ್ಕೆ ಜವಾಬ್ದಾರನಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಆ ಅಪರಾಧದ ದೋಷಿಯಾಗಿದ್ದನೆಂದು ಭಾವಿಸಲ್ಪಡತಕ್ಕದ್ದು ಮತ್ತು ಅವನ ವಿರುದ್ಧ ವ್ಯವಹರಣೆ ನಡೆಸಲ್ಪಡಲು ಮತ್ತು ಆ ಪ್ರಕಾರ ದಂಡಿತನಾಗಲು ಬದ್ಧನಾಗಿರತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವ ಯಾವುದೂ, ಅಂತಹ ಅಪರಾಧವು ತನಗೆ ತಿಳಿಯದಂತೆ ಮಾಡಲಾಗಿದೆಯೆಂದು ಅಥವಾ ಅಂತಹ ಅಪರಾಧ ಮಾಡುವುದನ್ನು ತಡೆಯಲು ತಾನು ಎಲ್ಲ ಜಾಗರೂಕತೆಯಿಂದ ವರ್ತಿಸಿದ್ದನೆಂದು ರುಜುವಾತು ಪಡಿಸಿದಲ್ಲಿ, ಅಂತಹ ಯಾವನೆ ವ್ಯಕ್ತಿಯನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೆಯ ಉಪಪ್ರಕರಣದಲ್ಲಿ ಏನೇ ಇದ್ದರೂ, 78, 79 ಅಥವಾ 90ನೆಯ ಪ್ರಕರಣದ ಮೇರೆಗೆ ಯಾವುದೇ ಅಪರಾಧವು ಆ ಕಂಪನಿಯ ನಿರ್ದೇಶಕ, ವ್ಯವಸ್ಥಾಪಕನ, ಕಾರ್ಯದರ್ಶಿಯವರು ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಮಾಡಲಾಗಿದೆ ಅಥವಾ ಅವರ ನಿರ್ಲಕ್ಷತೆಯಿಂದ ಆಗಿದೆ ಎಂದು ರುಜುವಾತುಪಡಿಸಿದಲ್ಲಿ, ಅಂತಹ ನಿರ್ದೇಶಕನು, ವ್ಯವಸ್ಥಾಪಕನು, ಕಾರ್ಯದರ್ಶಿಯು, ಅಥವಾ ಇತರ ಅಧಿಕಾರಿಯು ಅಂತಹ ಅಪರಾಧದ ದೋಷಿಯೆಂದು ಭಾವಿಸಲ್ಪಡತಕ್ಕದ್ದು ಮತ್ತು ಅವನು ಅವನ ವಿರುದ್ಧ ವ್ಯವಹರಣೆ ನಡೆಸಲ್ಪಡಲು ಮತ್ತು ಆ ಪ್ರಕಾರ ದಂಡಿತನಾಗಲು ಬದ್ಧನಾಗಿರತಕ್ಕದ್ದು.

(3) 78, 79 ಮತ್ತು 90ನೆಯ ಪ್ರಕರಣಗಳ ಉದ್ದೇಶಗಳಿಗಾಗಿ "ಫರ್ಮು" ವ್ಯಕ್ತಿಯೆಂದು ಭಾವಿಸಲ್ಪಡತಕ್ಕದ್ದು.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಕ) "ಕಂಪನಿ" ಎಂದರೆ ಒಂದು ನಿಗಮಿತ ನಿಕಾಯ ಮತ್ತು ಇದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಸ್ಥೆಯನ್ನು ಒಳಗೊಳ್ಳುತ್ತದೆ; ಮತ್ತು

(ಖ) ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ' ಎಂದರೆ ಫರ್ಮಿನ ಒಬ್ಬ ಪಾಲುಗಾರ.

## ಅಧ್ಯಾಯ – VIII

## ಅಪರಾಧಗಳು ಮತ್ತು ದಂಡನೆಗಳು

**92. ಕೆಲವು ಬೀದಿ ಅಪರಾಧಗಳಿಗೆ ಮತ್ತು ಉಪದ್ರವಕ್ಕೆ ದಂಡನೆ :–** ಸರಕಾರವು ಕಾಲಕಾಲಕ್ಕೆ ಸರಕಾರೀ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಉಪ ಪ್ರಕರಣವನ್ನು ಅಥವಾ ಅದರ ಯಾವುದೇ ಖಂಡವನ್ನು ಅನ್ವಯಿಸುವ ಯಾವುದೇ ಸ್ಥಳೀಯ ಪ್ರದೇಶದಲ್ಲಿ, ಯಾವನೊಬ್ಬನು, ತದ್ವಿರುದ್ಧವಾಗಿ

(ಎ) ಕಾನೂನುಬದ್ಧ ಕಾರಣವಿಲ್ಲದೇ, ಸೂರ್ಯಾಸ್ತದ ಅರ್ಧಗಂಟೆಯ ಅನಂತರ ಮತ್ತು ಸೂರ್ಯೋದಯಕ್ಕೆ ಒಂದು ಗಂಟೆ ಮುಂಚಿತವಾಗಿ ಇವುಗಳ ಮಧ್ಯ ಯಾವುದೇ ಕಾಲಕ್ಕೆ ಸಾಕಷ್ಟು ದೀಪ ಅಥವಾ ದೀಪಗಳಿಲ್ಲದೇ ಯಾವುದೋ ಬೀದಿಯಲ್ಲಿ ಯಾವುದೇ ವರ್ಣನೆಯ ವಾಹನವನ್ನು ನಡೆಯಿಸಿದರೆ ಅಥವಾ ನಿಲ್ಲಿಸಿದರೆ ಅಥವಾ ಬೈಸಿಕಲ್ ಅಲ್ಲದ ಯಾವುದೇ ಬಗೆಯ ವಾಹನವನ್ನು ಎಳೆದುಕೊಂಡು ಅಥವಾ ತಳ್ಳಿಕೊಂಡು ಹೋದರೆ;

(ಬಿ) ಯುಕ್ತ ಕಾರಣವಿಲ್ಲದೆ, ರಸ್ತೆಯ ಹತ್ತಿರ ಅಥವಾ ಎಡಭಾಗದಲ್ಲಿಲ್ಲದೇ ಯಾವುದೇ ವಾಹನವನ್ನು ನಡೆಯಿಸಿದರೆ, ಎಳೆದುಕೊಂಡು ಹೋದರೆ ಅಥವಾ ತಳ್ಳಿಕೊಂಡು ಹೋದರೆ, ಅಥವಾ ಯಾವುದೇ ವಾಹನವನ್ನು ಅದರ ಬಲಭಾಗದಲ್ಲಲ್ಲದೆ ಮತ್ತು ಸರಕಾರವು ಅಧಿಸೂಚನೆಯ ಮೂಲಕ ನೇಮಿಸಬಹುದಾದುದಕ್ಕಿಂತ ಹೆಚ್ಚು ವೇಗವಾಗಿ ದಾಟಿಕೊಂಡು ಹೋದರೆ;

(ಸಿ) ಯಾವುದೇ ಬೀದಿಯಲ್ಲಿ ಯಾವುದೇ ಪ್ರಾಣಿ ಅಥವಾ ವಾಹನವನ್ನು ಸರಿಯಾಗಿ ಅಥವಾ ಭದ್ರಪಡಿಸದೆ ಉಸ್ತುವಾರಿಯಿಲ್ಲದೆ ಬಿಟ್ಟರೆ;

(ಡಿ) ಯಾವುದೇ ಬೀದಿಯಲ್ಲಿ ಅಡಚಣೆ, ಕ್ಷತಿ, ಅಪಾಯ ಅಥವಾ ಭಯ ಉಂಟುಮಾಡಿದರೆ, ಅಥವಾ ಯಾವುದೇ ಪ್ರಾಣಿ ಅಥವಾ ವಾಹನವನ್ನು ನಡೆಸುವುದರಲ್ಲಿ ಅದರ ವ್ಯವಸ್ಥೆಯಲ್ಲಿ ಅಥವಾ ಎಚ್ಚರಿಕೆ ವಹಿಸುವುದರಲ್ಲಿ ಅಪವರ್ತನೆ, ನಿರ್ಲಕ್ಷತೆ, ಅಥವಾ ತಪ್ಪು ಮಾರ್ಗಾನುಸರಣೆಯಿಂದ ಕೇಡು ಉಂಟುಮಾಡಿದರೆ, ವರ್ತಿಸಿದರೆ, ಅಥವಾ ಆ ಸಂಬಂಧದಲ್ಲಿ ಸಕ್ಷಮ ಪ್ರಾಧಿಕಾರಿಯಿಂದ ಮಾಡಲ್ಪಟ್ಟ ಮತ್ತು ಪ್ರಕಟಿಸಲಾದ ಯಾವುದೇ ವಿನಿಯಮಕ್ಕೆ ವಿರುದ್ಧವಾಗಿ ಚೌಬೀನೆ, ಕಂಬಗಳು ಅಥವಾ ಇತರ ಅತಿ ಗಾತ್ರದ ವಸ್ತುಗಳನ್ನು ಹೇರಿದ ಯಾವುದೇ ವಾಹನ ಅಥವಾ ಪ್ರಾಣಿಯನ್ನು ಬೀದಿಯಲ್ಲಿ ನಡೆಯಿಸಿಕೊಂಡು ಹೋದರೆ;

(ಇ) ಯಾವುದೇ ಬೀದಿಯಲ್ಲಿ ಯಾವುದೇ ಪ್ರಾಣಿ ಅಥವಾ ವಾಹನವನ್ನು ಬಾಡಿಗೆಗೆ ಅಥವಾ ಮಾರಾಟಕ್ಕಾಗಿ ಪ್ರದರ್ಶಿಸಿದರೆ, ಯಾವುದೇ ಪೀಠೋಪಕರಣ ಅಥವಾ ವಾಹನವನ್ನು ಸ್ವಚ್ಛಮಾಡಿದರೆ, ಅಥವಾ ಯಾವುದೇ ಕುದುರೆ ಅಥವಾ ಇತರ ಪ್ರಾಣಿಯನ್ನು ಸ್ವಚ್ಛಪಡಿಸಿದರೆ ಮಾಲೀಷು ಮಾಡಿದರೆ, ತರಬೇತು ಕೊಟ್ಟರೆ ಅಥವಾ ಪಳಗಿಸಿದರೆ, ಅಥವಾ (ಅಪಘಾತದ ಸಂದರ್ಭದಲ್ಲಿ ಸ್ಥಳದಲ್ಲಿಯೇ ದುರಸ್ತಿ ಮಾಡುವುದು ಅವಶ್ಯಕವಾಗಿದ್ದ ಹೊರತು) ಯಾವುದೇ ವಾಹನವನ್ನು ಅಥವಾ ಅದರ ಯಾವುದೇ ಭಾಗವನ್ನು ತಯಾರಿಸಿದರೆ ಅಥವಾ ದುರಸ್ತಿ ಮಾಡಿದರೆ ಅಥವಾ ಸಂಚಾರಕ್ಕೆ ತೀವ್ರ ಆತಂಕವನ್ನುಂಟು ಮಾಡುವ ಅಥವಾ ನಿವಾಸಿಗಳಿಗೆ ಅಥವಾ ಸಾರ್ವಜನಿಕರಿಗೆ ತೀವ್ರ ಕಿರುಕುಳ ಕೊಡುವ ಯಾವುದೇ ತಯಾರಿಕೆ ಅಥವಾ ವೃತ್ತಿಯನ್ನು ಇಲ್ಲಿಯೇ ನಡೆಯಿಸಿದರೆ;

(ಎಫ್) (i) ಸಾಮಾನನ್ನು ಹೇರಬೇಕಾದ ಅಥವಾ ಇಳಿಸಬೇಕಾದ ಅಥವಾ ಪ್ರಯಾಣಿಕರನ್ನು ಹತ್ತಿಸಿಕೊಳ್ಳಬೇಕಾದ ಅಥವಾ ಇಳಿಸಬೇಕಾದ ಯಾವುದೇ ಪ್ರಾಣಿ ಅಥವಾ ವಾಹನವನ್ನು ಇಂತಹ ಉದ್ದೇಶಕ್ಕಾಗಿ ಅವಶ್ಯಕವಿರಬಹುದಾದುದಕ್ಕಿಂತ ಹೆಚ್ಚು ಕಾಲ ಬೀದಿಯಲ್ಲಿರಲು ಆಥವಾ ನಿಲ್ಲಲು ಅವಕಾಶಕೊಡುವುದರ ಮೂಲಕ, ಅಥವಾ ಯಾವುದಾದರೂ ವಾಹನವನ್ನು ನಿಲ್ಲಿಸಿಬಿಡುವುದರ ಮೂಲಕ, ಅಥವಾ ಯಾವುದೇ ದನವನ್ನು ಅಲ್ಲಿ ಕಟ್ಟುವುದರ ಮೂಲಕ, ಅಥವಾ ಬೀದಿಯ ಯಾವುದೇ ಭಾಗವನ್ನು ವಾಹನಗಳು ಅಥವಾ ದನಗಳ ನಿಲ್ಲುವ ಸ್ಥಳವನ್ನಾಗಿ ಉಪಯೋಗಿಸುವುದರ ಮೂಲಕ ಅಥವಾ ಆಯುಕ್ತ ಕಾಲದವರೆಗೆ ಯಾವುದೇ ಬೀದಿಯಲ್ಲಿ ಅಥವಾ ಮೇಲೆ ಯಾವುದೇ ಪಟ್ಟಿಗೆ, ಕಟ್ಟು, ಸಿಂಡಿ ಅಥವಾ ಇತರ ಯಾವುದೇ ವಸ್ತುವನ್ನು ಇರಿಸುವುದರ ಮೂಲಕ ಅಡಚಣೆಯನ್ನುಂಟು ಮಾಡಿದರೆ; ಅಥವಾ

(ii) ಕಮೀಷನರ್‌ನಿಂದ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ರಚಿತವಾದ ಮತ್ತು ಪ್ರಕಟಿಸಲಾದ ಯಾವುದೇ ವಿನಿಯಮಕ್ಕೆ ವಿರುದ್ದವಾಗಿ ಯಾವುದೇ ಅಂಗಡಿ, ಮಂಟಪ, ಹಲಗೆ, ಪೀಪಾಯಿ, ಬುಟ್ಟಿಯಲ್ಲಿ ಅಥವಾ ಬೇರೆ ಯಾವುದೇ ರೀತಿಯಲ್ಲಿ ಏನೊಂದು ವಸ್ತುವನ್ನು ಮಾರಾಟಕ್ಕಾಗಿ ಪ್ರದರ್ಶಿಸುವ ಅಥವಾ ಮಾರಾಟಕ್ಕಾಗಿ ಏನೊಂದು ವಸ್ತುವನ್ನು ಇರಿಸುವುದರ ಮೂಲಕ ಅಡಚಣೆಯನ್ನು ಉಂಟುಮಾಡಿದರೆ;

(ಜಿ) ಯಾವುದೇ ಕಾಲುದಾರಿಯ ಮೇಲೆ ಅಡಚಣೆಯನ್ನುಂಟು ಮಾಡಿದರೆ, ಅಥವಾ ಅಲ್ಲಿ ಯಾವುದೇ ಪ್ರಾಣಿಯನ್ನು ನಡೆಯಿಸಿಕೊಂಡು ಹೋದರೆ ಅಥವಾ ಸವಾರಿ ಮಾಡಿದರೆ ಅಥವಾ ಬಿಟ್ಟು ಹೋದರೆ ಅಥವಾ ಅಲ್ಲಿ ಯಾವುದೇ ವಾಹನವನ್ನು ನಡೆಯಿಸಿಕೊಂಡು ಹೋದರೆ, ಎಳೆದುಕೊಂಡು ಹೋದರೆ ಅಥವಾ ತಳ್ಳಿಕೊಂಡು ಹೋದರೆ;

(ಹೆಚ್) ಸಂದರ್ಭಾನುಸಾರ ಕಮೀಷನರನಿಂದ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ಮಾಡಲಾದ ಮತ್ತು ಅಧಿಸೂಚಿಸಲಾದ ಯಾವುದೇ ವಿನಿಮಯಕ್ಕೆ ವಿರುದ್ಧವಾಗಿ ಯಾವುದೇ ಬೀದಿಯಲ್ಲಿ ಗುಂಪನ್ನು ಆಕರ್ಷಿಸುವ ಸ್ವಭಾವದ ಯಾವುದೇ ಅಣಕ, ಸಂಗೀತ ಅಥವಾ ಇತರ ಕಾರ್ಯಕ್ರಮವನ್ನು ಪ್ರದರ್ಶಿಸಿದರೆ, ಅಥವಾ ಅಲ್ಲಿ ಪ್ರಯಾಣಿಕರಿಗೆ ಅಡ್ಡಿಯನ್ನು ಅಥವಾ ನಿವಾಸಿಗಳಿಗೆ ಕಿರುಕುಳವನ್ನುಂಟು ಮಾಡಬಹುದಾದ ಭಾರೀ ಗಾತ್ರದ ಜಾಹೀರಾತುಗಳನ್ನು, ಚಿತ್ರಗಳನ್ನು, ಆಕೃತಿಗಳನ್ನು ಅಥವಾ ಲಾಂಛನವನ್ನು ತೆಗೆದುಕೊಂಡು ಹೋದರೆ ಅಥವಾ ಇಟ್ಟರೆ;

(ಐ) ನೆರೆಹೊರೆಯ ನಿವಾಸಿಗಳಿಗೆ ಕಿರುಕುಳ, ತೊಂದರೆ, ಅಥವಾ ಸುಖಭಂಗವನ್ನು ಉಂಟುಮಾಡುವಂತೆ ಯಾವುದೇ ಸಂಗೀತ ಅಥವಾ ಇತರ ಶಬ್ದವನ್ನು ವರ್ಧಿಸುವ ಯಾವುದೇ ಉಪಕರಣವನ್ನು ಎಂದರೆ ದೂರ ಘೋಷಕಮೆಗಾಪೋನು ಅಥವಾ ಧ್ವನಿ ವರ್ಧಕವನ್ನು ಯಾವುದೇ ಸ್ಥಳದಲ್ಲಿ ರಾತ್ರಿ ಹತ್ತು ಗಂಟೆ ಮತ್ತು ಬೆಳಗಿನ ಆರುಗಂಟೆಯ ಮಧ್ಯದ ಯಾವುದೇ ಕಾಲದಲ್ಲಿ ಉಪಯೋಗಿಸಿದರೆ ಅಥವಾ ಬಳಸಿದರೆ;

(ಜೆ) ನೆರೆಹೊರೆಯ ನಿವಾಸಿಗಳಿಗೆ ಮತ್ತು ಅಲ್ಲಿ ಓಡಾಡುವವರಿಗೆ ಕಿರುಕುಳ ಉಂಟಾಗುವಂತೆ (ಸಕ್ಷಮ ಪ್ರಾಧಿಕಾರಿಯಿಂದ ಆದೇಶದ ಮೂಲಕ ಪ್ರತ್ಯೇಕವಾಗಿರಿಸಿರುವ ಸ್ಥಳದಲ್ಲಲ್ಲದೆ) ಒಂದು ಬೀದಿಯ ಅಥವಾ ಸಾರ್ವಜನಿಕ ಸ್ಥಳದಲ್ಲಿ ಇವುಗಳಲ್ಲಿ ಅಥವಾ ಇವುಗಳ ಹತ್ತಿರ, ಕಣ್ಣಿಗೆ ಕಾಣುವಂತೆ ಮಲಮೂತ್ರ ವಿಸರ್ಜನೆ ಮಾಡಿದರೆ, ಅಥವಾ ಯಾವುದೇ ಮಗುವನ್ನು ಹಾಗೆ ಮಾಡಲು ಬಿಟ್ಟರೆ ಅಥವಾ ಸ್ನಾನಮಾಡಿದರೆ ಅಥವಾ ಮೈ ಕೈ ತೊಳೆದರೆ;

(ಕೆ) ಸಾರ್ವಜನಿಕರಿಗೆ ಅಪಾಯ, ಕ್ಷತಿ, ಭಯ ಅಥವಾ ಕಿರುಕುಳ ಉಂಟಾಗುವಂತೆ ನಿರ್ಲಕ್ಷತೆಯಿಂದ ಯಾವುದೇ ಕುದುರೆ ಅಥವಾ ಇತರ ಪ್ರಾಣಿಯನ್ನು ಕಟ್ಟದೇ ಬಿಟ್ಟರೆ ಅಥವಾ ಕುಕ್ಕೆ ಇಲ್ಲದೆ ಯಾವುದೇ ಭಯಾನಕ ನಾಯಿಯನ್ನು ಹೊರಗೆ ಬಿಟ್ಟರೆ, ಅಥವಾ ಯಾವೊಬ್ಬ ವ್ಯಕ್ತಿ ಅಥವಾ ಪ್ರಾಣಿಯ ಮೇಲೆ ಬೀಳುವಂತೆ ಮಾಡಿದರೆ ಅಥವಾ ಅವನಿಗೆ ಅಥವಾ ಅದಕ್ಕೆ ಪೀಡೆ ಕೊಡುವಂತೆ ಅಥವಾ ಹೆದರಿಕೆ ಉಂಟುಮಾಡುವಂತೆ ಯಾವುದೇ ನಾಯಿಯನ್ನು ಅಥವಾ ಇತರ ಪ್ರಾಣಿಯನ್ನು ಬಿಟ್ಟರೆ ಅಥವಾ ಪ್ರೇರೇಪಿಸಿದರೆ;

(ಎಲ್) ಸಕ್ಷಮ ಪ್ರಾಧಿಕಾರಿಯಿಂದ ಆದೇಶದ ಮೂಲಕ ಆ ಉದ್ದೇಶಕ್ಕಾಗಿ ಪ್ರತ್ಯೇಕವಾಗಿರಿಸಿಲ್ಲದ ಸಾರ್ವಜನಿಕ ಭಾವಿ, ಕೆರೆ, ಅಥವಾ ಜಲಾಶಯದಲ್ಲಿ ಅಥವಾ ಅದರ ಹತ್ತಿರ ಅಥವಾ ಸಕ್ಷಮ ಪ್ರಾಧಿಕಾರಿಯಿಂದ ಆದೇಶದ ಮೂಲಕ ಸ್ನಾನ ಮಾಡುವುದು ಅಥವಾ ಮೈಕೈ ತೊಳೆಯುವುದು ನಿಷೇಧಿಸಲ್ಪಟ್ಟ ಯಾವುದೇ ಕೊಳ, ಹೊಂಡ, ಮೇಲ್ಗಾಲುವೆ (ಆಕ್ವಿಡಕ್ಟ್) ನದಿಯ ಭಾಗ, ತೊರೆ, ನಾಲೆ, ಅಥವಾ ನೀರು ಸರಬರಾಜಿನ ಇತರ ಮೂಲ ಅಥವಾ ಸಾಧನದಲ್ಲಿ ಸ್ನಾನ ಮಾಡಿದರೆ ಅಥವಾ ಮೈ ಕೈ ತೊಳೆದರೆ;

(ಎಂ) ಸಕ್ಷಮ ಪ್ರಾಧಿಕಾರಿಯಿಂದ ಯಾವ ಉದ್ದೇಶಕ್ಕಾಗಿ ಪ್ರತ್ಯೇಕವಾಗಿರಿಸಲಾಗಿದೆಯೋ ಅದಕ್ಕೆ ಕಿಂಚಿತ್ ಅಯೋಗ್ಯವಾಗುವಂತೆ ಯಾವುದೇ ಸಾರ್ವಜನಿಕ ಭಾವಿ, ಕೆರೆ, ಜಲಾಶಯ, ಕೊಳ, ಹೊಂಡ, ಮೇಲ್ಗಾಲುವೆ ಅಥವಾ ನದಿಯ ಭಾಗ, ತೊರೆ, ನಾಲೆ, ಅಥವಾ ನೀರು ಸರಬರಾಜಿನ ಇತರ ಮೂಲ ಅಥವಾ ಸಾಧನದಲ್ಲಿಯ ನೀರನ್ನು ಕೆಡಿಸಿದರೆ ಅಥವಾ ಕೆಡುವಂತೆ ಮಾಡಿದರೆ;

(ಎನ್) ಮೇಲೆ ಹೇಳಿದ ಉದ್ದೇಶಕ್ಕಾಗಿ ಪ್ರತ್ಯೇಕವಾಗಿರಿಸಿದ ಸ್ಥಳದಲ್ಲಿ ಸ್ನಾನ ಮಾಡುತ್ತಿರುವ ವ್ಯಕ್ತಿಗೆ ಅಲ್ಲಿ ಬುದ್ಧಿಪೂರ್ವಕವಾಗಿ ನುಗ್ಗುವ ಮೂಲಕ ಅಥವಾ ಅದನ್ನು ಯಾವ ಉದ್ದೇಶಕ್ಕಾಗಿ ಪ್ರತ್ಯೇಕವಾಗಿರಿಸಿಲ್ಲವೋ ಅದಕ್ಕಾಗಿ ಉಪಯೋಗಿಸುವ ಮೂಲಕ ಅಡಚಣೆ ಅಥವಾ ಅನಾನುಕೂಲವನ್ನು ಮಾಡಿದರೆ;

(ಓ) ಯಾವುದೇ ಬೀದಿಯಲ್ಲಿ ಅಥವಾ ಸಾರ್ವಜನಿಕರು ಸೇರುವ ಸ್ಥಳದಲ್ಲಿ ಅಥವಾ ಯಾವುದೇ ಸರಕಾರೀ ಕಾರ್ಯಾಲಯದಲ್ಲಿ ಬುದ್ದಿಪೂರ್ವಕವಾಗಿ ಮತ್ತು ಅಸಭ್ಯತೆಯಿಂದ ತನ್ನ ದೇಹವನ್ನು ತೋರ್ಪಡಿಸಿದರೆ, ಅಸಭ್ಯ ಭಾಷೆಯನ್ನು ಉಪಯೋಗಿಸಿದರೆ ಅಥವಾ ಅಸಭ್ಯರೀತಿಯಿಂದ ಅಥವಾ ಉಪದ್ರವಕಾರಿ ರೀತಿಯಲ್ಲಿ ಅಥವಾ ಅವ್ಯವಸ್ಥಿತ ರೀತಿಯಲ್ಲಿ ವರ್ತಿಸಿದರೆ;

(ಪಿ) ಕುಡಿದರೆ ಮತ್ತು ಬೀದಿಯಲ್ಲಿ ಅಥವಾ ಸಾರ್ವಜನಿಕರು ಸೇರುವ ಸ್ಥಳದಲ್ಲಿ ತನ್ನನ್ನು ತಾನು ನೋಡಿಕೊಳ್ಳಲು ಅಸಮರ್ಥನಾಗಿದ್ದರೆ;

(ಕ್ಯೂ) ಬೀದಿಯಲ್ಲಿ ಯಾವೊಬ್ಬ ಪ್ರಯಾಣಿಕನನ್ನು ಬುದ್ಧಿಪೂರ್ವಕವಾಗಿ ತಳ್ಳಿದರೆ, ಅದುಮಿದರೆ, ಒತ್ತರಿಸಿ ಅಥವಾ ಅವನಿಗೆ ಅಡಚಣೆಯುಂಟು ಮಾಡಿದರೆ, ಅಥವಾ ಹಿಂಸಾತ್ಮಕ ಚಲನವಲನಗಳಿಂದ ಭಯವನ್ನುಂಟುಮಾಡುವ ಅಂಗಚಲನಗಳಿಂದ ಉದ್ದೇಶಪೂರ್ವಕವಾದ ವೈಯಕ್ತಿಕ ಕಿರುಕುಳದಿಂದ ಚೀರುವುದರಿಂದ, ಅರಚುವುದರಿಂದ ಕುದುರೆಗಳನ್ನು ಅಥವಾ ದನಗಳನ್ನು ಬುದ್ಧಿಪೂರ್ವಕವಾಗಿ ಹೆದರಿಸಿರುವುದರಿಂದ ಅಥವಾ ಬೇರೆ ರೀತಿಯಿಂದ ಸಾರ್ವಜನಿಕ ಶಾಂತಿ ಅಥವಾ ಸುವ್ಯವಸ್ಥೆಯನ್ನು ಕದಡಿದರೆ;

(ಆರ್) ಯಾವುದೇ ಬೀದಿಯಲ್ಲಿ ಹೆದರಿಸುವ, ಬೈಯ್ಯುವ ಅಥವಾ ಅವಮಾನಗೊಳಿಸುವ ಪದಗಳನ್ನು ಉಪಯೋಗಿಸಿದರೆ ಅಥವಾ ಹಾಗೆ ವರ್ತಿಸಿದರೆ, ಅಥವಾ ಶಾಂತಿಭಂಗವನ್ನುಂಟುಮಾಡುವ ಉದ್ದೇಶದಿಂದ

ಅಥವಾ ಯಾವುದರಿಂದ ಶಾಂತಿಭಂಗವಾಗುವುದು ಅಂತಹ ಏನೊಂದು ಅಸಭ್ಯ, ಹೆದರಿಸುವ, ಬೈಯ್ಯುವ ಅಥವಾ ಅವಮಾನ ಮಾಡುವ ಪತ್ರ ಅಥವಾ ಚಿತ್ರವನ್ನು ಹಚ್ಚಿದರೆ ಅಥವಾ ಅಂಟಿಸಿದರೆ ಅಥವಾ ಪ್ರದರ್ಶಿಸಿದರೆ;

(ಎಸ್) ಭಿಕ್ಷೆಗಾಗಿ ಕಾಡಿಬೇಡಿದರೆ ಅಥವಾ ಭಿಕ್ಷೆಯನ್ನು ಕೊಡುವಂತೆ ಒತ್ತಾಯಪಡಿಸುವ ಉದ್ದೇಶದಿಂದ, ಯಾವುದೇ ಬೀದಿಯಲ್ಲಿ ಆಥವಾ ಅದರ ಹತ್ತಿರ ಮತ್ತು ಅಲ್ಲಿಗೆ ಕಣ್ಣಿಗೆ ಕಾಣುವ ಹಾಗೆ ಯಾವುದೇ ಅಂಗವೈಕಲ್ಯವನ್ನು ಅಥವಾ ರೋಗವನ್ನು ಅಥವಾ ಯಾವುದೇ ಅಸಹ್ಯಕರವಾದ ಹುಣ್ಣನ್ನು ಅಥವಾ ಘಾಯವನ್ನು ತೋರಿಸಿದರೆ ಅಥವಾ ಪ್ರದರ್ಶಿಸಿದರೆ;

(ಟಿ) ಯಾವುದೇ ಬೀದಿಯಲ್ಲಿ ಕೊಳೆ, ಹೊಲಸು, ಕಸ, ಅಥವಾ ಕಲ್ಲುಗಳನ್ನು ಅಥವಾ ಕಟ್ಟಡ ಸಾಮಗ್ರಿಗಳನ್ನು ಎಸೆದರೆ ಅಥವಾ ಇಟ್ಟರೆ, ಅಥವಾ ಯಾವುದೇ ಮನೆ, ಕಾರ್ಖಾನೆ ಅಥವಾ ಸಗಣಿ ಕುಪ್ಪೆಯಿಂದ ಅಥವಾ ಅಂತಹವುಗಳಿಂದ ಅಸಹ್ಯಕರವಾದ ಪದಾರ್ಥವು ಬೀದಿಯಲ್ಲಿ ಹರಿಯುವಂತೆ ಮಾಡಿದರೆ;

(ಯು) ಯಾವುದೇ ಬಾವಿ, ಕೆರೆ ಅಥವಾ ಇತರ ಅಪಾಯಕರ ಸ್ಥಳ ಅಥವಾ ಕಟ್ಟಡಕ್ಕೆ ಬೇಲಿ ಹಾಕಲು ಅಥವಾ ಸೂಕ್ತ ರೀತಿಯಲ್ಲಿ ರಕ್ಷಿಸಲು ನಿರ್ಲಕ್ಷಿದರೆ;

(ವಿ) ಒಡೆಯನ ಅಥವಾ ಆಧಿಭೋಗದಾರನ ಸಮ್ಮತಿಯಿಲ್ಲದೇ ಯಾವುದೇ ಚೀಟಿ, ನೋಟೀಸು ಅಥವಾ ಇತರ ಕಾಗದವನ್ನು ಯಾವುದೇ ಕಟ್ಟಡ, ಗೋಡೆ ಅಥವಾ ಬೇಲಿಯ ಮೇಲೆ ಅಂಟಿಸಿದರೆ ಅಥವಾ ಅಂಡಿಸುವಂತೆ ಮಾಡಿದರೆ, ಅಥವಾ ಅಂತಹ ಯಾವುದೇ ಕಟ್ಟಡ, ಗೋಡೆ ಅಥವಾ ಬೇಲಿಯ ಮೇಲೆ ಬರೆದರೆ ಅಥವಾ ವಿರೂಪಗೊಳಿಸಿದರೆ ಅಥವಾ ಗುರುತು ಹಾಕಿದರೆ;

(ಡಬ್ಲ್ಯೂ) ಸರಕಾರದಿಂದ ಅಥವಾ ಸಂಬಂಧಪಟ್ಟ ಸಾರ್ವಜನಿಕ ಪ್ರಾಧಿಕಾರದ ಸಮ್ಮತಿ ಇಲ್ಲದೇ ಸರಕಾರದ ಅಥವಾ ಯಾವುದೇ ಸಾರ್ವಜನಿಕ ಪ್ರಾಧಿಕಾರದ ಒಡೆತನಕ್ಕೆ ಸೇರಿದ ಯಾವುದೇ ದೀಪದ ಕಂಬ, ಮರ, ಪತ್ರಪೆಟ್ಟಿಗೆ, ಟ್ರಾನ್ಸ್‌ಫಾರ್ಮರ್, ಬೀದಿ ಅಥವಾ ಯಾವುದೇ ಸ್ವತ್ತಿನ ಮೇಲೆ ಯಾವುದೇ ಚೀಟಿ, ನೋಟೀಸು ಅಥವಾ ಇತರ ಕಾಗದವನ್ನು ಅಂಟಿಸಿದರೆ ಅಥವಾ ಅಂಟಿಸುವಂತೆ ಮಾಡಿದರೆ ಅಥವಾ ಅಂತಹ ಯಾವುದೇ ದೀಪದ ಕಂಬ, ಮರ, ಪತ್ರದ ಪೆಟ್ಟಿಗೆ, ಅಥವಾ ಟ್ರಾನ್ಸ್‌ಫಾರ್ಮರ್, ಬೀದಿ ಅಥವಾ ಇತರ ಸ್ವತ್ತಿನ ಮೇಲೆ ಬರೆದರೆ ಅಥವಾ ವಿರೂಪಗೊಳಿಸಿದರೆ ಅಥವಾ ಗುರುತು ಹಾಕಿದರೆ ಅಥವಾ ಬರೆಯುವಂತೆ ಅಥವಾ ವಿರೂಪಗೊಳಿಸುವಂತೆ ಅಥವಾ ಗುರುತು ಹಾಕುವಂತೆ ಮಾಡಿದರೆ;

(ಎಕ್ಸ್) ಓಡಾಡುವವನಿಗೆ ಕಿರುಕುಳವಾಗುವಂತೆ ಯಾವುದೇ ಬೀದಿಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ಅಥವಾ ಸಾರ್ವಜನಿಕರು ಸೇರುವ ಸ್ಥಳದಲ್ಲಿ ಯಾವುದೇ ಹತ್ತಿರ, ಉಗುಳಿದರೆ ಯಾವುದೇ ಧೂಳು, ಬೂದಿ, ಹೊಲಸು ಅಥವಾ ಕಸವನ್ನು ಎಸೆದರೆ;

(ವೈ) ಯಾವುದೇ ನ್ಯಾಯಾಲಯ, ಪೊಲೀಸು ಠಾಣೆ, ಸರಕಾರೀ ಕಾರ್ಯಾಲಯ, ಅಥವಾ ಸರಕಾರದ ಅಥವಾ ಯಾವುದೇ ಸಾರ್ವಜನಿಕ ನಿಕಾಯದ ಆಧಿಭೋಗದಲ್ಲಿರುವ ಕಟ್ಟಡದಲ್ಲಿ, ಅಂತಹ ಸ್ಥಳದ ಸ್ವಾಧೀನವನ್ನು ಹೊಂದಿದ ಸಕ್ಷಮ ಪ್ರಾಧಿಕಾರಿಯಿಂದ ಹೊರಡಿಸಲಾದ ಮತ್ತು ಅಂತಹ ನ್ಯಾಯಾಲಯಕ್ಕೆ ಠಾಣೆಗೆ, ಕಾರ್ಯಾಲಯಕ್ಕೆ ಅಥವಾ ಕಟ್ಟಡಕ್ಕೆ ಅಂಟಿಸಿದ ನೋಟೀಸನ್ನು ಉಲ್ಲಂಘಿಸಿ ಹೊಗೆಸೊಪ್ಪು ಸೇದಿದರೆ ಅಥವಾ ಉಗುಳಿದರೆ;

ಅವನು ಒಂದು ನೂರು ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು. ಪರಂತು ಅಂತಹ ಜುಲ್ಮಾನೆಯನ್ನು ಕೊಡಲು ತಪ್ಪಿದಲ್ಲಿ ಆಗುವ ಕಾರಾವಾಸವು, ಭಾರತೀಯ ದಂಡ ಸಂಹಿತೆಯ 67ನೆಯ ಪ್ರಕರಣದಲ್ಲಿ ಏನೇ ಇದ್ದರೂ, ಎಂಟು ದಿನಗಳಿಗೆ ಮೀರತಕ್ಕದ್ದಲ್ಲ.

(2) (1)ನೆಯ ಉಪಪ್ರಕರಣದ ಉಪಬಂಧಗಳನ್ನು ಅಥವಾ ಅದರ ಯಾವುದೇ ಖಂಡವನ್ನು ಸರಕಾರವು ಯೋಗ್ಯವೆಂದು ಭಾವಿಸುವ ಯಾವುದೇ ಸ್ಥಳೀಯ ಪ್ರದೇಶಕ್ಕೆ ಯಾವುದೇ ನಿರ್ದಿಷ್ಟ ಅವಧಿಯವರೆಗೆ ಅನ್ವಯಿಸಬಹುದು ಅಥವಾ ಹಾಗೆ ಅನ್ವಯಿಸಿದರೆ ಪ್ರದೇಶದಿಂದ ಯಾವಾಗಲಾದರೂ ಅದನ್ನು ರದ್ದುಪಡಿಸಬಹುದು.

**93. ಪ್ರಾಣಿಗಳನ್ನು ಹಿಂಸಿಸುವುದಕ್ಕಾಗಿ ದಂಡನೆ :–** ಯಾವುದೇ ಪ್ರಾಣಿಗೆ ಕ್ರೂರವಾಗಿ ಹೊಡೆದರೆ, ಚುಚ್ಚಿ ನಡೆಸಿದರೆ, ಅದನ್ನು ಅತಿಯಾಗಿ ದುಡಿಸಿದರೆ, ಪೀಡಿಸಿದರೆ, ಯಾತನೆ ಕೊಟ್ಟರೆ, ಅಥವಾ ಹಾಗೆ ಕ್ರೂರವಾಗಿ ಹೊಡೆಯುವಂತೆ, ಚುಚ್ಚಿ ನಡೆಸುವಂತೆ ಅತಿಯಾಗಿ ದುಡಿಸುವಂತೆ ಪೀಡಿಸುವಂತೆ, ಯಾತನೆ ಕೊಡುವಂತೆ ಮಾಡುವ ಅಥವಾ ಏರ್ಪಾಟು ಮಾಡುವ ಯಾವೊಬ್ಬನು, ಅಪರಾಧ ಸಿದ್ಧಪಟ್ಟ ಮೇಲೆ, ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದ ದಂಡಿತನಾಗತಕ್ಕದ್ದು.

**94. ಬುದ್ಧಿಪೂರ್ವಕ ಅತಿಕ್ರಮಣವಾಗಿ ದಂಡನೆ :–** (1) ಬುದ್ಧಿಪೂರ್ವಕವಾಗಿ ಯಾವುದೇ ವಾಸದ ಮನೆಯನ್ನು ಅಥವಾ ಆವರಣವನ್ನು ಅಥವಾ ಯಾವುದೇ ಭೂಮಿಯನ್ನು ಅಥವಾ ಅದಕ್ಕೆ ಹೊಂದಿಕೊಂಡಿರುವ ಜಾಗವನ್ನು, ಅಥವಾ ಸರಕಾರಕ್ಕೆ ಸೇರಿದ ಅಥವಾ ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ವಿನಿಯೋಗಿಸಲಾಗಿದ್ದ ಯಾವುದೇ ಜಾಗ, ಕಟ್ಟಡ, ಸ್ಮಾರಕ ಅಥವಾ ರಚನೆ, ಅಥವಾ ಯಾವುದೇ ವಾಹನ ಅಥವಾ ನೌಕೆಯಲ್ಲಿ ಅಥವಾ ಅದರ ಮೇಲೆ ತೃಪ್ತಿದಾಯಕ ಕಾರಣವಿಲ್ಲದೇ ಪ್ರವೇಶಿಸಿದರೆ ಅಥವಾ ಉಳಿದುಕೊಂಡರೆ, ಅವನು ವಾಸ್ತವಿಕವಾಗಿ ಯಾವುದೇ ಹಾನಿಯನ್ನುಂಟುಮಾಡಿರಲಿ ಅಥವಾ ಇಲ್ಲದಿರಲಿ, ಅಪರಾಧ ಸಿದ್ಧಪಟ್ಟ ಮೇಲೆ, ಇಪ್ಪತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಯಾವನೇ ಪೊಲೀಸ್ ಅಧಿಕಾರಿಯು ಯಾವುದೇ ವಾಸದ ಮನೆ, ಆವರಣ, ಅಥವಾ ಭೂಮಿ ಅಥವಾ ಅದಕ್ಕೆ ಹೊಂದಿಕೊಂಡಿರುವ ಜಾಗ ಅಥವಾ ಸರಕಾರಕ್ಕೆ ಸೇರಿದ ಯಾವುದೇ ಜಾಗ, ಕಟ್ಟಡ, ಸ್ಮಾರಕ ಅಥವಾ ರಚನೆಯ ಸ್ವಾಧೀನವನ್ನು ಪಡೆದಿರುವ ಅಥವಾ ವಶದಲ್ಲಿ ಇಟ್ಟುಕೊಂಡಿರುವವನೆಂದು ಯಾವನೇ ವ್ಯಕ್ತಿಯಿಂದ ಬಂದ ಮಾಹಿತಿಯ ಮೇಲೆ, ಅಲ್ಲಿ ಅಥವಾ ಅದರ ಮೇಲೆ (1)ನೆಯ ಉಪಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಮಾಡಿದುದಾಗಿ ಆಪಾದಿತನಾದ ಯಾವನೇ ವ್ಯಕ್ತಿಯನ್ನು, ವಾರಂಟು ಇಲ್ಲದೆ ದಸ್ತಗಿರಿ ಮಾಡಬಹುದು.

**95. ಬೆಂಕಿಯ ಸುಳ್ಳುಭಯ ಸೂಚನೆ ಅಥವಾ ಅಗ್ನಿಸೂಚಕಕ್ಕೆ ಹಾನಿ :–** ಯಾವನೇ ವ್ಯಕ್ತಿಯು, ತಿಳಿದೂ, ಅಗ್ನಿಶಾಮಕ ದಳಕ್ಕೆ ಅಥವಾ ಅದರ ಯಾವನೇ ಅಧಿಕಾರಿಗೆ ಅಥವಾ ಕಾಯಕ ಸಿಬ್ಬಂದಿಗೆ ಬೆಂಕಿ ಹತ್ತಿದೆಯೆಂದು ಬೀದಿಯ ಅಗ್ನಿಸೂಚಕದ ಮೂಲಕ, ಹೇಳಿಕೊಡುವ ಮೂಲಕ, ಸಂದೇಶದ ಮೂಲಕ ಅಥವಾ ಬೇರೆ ರೀತಿಯಲ್ಲಿ ಸುಳ್ಳು ಭಯಸೂಚನೆಯನ್ನು ಕೊಟ್ಟರೆ ಅಥವಾ ಕೊಡುವಂತೆ ಮಾಡಿದರೆ ಅಥವಾ ಅಂಥ ಸುಳ್ಳು ಭಯಸೂಚನೆ ಕೊಡುವ ಉದ್ದೇಶದಿಂದ ಬುದ್ಧಿಪೂರ್ವಕವಾಗಿ ಬೀದಿಯ ಅಗ್ನಿ ಸೂಚಕದ ಗಾಜನ್ನು ಒಡೆದರೆ ಅಥವಾ ಬೇರೆ

ರೀತಿಯಲ್ಲಿ ಹಾನಿಯುಂಟುಮಾಡಿದರೆ, ಅಪರಾಧ ಸಿದ್ಧಪಟ್ಟ ಮೇಲೆ, ಮೂರು ತಿಂಗಳು ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಎರಡರಿಂದ, ದಂಡಿತನಾಗತಕ್ಕದ್ದು.

**96. ಸೂರ್ಯಾಸ್ತ ಮತ್ತು ಸೂರ್ಯೋದಯದ ಮಧ್ಯ ಕಾಲದಲ್ಲಿ ಸಂಶಯಾಸ್ಪದ ಸನ್ನಿವೇಶಗಳಲ್ಲಿ ಕಂಡುಬರುವಿಕೆ :–** ಸೂರ್ಯಾಸ್ತ ಮತ್ತು ಸೂರ್ಯೋದಯದ ಮಧ್ಯಕಾಲದಲ್ಲಿ ಯಾವನೊಬ್ಬನು

(ಎ) ಅಪರಾಧ ಮಾಡುವ ಉದ್ದೇಶಕ್ಕಾಗಿ ಯಾವುದೇ ಅಪಾಯಕಾರಕ ಉಪಕರಣವನ್ನು ಇಟ್ಟುಕೊಂಡಿರುವುದು; ಅಥವಾ

(ಬಿ) ಅಪರಾಧ ಮಾಡುವ ಉದ್ದೇಶದಿಂದ ತನ್ನ ಮುಖವನ್ನು ಮುಚ್ಚಿಕೊಂಡಿರುವುದು ಅಥವಾ ಅನ್ಯಥಾ ರೂಪ ಮರೆಸಿಕೊಂಡಿರುವುದು; ಅಥವಾ

(ಸಿ) ಯಾವುದೇ ವಾಸದ ಮನೆ ಅಥವಾ ಇತರ ಕಟ್ಟಡ, ಅಥವಾ ದೋಣಿಯಲ್ಲಿ ತನ್ನ ಇರುವಿಕೆಗೆ ಸಮಾಧಾನಕರವಾದ ಉತ್ತರ ಕೊಡಲಾಗದಿದ್ದು; ಅಥವಾ

(ಡಿ) ಕಳ್ಳನೆಂದು ಪರಿಗಣಿಸಲಾದ ವ್ಯಕ್ತಿಯಾಗಿದ್ದು, ಮತ್ತು ಸುಪ್ರಸಿದ್ಧ ಕಳ್ಳನಾಗಿದ್ದು, ತನ್ನ ಬಗ್ಗೆ ಸಮಾಧಾನಕರವಾದ ಉತ್ತರ ಕೊಡಲಾಗದಿದ್ದು ಯಾವುದೇ ಬೀದಿಯಲ್ಲಿ ಅಂಗಣದಲ್ಲಿ ಅಥವಾ ಇತರ ಸ್ಥಳದಲ್ಲಿ ಬಿದ್ದುಕೊಂಡಿರುವುದು; ಅಥವಾ ಅಲೆದಾಡುತ್ತಿರುವುದು; ಅಥವಾ

(ಇ) ವಿಧಿಬದ್ಧ ಕಾರಣವಿಲ್ಲದೆ ಯಾವುದೇ ಕನ್ನ ಹಾಕುವ ಸಾಧನವನ್ನು ಸ್ವಾಧೀನದಲ್ಲಿಟ್ಟುಕೊಂಡಿರುವುದು (ಅಂಥ ಕಾರಣವನ್ನು ರುಜುವಾತು ಪಡಿಸುವ ಭಾರವು ಅಂಥ ವ್ಯಕ್ತಿಯ ಮೇಲೆ ಇರತಕ್ಕದ್ದು);

– ಕಂಡುಬಂದರೆ; ಅಪರಾಧ ಸಿದ್ದಪಟ್ಟ ಮೇಲೆ, ಮೂರು ತಿಂಗಳ ಅವಧಿಯ ವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡಿತನಾಗತಕ್ಕದ್ದು.

**97. ಅಧಿಕಾರವಿಲ್ಲದೆ ಆಯುಧವನ್ನು ಇಟ್ಟುಕೊಳ್ಳುವುದು :–** ಭಾರತದ ಸಶಸ್ತ್ರ ಬಲಗಳಿಗೆ ಸೇರಿದವನು ಮತ್ತು ಹಾಗೆ ಕಾರ್ಯ ಮಾಡುತ್ತಿರುವವನು ಅಥವಾ ಪೊಲೀಸ್ ಅಧಿಕಾರಿಯು ಆಗಿಲ್ಲದಿದ್ದ ಯಾವೊಬ್ಬ ವ್ಯಕ್ತಿಯು ಕತ್ತಿ, ಈಟಿ, ದೊಣ್ಣೆ, ಬಂದೂಕು ಅಥವಾ ಇತರ ಅಪಾಯಕರ ಆಯುಧ ಹಿಡಿದು ಅಥವಾ ಯಾವುದೇ ಅಸ್ಫೋಟಕ ಅಥವಾ ನಾಶಕಾರಿ ವಸ್ತುವಿನೊಂದಿಗೆ, ಯಾವುದೇ ಬೀದಿಯಲ್ಲಿ ಅಥವಾ ಸಾರ್ವಜನಿಕ ಸ್ಥಳದಲ್ಲಿ ಹೋದರೆ, ಹಾಗೆ ಮಾಡಲು ಕಾನೂನುಬದ್ದ ಪ್ರಾಧಿಕಾರಿಯಿಂದ ಅಧಿಕೃತನಾಗಿದ್ದ ಹೊರತು, ಯಾವನೇ ಪೊಲೀಸ್ ಅಧಿಕಾರಿಯಿಂದ ನಿಶ್ಯಸ್ತ್ರಗೊಳಿಸಲ್ಪಡಲು ಬದ್ಧನಾಗಿರತಕ್ಕದ್ದು, ಮತ್ತು ಹಾಗೆ ವಶಕ್ಕೆ ತೆಗೆದುಕೊಳ್ಳಲ್ಪಟ್ಟ ಆಯುಧವು ಅಥವಾ ವಸ್ತುವು, ಕಮೀಷನರನು ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನು ಕ್ರಮವಾಗಿ ತಮ್ಮ ತಮ್ಮ ಅಧಿಕಾರ ವ್ಯಾಪ್ತಿಗೊಳಪಡುವ ಪ್ರದೇಶದಲ್ಲಿ ಐದು ನೂರು ರೂಪಾಯಿಗಳಿಗೆ ಮೀರದಂತೆ, ವಿಧಿಸುವಂಥ ಜುಲ್ಮಾನೆಯನ್ನು ಎರಡು ತಿಂಗಳೊಳಗಾಗಿ ಸಂದಾಯ ಮಾಡಿ ಬಿಡಿಸಿಕೊಂಡ ಹೊರತು, ರಾಜ್ಯ ಸರಕಾರಕ್ಕೆ ಮುಟ್ಟುಗೋಲಾಗತಕ್ಕದ್ದು.

**98. ಸಮಾಧಾನಕರ ವಿವರಣೆ ಕೊಡಲಾಗದೆ ಇರುವ ಸ್ವತ್ತಿನ ಸ್ವಾಧೀನತೆ :–** ಯಾವನೊಬ್ಬನು, ಕಳವಿನ ಅಥವಾ ಮೋಸದಿಂದ ದೊರಕಿಸಿದುದೆಂದು ನಂಬಲು ಕಾರಣವಿರುವ ಯಾವುದೇ ಸ್ವತ್ತನ್ನು ಸ್ವಾಧೀನದಲ್ಲಿಟ್ಟು ಕೊಂಡಿದ್ದರೆ, ಅಥವಾ ರೀತಿಯಲ್ಲಿ ಹಸ್ತಾಂತರಿಸಿದರೆ, ಅಥವಾ ಮಾರಾಟಕ್ಕೆ ಅಥವಾ ಗಿರವಿಗೆ ಕೊಡಲು ನೀಡಿದರೆ ಅವನು ಅಂಥ ಸ್ವಾಧೀನದ ಬಗ್ಗೆ ಕಾರಣ ನೀಡಲು ಅಥವಾ ಮ್ಯಾಜಿಸ್ಟ್ರೇಟನಿಗೆ ಸಮಾಧಾನವಾಗುವಂತೆ ವರ್ತಿಸಲು ತಪ್ಪಿದರೆ, ಅಪರಾಧ ಸಿದ್ಧಪಟ್ಟ ಮೇಲೆ, ಮೂರು ತಿಂಗಳ ಅವಧಿಯ ವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಒಂದು ನೂರು ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಎರಡರಿಂದ ದಂಡಿತನಾಗತಕ್ಕದ್ದು.

**99. ಕಳವಿನದೆಂದು ಶಂಕಿಸಲಾದ ವಸ್ತುವಿನ ಸ್ವಾಧೀನತೆಯ ಬಗ್ಗೆ ಅಥವಾ ಅದನ್ನು ಒಪ್ಪಿಸುವ ಬಗ್ಗೆ ಪೊಲೀಸಿಗೆ ವರದಿಕೊಡಲು ಗಿರಿವಿದಾರ ಮೊದಲಾದವರ ತಪ್ಪುವಿಕೆ :–** ಗಿರಿವಿಧಾರನಾಗಿದ್ದು ಹಳೆಯ ವಸ್ತುಗಳ ವ್ಯಾಪಾರಿಯಾಗಿದ್ದು ಅಥವಾ ಲೋಹಗಳಲ್ಲಿ ಕೆಲಸ ಮಾಡುವವನಾಗಿದ್ದು ಅಥವಾ ಕಮೀಷನರನು ಅಥವಾ ಸೂಪರಿಂಟೆಂಡೆಂಟನಿಂದ ಅವರವರ ಚಾರ್ಜಿನಲ್ಲಿರುವ ಪ್ರದೇಶದಲ್ಲಿ ಅಂಥ ವ್ಯಕ್ತಿ ಯಾಗಿರುವನೆಂದು ಯುಕ್ತವಾಗಿ ನಂಬಲ್ಪಟ್ಟಿದ್ದು ಯಾವೊಬ್ಬ ವ್ಯಕ್ತಿಯು ಮತ್ತು ಭಾರತ ದಂಡ ಸಂಹಿತೆಯ 410ನೆಯ ಪ್ರಕರಣದಲ್ಲಿ ಹೇಳಿದ ಅಥವಾ ಸದರಿ ಸಂಹಿತೆಯ 417, 418, 419 ಅಥವಾ 420ನೆಯ ಪ್ರಕರಣಗಳ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಮೂಲಕ ವರ್ಗಾಂತರಿಸಲಾಗಿದೆಯೆಂದು ಸಂಶಯಪಡುವ ಅವಕಾಶವಿದ್ದ ಸ್ವತ್ತಿನ ಬಗ್ಗೆ ಲಿಖಿತ ಮೂಲಕವಾದ ಅಥವಾ ಮುದ್ರಿತವಾದ ಮಾಹಿತಿಯನ್ನು ಪೊಲೀಸ್ ಅಧಿಕಾರಿಯಿಂದ ಪಡೆದವನಾಗಿ, ಅಂಥ ಮಾಹಿತಿಯಲ್ಲಿರುವ ವರ್ಣನೆಗೆ ಸರಿಹೋಗುವ ಸ್ವತ್ತನ್ನು ಸ್ವಾಧೀನದಲ್ಲಿಟ್ಟುಕೊಂಡಿರುವುದು ಕಂಡುಬಂದರೆ ಅಥವಾ ಅನಂತರ ಅದು ಅವನ ಸ್ವಾಧೀನಕ್ಕೆ ಬಂದರೆ, ಅಥವಾ ಆ ಸ್ವತ್ತು ಮರಾಟಕ್ಕಾಗಿ, ಗಿರಿವಿಗಾಗಿ, ವಿನಿಮಯಕ್ಕಾಗಿ ಅಥವಾ ಸುಪರ್ದಿಗಾಗಿ, ರೂಪಾಂತರಕ್ಕಾಗಿ ಅಥವಾ ಅನ್ಯಥಾ ರೀತಿಯಲ್ಲಿ ಅವನಿಗೆ ನೀಡಲಾಗಿದ್ದರೆ;

(i) ಸಂದರ್ಭಾನುಸಾರ, ಕಮೀಷನರಿಗೆ ಅಥವಾ ಸೂಪರಿಂಟೆಂಡೆಂಟನಿಗೆ ಅಥವಾ ಯಾವುದೇ ಪೋಲಿಸ್ ಠಾಣೆಗೆ ಹಾಗೆ ವಶದಲ್ಲಿರುವ ಅಥವಾ ನೀಡಿರುವ ಬಗ್ಗೆ ಕೂಡಲೇ ಮಾಹಿತಿಯನ್ನು ಕೊಟ್ಟ ಹೊರತು, ಮತ್ತು ಯಾವ ವ್ಯಕ್ತಿಯಿಂದ ಅದು ತನ್ನ ವಶಕ್ಕೆ ಬಂದಿರುವುದೋ ಅಥವಾ ನೀಡಲಾಗಿರುವುದೋ ಆ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ಅರಿತುಕೊಳ್ಳಲು ಮತ್ತು ಮೇಲೆ ಹೇಳಿದ ಮಾಹಿತಿ ಕೊಡಲು ಎಲ್ಲ ಯುಕ್ತಕ್ರಮಗಳನ್ನು ಕೈಗೊಂಡ ಹೊರತು; ಅಥವಾ

(ii) ಆ ಸ್ವತ್ತು ಸಾಮಾನ್ಯ ಉಡುಪಿನ ವಸ್ತ್ರದಂತೆ ಅಥವಾ ಇತರ ರೀತಿಯಲ್ಲಿ, ಲಿಖಿತವಾದ ಅಥವಾ ಮುದ್ರಿತವಾದ ಮಾಹಿತಿಯ ಪ್ರಕಾರ ಗುರುತು ಹಿಡಿಯಲು ಬಾರದಂತಿದ್ದು, ಅದನ್ನು ಅಂಥ ಮಾಹಿತಿಯು ದೊರಕಿದ ತರುವಾಯವೂ ಬಚ್ಚಿಡದಿದ್ದ ಹೊರತು; ಅಪರಾಧ ಸಿದ್ಧಪಟ್ಟ ಮೇಲೆ, ಹಾಗೆ ಅವನ ವಶದಲ್ಲಿದ್ದ ಅಥವಾ ಅವನಿಗೆ ನೀಡಲಾಗಿದ್ದ ಅಂಥ ಪ್ರತಿಯೊಂದು ವಸ್ತುವಿನ ಬಗ್ಗೆ ಐವತ್ತು ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**100. ಅಂತಹ ಸ್ವತ್ತಿನ ಕರಗಿಸುವಿಕೆ ಇತ್ಯಾದಿ :–** 99ನೆಯ ಪ್ರಕರಣದ ಮೇರೆಗೆ ಅಂತಹ ಮಾಹಿತಿಯನ್ನು ಪಡೆದಿರುವ ಯಾವೊಬ್ಬನು, ಪೊಲೀಸಿನ ಪೂರ್ವ ಅನುಮತಿ ಇಲ್ಲದೇ ಅಂತಹ ಯಾವೊಂದು ಸ್ವತ್ತನ್ನು ಮಾರ್ಪಾಟು ಮಾಡಿದರೆ, ಕರಗಿಸಿದರೆ, ವಿರೂಪಗೊಳಿಸಿದರೆ ಅಥವಾ ಅಡಗಿಸಿದರೆ, ಅಥವಾ ಅದು

ಮಾರ್ಪಾಟಾಗಲು ಕರಗಿಸಲ್ಪಡಲು ವಿರೂಪಗೊಳಿಸಲ್ಪಡಲು ಅಥವಾ ಅಡಗಿಸಲ್ಪಡಲು ಕಾರಣನಾದರೆ ಅಥವಾ ಹಾಗೆ ಆಗಲು ಬಿಟ್ಟಕೊಟ್ಟರೆ, ಅವನು, ಆ ಸ್ವತ್ತು ಭಾರತ ದಂಡನೀತಿ ಸಂಹಿತೆಯ 410ನೆಯ ಪ್ರಕರಣದ ಅರ್ಥದಲ್ಲಿ ಕಳವಿನ ಸ್ವತ್ತೆಂದು, ಅಥವಾ ಸದರಿ ಸಂಹಿತೆಯ 417, 418, 419 ಅಥವಾ 420ನೆಯ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧದ ಬಗೆಗಿನ ಸ್ವತ್ತೆಂದು, ರುಜುವಾತಾದಲ್ಲಿ, ಮೂರು ವರುಷಗಳ ವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

**101. ಮಗುವಿನಿಂದ ಒತ್ತೆ ತೆಗೆದುಕೊಳ್ಳುವುದು :–** ಯಾವೊಬ್ಬನು ಹದಿನಾಲ್ಕು ವರುಷಗಳಿಗೆ ಮೀರದಿರುವ ವಯಸ್ಸಿನವನೆಂದು ಕಂಡುಬರುವ ಯಾವೊಬ್ಬ ಮಗುವಿನಿಂದ, ಅವನಿಗೆ ಕೊಟ್ಟ ಸಾಲ, ಮುಂಗಡ ಅಥವಾ ಕೊಟ್ಟ ಯಾವುದೊಂದು ಹಣಕ್ಕಾಗಿ ಅಥವಾ ಗಿರಿವಿ, ಒತ್ತೆ ಅಥವಾ ಭದ್ರತೆಯೆಂದು ವಸ್ತುವಿನ ಒಡೆಯನ ತಿಳುವಳಿಕೆ ಅಥವಾ ಸಮ್ಮತಿ ಇಲ್ಲದೆ ಅಂತಹ ಮಗುವಿನಿಂದ ಯಾವುದಾದರೂ ವಸ್ತುವನ್ನು ಕೊಂಡುಕೊಂಡರೆ, ಅವನು ಅಪರಾಧ ಸಿದ್ದಪಟ್ಟ ಮೇಲೆ, ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**102. ಸಾರ್ವಜನಿಕ ವಿನೋದ ಸ್ಥಳ ಇತ್ಯಾದಿಗಳಲ್ಲಿ ಅವ್ಯವಸ್ಥಿತ ವರ್ತನೆಗಾಗಿ ಅನುಮತಿ ಕೊಟ್ಟಿರುವುದಕ್ಕಾಗಿ ಜುಲ್ಮಾನೆ :–** ಯಾವುದೇ ಸಾರ್ವಜನಿಕ ವಿನೋದ ಅಥವಾ ಮನರಂಜನೆಯ ಸ್ಥಳವನ್ನು ಇಟ್ಟುಕೊಂಡು ಬರುವ ಯಾವೊಬ್ಬ ವ್ಯಕ್ತಿಯು, ಅಂತಹ ಸ್ಥಳದಲ್ಲಿ ಕುಡಿದಿರುವಿಕೆಗೆ ಅಥವಾ ಇತರ ಅವ್ಯವಸ್ಥಿತ ವರ್ತನೆಗೆ ಅಥವಾ ಯಾವುದೇ ಜೂಜಾಟಕ್ಕೆ ತಿಳಿದೂ ಅನುಮತಿಸಿದರೆ ಅವನು ಅಪರಾಧ ಸಿದ್ದಪಟ್ಟ ಮೇಲೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**103. 31ನೆಯ ಪ್ರಕರಣದ ಮೇರೆಗಿನ ಆದೇಶಗಳ ಉಲ್ಲಂಘನೆಗಾಗಿ ದಂಡ :–** 105ನೆಯ ಪ್ರಕರಣದಲ್ಲಿ ಉಪಬಂಧಿಸಿರುವುದನ್ನುಳಿದು, ಯಾವನೊಬ್ಬನು

(ಎ) 31ನೆಯ ಪ್ರಕರಣದ ಮೇರೆಗಿನ ಯಾವುದೇ ಆದೇಶವನ್ನು ಅಥವಾ ಅಂಥ ಆದೇಶದ ಮೇರೆಗೆ ಕೊಟ್ಟ ಲೈಸೆನ್ಸಿನ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದರೆ, ಅಥವಾ

(ಬಿ) (ಎ) ಖಂಡದ ಮೇರೆಗಿನ ಯಾವುದೇ ಅಪರಾಧವನ್ನು ಮಾಡಲು ದುಷ್ಪ್ರೇರಣೆ ಮಾಡಿದರೆ ಅವನು ಅಪರಾಧ ಸಿದ್ಧಪಟ್ಟ ಮೇಲೆ

(1) ಯಾವ ಆದೇಶದ ಮೇಲೆ ಲೈಸೆನ್ಸು ಕೊಡಲಾಗಿದೆಯೋ, ಅದು 31ನೆಯ ಪ್ರಕರಣದ (1)ನೆಯ ಉಪಪ್ರಕರಣದ (ಎನ್) ಮತ್ತು (ಒ) ಖಂಡಗಳ ಮೇರೆಗೆ ಮಾಡಲಾಗಿದ್ದಲ್ಲಿ 200 ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ;

(2) ಉಲ್ಲಂಘಿಸಿದಲಾದ ಆದೇಶವು 31ನೆಯ ಪ್ರಕರಣದ (1)ನೆಯ ಉಪಪ್ರಕರಣದ (ವೈ) ಖಂಡದ ಮೇರೆಗೆ ಮಾಡಲಾಗಿದ್ದಲ್ಲಿ, ಮೂರು ತಿಂಗಳುಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಐದು ನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಎರಡರಿಂದ;

(3) ಉಲ್ಲಂಘಿಸಲಾದ ಆದೇಶವು ಅಥವಾ ಸದರಿ ಲೈಸೆನ್ಸು ಯಾವ ಆದೇಶದ ಮೇರೆಗೆ ಕೊಡಲಾಗಿದೆಯೋ ಆ ಆದೇಶವು ಬೇರೆ ಇತರ ಯಾವುದೇ ಖಂಡದ ಮೇರೆಗೆ ಮಾಡಲಾಗಿರುವಲ್ಲಿ, ಐವತ್ತು

ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ತಪ್ಪಿದಲ್ಲಿ ಎಂಟುದಿನಗಳ ವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ;

– ದಂಡಿತನಾಗತಕ್ಕದ್ದು.

**104. ನೌಕರರು ಮಾಡಿದ ಕಾರ್ಯಗಳಿಗಾಗಿ ಸಾರ್ವಜನಿಕ ಮನರಂಜನೆಯ ಸ್ಥಳದ ಲೈಸೆನ್ಸುದಾರನ ಹೊಣೆ:–** ಸಾರ್ವಜನಿಕ ಮನರಂಜನೆಯ ಸ್ಥಳಗಳ ಬಗ್ಗೆ, ಈ ಅಧಿನಿಯಮದ ಮೇರೆಗೆ ಮಂಜೂರಾದ ಲೈಸೆನ್ಸು ಹೊಂದಿದವನು, ಮತ್ತು ವಾಸ್ತವಿಕ ಅಪರಾಧಿಯು, ಅವನ ಪ್ರತ್ಯಕ್ಷ ಅಥವಾ ಪರೋಕ್ಷ ಅನುಮತಿಯಿಂದ ಅವನ ಪರವಾಗಿ ಕಾರ್ಯನಡೆಯಿಸುವ ಅವನ ನೌಕರರು ಅಥವಾ ಇತರ ಅಭಿಕರ್ತರು 103ನೆಯ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಅಪರಾಧಕ್ಕೆ, ಅವನು ಅಂತಹ ಅಪರಾಧವು ನಡೆಯುವುದನ್ನು ತಡೆಯುವುದಕ್ಕೆ ಎಲ್ಲ ಸೂಕ್ತ ಮತ್ತು ಯುಕ್ತ ಮುನ್ನೆಚ್ಚರಿಕೆಗಳನ್ನು ವಹಿಸಿದ್ದನೆಂದು ರುಜುವಾತು ಪಡಿಸಿದ ಹೊರತು, ಆ ಅಪರಾಧವನ್ನು ಅವನೇ ಮಾಡಿದ್ದಂತೆಯೇ ಜವಾಬ್ದಾರನಾಗಿರತಕ್ಕದ್ದು.

**105. ಸಾರ್ವಜನಿಕ ಮನರಂಜನೆಯ ಸ್ಥಳದ ಸಂಬಂಧದಲ್ಲಿ ಉಲ್ಲೇಖಿತ ಲೈಸೆನ್ಸು ತೆಗೆದುಕೊಳ್ಳದೆ ಇರುವಿಕೆಗೆ ಅಥವಾ ಲೈಸೆನ್ಸನ್ನು ಉಲ್ಲೆಖಿತ ಅವಧಿಯೊಳಗಾಗಿ ನವೀಕರಿಸಿದೆ ಇರುವಿಕೆಗೆ ದಂಡ :–** (1) ಯಾವನೊಬ್ಬನು, ಸಾರ್ವಜನಿಕ ಮನರಂಜನೆಯ ಸ್ಥಳದ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ಲೈಸೆನ್ಸು ಪಡೆದುಕೊಳ್ಳಲು, ಅಥವಾ ಅಂತಹ ಸ್ಥಳದ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ಕೊಡಲಾದ ಲೈಸೆನ್ಸನ್ನು ಉಲ್ಲೇಖಿತ ಅವಧಿಯೊಳಗಾಗಿ ನವೀಕರಿಸಲು ತಪ್ಪಿದರೆ, ಅವನು, ಅಪರಾಧ ಸಿದ್ಧಪಟ್ಟ ಮೇಲೆ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಅಂತಹ ಅಪರಾಧವನ್ನು ವಿಚಾರಿಸುವ ಯಾವುದೇ ನ್ಯಾಯಾಲಯವು, ಅದರ ಜೊತೆಗೆ ಅಂತಹ ಅರಪಾಧವು ನಡೆದಿರುವ ಸಾರ್ವಜನಿಕ ಮನರಂಜನೆಯ ಸ್ಥಳವನ್ನು ಇಟ್ಟುಕೊಂಡಿರುವ ವ್ಯಕ್ತಿಯು, ಸಂದರ್ಭಾನುಸಾರ ಅಂತಹ ಸ್ಥಳವನ್ನು ಲೈಸೆನ್ಸು ಪಡೆದುಕೊಳ್ಳುವವರೆಗೆ ಅಥವಾ ಹೊಸ ಲೈಸೆನ್ಸನ್ನು ಪಡೆಯುವವರೆಗೆ, ಅದನ್ನು ಮುಚ್ಚತಕ್ಕದ್ದೆಂದು ನಿದೇಶಿಸತಕ್ಕದ್ದು. ಆ ತರುವಾಯ, ಅಂತಹ ವ್ಯಕ್ತಿಯು ಕೂಡಲೇ ಅಂತಹ ನಿದೇಶನವನ್ನು ಪಾಲಿಸತಕ್ಕದ್ದು.

(3) ಯಾವನೊಬ್ಬ ವ್ಯಕ್ತಿಯು, (2)ನೆಯ ಉಪಪ್ರಕರಣದ ಮೇರೆಗಿನ ನಿರ್ದೇಶನವನ್ನು ಪಾಲಿಸಲು ತಪ್ಪಿದರೆ, ಅವನು, ಅಪರಾಧ ಸಿದ್ದಪಟ್ಟ ಮೇಲೆ, ಒಂದು ತಿಂಗಳಿನ ಅವಧಿಯ ವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹದಾದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

(4) (3)ನೆಯ ಉಪಪ್ರಕರಣದ ಮೇರೆಗೆ ಕೈಕೊಂಡ ಯಾವುದೇ ಕ್ರಮಕ್ಕೆ ಬಾಧೆ ಬಾರದಂತೆ ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸಲು ಅಂತಹ ವ್ಯಕ್ತಿಯು ತಪ್ಪಿರುವಾಗ, ಸಂದರ್ಭಾನುಸಾರ ಕಮೀಷನರ್‌ನಿಂದ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ಪ್ರಾಧಿಕೃತನಾದ ಯಾವುದೇ ಪೊಲೀಸು ಅಧಿಕಾರಿಯು ಲಿಖಿತ ಆದೇಶದ ಮೂಲಕ ನ್ಯಾಯಾಲಯದ ನಿರ್ದೇಶನವು ಪಾಲಿಸಲ್ಪಡಲು ತನ್ನ ಅಭಿಪ್ರಾಯದಲ್ಲಿ ಯುಕ್ತವಾಗಿ ಅವಶ್ಯಕವಿರುವಂತಹ ಕ್ರಮಗಳನ್ನು ತೆಗೆದುಕೊಳ್ಳಬಹುದು ಅಥವಾ ಕೊಳ್ಳುವಂತೆ ಮಾಡಬಹುದು ಮತ್ತು ಅಂತಹ ಬಲವನ್ನು ಉಪಯೋಗಿಸುವಂತೆ ಮಾಡಬಹುದು.

**106. 30ನೆಯ ಪ್ರಕರಣದ ಮೇರೆಗಿನ ಆದೇಶವನ್ನು ಪಾಲಿಸದಿರುವಿಕೆಗೆ ದಂಡ :–** ಯಾವೊಬ್ಬನು, 30ನೆಯ ಪ್ರಕರಣದ ಮೇರೆಗೆ ಯಾವುದೇ ಆವರಣವನ್ನು ಖಾಲಿ ಮಾಡಲು ಅಗತ್ಯಪಡಿಸುವ ಆದೇಶವನ್ನು ಉಲ್ಲಂಘಿಸಿದರೆ, ಪಾಲಿಸದಿದ್ದರೆ, ವಿರೋಧಿಸಿದರೆ, ಅದರಂತೆ ನಡೆಯಲು ತಪ್ಪಿದರೆ, ಅವನು ಅಪರಾಧ ಸಿದ್ಧಪಟ್ಟ ಮೇಲೆ, ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

**107. 33ನೆಯ ಅಥವಾ 34ನೆಯ ಪ್ರಕರಣದ ಮೇರೆಗಿನ ನಿಯಮ, ಇತ್ಯಾದಿಗಳ ಉಲ್ಲಂಘನೆಗಾಗಿ ದಂಡ:–** ಯಾವೊಬ್ಬನು

(ಎ) 33ನೆಯ ಪ್ರಕರಣದ ಮೇರೆಗೆ ರಚಿಸಲಾದ ಯಾವುದೇ ನಿಯಮವನ್ನು ಉಲ್ಲಂಘಿಸಿದರೆ; ಅಥವಾ

(ಬಿ) 34ನೆಯ ಪ್ರಕರಣದ ಮೇರೆಗೆ ಪೊಲೀಸು ಅಧಿಕಾರಿಯಿಂದ ಕೊಡಲಾದ ಯಾವುದೇ ಆದೇಶವನ್ನು ಉಲ್ಲಂಘಿಸಿದರೆ, ಪಾಲಿಸದಿದ್ದರೆ, ವಿರೋಧಿಸಿದರೆ, ಅಥವಾ ಅದರಂತೆ ನಡೆಯಲು ತಪ್ಪಿದರೆ;

ಅವನು ಅಪರಾಧ ಸಿದ್ದಪಟ್ಟ ಮೇಲೆ ಎರಡು ನೂರು ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**108. 35, 38 ಅಥವಾ 39ನೆಯ ಪ್ರಕರಣಗಳ ಮೇರೆಗಿನ ನಿಯಮಗಳ ಅಥವಾ ನಿರ್ದೇಶಗಳ ಉಲ್ಲಂಘನೆಗಾಗಿ ದಂಡ :–** ಯಾವೊಬ್ಬನು, 35, 38 ಅಥವಾ 39ನೆಯ ಪ್ರಕರಣದ ಮೇರೆಗೆ ಕಾನೂನುಬದ್ಧವಾಗಿ ಮಾಡಲಾದ ಯಾವುದೇ ಆದೇಶವನ್ನು ಪಾಲಿಸದಿದ್ದರೆ ಅದನ್ನು ಪಾಲಿಸದಿರಲು ದುಷ್ಪ್ರೇರಣೆ ಮಾಡಿದರೆ, ಅವನು ಅಪರಾಧ ಸಿದ್ಧಪಟ್ಟ ಮೇಲೆ

(i) ಪಾಲಿಸದ ಅಥವಾ ಪಾಲಿಸದಿರಲು ದುಷ್ಪ್ರೇರಣೆ ಮಾಡಲಾದ ಆದೇಶವು 35ನೆಯ ಪ್ರಕರಣದ (1)ನೆಯ ಉಪಪ್ರಕರಣದ ಮೇರೆಗೆ ಅಥವಾ 38ನೆಯ ಪ್ರಕರಣದ ಮೇರೆಗೆ ಅಥವಾ 39ನೆಯ ಪ್ರಕರಣದ ಮೇರೆಗೆ ಮಾಡಲಾಗಿರುವಲ್ಲಿ, ಒಂದು ವರುಷದ ಅವಧಿಯವರೆಗೆ ವಿಸ್ತರಿಸಬಹುದಾದ, ಆದರೆ ಲಿಖಿತದಲ್ಲಿ ಕಾರಣಗಳನ್ನು ಅಭಿಲೇಖಿಸಿದ ಹೊರತು, ನಾಲ್ಕು ತಿಂಗಳುಗಳಿಗೆ ಕಡಿಮೆ ಇರದ ಕಾರವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಬದ್ಧನಾಗಿರತಕ್ಕದ್ದು;

(ii) ಸದರಿ ಆದೇಶವು 35ನೆಯ ಪ್ರಕರಣದ (2)ನೆಯ ಉಪಪ್ರಕರಣದ ಮೇರೆಗೆ ಮಾಡಲಾಗಿದ್ದರೆ, ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ; ಮತ್ತು

(iii) ಸದರಿ ಆದೇಶವು 35ನೆಯ ಪ್ರಕರಣದ (3)ನೆಯ ಉಪಪ್ರಕರಣದ ಮೇರೆಗೆ ಮಾಡಲಾಗಿರುವಲ್ಲಿ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ;

– ಅವನು ದಂಡಿತನಾಗತಕ್ಕದ್ದು.

**109. 36ನೆಯ ಅಥವಾ 37ನೆಯ ಪ್ರಕರಣದ ಮೇರೆಗಿನ ಆದೇಶಗಳ ಉಲ್ಲಂಘನೆಗಾಗಿ ದಂಡ :–** ಯಾವೊಬ್ಬನು, 36ನೆಯ ಪ್ರಕರಣದ ಅಥವಾ 37ನೆಯ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶ

ಅಥವಾ ನಿರ್ದೇಶವನ್ನು ಅಥವಾ ಅದರ ಮೇರೆಗೆ ಕೊಡಲಾದ ಲೈಸೆನ್ಸಿನ ಷರತ್ತುಗಳನ್ನು ಉಲ್ಲಂಘಿಸಿದರೆ ಅಥವಾ ಪಾಲಿಸದಿದ್ದರೆ ಅಥವಾ ಅದರ ಉಲ್ಲಂಘನೆ ಅಥವಾ ಪಾಲಿಸದೇ ನಡೆದಿರುವಿಕೆಗೆ ದುಷ್ಪ್ರೇರಣೆ ಮಾಡಿದರೆ, ಅವನು ಅಪರಾಧ ಸಿದ್ಧಪಟ್ಟ ಮೇಲೆ, ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದ ದಂಡಿತನಾಗತಕ್ಕದ್ದು.

**110. 40ನೆಯ ಪ್ರಕರಣದ ಮೇರೆಗಿನ ನಿದೇಶ ಅಥವಾ 41ನೆಯ ಪ್ರಕರಣದ ಮೇರೆಗಿನ ಆದೇಶದ ಉಲ್ಲಂಘನೆಗಾಗಿ ದಂಡ:–** (1) ಯಾವೊಬ್ಬನು, 40ನೆಯ ಪ್ರಕರಣದ ಮೇರೆಗೆ ಪೊಲೀಸನಿಂದ ಕೊಡಲಾದ ಯಾವುದೇ ನಿರ್ದೇಶವನ್ನು ವಿರೋಧಿಸಿದರೆ ಅಥವಾ ಅದರಂತೆ ನಡೆಯಲು ತಪ್ಪಿದರೆ, ಅವನು ಅಪರಾಧ ಸಿದ್ಧಪಟ್ಟ ಮೇಲೆ ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) 41ನೆಯ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶವನ್ನು ಪಾಲಿಸಲು ತಪ್ಪಿದರೆ, ಅವನು ಅಪರಾಧ ಸಿದ್ಧಪಟ್ಟ ಮೇಲೆ ಅವನು ಆದೇಶವನ್ನು ಪಾಲಿಸದೇ ಇರುವುದು ಮುಂದುವರೆಯುವ ಪ್ರತಿಯೊಂದು ದಿನಕ್ಕೂ ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**111. 42ನೆಯ ಪ್ರಕರಣದ ಮೇರೆಗೆ ರಚಿಸಲಾದ ವಿನಿಯಮನದ ಉಲ್ಲಂಘನೆಗಾಗಿ ದಂಡ :–** 42ನೆಯ ಪ್ರಕರಣದ ಮೇರೆಗೆ ರಚಿಸಲಾದ ಯಾವುದೇ ವಿನಿಯಮನವನ್ನು ಉಲ್ಲಂಘಿಸಿದರೆ ಅಥವಾ ಅದರ ಉಲ್ಲಂಘನೆಗೆ ದುಷ್ಪ್ರೇರಣೆ ಮಾಡಿದರೆ, ಅವನು ಅಪರಾಧ ಸಿದ್ಧಪಟ್ಟ ಮೇಲೆ, ಮೂರು ತಿಂಗಳುಗಳ ವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಎರಡು ನೂರು ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದ ದಂಡಿತನಾಗತಕ್ಕದ್ದು.

**112. 70ನೆಯ ಪ್ರಕರಣದ ಮೇರೆಗಿನ ನಿದೇಶಗಳ ಉಲ್ಲಂಘನೆಗಾಗಿ ದಂಡ :–** ಯಾವೊಬ್ಬನು 70ನೆಯ ಪ್ರಕರಣದ ಮೇರೆಗೆ ಯಾವನೇ ಪೊಲೀಸು ಅಧಿಕಾರಿಯು ಕೊಟ್ಟ ಯಾವುದೇ ನಿರ್ದೇಶವನ್ನು ವಿರೋಧಿಸಿದರೆ ಅಥವಾ ಅದರಂತೆ ನಡೆಯಲು ತಪ್ಪಿದರೆ ಅಥವಾ ಹಾಗೆ ವಿರೋಧಿಸಲು ಅಥವಾ ತಪ್ಪಲು ದುಷ್ಪ್ರೇರಣೆ ಮಾಡಿದರೆ, ಅವನು, ಅಪರಾಧ ಸಿದ್ಧಪಟ್ಟ ಮೇಲೆ, ಐವತ್ತು ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**113. 54, 55, 56 ಅಥವಾ 63ನೆಯ ಪ್ರಕರಣದ ಮೇರೆಗಿನ ನಿರ್ದೇಶನಗಳ ಉಲ್ಲಂಘನೆಗಾಗಿ ದಂಡ :–** ಯಾವೊಬ್ಬನು 54, 55, 56 ಅಥವಾ 63ನೆಯ ಪ್ರಕರಣದ ಮೇರೆಗೆ ಹೊರಡಿಸಿದ ನಿರ್ದೇಶವನ್ನು ವಿರೋಧಿಸಿದರೆ, ಅಥವಾ ಪಾಲಿಸದಿದ್ದರೆ ಅಥವಾ ಅದರಂತೆ ನಡೆಯಲು ತಪ್ಪಿದರೆ, ಅಥವಾ ಅಂತಹ ನಿದೇಶವನ್ನು ವಿರೋಧಿಸಲು ಅಥವಾ ಪಾಲಿಸದಿರಲು ದುಷ್ಪ್ರೇರಣೆ ಮಾಡಿದರೆ, ಅಪರಾಧ ಸಿದ್ಧಪಟ್ಟ ಮೇಲೆ, ಒಂದು ವರುಷದ ವರೆಗೆ ವಿಸ್ತರಿಸಬಹುದಾದ, ಆದರೆ ಲಿಖಿತದಲ್ಲಿ ಅಭಿಲೇಖನದ ಕಾರಣಗಳನ್ನು ಅಭಿಲೇಖಿಸಿದ ಹೊರತು ನಾಲ್ಕು ತಿಂಗಳಿಗೆ ಕಡಿಮೆಯಿಲ್ಲದ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಬದ್ಧನಾಗಿರತಕ್ಕದ್ದು.

**114. ಹೊರಗೆ ಹೋಗಲು ವ್ಯಕ್ತಿಗೆ ನಿರ್ದೇಶಿಸಲಾದ ಸ್ಥಳವನ್ನು ಅವನು ಪ್ರವೇಶಿಸಿದ್ದಕ್ಕಾಗಿ ದಂಡ :–** 61ನೆಯ ಪ್ರಕರಣದಲ್ಲಿ ಏನೇ ಇದ್ದರೂ, ಯಾವೊಬ್ಬ ವ್ಯಕ್ತಿಯು, 54, 55, 56 ಅಥವಾ 63ನೆಯ ಪ್ರಕರಣಗಳ ಮೇರೆಗೆ

ಅವನಿಗೆ ಕೊಡಲಾದ ನಿರ್ದೇಶಗಳನ್ನು ಉಲ್ಲಂಘಿಸಿ, ಅವನು ಹೊರಗೆ ಹೋಗಲು ನಿರ್ದೇಶಿಸಲಾದ ಸ್ಥಳವನ್ನು ಪ್ರವೇಶಿಸಿದರೆ, ಅಪರಾಧ ಸಿದ್ಧಪಟ್ಟ ಮೇಲೆ, ಎರಡು ವರುಷಗಳ ಅವಧಿಯವರೆಗೆ ವಿಸ್ತರಿಸಬಹುದಾದ, ಆದರೆ ಲಿಖಿತದಲ್ಲಿ ಕಾರಣಗಳನ್ನು ಅಭಿಲೇಖಿಸಿದ ಹೊರತು, ಆರು ತಿಂಗಳುಗಳಿಗೆ ಕಡಿಮೆಯಿಲ್ಲದ ಕಾರಾವಾಸದಿಂದ ದಂಡಿತನಾಗತಕ್ಕದ್ದು. ಮತ್ತು ಜುಲ್ಮಾನೆಗೂ ಬದ್ಧನಾಗಿರತಕ್ಕದ್ದು.

**115. 62ನೆಯ ಪ್ರಕರಣದ (3)ನೆಯ ಉಪಪ್ರಕರಣಕ್ಕನುಸಾರವಾಗಿ ವಶವಾಗಲು ತಪ್ಪಿದುದಕ್ಕಾಗಿ ದಂಡ :–** ಯಾವೊಬ್ಬನು, 62ನೆಯ ಪ್ರಕರಣದ (3)ನೆಯ ಉಪಪ್ರಕರಣಕ್ಕನುಸಾರವಾಗಿ ವಶವಾಗಲು ಸಾಕಷ್ಟು ಕಾರಣವಿಲ್ಲದೇ ತಪ್ಪಿದರೆ, ಅವನು, ಅಪರಾಧ ಸಿದ್ಧಪಟ್ಟ ಮೇಲೆ, ಎರಡು ವರುಷಗಳ ವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಬದ್ಧನಾಗಿರತಕ್ಕದ್ದು.

**116. 64ನೆಯ ಪ್ರಕರಣದ ಮೇರೆಗಿನ ಆದೇಶಗಳ ಉಲ್ಲಂಘನೆಗಾಗಿ ದಂಡ :–** (1) ಯಾವನೊಬ್ಬನು 64ನೆಯ ಪ್ರಕರಣದ (1)ನೆಯ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸಿದರೆ ಅವನು ಅಪರಾಧ ಸಿದ್ದಪಟ್ಟ ಮೇಲೆ, ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

(2) ಯಾವೊಬ್ಬನು 64ನೆಯ ಪ್ರಕರಣದ (2)ನೆಯ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸಿದರೆ, ಅವನು ಅರಪಾಧ ಸಿದ್ದಪಟ್ಟ ಮೇಲೆ, ಮೂರು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರವಾಸ ಅಥವಾ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

**117. ವಿಶೇಷ ಪೊಲೀಸ್ ಅಧಿಕಾರಿಯಾಗಿ ಕೆಲಸ ಮಾಡಲು ನಿರ್ಲಕ್ಷಿಸುವುದು ಅಥವಾ ನಿರಾಕರಿಸುವುದು :–** ಯಾವನೇ ವ್ಯಕ್ತಿಯು, 19ನೆಯ ಪ್ರಕರಣದ ಮೇರೆಗೆ ವಿಶೇಷ ಪೊಲೀಸ್ ಅಧಿಕಾರಿಯಾಗಿ ನೇಮಿಸಲ್ಪಟ್ಟು ಸಾಕಷ್ಟು ಕಾರಣವಿಲ್ಲದೆ, ಹಾಗೆ ಕೆಲಸ ಮಾಡಲು ಅಥವಾ ಅವನ ಕರ್ತವ್ಯಪಾಲನೆಗಾಗಿ ಅವನಿಗೆ ಕೊಡಬಹುದಾದಂಥ ಯಾವುದೇ ಕಾನೂನುಬದ್ಧವಾದ ಆದೇಶವನ್ನು ಅಥವಾ ನಿದೇಶವನ್ನು ಪಾಲಿಸಲು, ನಿರ್ಲಕ್ಷಿಸಿದರೆ ಅಥವಾ ನಿರಾಕರಿಸದರೆ, ಅಪರಾಧ ಸಿದ್ಧಪಟ್ಟ ಮೇಲೆ, ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**118. ಸುಳ್ಳು ಹೇಳಿಕೆ ಇತ್ಯಾದಿಗಳನ್ನಾಡುವದಕ್ಕೆ ಮತ್ತು ಪೊಲೀಸ್ ಅಧಿಕಾರಿಯ ದುರ್ವರ್ತನೆಯ ಬಗ್ಗೆ ದಂಡ :–**

(i) ಯಾವೊಬ್ಬ ವ್ಯಕ್ತಿಯು ಪೊಲೀಸ್ ಅಧಿಕಾರಿಯಾಗಿ ನೌಕರಿ ಪಡೆಯಲು ಅಥವಾ ನೌಕರಿಯಿಂದ ಬಿಡುಗಡೆ ಹೊಂದಲು ಸುಳ್ಳು ಹೇಳಿಕೆಯನ್ನು ಮಾಡಿದರೆ ಅಥವಾ ಸುಳ್ಳು ದಸ್ತಾವೇಜನ್ನು ಉಪಯೋಗಿಸಿದರೆ; ಅಥವಾ

(ii) ಯಾವನೇ ಪೊಲೀಸ್ ಅಧಿಕಾರಿಯು,–

(ಎ) 28ನೆಯ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ; ಅಥವಾ

(ಬಿ) ಹೇಡಿತನ ದೋಷಿಯಾಗಿದ್ದರೆ; ಅಥವಾ

(ಸಿ) ತನ್ನ ಪದತ್ಯಾಗ ಮಾಡಿದರೆ ಅಥವಾ 27ನೆಯ ಪ್ರಕರಣವನ್ನು ಉಲ್ಲಂಘಿಸಿ ತನ್ನ ಪದದ ಕರ್ತವ್ಯಗಳಿಂದ ಪರಾನ್ಮುಖರಾದರೆ; ಅಥವಾ

(ಡಿ) ಅಂತಹ ಪೊಲೀಸ್ ಅಧಿಕಾರಿಯಾಗಿ, ಯಾವುದೇ ವಿಧಿಯ ಅಥವಾ ಯಾವುದೇ ನಿಯಮದ ಅಥವಾ ಆದೇಶದ ಉಪಬಂಧವನ್ನು ಜಾರಿಗೆ ತರುವುದು ಅಥವಾ ಪಾಲಿಸುವುದು ತನ್ನ ಕರ್ತವ್ಯವಾಗಿದ್ದು, ಹಾಗೆ ಮಾಡುವುದನ್ನು ಬುದ್ಧಿಪೂರ್ವಕವಾಗಿ ಭಂಗಗೊಳಿಸುವುದರಿಂದ ಅಥವಾ ನಿರ್ಲಕ್ಷಿಸುವುದರಿಂದ ದೋಷಿಯಾಗಿದ್ದರೆ, ಅಥವಾ

(ಇ) ಜಾರಿಯಲ್ಲಿರುವ ಯಾವುದೇ ಇತರ ಕಾನೂನು ಮೂಲಕ ಸ್ಪಷ್ಟವಾಗಿ ದಂಡನೆಯನ್ನು ವಿಧಿಸದಿರುವ ಕರ್ತವ್ಯ ಉಲ್ಲಂಘನೆಯಿಂದ ದೋಷಿಯಾಗಿದ್ದರೆ;

ಅವನು ಅಪರಾಧ ಸಿದ್ದಪಟ್ಟ ಮೇಲೆ, ಮೂರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಒಂದು ನೂರು ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

(2) ಪೊಲೀಸ್ ಅಧಿಕಾರಿಯು, ರಜೆಯ ಮೇಲಿದ್ದು, ಯುಕ್ತ ಕಾರಣವಿಲ್ಲದೆ, ಅಂಥ ರಜೆಯು ಮುಗಿದ ತರುವಾಯ, ತನ್ನ ಕೆಲಸಕ್ಕೆ ಹಾಜರ್ ಆಗಲು ತಪ್ಪಿದರೆ, (i)ನೆಯ ಉಪಪ್ರಕರಣದ (ii)ನೆಯ ಖಂಡದ (ಸಿ) ಉಪ ಖಂಡದ ಉದ್ದೇಶಗಳಿಗಾಗಿ, 27ನೆಯ ಪ್ರಕರಣದ ಅರ್ಥದಲ್ಲಿ ತನ್ನ ಕರ್ತವ್ಯ ಪಾಲನೆಯಿಂದ ಪರಾನ್ಮುಖನಾಗಿದ್ದಾನೆಂದು ಭಾವಿಸಲ್ಪಡತಕ್ಕದ್ದು.

**119. ನೇಮಕದ ಅಥವಾ ಪದದ ಸರ್ಟಿಫಿಕೇಟು, ಅಥವಾ ಇತರ ವಸ್ತುವನ್ನು ಒಪ್ಪಿಸಲು ತಪ್ಪಿದರೆ ದಂಡ :–** ಯಾವನೇ ಪೊಲೀಸ್ ಅಧಿಕಾರಿಯು, 29ನೆಯ ಪ್ರಕರಣದ (1)ನೆಯ ಉಪಪ್ರಕರಣದ ಉಪಬಂಧಗಳಿಗನುಸಾರವಾಗಿ ತನ್ನ ನೇಮಕದ ಅಥವಾ ಪದದ ಸರ್ಟಿಫಿಕೇಟನ್ನು ಅಥವಾ ಇತರ ವಸ್ತುವನ್ನು ಒಪ್ಪಿಸಲು ಬುದ್ಧಿಪೂರ್ವಕವಾಗಿ ನಿರ್ಲಕ್ಷಿಸಿದರೆ ಅಥವಾ ನಿರಾಕರಿಸಿದರೆ, ಅವನು, ಅಪರಾಧ ಸಿದ್ದಪಟ್ಟ ಮೇಲೆ, ಒಂದು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಎರಡು ನೂರು ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

**120. ಪೊಲೀಸ್ ಅಧಿಕಾರಿಯಿಂದ ಪೀಡಾಕಾರೀ ಪ್ರವೇಶ, ಝಡತಿ, ದಸ್ತಗಿರಿ ಇತ್ಯಾದಿಗಳು :–** ಯಾವನೇ ಪೊಲೀಸ್ ಅಧಿಕಾರಿಯು,

(ಎ) ಕಾನೂನುಬದ್ದ ಪ್ರಾಧಿಕಾರ ಅಥವಾ ಯುಕ್ತ ಕಾರಣವಿಲ್ಲದೆ, ಯಾವುದೇ ಕಟ್ಟಡ, ಕೊಠಡಿ, ಆವರಣ, ವಾಹನ ನೌಕೆ, ಡೇರೆ ಅಥವಾ ಸ್ಥಳವನ್ನು ಪ್ರವೇಶಿಸಿದರೆ ಅಥವಾ ಝಡತಿ ಮಾಡಿದರೆ ಅಥವಾ ಪ್ರವೇಶಿಸುವಂತೆ ಅಥವಾ ಝಡತಿ ಮಾಡುವಂತೆ ಮಾಡಿದರೆ; ಅಥವಾ

(ಬಿ) ಪೀಡಾಕಾರಿಯಾಗಿ ಅಥವಾ ಅನವಶ್ಯಕವಾಗಿ ಯಾವನೇ ವ್ಯಕ್ತಿಯ ಸ್ವತ್ತನ್ನು ವಶಪಡಿಸಿಕೊಂಡರೆ; ಅಥವಾ

(ಸಿ) ಪೀಡಾಕಾರಿಯಾಗಿ ಮತ್ತು ಅನವಶ್ಯಕವಾಗಿ ಯಾವನೇ ವ್ಯಕ್ತಿಯನ್ನು ನಿರೋಧಿಸಿಟ್ಟರೆ, ಝಡತಿ ಮಾಡಿದರೆ ಅಥವಾ ದಸ್ತಗಿರಿ ಮಾಡಿದರೆ; ಅಥವಾ

(ಡಿ) ತನ್ನ ಅಭಿರಕ್ಷೆಯಲ್ಲಿರುವ ಯಾವನೇ ವ್ಯಕ್ತಿಗೆ ಅನವಶ್ಯಕವಾದ ಹಿಂಸೆಯನ್ನುಂಟುಮಾಡಿದರೆ; ಅಥವಾ

(ಇ) ಕಾನೂನು ಮೂಲಕ ಅಗತ್ಯಗೊಳಿಸಿರದ ಯಾವುದೇ ಬೆದರಿಕೆ ಅಥವಾ ಆಶ್ವಾಸನೆಯನ್ನು ಕೊಟ್ಟರೆ;

ಅವನು, ಅಂಥ ಪ್ರತಿಯೊಂದು ಅಪರಾಧಕ್ಕಾಗಿ, ಅಪರಾಧ ಸಿದ್ದಪಟ್ಟ ಮೇಲೆ, ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಐದುನೂರು ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

**121. ದಸ್ತಗಿರಿ ಮಾಡಿದ ವ್ಯಕ್ತಿಯನ್ನು ಹಾಜರ್‌ಪಡಿಸುವಲ್ಲಿ ಪೀಡಾಕಾರಿ ವಿಲಂಬನಕ್ಕೆ ದಂಡ :–** ಯಾವನೇ ಪೊಲೀಸ್ ಅಧಿಕಾರಿಯು ದಸ್ತಗಿರಿ ಮಾಡಿದ ವ್ಯಕ್ತಿಯನ್ನು ಯಾವ ಮ್ಯಾಜಿಸ್ಟ್ರೇಟನ ಅಥವಾ ಇತರ ಪ್ರಾಧಿಕಾರಿಯ ಮುಂದೆ ಹಾಜರಪಡಿಸಲು ಪೀಡಾಕಾರಿಯಾಗಿ ಮತ್ತು ಅನವಶ್ಯಕವಾಗಿ ವಿಲಂಬ ಮಾಡಿದರೆ ಅವನು, ಅಪರಾಧ ಸಿದ್ದಪಟ್ಟ ಮೇಲೆ, ಆರು ತಿಂಗಳ ಅವಧಿಯ ವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

**122. 72ನೆಯ ಪ್ರಕರಣದ ಮೇರೆಗೆ ಕೊಡಲಾದ ಯಾವುದೇ ನಿರ್ದೇಶವನ್ನು ವಿರೋಧಿಸುವುದಕ್ಕೆ ಅಥವಾ ಪಾಲಿಸದಿರುವುದಕ್ಕೆ ದಂಡ :–** ಯಾವೊಬ್ಬನು 72ನೆಯ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನಿಂದ ಅಥವಾ ಪೊಲೀಸ್ ಅಧಿಕಾರಿಯಿಂದ ಕೊಡಲ್ಪಟ್ಟ ಯಾವುದೇ ಯುಕ್ತ ನಿರ್ದೇಶವನ್ನು ವಿರೋಧಿಸಿದರೆ ಅಥವಾ ಕೂಡಲೇ ಪಾಲಿಸಲು ತಪ್ಪಿದರೆ ಅಥವಾ ಅದರ ವಿರೋಧಕ್ಕೆ ಅಥವಾ ಪಾಲಿಸಲು ತಪ್ಪುವುದಕ್ಕೆ ದುಷ್ಪ್ರೇರಣೆ ಮಾಡಿದರೆ, ಅವನು ಅಪರಾಧ ಸಿದ್ಧಪಟ್ಟ ಮೇಲೆ, ಒಂದು ವರ್ಷದ ಅವಧಿಯ ವರೆಗೆ ವಿಸ್ತರಿಸಬಹುದಾದ ಆದರೆ ಲಿಖಿತದಲ್ಲಿ ಕಾರಣಗಳನ್ನು ಅಭಿಲೇಖಿಸಿದ ಹೊರತು ನಾಲ್ಕು ತಿಂಗಳುಗಳಿಗೆ ಕಡಿಮೆಯಿಲ್ಲದ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಬದ್ಧನಾಗತಕ್ಕದ್ದು.

**123. ದ್ರೋಹ ಇತ್ಯಾದಿಗಳನ್ನು ಉಂಟುಮಾಡುವುದಕ್ಕಾಗಿ ದಂಡ :–** (1) ಯಾವನೇ ವ್ಯಕ್ತಿಯು, ಭಾರತದಲ್ಲಿ ವಿಧಿಬದ್ಧವಾಗಿ ಸ್ಥಾಪಿತವಾದ ಸರಕಾರದ ಬಗ್ಗೆ ಪೊಲೀಸ್ ಬಲದವರಲ್ಲಿ ಉದ್ದೇಶಪೂರ್ವಕವಾಗಿ ದ್ರೋಹವನ್ನುಂಟುಮಾಡಿದರೆ ಅಥವಾ ಉಂಟುಮಾಡಲು ಯತ್ನಿಸಿದರೆ ಅಥವಾ ಹಾಗೆ ದ್ರೋಹ ಉಂಟುಮಾಡುವ ಸಂಭವವಿರುವುದೆಂದು ತಾನು ತಿಳಿದೂ ಯಾವುದೇ ಕೃತ್ಯವನ್ನು ಮಾಡಿದರೆ, ಅಥವಾ ಯಾವನೇ ಪೊಲೀಸ್ ಬಲದವನು ತನ್ನ ಸೇವೆಯಿಂದ ಪರಾನ್ಮುಖನಾಗುವಂತೆ ಹಿಂತೆಗೆದುಕೊಳ್ಳುವಂತೆ ಅಥವಾ ಶಿಸ್ತುಭಂಗ ಮಾಡುವಂತೆ ಅವನನ್ನು ಪ್ರೇರೇಪಿಸಿದರೆ ಅಥವಾ ಪ್ರೇರೇಪಿಸುವಂತೆ ಯತ್ನಿಸಿದರೆ, ಅಥವಾ ಹಾಗೆ ಪ್ರೇರೇಪಿಸುವ ಸಂಭವವಿರುವುದೆಂದು ತಾನು ತಿಳಿದೂ ಯಾವುದೇ ಕೃತ್ಯವನ್ನು ಮಾಡಿದರೆ, ಆರು ತಿಂಗಳ ಅವಧಿಯ ವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

**ವಿವರಣೆ:–** ಸರಕಾರದ ಯಾವುದೇ ಕ್ರಮಗಳನ್ನು ವಿಧಿಬದ್ದ ರೀತಿಯಲ್ಲಿ ಬದಲಾವಣೆ ಮಾಡಿಸುವ ಉದ್ದೇಶದಿಂದ ಆ ಬಗ್ಗೆ ಅಸಮ್ಮತಿಯನ್ನು ಅಥವಾ ಸರಕಾರದ ಆಡಳಿತಾತ್ಮಕ ಅಥವಾ ಇತರ ಕ್ರಮದ ಬಗ್ಗೆ ಅಸಮ್ಮತಿಯನ್ನು ವ್ಯಕ್ತಪಡಿಸುವಿಕೆಗಳು, ದ್ರೋಹವನ್ನುಂಟು ಮಾಡುವ ಅಥವಾ ಉಂಟು ಮಾಡುವ

ಉದ್ದೇಶವಿರುವ ಅಥವಾ ಉಂಟಾಮಾಡಬಹುದಾಗಿದ್ದ ಹೊರತು, ಈ ಪ್ರಕರಣದ ಮೇರೆಗೆ ಅಪರಾಧವಾಗುವುದಿಲ್ಲ.

(1) ಸದ್ಭಾವನೆಯಿಂದ :–

(ಎ) ಕಾನೂನಿನ ಅಧಿಕೃತವಾದ ಯಾವುದೇ ರೀತಿಯಲ್ಲಿ ತನ್ನ ಸೇವೆಯಿಂದ ಪರಾನ್ಮುಖನಾಗುವಂತೆ ಯಾವನೇ ಪೊಲೀಸ್ ಬಲದವನಿಗೆ ಪ್ರೇರೇಪಿಸುವುದರ ಮೂಲಕ ಅವನ ಕಲ್ಯಾಣವನ್ನು ಅಥವಾ ಹಿತವನ್ನು ಉನ್ನತಿಗೊಳಿಸುವ ಉದ್ದೇಶಕ್ಕಾಗಿ ಮಾಡಿದ; ಅಥವಾ

(ಬಿ) ಪೊಲೀಸ್ ಬಲದವರಿಗಾಗಿಯೇ ಅವರ ಹಿತಸಾಧನೆಯನ್ನು ಮುಂದುವರಿಸಿಕೊಂಡು ಹೋಗುವ ಉದ್ದೇಶದಿಂದ ರಚಿತವಾದ ಯಾವುದೇ ಸಂಘವು ಸರಕಾರದಿಂದ ಅಧಿಕೃತಗೊಳಿಸಲ್ಪಟ್ಟಿದ್ದು ಅಥವಾ ಮನ್ನಣೆ ಪಡೆದಿದ್ದು ಅಂಥ ಸಂಘದ ಮೂಲಕ ಅಥವಾ ಪರವಾಗಿ ಮಾಡಿದ ಮತ್ತು ಮಾಡಿದ ಕೆಲಸವು ಸರ್ಕಾರದ ಒಪ್ಪಿಗೆ ಪಡೆದ ಯಾವುದೇ ನಿಯಮಗಳ ಅಥವಾ ಸಂಘದ ನಿಯಮಾವಳಿಯ ಮೇರೆಗೆ ಮಾಡಿದರೆ, ಯಾವುದೇ ಈ ಪ್ರಕರಣದ ಮೇರೆಗಿನ ಅಪರಾಧವೆಂದು ಭಾವಿಸಲ್ಪಡತಕ್ಕದಲ್ಲ.

(3) ಯಾವ ನ್ಯಾಯಾಲಯವು, ಜಿಲ್ಲಾ ಮ್ಯಾಜಿಸ್ಟ್ರೇಟನ ಪೂರ್ವ ಮಂಜೂರಿಯನ್ನು ಪಡೆದಿದ್ದ ಅಥವಾ ಅವನಿಂದ ದೂರು ಬಂದಿದ್ದ ಹೊರತು, ಈ ಪ್ರಕರಣದ ಮೇರೆಗಿನ ಯಾವ ಅಪರಾಧವನ್ನು ವಿಚಾರಣೆಗೆ ತೆಗೆದುಕೊಳ್ಳತಕ್ಕದ್ದಲ್ಲ.

(4) ಮೊದಲನೆಯ ವರ್ಗದ ಮ್ಯಾಜಿಸ್ಟ್ರೇಟನಿಗಿಂತ ಕಡಿಮೆ ದರ್ಜೆಯ ಯಾವ ನ್ಯಾಯಾಲಯವು ಈ ಪ್ರಕರಣದ ಮೇರೆಗಿನ ಯಾವುದೇ ಅಪರಾಧವನ್ನು ವಿಚಾರಿಸತಕ್ಕದ್ದಲ್ಲ.

(5) 1898ನೆಯ ಇಸವಿಯ ದಂಡ ಪ್ರಕ್ರಿಯಾ ಸಂಹಿತೆಯ 12ನೆಯ ಅಧ್ಯಾಯದಲ್ಲಿ ಏನೇ ಇದ್ದರೂ, ಈ ಪ್ರಕರಣದ ಮೇರೆಗಿನ ಯಾವ ಅಪರಾಧವೂ ಸಂಕ್ಷಿಪ್ತ ಕ್ರಮದಿಂದ ವಿಚಾರಿಸಲ್ಪಡತಕ್ಕದ್ದಲ್ಲ.

**124. ಅಪರಾಧಿಯು ಕಾನ್ಸ್‌ಟೇಬಲನ ದರ್ಜೆಗಿಂತ ಮೇಲಿನ ಪೊಲೀಸ್ ಅಧಿಕಾರಿಯಾಗಿದ್ದರೆ ಅಧಿಕಾರ ವ್ಯಾಪ್ತಿ :–** ಈ ಅಧಿನಿಯಮದ ವಿರುದ್ಧದ ಅಪರಾಧಗಳು, ಆರೋಪಿತ ವ್ಯಕ್ತಿಯು ಅಥವಾ ಆರೋಪಿತರಲ್ಲಿ ಯಾವೊಬ್ಬನು, ಕಾನ್ಸ್‌ಟೇಬಲಿನ ದರ್ಜೆಗಿಂತ ಪೊಲೀಸು ಅಧಿಕಾರಿಯಾಗಿ ಎರಡನೆಯ ವರ್ಗದ ಮ್ಯಾಜಿಸ್ಟ್ರೇಟನ ದರ್ಜೆಗೆ ಕಡಿಮೆ ಇರದ ಮ್ಯಾಜಿಸ್ಟ್ರೇಟನಿಂದಲ್ಲದೆ, ವಿಚಾರಣೆಯಾಗತಕ್ಕದ್ದಲ್ಲ.

**125. ಪೊಲೀಸ್ ಸಮವಸ್ತ್ರದ ಅನಧಿಕೃತ ಉಪಯೋಗಕ್ಕೆ ದಂಡ :–** ಪೊಲೀಸ್ ದಳಕ್ಕೆ ಸೇರಿರದ ಯಾವನೇ ವ್ಯಕ್ತಿಯು, ಈ ಬಗ್ಗೆ ಸರಕಾರದಿಂದ ಅಥವಾ ರಾಜ್ಯದ ಯಾವುದೇ ಪ್ರದೇಶದ ಸಲುವಾಗಿ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಕೃತನಾಗಿರುವ ಅಧಿಕಾರಿಯ ಅನುಮತಿಯಿಲ್ಲದೆ ಪೊಲೀಸ್ ದಳದ ಸಮವಸ್ತ್ರವನ್ನು ಅಥವಾ ಅಂಥ ಸಮವಸ್ತ್ರದ ಯಾವುದೇ ವಿಶಿಷ್ಟ ಗುರುತುಗಳನ್ನು ಹೊಂದಿರುವಂತೆ ತೋರುವ ಅಥವಾ ಹೊಂದಿರುವ ಯಾವುದೇ ಪೋಷಾಕನ್ನು ಧರಿಸಿದರೆ, ಅವನು ಅಪರಾಧ ಸಿದ್ಧಪಟ್ಟ ಮೇಲೆ ಎರಡು ನೂರು ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**126. ಅಧಿನಿಯಮದ ವಿರುದ್ಧ ಕೆಲವು ಅಪರಾಧಗಳಿಗಾಗಿ ಪ್ರಾಸಿಕ್ಯೂಷನ್ನು ನಡೆಸುವುದು ಪೊಲೀಸಿನ ವಿವೇಚನೆಯಲ್ಲಿರತಕ್ಕದ್ದು :–** ಸರಕಾರದಿಂದ ಅಥವಾ ಸಕ್ಷಮ ಪ್ರಾಧಿಕಾರಿಯಿಂದ ಮಾಡಲಾದ ಯಾವುದೇ

ನಿಯಮ ಅಥವಾ ಆದೇಶಕ್ಕೆ ಅನುಸಾರವಾಗಿಯಲ್ಲದೆ 92, 93, 103, 106, 110, 111 ಅಥವಾ 117ನೆಯ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ಅದರಿಂದ ತೀವ್ರ ಹಾನಿಯೇನೂ ಉಂಟಾಗಿರದಿದ್ದಲ್ಲಿ ಮತ್ತು ಎಚ್ಚರಿಕೆ ಕೊಟ್ಟೊಡನೆಯೇ ಅದರಿಂದ ಹಿಂದೆ ಸರಿದಿದ್ದಲ್ಲಿ, ಪ್ರಾಸಿಕ್ಯೂಷನ್ನು ನಡೆಸಲು ಪೊಲೀಸ್ ಬದ್ಧನಾಗಿರತಕ್ಕದ್ದಲ್ಲ.

**127. ಕೆಲವು ಮೊಕದ್ದಮೆಗಳ ಸಂಕ್ಷಿಪ್ತ ಇತ್ಯರ್ಥ :–** (1) 31ನೆಯ ಪ್ರಕರಣದ (1)ನೆಯ ಉಪಪ್ರಕರಣದ (ಬಿ) ಖಂಡದ ಮೇರೆಗೆ ಮಾಡಲಾದ ಯಾವುದೇ ಆದೇಶದ ಉಲ್ಲಂಘನೆಗಾಗಿ 103ನೆಯ ಪ್ರಕರಣದ (iii) ಖಂಡದ ಮೇರೆಗೆ ದಂಡನೀಯವಾದ ಅಪರಾಧದ ವಿಚಾರಣೆ ಮಾಡುವ ನ್ಯಾಯಾಲಯವು, ಅಪಾದಿತನಿಗೆ ಜಾರಿ ಮಾಡುವ ಸಮನುಗಳಲ್ಲಿ, ಆರೋಪದ ವಿಚಾರಣೆ ನಡೆಯುವುದಕ್ಕೆ ಮುಂಚೆಯೇ ಒಂದು ನಿರ್ದಿಷ್ಟ ತಾರೀಖಿನೊಳಗಾಗಿ ಒಂದು ರಿಜಿಸ್ಟರ್ ಆದ ಅಂಚೆ ಪತ್ರದ ಮೂಲಕ ತಾನು ದೋಷಿಯೆಂದು ಹೇಳಿಕೊಳ್ಳಬಹುದೆಂದೂ, ಮತ್ತು ನ್ಯಾಯಾಲಯವು ಇಪ್ಪತ್ತೈದು ರೂಪಾಯಿಗೆ ಮೀರದಂತೆ ಗೊತ್ತುಪಡಿಸಬಹುದಾದಂಥ ಮೊಬಲಗನ್ನು ನ್ಯಾಯಾಲಯಕ್ಕೆ ದಾಖಲು ಮಾಡಬಹುದೆಂದೂ ತಿಳಿಸಬಹುದು.

(2) ಆಪಾದಿತನು ತಾನು ದೋಷಿಯೆಂದು ಒಪ್ಪಿಕೊಂಡು ಮತ್ತು ನಿರ್ದಿಷ್ಟ ಮೊಬಲಗನ್ನು ದಾಖಲು ಮಾಡಿದ್ದಲ್ಲಿ, ಆ ಅಪರಾಧದ ಸಂಬಂಧದಲ್ಲಿ ಅವನ ವಿರುದ್ಧ ಮುಂದಿನ ವ್ಯವಹರಣೆಗಳನ್ನು ನಡೆಸತಕ್ಕದ್ದಲ್ಲ.

**128. ಇತರ ಅಧಿನಿಯಮಗಳ ಮೇರೆಗಿನ ಅಪರಾಧಗಳ ಸಂಬಂಧದ ಪ್ರಾಸಿಕ್ಯೂಷನ್ನು ಅಬಾಧಿತ :–** ಈ ಅಧಿನಿಯಮದಲ್ಲಿರುವುದು ಯಾವುದೂ ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ಇತರ ಯಾವುದೇ ಅಧಿನಿಯಮದ ಮೇರೆಗೆ ಯಾವನೇ ವ್ಯಕ್ತಿಯ ವಿರುದ್ಧ ಪ್ರಾಸಿಕ್ಯೂಷನ್ನು ನಡೆಸಲು ಮತ್ತು ಅವನನ್ನು ದಂಡಿಸಲು ಅಥವಾ ಇತರ ಯಾವುದೆ ಅಧಿನಿಯಮದ ಮೇರೆಗೆ ದಂಡನೀಯವಾಗಿರುವ ಯಾವುದೇ ಪ್ರಾಸಿಕ್ಯೂಷನ್ನು ನಡೆಸಲು ಮತ್ತು ದಂಡಿಸಲು ಪ್ರತಿಬಂಧಿಸುವುದೆಂದು ಅರ್ಥ ಮಾಡತಕ್ಕದ್ದಲ್ಲ.

ಪರಂತು, ಅಂಥ ಎಲ್ಲ ಮೊಕದ್ದಮೆಗಳು 1898ನೆಯ ಇಸವಿಯ ದಂಡ ಪ್ರಕ್ರಿಯಾ ಸಂಹಿತೆಯ 403ನೆಯ ಪ್ರಕರಣದ ಉಪಬಂಧಗಳಿಗೊಳಪಟ್ಟಿರತಕ್ಕದ್ದು.

## ಅಧ್ಯಾಯ – IX

## ಗ್ರಾಮ ಪೋಲೀಸ್

**129. ಗ್ರಾಮ ಪೊಲೀಸ್ ರಚನೆ :–** ಗ್ರಾಮ ಪೊಲೀಸ್, ಒಬ್ಬ ಪೊಲೀಸ್ ಪಟೇಲ್ ಮತ್ತು ನಿಯಮಿಸಬಹುದಾದಂತಹ ದರ್ಜೆಯ ಗ್ರಾಮ ಪೊಲೀಸು ಅಧಿಕಾರಿಗಳನ್ನೊಳಗೊಂಡಿರತಕ್ಕದ್ದು.

**130. ಗ್ರಾಮ ಪೊಲೀಸಿನ ಆಡಳಿತ, ನಿಯಂತ್ರಣ ಮತ್ತು ನಿರ್ದೇಶನವು ಯಾರಲ್ಲಿ ನಿಹಿತವಾಗಿರುವುದು :–** ಪ್ರತಿಯೊಂದು ಜಿಲ್ಲೆಯಲ್ಲಿಯ ಗ್ರಾಮ ಪೊಲೀಸ್ ಆಡಳಿತವು ಸರಕಾರದ ಸಾಮಾನ್ಯ ನಿಯಂತ್ರಣ ಮತ್ತು ನಿರ್ದೇಶನಕ್ಕೊಳಪಟ್ಟು ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ನಡೆಸಲ್ಪಡತಕ್ಕದ್ದು.

**131. ಪ್ರತ್ಯಾಯೋಜಿಸಲು ಅಧಿಕಾರ :–** ಜಿಲ್ಲಾ ಮ್ಯಾಜಿಸ್ಟ್ರೇಟನು ಈ ಅಧ್ಯಾಯದ ಮೇರೆಗಿನ ತನ್ನ ಯಾವುದೇ ಅಧಿಕಾರಗಳನ್ನು ಸರಕಾರದ ಮಂಜೂರಾತಿಯ ಮೇಲೆ

(i) ಸೂಪರಿಂಟೆಂಡೆಂಟನಿಗೆ, ಮತ್ತು

(ii) ಮ್ಯಾಜಿಸ್ಟ್ರೇಟನ ಅಧಿಕಾರಗಳನ್ನು ಚಲಾಯಿಸುವ ಜಿಲ್ಲೆಯಲ್ಲಿಯ ರೆವೆನ್ಯೂ ಇಲಖೆಯ ಯಾವನೇ ಅಧಿಕಾರಿಗೆ;

– ಪ್ರತ್ಯಾಯೋಜಿಸಬಹುದು.

ಅಂತಹ ಅಧಿಕಾರಿಯನ್ನು ಈ ತರುವಾಯ ಈ ಅಧ್ಯಾಯದಲ್ಲಿ ಅಧಿಕೃತ ಅಧಿಕಾರಿ ಎಂದು ನಿರ್ದೇಶಿಸಲಾಗಿದೆ.

**132. ಗ್ರಾಮದಲ್ಲಿ ಗ್ರಾಮ ಪೊಲೀಸ್, ಪೊಲೀಸ್ ಪಟೇಲನ ಚಾರ್ಜಿನಲ್ಲಿರತಕ್ಕದ್ದು :–** (1) ಈ ಬಗ್ಗೆ ರಾಜ್ಯ ಸರಕಾರದಿಂದ ರಚಿಸಬಹುದಾದ ನಿಯಮಗಳಿಗೊಳಪಟ್ಟು, ಪ್ರತಿಯೊಂದು ಗ್ರಾಮದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ಗ್ರಾಮ ಪೊಲೀಸ್ ನೇಮಕ ಮಾಡಲ್ಪಡತಕ್ಕದ್ದು ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟನಿಂದ ಲಿಖಿತದಲ್ಲಿ ಪೊಲೀಸ್ ಪಟೇಲ್ ಎಂದು ನೇಮಿಸಲಾದಂತಹ ವ್ಯಕ್ತಿಯ ಚಾರ್ಜಿನಲ್ಲಿರತಕ್ಕದ್ದು.

(2) ಯಾವುದೇ ಗ್ರಾಮ ಅಥವಾ ಸ್ಥಳದಲ್ಲಿ ಒಬ್ಬ ಪೊಲೀಸ್ ಪಟೇಲನಿಂದ ಕರ್ತವ್ಯಗಳು ದಕ್ಷತೆಯಿಂದ ನೆರವೇರಿಸಲು ಸಾಧ್ಯವಾಗದಿದ್ದಲ್ಲಿ, ಜಿಲ್ಲಾ ಮ್ಯಾಜಿಸ್ಟ್ರೇಟನು ಒಬ್ಬ ಅಥವಾ ಹೆಚ್ಚು ಜನ ಅಪರ ಪೊಲೀಸು ಪಟೇಲರನ್ನು ನೇಮಕ ಮಾಡಬಹುದು ಮತ್ತು ಅವರನ್ನು ಪೊಲೀಸ್ ಉದ್ದೇಶಗಳಿಗಾಗಿ ಆ ಗ್ರಾಮ ಅಥವಾ ಸ್ಥಳವನ್ನು ವಿಭಜಿಸಬಹುದಾದಂತಹ ವಿವಿಧ ವಿಭಾಗಗಳ ಚಾರ್ಜಿನಲ್ಲಿರುವಂತೆ ಏರ್ಪಡಿಸಬಹುದು.

(3) ಜಿಲ್ಲಾ ಮ್ಯಾಜಿಸ್ಟ್ರೇಟನು ಒಂದಕ್ಕಿಂತ ಹೆಚ್ಚು ಗ್ರಾಮಗಳಿಗಾಗಿ ಒಬ್ಬ ಪೊಲೀಸ್ ಪಟೇಲನನ್ನು ನೇಮಕ ಮಾಡಬಹುದು.

**133. ಪೊಲೀಸ್, ಪಟೇಲನ ಕರ್ತವ್ಯಗಳು :–** ಪೊಲೀಸ್ ಪಟೇಲನು ಜಿಲ್ಲಾ ಮ್ಯಾಜಿಸ್ಟ್ರೇಟನ ಆದೇಶಗಳಿಗೊಳಪಟ್ಟು –

(i) ಅಧಿಕೃತ ಅಧಿಕಾರಿಯ ಆದೇಶಗಳ ಮೇರೆಗೆ ಮತ್ತು ಅವನ ಅಧಿಕಾರ ವ್ಯಾಪ್ತಿಗೊಳಪಟ್ಟಿರುವ ಗ್ರಾಮದ ಕೆಲಸ ಮಾಡತಕ್ಕದ್ದು.

(ii) ಅಂತಹ ಅಧಿಕೃತ ಅಧಿಕಾರಿಗೆ ಅವನು ಕೇಳಿದ ಯಾವುದೇ ಪಟ್ಟಿಕೆಯನ್ನು ಮತ್ತು ಮಾಹಿತಿಯನ್ನು ಒದಗಿಸತಕ್ಕದ್ದು ಮತ್ತು ಆ ಗ್ರಾಮದಲ್ಲಿಯ ಅಪರಾಧದ ಸ್ಥಿತಿಗತಿ ಮತ್ತು ಗ್ರಾಮ ಪೊಲೀಸಿಗೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನು ಅವನಿಗೆ ತಿಳಿಸುತ್ತಿರತಕ್ಕದ್ದು.

(iii) ಎಲ್ಲ ಪೊಲೀಸ್ ಅಧಿಕಾರಿಗಳಿಗೂ ಅವರ ಕರ್ತವ್ಯಗಳ ಪಾಲನೆಯಲ್ಲಿ ಅವರು ಸಹಾಯವನ್ನು ಕೋರಿದಾಗ, ತನ್ನ ಅಧಿಕಾರಯಲ್ಲಿರುವ ಪ್ರತಿಯೊಂದು ಸಹಾಯವನ್ನು ನೀಡತಕ್ಕದ್ದು.

(iv) ಮ್ಯಾಜಿಸ್ಟ್ರೇಟನಿಂದ ಅಥವಾ ಪೊಲೀಸು ಅಧಿಕಾರಿಯಿಂದ ಅವನಿಗೆ ಕೊಡಲಾದ ಎಲ್ಲಾ ಆದೇಶಗಳನ್ನ ಪಾಲಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(v) ಸಾರ್ವಜನಿಕ ಶಾಂತಿಗೆ ಸಂಬಂಧಿಸಿದ ಎಲ್ಲ ಮಾಹಿತಿಯನ್ನು ಸಂಗ್ರಹಿಸತಕ್ಕದ್ದು ಮತ್ತು ಪೊಲೀಸ್ ಅಧಿಕಾರಿಗೆ ತಿಳಿಸತಕ್ಕದ್ದು.

(vi) ಗ್ರಾಮದೊಳಗಿರುವ ಅಪರಾಧಿಗಳನ್ನು ಪತ್ತೆಹಚ್ಚತಕ್ಕದ್ದು ಮತ್ತು ಅವರನ್ನು ನ್ಯಾಯಕ್ಕೆ ಗುರಿಪಡಿಸತಕ್ಕದ್ದು.

(vii) ವಿಚಾರಣೀಯ ಅಪರಾಧಗಳನ್ನು ಮಾಡಿರುವನೆಂದು ತಾನು ನಂಬಲು ಕಾರಣ ವಿರುವ ವ್ಯಕ್ತಿಗಳನ್ನು ದಸ್ತಗಿರಿ ಮಾಡತಕ್ಕದ್ದು; ಮತ್ತು

(viii) ತನ್ನ ಗ್ರಾಮದ ಎಲ್ಲೆಗಳೊಳಗೆ ಸಾಧ್ಯವಿರುವಷ್ಟುಮಟ್ಟಿಗೆ ಅಪರಾಧಗಳು ಮತ್ತು ಸಾರ್ವಜನಿಕ ಉಪದ್ರವಗಳು ನಡೆಯದಂತೆ ನಿರೋಧಿಸತಕ್ಕದ್ದು.

**134. ಗ್ರಾಮ ನೌಕರನ ಮೇಲೆ ಅಧಿಕಾರ :–** ಪೊಲೀಸ್ ಪಟೇಲನು, ಗ್ರಾಮದಲ್ಲಿರುವ ಎಲ್ಲ ನೌಕರರು ಅವರು ಸಾಮಾನ್ಯವಾಗಿ ಯಾವ ಕೆಲಸಕ್ಕಾಗಲೀ ನಿಯೋಜಿತರಾಗಿದ್ದರೂ, ಅವರನ್ನು, ತನಗೆ ವಹಿಸಿಕೊಡಲಾಗಿರುವ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಸಹಾಯವನ್ನೊದಗಿಸಲು ಅಗತ್ಯಪಡಿಸುವ ಅಧಿಕಾರವನ್ನು ಹೊಂದಿರತಕ್ಕದ್ದು; ಮತ್ತು ಪೊಲೀಸು ಪಟೇಲನಿಗೆ ಪಟ್ಟಿಕೆಗಳನ್ನು ಮತ್ತು ವ್ಯವಹರಣೆ ತಯಾರಿಸುವುದಕ್ಕಾಗಿ ಸಹಾಯ ಮಾಡುವ ಗ್ರಾಮದ ರೆವೆನ್ಯೂ ಲೆಕ್ಕಿಗನ, ಅವನು ಅನುವಂಶಿಕವಾಗಿ ಬಂದವನಾಗಿರಲಿ ಅಥವಾ ಸಂಬಳ ಪಡೆಯುವನಾಗಿರಲಿ, ಪಟೇಲನಿಗೆ ಪಟ್ಟಿಕೆಗಳನ್ನು ಮತ್ತು ವ್ಯವಹರಣೆ ತಯಾರಿಸುವುದಕ್ಕಾಗಿ ಸಹಾಯ ಮಾಡುವುದು ಅನುವಂಶಿಕವಾದ ಅಥವಾ ವೇತನ ಪಡೆಯುವ ಗ್ರಾಮದ ರೆವೆನ್ಯೂ ಲೆಕ್ಕಿಗನ ಕರ್ತವ್ಯವಾಗಿರತಕ್ಕದ್ದು.

**135. ಸುಲಿಗೆ ಇತ್ಯಾದಿಗಳ ಬಗ್ಗೆ ಮುನ್ನೆಚ್ಚರಿಕೆ, ಇತ್ಯಾದಿಗಳು :–** ಪೊಲೀಸ್ ಪಟೇಲನು, ಸುಲಿಗೆ, ಶಾಂತಿ ಭಂಗ ಮತ್ತು ಸಾರ್ವಜನಿಕರಿಗೆ ಮತ್ತು ಗ್ರಾಮ ಜನ ಸಮುದಾಯಕ್ಕೆ ಕ್ಷತಿಯಾಗುವಂಥ ಕೃತ್ಯಗಳು ನಡೆಯದಂತೆ ಸಾಧ್ಯವಾದ ಎಲ್ಲ ಭದ್ರತೆಯನ್ನೊದಗಿಸುವುದಕ್ಕಾಗಿ ಗ್ರಾಮದಲ್ಲಿ ಗ್ರಾಮ ಪೊಲೀಸರನ್ನು ನಿಯೋಜಿಸುವ ಏರ್ಪಾಟು ಮಾಡತಕ್ಕದ್ದು ಮತ್ತು ಗ್ರಾಮ ಪೊಲೀಸಿನ ಯಾವೊಬ್ಬನ ವರ್ತನೆಯ ಅಥವಾ ಆ ನಿರ್ಲಕ್ಷತೆಯ ಎಲ್ಲ

ಸಂದರ್ಭಗಳನ್ನೂ ಆ ಗ್ರಾಮವು ಯಾವ ಮ್ಯಾಜಿಸ್ಟ್ರೇಟನ ಅಥವಾ ಪೊಲೀಸ್ ಠಾಣೆಯ ಚಾರ್ಜಿನಲ್ಲಿರು ಅಧಿಕಾರಿಯ ಸ್ಥಳೀಯ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುವುದು ಅವನಿಗೆ, ವರದಿ ಮಾಡತಕ್ಕದ್ದು.

**136. ಸಂಜ್ಞೇಯ ಅಪರಾಧಗಳನ್ನು ಮಾಡಿದ ಬಗ್ಗೆ ಬಂದ ಮಾಹಿತಿ :–** ಪೊಲೀಸ್ ಪಟೇಲನು, ತನ್ನ ಗ್ರಾಮದ ಪರಿಮಿತಿಗಳಲ್ಲಿ, ಆಗುವ ಕೊಲೆಗಳು, ದರೋಡೆಗಳು, ಸುಲಿಗೆಗಳು, ಕಳ್ಳತನಗಳು ಬೆಂಕಿಯಿಂದಾಗುವ ಹಾನಿಗಳು ಮತ್ತು ಇತರ ಸಂಜ್ಞೇಯ ಅಪರಾಧಗಳ ಬಗ್ಗೆ ತಾನು ಪಡೆಯಬಹುದಾದ ಮಾಹಿತಿಯ ತಕ್ಷಣ ವರದಿಯನ್ನು ಯಾವ ಪೊಲೀಸ್ ಠಾಣೆಯು ಸ್ಥಳೀಯ ಅಧಿಕಾರ ವ್ಯಾಪ್ತಿಗೆ ಆ ಗ್ರಾಮವು ಒಳಪಟ್ಟಿರುವುದೋ ಅದರ ಚಾರ್ಜಿನಲ್ಲಿರುವ ಪೊಲೀಸ್ ಅಧಿಕಾರಿಗೆ ತಿಳಿಸತಕ್ಕದ್ದು ಮತ್ತು ಅಂಥ ಪೊಲೀಸ್ ಅಧಿಕಾರಿಯು ಬರುವವರೆಗೆ ಸಾಕ್ಷಿಯನ್ನು ರಕ್ಷಿಸಲು ಮತ್ತು ಅಪರಾಧಕ್ಕೆ ಸಂಬಂಧಿಸಿದ ಸ್ವತ್ತನ್ನು ಸಂರಕ್ಷಿಸಲು ಅವಶ್ಯಕವಾದ ಎಲ್ಲ ಕ್ರಮಗಳನ್ನು ಕೈಕೊಳ್ಳತಕ್ಕದ್ದು.

**137. ಕರ್ತವ್ಯ ನಿರ್ಲಕ್ಷ್ಯತೆಗೆ ದಂಡಗಳು ಮತ್ತು ದಂಡನೆ :–** (1) ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಅಧಿಕೃತ ಅಧಿಕಾರಿಯು, ಯಾವನೇ ಪೊಲೀಸ್ ಪಟೇಲನ ಅಥವಾ ಪೊಲೀಸ್ ಕರ್ತವ್ಯಗಳನ್ನು ನಿರ್ವಹಿಸಲು ಕರೆಯಲ್ಪಡಲು ಹೊಣೆಗಾರನಾಗಿರುವ ಗ್ರಾಮ ಪೊಲೀಸಿನವನ ದುರ್ವರ್ತನೆ ಕರ್ತವ್ಯ ನಿರ್ಲಕ್ಷ್ಯತೆ ಅಥವಾ ಇತರ ಯಾವುದೇ ಸಾಕಷ್ಟು ಕಾರಣಕ್ಕಾಗಿ, ಅವನಿಗೆ ಈ ಕೆಳಗಿನ ಯಾವುದೇ ದಂಡನೆಯನ್ನು ವಿಧಿಸಬಹುದು; ಎಂದರೆ

(i) ಅವನ ಪದದ ವಾರ್ಷಿಕ ಉಪಲಬ್ಧಗಳ ನಾಲ್ಕರಲ್ಲಿ ಒಂದು ಅಂಶಕ್ಕೆ ಮೀರದಷ್ಟು ಜುಲ್ಮಾನೆ;

(ii) ಆರು ತಿಂಗಳಿಗೆ ಮೀರದ ಅವಧಿಯ ವರೆಗೆ ಪದದಿಂದ ನಿಲಂಬನೆ;

(2) ಸಂವಿಧಾನದ 311ನೆಯ ಅನುಚ್ಛೇದದ ಉಪಬಂಧಗಳಿಗೊಳಪಟ್ಟು, ಜಿಲ್ಲಾ ಮ್ಯಾಜಿಸ್ಟ್ರೇಟನು ಯಾವೊಬ್ಬ ಪೊಲೀಸ್ ಪಟೇಲನಿಗೆ ಅಥವಾ ಪೊಲೀಸ್ ಕರ್ತವ್ಯಗಳನ್ನು ನಿರ್ವಹಿಸಲು ಕರೆಯಲ್ಪಡಲು ಹೊಣೆಗಾರನಾಗಿರುವ ಯಾವೊಬ್ಬ ಗ್ರಾಮ ಪೊಲೀಸಿನವನಿಗೆ ಅವನ ದುರ್ವರ್ತನೆ, ಕರ್ತವ್ಯ ನಿರ್ಲಕ್ಷ್ಯತೆ ಅಥವಾ ಇತರ ಸಾಕಷ್ಟು ಕಾರಣಕ್ಕಾಗಿ, ಪದದಿಂದ ತೆಗೆದುಹಾಕುವ ಅಥವಾ ವಜಾ ಮಾಡುವ ದಂಡನೆಯನ್ನು ವಿಧಿಸಬಹುದು.

(3) (1)ನೆಯ ಅಥವಾ (2)ನೆಯ ಉಪಪ್ರಕರಣದ ಮೇರೆಗಿನ ಯಾವುದೇ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ಆದೇಶವು ತಲುಪಿದ ತಾರೀಖಿನಿಂದ ಅರವತ್ತು ದಿನಗಳೊಳಗಾಗಿ, ನಿಯಮಿಸಲಾದ ಅಧಿಕಾರಿಗೆ ಅಪೀಲು ಮಾಡಬಹುದು ಮತ್ತು ಅಂಥ ಅಪೀಲಿನ ಮೇಲೆ ಆ ನಿಯಮಿಸಲಾದ ಅಧಿಕಾರಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು

**138. ಕ್ರಿಮಿನಲ್ ಪ್ರಾಸಿಕ್ಯೂಷನ್ನಿಗೆ ಹೊಣೆಯಾಗಿರುವುದು ಅಬಾಧಿತ :–** ಈ ಕೊನೆಯ ಹಿಂದಿನ ಪ್ರಕರಣದಲ್ಲಿರುವುದು ಯಾವುದೂ, ಯಾವನೇ ಪೊಲೀಸ್ ಪಟೇಲನು ಅಥವಾ ಗ್ರಾಮ ಪೊಲೀಸಿನ ಇತರ ಯಾವೊಬ್ಬನು ಆರೋಪಿತನಾಗಬಹುದಾದ ಯಾವುದೇ ಅಪರಾಧದ ಬಗ್ಗೆ ಕ್ರಿಮಿನಲ್ ಪ್ರಾಸಿಕ್ಯೂಷನ್ನಿಗೆ ಹೊಣೆಗಾರನಾಗಿರುವುದನ್ನು ಬಾಧಿಸತಕ್ಕದ್ದಲ್ಲ.

**139. ಗ್ರಾಮದಲ್ಲಿರುವ ಅಪರಾಧಿಯು ತಪ್ಪಿಸಿಕೊಂಡು ಹೋದಾಗ ಅಥವಾ ನಾಪತ್ತೆಯಾದಾಗ ಪೊಲೀಸ್ ಠಾಣೆಯ ಚಾರ್ಜಿನಲ್ಲಿರುವ ಅಧಿಕಾರಿಗೆ ಮಾಹಿತಿ :–** ಗ್ರಾಮದ ಪರಿಮಿತಿಗಳಲ್ಲಿ ಯಾವುದೇ ಅಪರಾಧವನ್ನು

ಮಾಡಲಾಗಿದ್ದು ಅಪರಾಧಿಯು ತಪ್ಪಿಸಿಕೊಂಡಿದ್ದರೆ ಅಥವಾ ನಾಪತ್ತೆಯಾಗಿದ್ದರೆ, ಆ ಗ್ರಾಮವು ಯಾವ ಪೊಲೀಸ್ ಠಾಣೆಯ ಸ್ಥಳೀಯ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುವುದೋ ಅದರ ಚಾರ್ಜಿನಲ್ಲಿರುವ ಪೊಲೀಸ್ ಅಧಿಕಾರಿಗೆ, ಪೊಲೀಸ್ ಪಟೇಲನು ಕೂಡಲೇ ಮಾಹಿತಿಯನ್ನು ಕೊಡತಕ್ಕದ್ದು.

**140. ಅಸ್ವಾಭಾವಿಕ ಅಥವಾ ಹಠಾತ್ ಮರಣದ ಬಗ್ಗೆ ಅಥವಾ ಗ್ರಾಮದಲ್ಲಿ ಶವ ಕಂಡುಬಂದಾಗ ಮಾಹಿತಿ:–** ಗ್ರಾಮದ ಪರಿಮಿತಿಗಳಲ್ಲಿ ಅಸ್ವಾಭಾವಿಕ ಅಥವಾ ಹಠಾತ್ ಮರಣವು ಸಂಭವಿಸಿದರೆ; ಅಥವಾ ಯಾವುದೇ ಶವ ಕಂಡುಬಂದರೆ, ಗ್ರಾಮವು ಯಾವ ಪೊಲೀಸ್ ಠಾಣೆಯ ಸ್ಥಳೀಯ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುವುದೋ ಅದರ ಚಾರ್ಜಿನಲ್ಲಿರುವ ಅಧಿಕಾರಿಗೆ ಪೊಲೀಸ್ ಪಟೇಲನು ಕೂಡಲೇ ಲಿಖಿತ ಮಾಹಿತಿಯನ್ನು ಕಳಿಸತಕ್ಕದ್ದು ಮತ್ತು ಅಂಥ ಮರಣದ ಸಂಬಂಧದಲ್ಲಿ ನಡೆಯುವ ಯಾವುದೇ ದುರ್ಮರಣ ವಿಚಾರಣೆ ಅಥವ ತನಿಖೆಯಲ್ಲಿ ಅಂಥ ಪೊಲೀಸ್ ಅಧಿಕಾರಿಗೆ ಸಹಾಯ ಮಾಡತಕ್ಕದ್ದು.

**141. ಪೊಲೀಸ್ ಪಟೇಲನು, ಸಂಜ್ಞೇಯ ಅಪರಾಧ ಮಾಡಿರುವನೆಂದು ತಾನು ನಂಬಲು ಕಾರಣವಿರುವ ವ್ಯಕ್ತಿಯನ್ನು ದಸ್ತಗಿರಿ ಮಾಡುವುದು ಮತ್ತು ಅವನನ್ನು ಪೊಲೀಸ್ ಠಾಣೆಗೆ ಕಳಿಸುವುದು ಇತ್ಯಾದಿ :–** (1) ಪೊಲೀಸ್ ಪಟೇಲನು, ತನ್ನ ಗ್ರಾಮದ ಪರಿಮಿತಿಗಳಲ್ಲಿ, ಪೊಲೀಸ್ ಅಧಿಕಾರಿಯು ವಾರಂಟಿಲ್ಲದೆ ದಸ್ತಗಿರಿ ಮಾಡಬಹುದಾದಂಥ ಅಪರಾಧವನ್ನು ಮಾಡಿರುನೆಂದು ತಾನು ನಂಬಲು ಕಾರಣವಿರುವಂಥ ಯಾವನೇ ವ್ಯಕ್ತಿಯನ್ನು ದಸ್ತಗಿರಿ ಮಾಡುವುದು ಮತ್ತು ಅಂಥ ವ್ಯಕ್ತಿಯನ್ನು ಹಾಗೆ ದಸ್ತಗಿರಿ ಮಾಡಿದ ಇಪ್ಪತ್ತು ನಾಲ್ಕು ಗಂಟೆಗಳೊಳಗಾಗಿ ಸಾಕ್ಷಿಯಾಗಿ ಉಪಯುಕ್ತವಾಗುವಂಥ ಎಲ್ಲ ವಸ್ತುಗಳೊಂದಿಗೆ, ಆ ಗ್ರಾಮವು ಯಾವ ಪೊಲೀಸ್ ಠಾಣೆಯ ಸ್ಥಳೀಯ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುವುದೋ ಅದರ ಚಾರ್ಜಿನಲ್ಲಿರುವ ಅಧಿಕಾರಿಗೆ, ಕಳಿಸಿಕೊಡುವುದು, ವಿಧಿಸಮ್ಮತವಾಗಿರತಕ್ಕದ್ದು.

(2) ಪೊಲೀಸ್ ಪಟೇಲನು ಆಪಾದಿತ ಅಪರಾಧಿಗಳನ್ನು ಪತ್ತೆ ಹಚ್ಚುವುದಕ್ಕಾಗಿ ಇತರ ಗ್ರಾಮಗಳ ಪರಿಮಿತಿಗಳಲ್ಲಿ ಪ್ರವೇಶಿಸಲು ಮತ್ತು ಕೆಲಸ ಮಾಡಲು ಅಧಿಕಾರವುಳ್ಳವನಾಗಿರತಕ್ಕದ್ದು. ಪರಂತು ಅಂಥ ಸಂದರ್ಭಗಳಲ್ಲಿ ಹಾಗೆ ಪ್ರವೇಶಿಸಿದ ಗ್ರಾಮದ ಪೊಲೀಸ್ ಪಟೇಲನಿಗೆ ಕೂಡಲೇ ಮಾಹಿತಿಯನ್ನು ಕಳಿಸತಕ್ಕದ್ದು ಮತ್ತು ಆ ಪಟೇಲನು ಹಾಗೇ ಪತ್ತೆ ಹಚ್ಚುವ ಕೆಲಸಕ್ಕೆ ತನ್ನ ಅಧಿಕಾರದಲ್ಲಿದ್ದ ಎಲ್ಲ ಸಹಾಯವನ್ನು ನೀಡತಕ್ಕದ್ದು.

**142. ಕ್ಲೇಮು ಮಾಡದ ಸ್ವತ್ತು :–** ಪೊಲೀಸ್ ಪಟೇಲನು ಗ್ರಾಮದ ಪರಿಮಿತಿಗಳಲ್ಲಿ ಸಿಕ್ಕಿದ ಮತ್ತು ಅಥವಾ ಈ ಅಧಿನಿಯಮದ ಉಪಬಂಧಗಳ ಮೇರೆಗೆ ತನಗೆ ಒಪ್ಪಿಸಿದ ಕ್ಲೇಮು ಮಾಡದ ಎಲ್ಲ ಸ್ವತ್ತನ್ನು ತನ್ನ ವಶಕ್ಕೆ ತೆಗೆದುಕೊಳ್ಳುವುದು ಕಾನೂನು ಸಮ್ಮತವಾಗಿರತಕ್ಕದ್ದು. ಅವನು ಕೂಡಲೇ ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಅಥವಾ ಅಧಿಕೃತ ಅಧಿಕಾರಿಗೆ ವರದಿ ಮಾಡತಕ್ಕದ್ದು. ಮತ್ತು ಸದರೀ ಮ್ಯಾಜಿಸ್ಟ್ರೇಟನಿಂದ ಅಥವಾ ಅಧಿಕಾರಿಯಿಂದ ನಿರ್ದೇಶಿಸಲ್ಪಡಬಹುದಾದಂತೆ ಅವನು ನಡೆದುಕೊಳ್ಳತಕ್ಕದ್ದು.

**143. ಪೊಲೀಸ್ ಪಟೇಲನ ಗೈರು ಹಾಜರಿ, ಹಠಾತ್ ಕಾಯಿಲೆ ಇತ್ಯಾದಿ ಪ್ರಸಂಗಗಳಲ್ಲಿ ಉಪಬಂಧ :–** ಪೊಲೀಸ್ ಪಟೇಲನು ಗ್ರಾಮದಲ್ಲಿರದ, ಹಠಾತ್ತಾಗಿ ಕಾಯಿಲೆಯಿದ್ದ ಅಥವಾ ಇದರ ಕಾರಣದಿಂದ ತನ್ನ ಕರ್ತವ್ಯವನ್ನು ನಿರ್ವಹಿಸಲಾಗದಿರುವಾಗ ತಾನು ಒಬ್ಬ ಸಕ್ಷಮ ಗ್ರಾಮ ಪೊಲೀಸಿನವನ್ನು ತನ್ನ ಕಾರ್ಯವನ್ನು ನೋಡಿಕೊಳ್ಳಲು ನಿಯೋಜಿಸತಕ್ಕದ್ದು ಮತ್ತು ತಾನು ಯಾವ ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಅಥವಾ ಅಧಿಕೃತ ಅಧಿಕಾರಿಗೆ ಅಧೀನನಾಗಿರುವನೋ ಅವನಿಗೆ ಕೂಡಲೇ ವರದಿ ಮಾಡತಕ್ಕದ್ದು. ಹಾಗೆ ಕೆಲಸ ನೋಡಿಕೊಳ್ಳಲು ನಿಯೋಜಿಸಲ್ಪಟ್ಟ ವ್ಯಕ್ತಿಯು ತದ್ವಿರುದ್ಧವಾದ ಆದೇಶಗಳು ಬರುವವರೆಗೆ, ಈ ಅಧಿನಿಯಮದ ಮೇರೆಗೆ ಪೊಲೀಸ್ ಪಟೇಲನಿಗೆ ಇರುವ ಅಧಿಕಾರಗಳಿಗೆ ಮತ್ತು ಹೊಣೆಗಳಿಗೆ ಒಳಪಟ್ಟಿರತಕ್ಕದ್ದು.

## ಅಧ್ಯಾಯ – X

## ರಾಜ್ಯ ರಿಜರ್ವ್ ಪೊಲೀಸ್ ದಳ

**144. ಪರಿಭಾಷೆಗಳು :–** ಈ ಅಧ್ಯಾಯದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,

(ಎ) "ಸಕ್ರಿಯ ಕರ್ತವ್ಯ" ಎಂದರೆ,–

(i) "ಶಾಂತಿಭಂಗ ಅಥವಾ ಪ್ರಾಣ ಅಥವಾ ಸ್ವತ್ತಿಗೆ ಅಪಾಯಕರವಾದಂತಹವುಗಳನ್ನೊಳಗೊಂಡ ಅಪರಾಧಗಳ ತನಿಖೆ ನಡೆಸುವ ಮತ್ತು ಅಂಥ ಅಪರಾಧಗಳಿಗೆ ಸಂಬಂಧಿಸಿದ ವ್ಯಕ್ತಿಗಳನ್ನು ಅಥವಾ ಅನಿರ್ಬಂಧಿತರಾಗಿರುವುದರಿಂದ ಸಮಾಜಕ್ಕೆ ಕಂಟಕಪ್ರಾಯವಾಗುವಷ್ಟು ಯಾವುದಕ್ಕೂ ಹೇಸದ ಮತ್ತು ಅಪಾಯಕಾರಿಗಳಾದವರನ್ನು ಪತ್ತೆ ಹಚ್ಚುವ ಮತ್ತು ಸೆರೆ ಹಿಡಿಯುವ ಕರ್ತವ್ಯ;

(ii) ಬೆಂಕಿ, ಪ್ರವಾಹ, ಭೂಕಂಪ, ಶತ್ರುಗಳ ಹಾವಳಿ ಅಥವಾ ದೊಂಬಿ ಇಂತಹ ಪ್ರಸಂಗಗಳಲ್ಲಿ ಬೆಂಕಿ ಆರಿಸುವುದಕ್ಕೂ ಅಥವಾ ವ್ಯಕ್ತಿ ಹಾಗೂ ಸ್ವತ್ತಿಗೆ ಅಪಾಯವಾಗದಂತೆ ತಡೆಯುವುದಕ್ಕೂ ಎಲ್ಲ ಸಮರ್ಪಕ ಕ್ರಮಗಳನ್ನು ಕೈಗೊಳ್ಳುವ ಮತ್ತು ಅಂಥ ಪ್ರಸಂಗಗಳಲ್ಲಿ ಶಾಂತಿಯನ್ನು ನೆಲೆಗೊಳಿಸುವ ಮತ್ತು ಸುವ್ಯವಸ್ಥೆಯನ್ನು ರಕ್ಷಿಸುವ ಕರ್ತವ್ಯ;

(iii) 151ನೆಯ ಪ್ರಕರಣದ ಮೇರೆಗೆ ಹೊರಡಿಸಿದ ನಿರ್ದೇಶದಲ್ಲಿ ಸರಕಾರದಿಂದ ಅಥವಾ ಇನ್ಸ್‌ಪೆಕ್ಟರ್ ಜನರಲ್‌ನಿಂದ ಸಕ್ರಿಯ ಕರ್ತವ್ಯವೆಂದು ಉಲ್ಲೇಖಿಸಲ್ಪಡಬಹುದಾಗಿದ್ದಂಥ ಇತರ ಕರ್ತವ್ಯ;

(ಬಿ) "ಕಮಾಂಡೆಂಟ್" ಮತ್ತು "ಸಹಾಯಕ ಕಮಾಂಡೆಂಟ್" ಎಂದರೆ ಸರಕಾರದಿಂದ 146ನೆಯ ಪ್ರಕರಣದ ಮೇರೆಗೆ ಕ್ರಮವಾಗಿ ಅಂಥ ಅಧಿಕಾರಿಗಳೆಂದು ನೇಮಿಸಲ್ಪಟ್ಟ ವ್ಯಕ್ತಿಗಳು;

(ಸಿ) "ಅನುಯಾಯಿ" ಎಂದರೆ, ರಾಜ್ಯ ರಿಜರ್ವ್ ಪೊಲೀಸ್ ದಳದ ಸಂಬಂಧದಲ್ಲಿ, ಅಡಿಗೆಯವ, ಭೋಜನ ಶಾಲೆ ಸೇವಕ, ಬಟ್ಟೆ ಒಗೆಯುವವ, ದೋಭಿ ಜೋಡು ಹೊಲಿಯುವವ, ಕ್ಷೌರಿಕ, ದರ್ಜೆ ಗುಡಿಸುವವ ಅಥವಾ ತೈನಾತಿ;

(ಡಿ) "ಅಧೀನ ದರ್ಜೆಗಳವನು" ಎಂದರೆ, ರಾಜ್ಯ ರಿಜರ್ವ್ ಪೊಲೀಸ್ ದಳದ ಸುಬೇದರ ಮೇಜರ್ ಮತ್ತು ಅದಕ್ಕಿಂತ ಕೆಳಗಿನ ದರ್ಜೆಯವನು;

(ಇ) "ರಿಜರ್ವ್ ಪೊಲೀಸ್ ಅಧಿಕಾರಿ" ಎಂದರೆ, ಈ ಅಧ್ಯಾಯದ ಮೇರೆಗೆ ಸ್ಥಾಪಿತವಾದ ರಾಜ್ಯ ರಿಜರ್ವ್ ಪೊಲೀಸ್ ದಳದ ಯಾವನೊಬ್ಬನು;

(ಎಫ್) "ವರಿಷ್ಠ ಅಧಿಕಾರಿ" ಎಂದರೆ, ಯಾವನೇ ರಿಜರ್ವ್ ಪೊಲೀಸ್ ಅಧಿಕಾರಿಯ ಸಂಬಂಧದಲ್ಲಿ ತನಗಿಂತ ಮೇಲಿನ ದರ್ಜೆಯ, ಅಥವಾ ಅದೇ ವರ್ಗದಲ್ಲಿ ತನಗಿಂತ ಮೇಲಿನ ಗ್ರೇಡಿನ ಅಥವಾ ಅದೇ ದರ್ಜೆಯಲ್ಲಿ ತನಗಿಂತ ಜೇಷ್ಠನಾಗಿರುವ ರಿಜರ್ವ್ ಪೊಲೀಸ್ ಅಧಿಕಾರಿ.

**145. ರಾಜ್ಯ ರಿಜರ್ವ್ ಪೊಲೀಸ್ ದಳದ ರಚನೆ :–** (1) 3ನೆಯ ಪ್ರಕರಣದ ಮೇರೆಗೆ ರಚಿತವಾದ ಪೊಲೀಸ್ ದಳದ ಜೊತೆಗೆ, ಸರಕಾರವು, ರಾಜ್ಯ ರಿಜರ್ವ್ ಪೊಲೀಸ್ ದಳವೆಂದು ಕರೆಯಲಾಗುವ ಒಂದು

ಸಶಸ್ತ್ರ ರಿಜರ್ವ್ ಪೊಲೀಸ್ ದಳವನ್ನು ನಿಯಮಿಸಬಹುದಾದ ರೀತಿಯಲ್ಲಿ ಸ್ಥಾಪಿಸಬಹುದು ಮತ್ತು ನಡೆಸಿಕೊಂಡು ಹೋಗಬಹುದು.

(2) ಸರಕಾರವು ಅಥವಾ ಈ ಸಂಬಂಧದಲ್ಲಿ ಅದರಿಂದ ಶಕ್ತಗೊಳಿಸಲಾದ ಯಾವನೇ ಅಧಿಕಾರಿಯು –

(ಎ) ರಾಜ್ಯ ರಿಜರ್ವ್ ಪೊಲೀಸ್ ದಳವನ್ನು ಬೆಟಾಲಿಯನ್ನುಗಳನ್ನಾಗಿ ವಿಭಾಗಿಸಬಹುದು;

(ಬಿ) ಪ್ರತಿಯೊಂದು ಕಂಪನಿಯನ್ನು ಪ್ಲಾಟೂನುಗಳನ್ನಾಗಿ ಉಪ–ವಿಭಾಗಿಸಬಹುದು;

(ಸಿ) ಯಾವುದೇ ಬೆಟಾಲಿಯನ್ನನ್ನು, ಕಂಪೆನಿಯನ್ನು, ಅಥವಾ ಪ್ಲಾಟೂನನ್ನು ಸರಕಾರವು ಅಥವಾ ಈ ಸಂಬಂಧದಲ್ಲಿ ಅದರಿಂದ ಶಕ್ತಗೊಳಿಸಲಾದ ಅಧಿಕಾರಿಯು ಸೂಕ್ತವೆಂದು ಭಾವಿಸುವಂಥ ಸ್ಥಳಗಳಲ್ಲಿ ನಿಯೋಜಿಸಬಹುದು.

**146. ದಳದ ಅಧೀಕ್ಷಣೆ, ನಿಯಂತ್ರಣ ಮತ್ತು ಆಡಳಿತ :–** (1) ಸರಕಾರವು ಪ್ರತಿಯೊಂದು ಬೆಟಾಲಿಯನ್ನಿನ ಸಲುವಾಗಿ ಸೂಪರಿಟೆಂಡೆಂಟನ ದರ್ಜೆಯ ವ್ಯಕ್ತಿಯಾಗಿರುವ ಒಬ್ಬ ಕಮಾಂಡೆಂಟನನ್ನು ಮತ್ತು ಡೆಪ್ಯೂಟಿ ಸೂಪರಿಂಟೆಂಡೆಂಟರ ದರ್ಜೆಯ ಸಹಾಯಕ ಕಮಾಂಡೆಂಟ್‌ರನ್ನು ನೇಮಿಸಬಹುದು.

(2) ಕಮಾಂಡೆಂಟನು, ಸಹಾಯಕ ಕಮಾಂಡೆಂಟನು, ಮತ್ತು ಹಾಗೆ ನೇಮಿಸಲಾದ ಇತರ ಪ್ರತಿಯೊಬ್ಬ ಅಧಿಕಾರಿಯು, ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಉಪಬಂಧಿಸಬಹುದಾದಂಥ ಅಧಿಕಾರಗಳನ್ನು ಮತ್ತು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಚಲಾಯಿಸಬಹುದು.

(3) ಸರಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಒಳಪಟ್ಟು ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ಲಿಯ ಸುಬೇದಾರ ಮೇಜರುಗಳನ್ನು ಮತ್ತು ಸುಬೇದಾರರನ್ನು ನೇಮಿಸತಕ್ಕದ್ದು.

**147. ಸೇರ್ಪಡೆ :–** (1) ರಿಜರ್ವ್ ಪೊಲೀಸ್ ಅಧಿಕಾರಿಯಾಗಿ ನೇಮಕವಾದ ಯಾವನೇ ವ್ಯಕ್ತಿಯು, ತನ್ನ ನೌಕರಿಗೆ ಸೇರುವುದಕ್ಕೆ ಮುಂಚೆ, 11 ಅನುಸೂಚಿಯಲ್ಲಿನ ಪ್ರಪತ್ರಗಳಲ್ಲಿರುವ ಘೋಷಣೆಯನ್ನು ಅವನಿಗೆ ಓದಿ ಹೇಳತಕ್ಕದ್ದು. ಮತ್ತು ಅವನು ಹಾಗೆ ಇಚ್ಛೆಪಟ್ಟರೆ, ಅದನ್ನು ಒಬ್ಬ ಕಮಾಂಡೆಂಟನ, ಅಥವಾ ಸಹಾಯಕ ಕಮಾಂಡೆಂಟನ ಅಥವಾ ಸೂಪರಿಂಟೆಂಡೆಂಟನ ಅಥವಾ ಪೊಲೀಸು ಡೆಪ್ಯೂಟಿ ಕಮೀಷನರನ ದರ್ಜೆಗೆ ಕಡಿಮೆಯಿರದ ಒಬ್ಬ ಪೊಲೀಸ್ ಅಧಿಕಾರಿಯ ಸಕ್ಷಮ ಅವನಿಗೆ ವಿವರಿಸಿ ಹೇಳತಕ್ಕದ್ದು ಮತ್ತು ಅದರಲ್ಲಿ ನಿಯಮಿಸಿರುವ ಷರತ್ತುಗಳನ್ನು ತಾನು ಅನುಸರಿಸುವುದಾಗಿ ಒಪ್ಪಿಕೊಡುವುದಕ್ಕೆ ಗುರುತಾಗಿ ಅವನು ಅದಕ್ಕೆ ಸಹಿ ಹಾಕತಕ್ಕದ್ದು. ಆ ಘೋಷಣೆಯು, ಆ ಬಳಿಕ ಸಂದರ್ಭಾನುಸಾರ ಕಮಾಂಡೆಂಟನಿಂದ, ಸಹಾಯಕ ಕಮಾಂಡೆಂಟನಿಂದ ಅಥವಾ ಪೊಲೀಸ್ ಅಧಿಕಾರಿಯಿಂದ ಸಾಕ್ಷಿರುಜು ಹಾಕಲ್ಪಡತಕ್ಕದ್ದು.

(2) ಯಾವ ರಿಜರ್ವ್ ಪೊಲೀಸ್ ಅಧಿಕಾರಿಯೂ, (1)ನೆಯ ಉಪಪ್ರಕರಣದ ಮೇರೆಗೆ ತನ್ನಿಂದ ಸಹಿ ಹಾಕಲ್ಪಟ್ಟ ಘೋಷಣೆಯ ನಿಬಂಧನೆಗಳಿಗನುಸಾರವಾಗಲ್ಲದೆ ತನ್ನ ನೇಮಕಕ್ಕೆ ರಾಜೀನಾಮೆ ಕೊಡತಕ್ಕದ್ದಲ್ಲ.

(3) ಯಾವನೇ ರಿಜರ್ವ್ ಪೊಲೀಸ್ ಅಧಿಕಾರಿಯು ಈ ಪ್ರಕರಣವನ್ನು ಉಲ್ಲಂಘಿಸಿ ರಾಜಿನಾಮೆ ಕೊಟ್ಟರೆ, ಅವನು, ಈ ಅಧಿನಿಯಮದ ಮೇರೆಗೆ ಅಥವಾ ಆಯಾ ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ವಿಧಿಯ ಮೇರೆಗೆ ವಿಧಿಸಿದ ಬೇರೆ ಯಾವುದೇ ದಂಡಕ್ಕೆ ಬಾಧಕವಾಗದಂತೆ, ಕಮಾಂಡೆಂಟಿನ ಆದೇಶದ ಮೇರೆಗೆ ಅವನಿಗೆ ಬರಬೇಕಾದ ಸಂಬಳದ ಎಲ್ಲ ಬಾಕಿಗಳು ಮುಟ್ಟುಗೋಲಾಗತಕ್ಕದ್ದು.

**148**. **ವರ್ಗಾವಣೆಗಳು :–** ಈ ಅಧಿನಿಯಮದಲ್ಲಿ ಏನೇ ಇದ್ದರೂ, II ಅಧ್ಯಾಯದ ಮೇರೆಗೆ ನೇಮಕವಾದ ಪೊಲೀಸ್ ದಳದವರನ್ನು ಈ ಅಧ್ಯಾಯದ ಮೇರೆಗೆ ಸ್ಥಾಪಿತವಾದ ರಾಜ್ಯ ರಿಜರ್ವ್ ಪೊಲೀಸ್ ದಳಕ್ಕೆ ಮತ್ತು ಇದರಿಂದ ಅದಕ್ಕೆ ವರ್ಗಾಯಿಸುವುದು ಸರಕಾರಕ್ಕೆ ಸಕ್ಷಮವಾಗಿರತಕ್ಕದ್ದು.

ಪರಂತು, ಸರಕಾರವು (1)ನೆಯ ಉಪಪ್ರಕರಣದ ಮೇರೆಗಿನ ತನ್ನ ಅಧಿಕಾರಗಳನ್ನು ಆಯಾ ಪೊಲೀಸ್ ದಳದ ಕೆಳದರ್ಜೆಯವರಿಗೆ ಸಂಬಂಧಿಸಿದ ಮಟ್ಟಿಗೆ, ಇನ್ಸ್‌ಪೆಕ್ಟರ್ ಜನರಲ್‌ನಿಗೆ, ವಹಿಸಿಕೊಡಬಹುದು.

(2) II ಅಧ್ಯಾಯದ ಮೇರೆಗೆ ನೇಮಕವಾದ ಪೊಲೀಸ್ ದಳದವನು ಈ ಅಧ್ಯಾಯದ ಮೇರೆಗೆ ಸ್ಥಾಪಿತವಾದ ರಾಜ್ಯ ರಿಜರ್ವ್ ಪೊಲೀಸ್ ದಳಕ್ಕೆ ಅಥವಾ ಇದರಿಂದ ಅದಕ್ಕೆ ವರ್ಗಾವಣೆ ಹೊಂದಿದಾಗ, ಅವನು ಯಾವ ಪೊಲೀಸ್ ದಳಕ್ಕೆ ವರ್ಗಾವಣೆ ಹೊಂದಿರುವನೋ ಅದಕ್ಕೆ ಸೇರಿದವನೆಂದು ಭಾವಿಸಲ್ಪಡತಕ್ಕದ್ದು ಮತ್ತು ತನ್ನ ಪ್ರಕಾರ್ಯಗಳ ನಿರ್ವಹಣೆಯಲ್ಲಿ, ಸರಕಾರವು ಮಾಡಬಹುದಾದಂಥ ಆದೇಶಗಳಿಗೊಳಪಟ್ಟು, ಆದೇಶ ದಲ್ಲಿ ಉಲ್ಲೇಖಿಸಬಹುದಾದಂತೆ, ಅವನು ಪೊಲೀಸ್ ಬಲದ ಯಾವ ಗ್ರೇಡಿಗೆ ವರ್ಗಾಯಿತನಾಗಿರುವನೋ ಅದಕ್ಕೆ ಸೇರಿದವನ ಅಧಿಕಾರಗಳನ್ನು ಮತ್ತು ವಿಶೇಷಾಧಿಕಾರಿಗಳನ್ನು ಹೊಂದಿದವನು ಮತ್ತು ಅಂಥ ಹೊಣೆಗಳಿಗೆ ಒಳಪಟ್ಟವನು ಆಗಿರುವನೆಂದು ಭಾವಿಸಲ್ಪಡತಕ್ಕದ್ದು.

**149**. **ನೇಮಕದ ಸರ್ಟಿಫಿಕೇಟು :–** (1) ಸುಬೇದಾರ್ ಮೇಜರ್ ಮತ್ತು ಸುಬೇದಾರನು, ನೇಮಕವಾದ ಬಳಿಕ, ತನ್ನ ಹೆಸರು, ವಯಸ್ಸು ಮತ್ತು ಹಿಂದಿನ ಸೇವೆ ಏನಾದರೂ ಇದ್ದರೆ, ಇವುಗಳ ವಿವರಗಳನ್ನೊಳಗೊಂಡ ನೇಮಕದ ಸರ್ಟಿಫಿಕೇಟನ್ನು ಇನ್ಸ್‌ಪೆಕ್ಟರ್ ಜನರಲ್‌ನಿಂದ ಪಡೆಯತಕ್ಕದ್ದು.

(2) ಸುಬೇದಾರನ ದರ್ಜೆಗೆ ಕಡಿಮೆ ಇರುವ ಪ್ರತಿಯೊಬ್ಬ ರಿಜರ್ವ್ ಪೊಲೀಸು ಅಧಿಕಾರಿಯು ನೇಮಕವಾದ ಬಳಿಕ, IIIನೆಯ ಅನುಸೂಚಿಯ ಪ್ರಪತ್ರದಲ್ಲಿರುವ ಕಮಾಂಡೆಂಟನ ಮುದ್ರೆಯೊಂದಿಗೆ ಕೊಡಲ್ಪಡಬೇಕಾದ ಒಂದು ಸರ್ಟಿಫಿಕೇಟನ್ನು ಪಡೆಯತಕ್ಕದ್ದು.

(3) ಪ್ರತಿಯೊಬ್ಬ ವ್ಯಕ್ತಿಯು, ಯಾವುದೇ ಕಾರಣದಿಂದ ತಾನು ರಿಜರ್ವ್ ಪೊಲೀಸು ಅಧಿಕಾರಿಯಾಗಿರುವುದು ನಿಂತು ಹೋದಾಗ ಕೂಡಲೇ ತನ್ನ ನೇಮಕದ ಸರ್ಟಿಫಿಕೇಟನ್ನು ಮತ್ತು ತನ್ನ ಹುದ್ದೆಯನ್ನು ನಿರ್ವಹಿಸಲು ತನಗೆ ಕೊಡಲಾಗಿದ್ದ ಶಸ್ತ್ರಗಳನ್ನು ಉಡುಗೆಗಳನ್ನು, ಬಟ್ಟೆಗಳನ್ನು ಮತ್ತು ಇತರ ಅವಶ್ಯಕ ವಸ್ತುಗಳನ್ನು ಕೂಡಲೇ, ಅವುಗಳನ್ನು ಪಡೆಯಲು ಕಮಾಂಡೆಂಟನಿಂದ ಶಕ್ತಗೊಳಿಸಲಾದ ಅಧಿಕಾರಿಗೆ ಒಪ್ಪಿಸತಕ್ಕದ್ದು.

**150**. **ಕಮಾಂಡೆಂಟಿನ ಸಾಮಾನ್ಯ ಅಧಿಕಾರಗಳು :–** ಕಮಾಂಡೆಂಟನು, ಪೊಲೀಸು ಇನ್‌ಸ್ಪೆಕ್ಟರ್ ಜನರಲ್‌ನ ಆದೇಶಗಳಿಗೊಳಪಟ್ಟು, ಶಸ್ತ್ರಗಳು, ಕವಾಯತು, ಅಂಗಸಾಧನೆ, ಪರಸ್ಪರ ಸಂಬಂಧ, ಕರ್ತವ್ಯಗಳ ಹಂಚಿಕೆ, ಇವುಗಳಿಗೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನು ಮತ್ತು ತನ್ನ ಚಾರ್ಜ್‌ನಲ್ಲಿರುವ ಬ್ಯಾಟಲಿಯನ್ನಿನವರು ತಮ್ಮ ಕರ್ತವ್ಯಗಳನ್ನು ನೆರವೇರಿಸುವುದರ ಸಂಬಂಧದಲ್ಲಿ ಎಲ್ಲ ಕಾರ್ಯ ನಿರ್ವಹಣಾ ವಿವರಗಳನ್ನು ಕುರಿತು ನಿರ್ದೇಶಿಸತಕ್ಕದ್ದು ಮತ್ತು ವಿನಿಯಮಿಸಕ್ಕದ್ದು.

**151**. **ರಾಜ್ಯ ರಿಜರ್ವ್ ಪೊಲೀಸ್ ದಳದವರ ಸಾಮಾನ್ಯ ಕರ್ತವ್ಯಗಳು :–** (1) ಪ್ರತಿಯೊಬ್ಬ ರಿಜರ್ವ್ ಪೊಲೀಸ್ ಅಧಿಕಾರಿಯು, ಈ ಅಧಿನಿಯಮದ ಉದ್ದೇಶಗಳಿಗಾಗಿ, ಮೈಸೂರು ರಾಜ್ಯದಲ್ಲಿ ಸದಾ ಕರ್ತವ್ಯ ನಿರತನಾಗಿರುತ್ತಾನೆಂದು ಭಾವಿಸಲ್ಪಡತಕ್ಕದ್ದು ಮತ್ತು ಯಾವೊಬ್ಬ ರಿಜರ್ವ್ ಪೊಲೀಸ್ ಅಧಿಕಾರಿಯು ಮತ್ತು

ರಿಜರ್ವ್ ಪೊಲೀಸ್ ಅಧಿಕಾರಿಗಳ ಪೈಕಿ ಯಾವೊಬ್ಬನು ಅಥವಾ ಅದರ ನಿಕಾಯವನ್ನು, ಸರಕಾರದಿಂದ ಅಥವಾ ಇನ್‌ಸ್ಪೆಕ್ಟರ್ ಜನರಲ್‌ನಿಂದ ಹಾಗೆ ನಿರ್ದೇಶಿಲ್ಪಟ್ಟರೆ, ಸಕ್ರಿಯ ಕರ್ತವ್ಯದ ಮೇಲೆ ಆ ಕರ್ತವ್ಯವು ಅಗತ್ಯವಿರುವ ವರೆಗೆ ಮತ್ತು ಅವರ ಸೇವೆಗಳು ಅಗತ್ಯವಿರುವಾಗಲೆಲ್ಲ, ನಿಯೋಜಿಸಲ್ಪಡಬಹುದು.

(2) (1)ನೆಯ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಪ್ರತಿಯೊಂದು ನಿದೇಶದಲ್ಲಿ, ಯಾವೊಬ್ಬ ರಿಜರ್ವ್ ಪೊಲೀಸ್ ಅಧಿಕಾರಿಯು ಅಥವಾ ಅಂತಹ ಅಧಿಕಾರಿಗಳ ಪೈಕಿ ಯಾವನೊಬ್ಬನು ಅಥವಾ ಅವರ ನಿಕಾಯವು ಯಾವ ಕರ್ತವ್ಯದ ಮೇಲೆ ನಿಯೋಜಿತರಾಗಲು ನಿದೇಶಿಸಲಾಗಿದೆಯೋ ಆ ಕರ್ತವ್ಯವು ಈ ಅಧಿನಿಯಮದ ಉದ್ದೇಶಕ್ಕಾಗಿ ಕಾರ್ಯ ನಿರತ ಸಕ್ರಿಯ ಕರ್ತವ್ಯವೆಂದು ಭಾವಿಸತಕ್ಕುದೆಂದು ಉಲ್ಲೇಖಿಸತಕ್ಕದ್ದು.

ವಿವರಣೆ :– ಯಾವೊಬ್ಬ ರಿಜರ್ವ್ ಪೊಲೀಸ್ ಅಧಿಕಾರಿಯು ಸಕ್ರಿಯ ಕರ್ತವ್ಯದಲ್ಲಿ ಇರುವುದು ಅಗತ್ಯವಾಗಿದೆ ಅಥವಾ ಇದ್ದಾನೆ ಎಂಬುದಕ್ಕೆ ಸರಕಾರದ ಅಥವಾ ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್‌ನ, ನಿದೇಶವು ಅಂತಿಮವಾಗಿರತಕ್ಕದ್ದು.

(3) (1)ನೆಯ ಉಪಪ್ರಕರಣದ ಮೇರೆಗೆ ಸಕ್ರಿಯ ಕರ್ತವ್ಯದಲ್ಲಿ ನಿಯೋಜಿತನಾಗಿರುವ ಪೊಲೀಸು ಅಧಿಕಾರಿಯು, ಅಥವಾ ರಿಜರ್ವ್ ಪೊಲೀಸು ಅಧಿಕಾರಿಗಳ ಪೈಕಿ ಕೆಲವು ಮಂದಿ ಅಥವಾ ಅದರ ನಿಕಾಯವು ಹಾಗೆ ನಿಯೋಜಿಸಲಾಗಿರುವಾಗ, ಅಂತಹ ಕೆಲವು ಮಂದಿಯ ಅಥವಾ ನಿಕಾಯದ ಮೇಲ್ವಿಚಾರಣೆಯಲ್ಲಿರುವ ಅಧಿಕಾರಿಯು ಆ ಕರ್ತವ್ಯದ ದಕ್ಷತಾಪೂರ್ವಕ ನಿರ್ವಹಣೆಗೆ ಜವಾಬ್ದಾರನಾಗಿರತಕ್ಕದ್ದು ಮತ್ತು ಒಬ್ಬ ಅಥವಾ ಹೆಚ್ಚು ರಿಜರ್ವ್ ಪೊಲೀಸ್ ಅಧಿಕಾರಿಗಳು ಅಥವಾ ನಿಕಾಯವು ನಿಯೋಜಿತವಾಗಿರದಿದ್ದರೆ, ಆ ಕರ್ತವ್ಯವನ್ನು ನಿರ್ವಹಿಸಲು ಜವಾಬ್ದಾರರಾಗಿರದಿರುವ ಎಲ್ಲ ಪೊಲೀಸ್ ಅಧಿಕಾರಿಗಳು, ಸಾಧ್ಯವಾದಮಟ್ಟಿಗೆ, ಸದರಿ ರಿಜರ್ವ್ ಪೊಲೀಸ್ ಅಧಿಕಾರಿಗೆ ಅಥವಾ ರಿಜರ್ವ್ ಪೊಲೀಸ್ ಅಧಿಕಾರಿಗಳ ಅಥವಾ ಅದರ ನಿಕಾಯದ ಮೇಲ್ವಿಚಾರಣೆಯಲ್ಲಿರುವ ಅಧಿಕಾರಿಗಳಿಗೆ ಸಹಾಯವನ್ನೊದಗಿಸತಕ್ಕದ್ದು ಮತ್ತು ಅದರೊಂದಿಗೆ ಸಹಕಾರ ಮಾಡತಕ್ಕದ್ದು.

**152. ರಿಜರ್ವ್ ಪೊಲೀಸ್ ಅಧಿಕಾರಿಯು ಪೊಲೀಸ್ ಠಾಣೆಯ ಚಾರ್ಜಿನಲ್ಲಿರುವನೆಂದು ಭಾವಿಸಲ್ಪಡುವುದು:–** (1) 151ನೆಯ ಪ್ರಕರಣದ (1)ನೆಯ ಉಪಪ್ರಕರಣದ ಮೇರೆಗೆ ಯಾವುದೇ ಸ್ಥಳದಲ್ಲಿ ಸಕ್ರಿಯ ಕರ್ತವ್ಯದಲ್ಲಿ ನಿಯೋಜಿಸಲಾದಾಗ, "ನಾಯಿತ್"ನ ದರ್ಜೆಗೆ ಕಡಿಮೆಯಿಲ್ಲದ ಉಚ್ಚತಮ ದರ್ಜೆಯ ಹಾಜರಿರು ಜ್ಯೇಷ್ಠ ರಿಜರ್ವ್ ಪೊಲೀಸ್ ಅಧಿಕಾರಿಯು, ದಂಡಪ್ರಕ್ರಿಯಾ ಸಂಹಿತೆ, 1898ರ ಅಧ್ಯಾಯ 9ರ ಉದ್ದೇಶಕ್ಕಾಗಿ ಪೊಲೀಸ್ ಠಾಣೆಯ ಚಾರ್ಜಿನಲ್ಲಿರುವ ಅಧಿಕಾರಿಯೆಂದು ಭಾವಿಸಲ್ಪಡತಕ್ಕದ್ದು.

(2) ಭಾರತ ದಂಡನೀತಿ ಸಂಹಿತೆಯ 100 ಮತ್ತು 103ನೆಯ ಪ್ರಕರಣಗಳಲ್ಲಿ ಏನೇ ಇದ್ದರೂ, ಮೇಲೆ ಹೇಳಿದ ರೀತಿಯಲ್ಲಿ ನಿಯೋಜಿತನಾದ ರಿಜರ್ವ್ ಪೊಲೀಸ್ ಅಧಿಕಾರಿಯು ತನ್ನ ಮೇಲೆ ಅಥವಾ ಯಾವನೇ ರಿಜರ್ವ್ ಪೊಲೀಸ್ ಅಧಿಕಾರಿಯ ಮೇಲೆ ಹಲ್ಲೆ (ಆಕ್ರಮಣ) ಯಾಗುವ ಅಥವಾ ರಕ್ಷಿಸುವುದು ತನ್ನ ಕರ್ತವ್ಯವಾಗಿರುವ ಯಾವುದೇ ಸ್ವತ್ತಿಗೆ ಅಥವಾ ವ್ಯಕ್ತಿಗೆ ಅಥವಾ ಅಪಾಯ ಉಂಟಾಗುವ ಸಕಾರಣವಾದ ಹೆದರಿಕೆಯಿರುವಾಗ, ಯುಕ್ತವಾಗಿ ಅವಶ್ಯಕವಿರುವಂತಹ ಬಲವನ್ನು, ಅದು ತಪ್ಪು ಮಾಡುವವನ ಅಥವಾ ಹಲ್ಲೆಕಾರನ ಅಥವಾ ತಪ್ಪು ಮಾಡುವವನಿಗೆ ಅಥವಾ ಹಲ್ಲೆಕಾರನಿಗೆ ನೆರವು ನೀಡುವ ಇತರ ಯಾವೊಬ್ಬ ವ್ಯಕ್ತಿಗೆ ಮರಣವನ್ನುಂಟು ಮಾಡುವ ಸಂಭವವಿದ್ದಾಗ್ಯೂ ಉಪಯೋಗಿಸಬಹುದು.

**153. ಉಪಬಂಧಗಳಿಗೆ ವಿರೋಧವಾಗಿ ಕೊಟ್ಟ ರಾಜಿನಾಮೆ ಸಂಬಂಧದಲ್ಲಿ ಅಪರಾಧ :–** ಯಾವೊಬ್ಬ ರಿಜರ್ವ್ ಪೊಲೀಸ್ ಅಧಿಕಾರಿಯು, 147ನೆಯ ಪ್ರಕರಣವನ್ನು ಉಲ್ಲಂಘಿಸಿ ತನ್ನ ನೇಮಕಕ್ಕೆ ರಾಜೀನಾಮೆಯನ್ನು ಕೊಟ್ಟರೆ, ಅವನು ಒಂದು ವರುಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

**154. ನೇಮಕದ ಸರ್ಟಿಫಿಕೇಟು ಇತ್ಯಾದಿಗಳನ್ನು ಒಪ್ಪಿಸಲು ನಿರಾಕರಿಸುವ ಸಂಬಂಧದಲ್ಲಿಯ ಅಪರಾಧ :–** ಯಾವೊಬ್ಬ ರಿಜರ್ವ್ ಪೊಲೀಸ್ ಅಧಿಕಾರಿಯು, 149ನೆಯ ಪ್ರಕರಣದ (3)ನೆಯ ಉಪಪ್ರಕರಣಕ್ಕನುಸಾರವಾಗಿ ತನ್ನ ನೇಮಕದ ಸರ್ಟಿಫಿಕೇಟನ್ನು ಅಥವಾ ಇತರ ವಸ್ತುವನ್ನು ಒಪ್ಪಿಸಲು ಬುದ್ಧಿಪೂರ್ವಕವಾಗಿ ನಿರ್ಲಕ್ಷ್ಯಮಾಡಿದರೆ ಅಥವಾ ನಿರಾಕರಿಸಿದರೆ, ಅವನು ಮೂರು ತಿಂಗಳುಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

**155. ಅತಿ ಹೇಯವಾದ ಅಪರಾಧಗಳು :–** ಪ್ರತಿಯೊಬ್ಬ ರಿಜರ್ವ್ ಪೊಲೀಸು ಅಧಿಕಾರಿಯು –

(ಎ) ಯವುದೇ ಸೈನ್ಯ ದಂಗೆಯನ್ನು ಪ್ರಾರಂಭಿಸಿದರೆ, ಪ್ರೇರೇಪಿಸಿದರೆ, ಮಾಡಿಸಿದರೆ ಅಥವಾ ಮಾಡಲು ಒಳಸಂಚು ನಡೆಯಿಸಿದರೆ ಅಥವಾ ದಂಗೆಯಲ್ಲಿ ಸೇರಿದರೆ ಅಥವಾ ಯಾವುದೇ ದಂಗೆಯಲ್ಲಿ ಹಾಜರಿದ್ದು, ಅವಶ್ಯಕವಿರುವಷ್ಟು ಶಸ್ತ್ರಬಲವನ್ನು ಪ್ರಯೋಗಿಸಿ ಅದನ್ನು ಅಡಗಿಸಲು ತನಗೆ ಸಾಧ್ಯವಿದ್ದಷ್ಟು ಪ್ರಯತ್ನ ಮಾಡದಿದ್ದರೆ, ಅಥವಾ ಯಾವುದೇ ದಂಗೆ ಅಥವಾ ದಂಗೆ ಮಾಡುವ ಆಶಯ ಅಥವಾ ಒಳಸಂಚು ಅಥವಾ ರಾಜ್ಯದ ವಿರುದ್ಧವಾದ ಯಾವುದೇ ಒಳಸಂಚು, ಇವುಗಳ ಇರುವಿಕೆಯ ಬಗ್ಗೆ ತಿಳಿದೂ ಅಥವಾ ನಂಬಲು ಕಾರಣವಿದ್ದು, ವಿಳಂಬ ಮಾಡದೇ, ಅದರ ಬಗ್ಗೆ ಸುದ್ದಿಯನ್ನು ಸ್ಥಳದಲ್ಲಿ ಅಥವಾ ಅದರ ಸಮೀಪದಲ್ಲಿ ಹಾಜರಿದ್ದ ತನ್ನ ವರಿಷ್ಠ ಅಧಿಕಾರಿಗೆ ತಿಳಿಸದಿದ್ದರೆ; ಅಥವಾ

(ಬಿ) ತನ್ನ ವರಿಷ್ಠ ಅಧಿಕಾರಿಯ ಮೇಲೆ, ಅವನು ಅಂತಹವನೆಂದು ತಿಳಿದೂ ಅಥವಾ ನಂಬಲೂ ಕಾರಣವಿದ್ದೂ, ಅವನು ಕರ್ತವ್ಯದ ಮೇಲಿದ್ದಾಗಲಿ ಅಥವಾ ಇಲ್ಲದಿದ್ದಾಗಲಿ ಅಪರಾಧಿಕ ಬಲವನ್ನು ಪ್ರಯೋಗಿಸಿದರೆ ಅಥವಾ ಪ್ರಯೋಗಿಸಲು ಪ್ರಯತ್ನಪಟ್ಟರೆ ಅಥವಾ ಹಲ್ಲೆ ಮಾಡಿದರೆ; ಅಥವಾ

(ಸಿ) ತನ್ನ ಚಾರ್ಜಿಗೆ ಒಪ್ಪಿಸಲಾದ ಅಥವಾ ಸಂರಕ್ಷಿಸುವುದು ತನ್ನ ಕರ್ತವ್ಯವಾಗಿರುವ ಯಾವುದೇ ಸ್ಥಾನವನ್ನು, ಕಾವಲನ್ನು, ಕಟ್ಟಡವನ್ನು ಕೋಟೆಯನ್ನು ಅಥವಾ ಸ್ವತ್ತನ್ನು ಅಪಮಾನಕರವಾದ ರೀತಿಯಲ್ಲಿ ತೊರೆದರೆ ಅಥವಾ ಬಿಟ್ಟುಕೊಟ್ಟರೆ; ಅಥವಾ

(ಡಿ) ಯಾವ ಸಶಸ್ತ್ರ ವ್ಯಕ್ತಿಯ ವಿರುದ್ಧ ಕ್ರಮಕೈಕೊಳ್ಳುವುದು ತನ್ನ ಕರ್ತವ್ಯವಾಗಿರುವುದೋ ಅವನ ಸಮಕ್ಷ ತನ್ನ ಶಸ್ತ್ರಗಳನ್ನು ಅಥವಾ ಮದ್ದುಗುಂಡುಗಳನ್ನು ಅವಮಾನಕರವಾಗಿ ತ್ಯಜಿಸಿದರೆ ಅಥವಾ ಯಾವನೇ ಅಂಥ ಸಶಸ್ತ್ರ ವ್ಯಕ್ತಿಯ ವಿರುದ್ಧ ಕ್ರಮವನ್ನು ಕೈಕೊಳ್ಳುವುದರಿಂದ ಹಿಂದೆಗೆಯುವಂತೆ ಯಾವನೇ ರಿಜರ್ವ್ ಪೊಲೀಸ್ ಅಧಿಕಾರಿಯನ್ನು ಅಥವಾ ಪೊಲೀಸ್ ಅಧಿಕಾರಿಯನ್ನು ಪ್ರೇರೇಪಿಸುವ ಶಬ್ದಗಳನ್ನು ಅಥವಾ ಇತರ ರೀತಿಗಳನ್ನು ಉದ್ದೇಶ ಪೂರ್ವಕವಾಗಿ ಉಪಯೋಗಿಸಿದರೆ ಅಥವಾ ಯಾವನೇ ಅಂಥ ಸಶಸ್ತ್ರ ವ್ಯಕ್ತಿಯ ವಿರುದ್ಧ ಕ್ರಮವನ್ನು ಕೈಕೊಳ್ಳುವಲ್ಲಿ ಅಂಥ ಅಧಿಕಾರಿಯನ್ನು ನಿರುತ್ತೇಜನಗೊಳಿಸಿದರೆ ಅಥವಾ ಯಾವನೇ ಅಂಥ ಸಶಸ್ತ್ರ ವ್ಯಕ್ತಿಯ ಸಮಕ್ಷ ಅನ್ಯಥಾ ಹೇಡಿತನದ ಅಥವಾ ದುರ್ನಡತೆಯ ದೋಷಿಯಾದರೆ; ಅಥವಾ

(ಇ) ಸರಕಾರದ ವಿರುದ್ಧವಾಗಿರುವ ಯಾವನೇ ಸಶಸ್ತ್ರ ವ್ಯಕ್ತಿಯ ಅಥವಾ ಸರಕಾರದ ಅಥವಾ ಸಾರ್ವಜನಿಕ ಭದ್ರತೆಯ ವಿರುದ್ಧ ಒಳಸಂಚು ನಡೆಸುವ ಯಾವನೇ ವ್ಯಕ್ತಿಯ ಅಥವಾ ದಸ್ತಗಿರಿ ಮಾಡಲ್ಪಡಬೇಕಾದ ಯಾವನೇ ವ್ಯಕ್ತಿಯೊಡನೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪತ್ರ ವ್ಯವಹಾರ ಮಾಡಿದರೆ ಅಥವಾ ಅವನಿಗೆ ರಹಸ್ಯವನ್ನು ತಿಳಿಸಿದರೆ ಅಥವಾ ಸಹಾಯ ಮಾಡಿದರೆ ಅಥವಾ ಅವನನ್ನು ಬಿಡುಗಡೆ ಮಾಡಿದರೆ ಅಥವಾ ತನಗೆ ತಿಳಿದ ಇಂಥ ಯಾವುದೇ ಪತ್ರ ವ್ಯವಹಾರವನ್ನು ಅಥವಾ ತನಗೆ ತಿಳುವಳಿಕೆ ಬಂದ ಸಮಾಚಾರವನ್ನು ಹಾಜರಿದ್ದ ತನ್ನ ವರಿಷ್ಠ ಅಧಿಕಾರಿಗೆ ಕೂಡಲೆ ತಿಳುಹಿಸಲು ತಪ್ಪಿದರೆ; ಅಥವಾ

(ಎಫ್) ಮೇಲೆ ಹೇಳಿರುವಂಥ ಯಾವನೇ ವ್ಯಕ್ತಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ವಸ್ತ್ರಗಳನ್ನು, ಮದ್ದುಗುಂಡುಗಳನ್ನು ಅಥವಾ ಉಪಕರಣಗಳನ್ನು ಮಾರಾಟ ಮಾಡಿದರೆ, ಕೊಟ್ಟುಬಿಟ್ಟರೆ ಅಥವಾ ಅನ್ಯಥಾ ವಿಲೆ ಮಾಡಿದರೆ ಅಥವಾ ಅವುಗಳ ಮಾರಾಟ, ಕೊಳುಗೆ ಅಥವಾ ವಿಲೇವಾರಿಗೆ ಒಪ್ಪಿದರೆ ಅಥವಾ ಅದಕ್ಕೆ ಸಹಾಯ ಮಾಡಿದರೆ ಅಥವಾ ತಿಳಿದೂ ಅಂಥ ವ್ಯಕ್ತಿಗೆ ಆಶ್ರಯಕೊಟ್ಟರೆ ಅಥವಾ ಅವನನ್ನು ಸಂರಕ್ಷಿಸಿದರೆ; ಅಥವಾ

(ಜಿ) ಸಕ್ರಿಯ (ಪರಿಣಾಮಕಾರಿಯಾದ ಅಥವಾ) ಕರ್ತವ್ಯದಲ್ಲಿರುವಾಗ,–

(i) ತನ್ನ ವರಿಷ್ಠ ಅಧಿಕಾರಿಯ ವಿಧಿಸಮ್ಮತ ಸಮಾದೇಶವನ್ನು ಪಾಲಿಸಲು ತಪ್ಪಿದರೆ; ಅಥವಾ

(ii) ತನ್ನ ದಳವನ್ನು ಅಥವಾ ಸ್ಥಾನವನ್ನು ಬಿಟ್ಟು ಹೋದರೆ; ಅಥವಾ

(iii) ಪಹರೆಯವನಾಗಿದ್ದು ಅಥವಾ ಅನ್ಯಥಾ ಜಾಗರೂಕನಾಗಿರಲು ನೇಮಿಸಲ್ಪಟ್ಟಾಗ ತನ್ನ ಸ್ಥಾನದಲ್ಲಿ ನಿದ್ರೆ ಮಾಡಿದರೆ ಅಥವಾ ಕ್ರಮವಾಗಿ ಬಿಡುಗಡೆಯಾಗದೆ ಅಥವಾ ರಜೆ ಪಡೆಯದ ಅದನ್ನು ತ್ಯಜಿಸಿದರೆ; ಅಥವಾ

(iv) ಅನಧಿಕೃತವಾಗಿ ಯಾವುದೇ ರೀತಿಯ ಉದ್ದೇಶಕ್ಕಾಗಿ ತನ್ನ ಸಮಾದೇಶಕ ಅಧಿಕಾರಿಯನ್ನು ಬಿಟ್ಟುಹೋದರೆ; ಅಥವಾ

(v) ಯಾವ ವ್ಯಕ್ತಿಯು, ಸರ್ಕಾರದ ವಿರುದ್ಧ ಸಶಸ್ತ್ರ ದಂಗೆಯನ್ನೆಬ್ಬಿಸುವ ವ್ಯಕ್ತಿಯಾಗಿರುವನೆಂದು ತಾನು ನಂಬಲು ಏನು ಕಾರಣವಿಲ್ಲದ ವ್ಯಕ್ತಿಯ ಮತ್ತು ಯಾವನ ವಿರುದ್ಧ ಕ್ರಮವನ್ನು ಕೈಕೊಳ್ಳುವುದು ತನ್ನ ಕರ್ತವ್ಯವಾಗಿರುವಂಥ,

ವ್ಯಕ್ತಿಯ ಮೇಲೆ ಅಪರಾಧಿಕ ಬಲಪ್ರಯೋಗ ಮಾಡಿದರೆ ಅಥವಾ ಅವನೆ ಮೇಲೆ ಹಲ್ಲೆ ಮಾಡಿದರೆ ಅಥವಾ ಲೂಟಿ ಮಾಡುವ ಸಲುವಾಗಿ ಅಥವಾ ಯಾವುದೇ ವಿಧಿವಿರುದ್ಧವಾದ ಉದ್ದೇಶಕ್ಕಾಗಿ ಯಾವುದೇ ಮನೆಯಲ್ಲಿ ಅಥವಾ ಇತರ ಸ್ಥಳದಲ್ಲಿ ಅನಧಿಕೃತವಾಗಿ ನುಗ್ಗಿದರೆ ಅಥವಾ ಬುದ್ಧಿಪೂರ್ವಕವಾಗಿ ಮತ್ತು ಅನವಶ್ಯಕವಾಗಿ ಯಾವುದೇ ಸ್ವತ್ತನ್ನು ಲೂಟಿ ಮಾಡಿದರೆ, ನಾಶ ಮಾಡಿದರೆ ಅಥವಾ ಹಾನಿಯನ್ನುಂಟು ಮಾಡಿದರೆ; ಅಥವಾ

(vi) ಕರ್ತವ್ಯನಿರ್ವಹಣೆಯಲ್ಲಿರುವಾಗ ಅಥವಾ ಶಿಬಿರದಲ್ಲಿ, ಠಾಣ್ಯದಲ್ಲಿ ಅಥವಾ ಬೀಡಿನಲ್ಲಿ ಸುಳ್ಳು ಭಯಸೂಚನೆ ಮಾಡಿದರೆ ಅಥವಾ ಹರಡಿದರೆ, ಅವನು, ಅಪರಾಧವು ಸಿದ್ದವಾದ ಮೇಲೆ, ಹದಿನಾಲ್ಕು ವರುಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಬದ್ಧನಾಗತಕ್ಕದ್ದು.

**ವಿವರಣೆ :–** ರಿಜರ್ವ್ ಪೊಲೀಸು ಅಧಿಕಾರಿಯು, ತನ್ನ ಕರ್ತವ್ಯದ ಅಥವಾ ನೇಮಕದ ಸ್ಥಾನವನ್ನು, ತನ್ನ ವರಿಷ್ಠ ಅಧಿಕಾರಿಯ ಸ್ಥಾನವನ್ನು, ತನ್ನ ವರಿಷ್ಠ ಅಧಿಕಾರಿಯ ಅನುಮತಿಯಿಲ್ಲದೆ ಬಿಟ್ಟುಹೋದರೆ ದಳವನ್ನು ಬಿಟ್ಟುಹೋದನೆಂದು ಭಾವಿಸಲ್ಪಡತಕ್ಕದ್ದು ಮತ್ತು ಅವನಿಗೆ ವಹಿಸಿದ ಕರ್ತವ್ಯವನ್ನು ನೆರವೇರಿಸುವುದಕ್ಕೆ ಅವನ ವರಿಷ್ಠ ಅಧಿಕಾರಿಯಿಂದ ವಿಶೇಷವಾಗಿ ಆದೇಶ ಮಾಡಲ್ಪಟ್ಟ ಯಾವುದೇ ಪಹರೆ ಗಸ್ತು ನಿರ್ದಿಷ್ಟ ಸ್ಥಾನ, ಕಟ್ಟಡ, ವಾಹನ ಅಥವಾ ಇತರ ಸ್ಥಳ ಇವುಗಳನ್ನು ಅಥವಾ ಇವುಗಳಿಂದ ಬಿಟ್ಟುಹೋದರೆ ಅವನು ತನ್ನ ಸ್ಥಾನವನ್ನು ತ್ಯಜಿಸಿದಂತೆ ಭಾವಿಸಲ್ಪಡತಕ್ಕದ್ದು.

**156. ಕಡಿಮೆ ಹೇಯವಾದ ಅಪರಾಧಗಳು :–** ಯಾವೊಬ್ಬ ರಿಜರ್ವ್ ಪೊಲೀಸು ಅಧಿಕಾರಿಯು–

(ಎ) ಯಾವನೇ ಕಾವಲುಗಾರನ ಮೇಲೆ ಹಲ್ಲೆ ಮಾಡಿದರೆ ಅಥವಾ ಅವನ ಮೇಲೆ ಅಪರಾಧಿಕ ಬಲ ಪ್ರಯೋಗ ಮಾಡಿದರೆ ಅಥವಾ ಪ್ರಯತ್ನಿಸಿದರೆ; ಅಥವಾ

(ಬಿ) ಗಾರ್ಡ್, ಪಿಕೇಟು ಅಥವಾ ಪೆಟ್ರೋಲಿನ ಕಮಾಂಡಿನಲ್ಲಿದ್ದು ಕಾನೂನುಸಮ್ಮತವಾಗಿ ಅವನ ಪ್ರಭಾರಕ್ಕೆ (ಚಾರ್ಜಿಗೆ) ಒಪ್ಪಿಸಲ್ಪಟ್ಟ ಯಾವನೇ ಕೈದಿಯನ್ನು ಸ್ವೀಕರಿಸಲು ನಿರಾಕರಿಸಿದರೆ ಅಥವ ಕಮಾಂಡಿನಲ್ಲಿರಲಿ ಅಥವಾ ಅಂತಹ ಅಧಿಕಾರದಲ್ಲಿರಲಿ ಅಥವಾ ಇಲ್ಲದಿರಲಿ, ಯಾವನೇ ಕೈದಿಯನ್ನು ಅಥವಾ ವ್ಯಕ್ತಿಯನ್ನು ಸೂಕ್ತ ಅಧಿಕಾರವಿಲ್ಲದೆ ಬಿಡುಗಡೆ ಮಾಡಿದರೆ ಅಥವಾ ಯಾವನೇ ಕೈದಿಯು ಅಥವಾ ವ್ಯಕ್ತಿಯು ತಪ್ಪಿಸಿಕೊಂಡು ಓಡಿ ಹೋಗಲು ನಿರ್ಲಕ್ಷದಿಂದ (ಉದಾಸೀನತೆಯಿಂದ) ಅವಕಾಶ ಮಾಡಿಕೊಟ್ಟರೆ ಅಥವಾ

(ಸಿ) ಗಾರ್ಡು, ಪಿಕೇಟು, ಅಥವಾ ಪೆಟ್ರೋಲಿನಲ್ಲಿದ್ದು, ಸುವ್ಯವಸ್ಥೆ ಮತ್ತ ಶಿಸ್ತಿಗೆ ಪ್ರತಿಕೂಲಕರವಾಗಿರುವಂತಹ ಜೂಜಾಟದಲ್ಲಿ ಅಥವಾ ಇತರ ವರ್ತನೆಯಲ್ಲಿ ನಿರತರಾಗಲು, ಅಂಥ ಗಾರ್ಡು, ಪಿಕೇಟು ಅಥವಾ ಪೆಟ್ರೋಲಿಗೆ ಸೇರಿರುವ ಯಾವನೇ ವ್ಯಕ್ತಿಯನ್ನು ಅನುಮತಿಸಿದರೆ.

(ಡಿ) ದಸ್ತಗಿರಿಯಲ್ಲಿ ಅಥವಾ ಬಂಧನದಲ್ಲಿರುವಾಗ, ಕಾನೂನುಬದ್ಧ ಪ್ರಾಧಿಕಾರಿಯಿಂದ ಬಿಡುಗಡೆ ಮಾಡುವುದಕ್ಕೆ ಪೂರ್ವದಲ್ಲಿ ದಸ್ತಗಿರಿ ಅಥವಾ ಬಂಧನದಿಂದ ಹೊರಗೆ ಹೋದರೆ; ಅಥವಾ

(ಇ) ತನ್ನ ನಿರ್ವಹಣೆಯಲ್ಲಿ ತನ್ನ ವರಿಷ್ಠಾಧಿಕಾರಿಗೆ ಅತ್ಯಂತ, ಅವಿಧೇಯನಾದರೆ, ಅಥವಾ

(ಎಫ್) ಬೀಡಿನಲ್ಲಿ ಅಥವಾ ಕ್ಷೇತ್ರದಲ್ಲಿ ಆದೇಶಿತವಾದ ಯಾವುದೇ ತರಹದ ನಿರ್ಮಾಣದ ರಚನೆ ಅಥವಾ ನೆರವೇರಿಸುವಿಕೆಯಲ್ಲಿ ಮೇಲ್ವಿಚಾರಣೆ ಮಾಡಲು ಅಥವಾ ಸಹಾಯ ಮಾಡಲು ನಿರಾಕರಿಸಿದರೆ; ಅಥವಾ

(ಜಿ) ತಾನು ಯಾರಿಗೆ ವರಿಷ್ಠ ಅಧಿಕಾರಿಯಾಗಿರುವನೋ ಅಂತಹ ರಿಜರ್ವ್ ಪೊಲೀಸ್ ಅಧಿಕಾರಿಯ ಮೇಲೆ ಹಲ್ಲೆ ಮಾಡಿದರೆ ಅಥವಾ ಅನ್ಯಥಾ ಅವನನ್ನು ದುರುಪಯೋಗ ಮಾಡಿಕೊಂಡರೆ; ಅಥವಾ

(ಹೆಚ್) ಅವನ ಪದದ ನಿರ್ವಹಣೆಗಾಗಿ ಅವನಿಗೆ ಕೊಡಲಾಗಿದ್ದ ತನ್ನ ಶಸ್ತ್ರಗಳನ್ನು ಬಟ್ಟೆಗಳನ್ನು, ಸಾಧನಗಳನ್ನು ಉಪಕರಣಗಳನ್ನು, ಮದ್ದು ಗುಂಡುಗಳನ್ನು, ತೊಡುಗೆಗಳನ್ನು ಅಥವಾ ಇತರ ಅವಶ್ಯಕತೆಗಳನ್ನು ಅಥವಾ ತನಗೆ ಅಥವಾ ಇತರ ಯಾವನೇ ವ್ಯಕ್ತಿಗೆ ಒಪ್ಪಿಸಿಕೊಡಲಾದ ಅಂತಹ ಯಾವುದೇ ವಸ್ತುಗಳನ್ನು ಉದ್ದೇಶಪೂರ್ವಕವಾಗಿ ಅಥವಾ ನಿರ್ಲಕ್ಷ್ಯದಿಂದ ನಾಶಪಡಿಸಿದರೆ ಅಥವಾ ಕಳೆದುಕೊಂಡರೆ ಅಥವಾ ಮೋಸದಿಂದ ಅಥವಾ ಸೂಕ್ತ ಅಧಿಕಾರವಿಲ್ಲದೇ ಅದನ್ನು ವಿಲೆ ಮಾಡಿದರೆ; ಅಥವಾ

(ಐ) ಕೆಲಸ ತಪ್ಪಿಸಿಕೊಳ್ಳಲು ಖಾಯಿಲೆ ಎಂದು ನಟಿಸಿದರೆ, ರೋಗಿಯ ಸೋಗು ಹಾಕಿದರೆ, ಅಥವಾ ತನ್ನಲ್ಲಿ ರೋಗ ಅಥವಾ ದೌರ್ಬಲ್ಯವನ್ನು ಹುಟ್ಟಿಸಿಕೊಂಡರೆ, ಅಥವಾ ಬುದ್ಧಿಪೂರ್ವಕವಾಗಿ ತನ್ನ ಚಿಕಿತ್ಸೆಯನ್ನು ವಿಲಂಬಗೊಳಿಸಿದರೆ ಅಥವಾ ತನ್ನ ರೋಗ ಅಥವಾ ದೌರ್ಬಲ್ಯವನ್ನು ಹೆಚ್ಚಿಸಿಕೊಂಡರೆ; ಅಥವಾ

(ಜೆ) ತನ್ನನ್ನು ಅಥವಾ ಇತರ ಯಾವನೇ ವ್ಯಕ್ತಿಯನ್ನು ಕೆಲಸಕ್ಕೆ ಅನರ್ಹನನ್ನಾಗಿ ಮಾಡುವ ಉದ್ದೇಶದಿಂದ ಸ್ವಇಚ್ಛೆಯಿಂದ ತನಗೆ ಅಥವಾ ಇತರ ಯಾವೊಬ್ಬ ವ್ಯಕ್ತಿಗೆ ಘಾಯವನ್ನುಂಟು ಮಾಡಿದರೆ, ಅಥವಾ

(ಕೆ) ಸುಲಿಗೆ ಮಾಡಿದರೆ ಅಥವಾ ಕಾನೂನುಸಮ್ಮತದಿಂದ ಅಧಿಕಾರವಿಲ್ಲದೆ ಯಾವನೇ ವ್ಯಕ್ತಿಯಿಂದ ವಾಹನ ಸೌಕರ್ಯ, ಸಾಗಿಸುವ ಕೂಲಿ ಅಥವಾ ಆಹಾರ ಸಾಮಗ್ರಿಗಳನ್ನು ಬಲಾತ್ಕಾರದಿಂದ ಪಡೆದರೆ, ಸುಲಿಗೆ ಮಾಡಿದರೆ, ಅಥವಾ

(ಎಲ್) ಬುದ್ಧಿಪೂರ್ವಕವಾಗಿ ಅಥವಾ ನಿರ್ಲಕ್ಷದಿಂದ ಯಾವುದೇ ಪ್ರಾಣಿಯನ್ನು ಪೀಡಿಸಿದರೆ, ಕ್ಷತಿಗೊಳಿಸಿದರೆ, ಅಥವಾ ಅದಕ್ಕೆ ಮರಣ ಉಂಟಾಗುವಂತೆ ಮಾಡಿದರೆ ಅಥವಾ ಸಾರ್ವಜನಿಕ ಸೇವೆಯಲ್ಲಿ ಉಪಯೋಗಿಸಲಾಗುವ ಯಾವುದೇ ಪ್ರಾಣಿ ಅಥವಾ ವಾಹನಕ್ಕೆ ಹಾನಿಯನ್ನುಂಟು ಮಾಡಿದರೆ, ಕಳೆದುಕೊಂಡರೆ, ಅಥವಾ ಅದನ್ನು ಅಪಹರಿಸಿದರೆ, ಅವನು, ಅಪರಾಧ ಸಿದ್ದವಾದ ಮೇಲೆ, ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿತನಾತಕ್ಕದ್ದು.

**157. ಅಧಿಕಾರ ಪಡೆದಿದ್ದ ರಿಜರ್ವ್ ಪೊಲೀಸ್ ಅಧಿಕಾರಿಯು ತನ್ನ ಚಾರ್ಜಿನಲ್ಲಿರುವ ರಿಜರ್ವ್ ಪೊಲೀಸು ಅಧಿಕಾರಿಯಿಂದ ಈ ಅಧಿನಿಯಮದ ಮೇರೆಗೆ ಮಾಡಲಾದ ಅಪರಾಧಗಳ ಮಾಹಿತಿಯನ್ನು ಕೊಡುವುದು :–** ಯಾವುದೇ ಕಾವಲು, ಕಾವಲು ಪಡೆಯ ಪಿಕೇಟ್‍ನ ಪಾರ್ಟಿಯ ಗಸ್ತಿನ ತುಕಡಿಯ ಅಧಿಕಾರದಲ್ಲಿರುವ ರಿಜರ್ವ್ ಪೊಲೀಸು ಅಧಿಕಾರಿಯು, ಈ ಹಿಂದಿನ ಮೂರು ಪ್ರಕರಣಗಳ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ತನ್ನ ಅಧಿಕಾರಕ್ಕೊಳಪಟ್ಟಿರುವ ಯಾವನೇ ರಿಜರ್ವ್ ಪೊಲೀಸ್ ಅಧಿಕಾರಿಯಿಂದ ಅಥವಾ ಅವನ ಪರವಾಗಿ ಮಾಡಲಾಗಿದೆಯೆಂದು ಅಥವಾ ಮಾಡುವ ಉದ್ದೇಶ ಇದೆ ಎಂದು ತಿಳಿದೂ ತಾನು ವರಿಷ್ಠ ಅಧಿಕಾರಿಗೆ ಅಂತಹ ಅಪರಾಧದ ಮಾಡುವಿಕೆ ಅಥವಾ ಮಾಡುವ ಉದ್ದೇಶ ಬಗ್ಗೆ ಮಾಹಿತಿಯನ್ನು ಕೊಡಲು, ಬುದ್ಧಿ ಪೂರ್ವಕವಾಗಿ ಅಥವಾ ಯುಕ್ತಕಾರಣಗಳಿಲ್ಲದೆ, ಇದನ್ನು ರುಜುವಾತು ಪಡಿಸುವ ಭಾರವು ಅವನ ಮೇಲೆ ಇರತಕ್ಕದು, ತಪ್ಪಿದರೆ ಅವನು, ಅಪರಾಧ ಸಿದ್ಧವಾದ ಮೇಲೆ, ಆರು ತಿಂಗಳುಗಳಿಗೆ ವಿಸ್ತರಿಸಬಹುದಾದ ಕಠಿಣ ಕಾರಾವಾಸ ಅಥವಾ ಐದು ನೂರು ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಎರಡರಿಂದ ದಂಡಿತನಾಗತಕ್ಕದ್ದು.

**158. ಕಾರಾವಾಸದ ಸ್ಥಳ ಮತ್ತು ಕಾರಾವಾಸದ ಶಿಕ್ಷೆಯ ಮೇಲೆ ಪದಚ್ಯುತಿಗೆ ಹೊಣೆ :–** (1) ಈ ಅಧಿನಿಯಮದ ಮೇರೆಗೆ ಕಾರಾವಾಸದ ಶಿಕ್ಷೆ ವಿಧಿಸಲ್ಪಟ್ಟ ಪ್ರತಿಯೊಬ್ಬ ವ್ಯಕ್ತಿಯು, ರಾಜ್ಯ ರಿಜರ್ವ್ ಪೊಲೀಸ್ ದಳದಿಂದ ಪದಚ್ಯುತಿಗೊಳಿಸಲ್ಪಡಬಹುದು, ಮತ್ತು ಅವನ ವೇತನ ಭತ್ಯೆಗಳು ಮತ್ತು ಅವನಿಗೆ ಬರಬೇಕಾದ ಯಾವುದೇ ಇತರ ಹಣ ಮತ್ತು ಅವನು ಪಡೆದ ಯಾವುದೇ ಪದಕಗಳು ಮತ್ತು ವಿಶಿಷ್ಟ ಚಿಹ್ನೆಗಳೂ ಕೂಡಾ (ಡೆಕೋರೆಷನ್ಸ್) ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು.

(2) ಅಂತಹ ಪ್ರತಿಯೊಬ್ಬ ವ್ಯಕ್ತಿಯು, ಅವನು ಹಾಗೆ ಪದಚ್ಯುತಿಗೊಳಿಸಲ್ಪಟ್ಟರೆ, ನಿಯಮಿಸಲಾದ ಕಾರಾಗೃಹದಲ್ಲಿ ಕೈದು ಮಾಡಲ್ಪಡತಕ್ಕದ್ದು, ಆದರೆ, ಅವನು ರಾಜ್ಯ ರಿಜರ್ವ್ ಪೊಲೀಸಿನಿಂದ ಪದಚ್ಯುತಿಗೊಳಿಸಲ್ಪಡದಿದ್ದರೆ, ಅವನು, ನ್ಯಾಯಾಲಯವು ಹಾಗೆ ನಿರ್ದೇಶಿಸಿದರೆ, ಬೀಡುಕಾವಲಿನಲ್ಲಿ (ಕ್ವಾರ್ಟರ್ ಗಾರ್ಡಿನಲ್ಲಿ) ಅಥವಾ ನ್ಯಾಯಾಲಯವು ಸೂಕ್ತವೆಂದು ಪರ್ಯಾಲೋಚಿಸುವಂತಹ ಯಾವುದೇ ಇತರ ಸ್ಥಳದಲ್ಲಿ ಬಂಧನದಲ್ಲಿರಿಸಲ್ಪಡತಕ್ಕದ್ದು.

**159. ಲಘು ದಂಡನೆಗಳು :–** ಸಮಾದೇಶಕನು ಅಥವಾ ಸಮಾದೇಶಕನ ನಿಯಂತ್ರಣಕ್ಕೊಳಪಟ್ಟು ಸಹಾಯ ಸಮಾದೇಶಕನು, ಅಥವಾ ಅದೇ ನಿಯಂತ್ರಣಕ್ಕೊಳಪಟ್ಟು ತುಕಡಿಯ ಅಥವಾ ಔಟ್ ಪೋಸ್ಟಿನ, ಸ್ವತಂತ್ರ ಅಧಿಕಾರದಲ್ಲಿರುವ ಅಥವಾ ಸಮಾದೇಶಕನ ಅಥವಾ ಸಹಾಯಕ ಸಮಾದೇಶಕನ ಗೈರುಹಾಜರಿಯಲ್ಲಿ ಗ್ರುಪ್‌ಹೆಡ್ ಕ್ವಾರ್ಟರ್ಸಿನ ಹಂಗಾಮಿ ಅಧಿಕಾರದಲ್ಲಿರುವ ಜಮಾದಾರನ ದರ್ಜೆಗೆ ಕಡಿಮೆಯಲ್ಲದ ಅಧಿಕಾರಿಯು, ಬ್ಯಾಟಾಲಿಯನ್ ಹವಾಲ್ದಾರ ಮೇಜರನ ದರ್ಜೆಗೆ ಹೆಚ್ಚಿನವನಲ್ಲದ ಯಾವನೇ ರಿಜರ್ವ್ ಪೊಲೀಸ್ ಅಧಿಕಾರಿಗೆ ಅಥವಾ ತನ್ನ ಅಧಿಕಾರಕ್ಕೊಳಪಟ್ಟ, ಯಾವನೇ ಅನುಯಾಯಿಗೆ ಶಿಸ್ತುಭಂಗದ ಸಂಬಂಧದಲ್ಲಿ, ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರದೇ ಇದ್ದು ಅಥವಾ ಅದು ಸಂದರ್ಭಾನುಸಾರ ಸಮಾದೇಶಕ, ಸಹಾಯಕ ಉಪಬಂಧಿಸಿರದೇ ಇದ್ದು ಅಥವಾ ಅದು ಸಂದರ್ಭಾನುಸಾರ ಸಮಾದೇಶಕ, ಸಹಾಯಕ ಸಮಾದೇಶಕ ಅಥವಾ ಅಧಿಕಾರಿಯ ಅಭಿಪ್ರಾಯದಲ್ಲಿ ಕ್ರಿಮಿನಲ್ ನ್ಯಾಯಾಲಯದ ಮುಂದೆ ಪ್ರಾಸಿಕ್ಯೂಷನ್ನು ಮಾಡುವಷ್ಟು ಮಹತ್ವದ ಸ್ವರೂಪದ್ದಾಗಿರದ ಯಾವುದೇ ಅಪರಾಧವನ್ನು ಮಾಡಿರುವುದಕ್ಕಾಗಿ ಈ ಕೆಳಗಿನ ದಂಡನೆಗಳನ್ನು ವಿಧಿಸಬಹುದು, ಅವು ಯಾವುವೆಂದರೆ:–

(ಎ) ಸಮಾದೇಶಕನಿಂದ ಆದೇಶವು ಹೊರಡಿಸಲಾಗಿರುವಾಗ ಹದಿನಾಲ್ಕು ದಿನಗಳಿಗೆ ಮತ್ತು ಬೇರೆ ಯಾವನೇ ಅಧಿಕಾರಿಯಿಂದ ಆದೇಶವು ಹೊರಡಿಸಲಾಗಿರುವಾಗ ಏಳು ದಿನಗಳ ವರೆಗೆ ವಿಸ್ತರಿಸಬಹುದಾದ ದಂಡನೆಯ ಕವಾಯಿತು, ಹೆಚ್ಚಿನ ಪಹರೆ, ಶ್ರಮಗೆಲಸ ಅಥವಾ ಯಾವುದೇ ಕೆಲಸ.

(ಬಿ) ಸಮಾದೇಶಕನಿಂದ ಆದೇಶವು ಹೊರಡಿಸಲಾಗಿರುವಾಗ, ಒಂದು ತಿಂಗಳವರೆಗೆ ಮತ್ತು ಬೇರೆ ಅಧಿಕಾರಿಯಿಂದ ಆದೇಶವು ಹೊರಡಿಸಲಾಗಿರುವಾಗ, ಹತ್ತು ದಿನಗಳವರೆಗೆ ವಿಸ್ತರಿಸಬಹುದಾದ ವೇತನ ಮತ್ತು ಭತ್ಯೆಗಳ ಅಥವಾ ಅವನು ಯೋಗ್ಯವೆಂದು ಪರ್ಯಾಲೋಚಿಸುವಂತಹ ವೇತನ ಮತ್ತು ಭತ್ಯೆಗಳ ಭಾಗದ ಮುಟ್ಟುಗೋಲು.

(ಸಿ) ಒಂದು ತಿಂಗಳ ವೇತನಕ್ಕೆ ಹೆಚ್ಚಾಗದಷ್ಟು ಮೊಬಲಗಿನ ಜುಲ್ಮಾನೆ;

ಪರಂತು,–

(i) ಸಮಾದೇಶಕನು ಅಥವಾ ಸಹಾಯಕ ಸಮಾದೇಶಕನು ಅಥವಾ ಜಮಾದಾರನ ದರ್ಜೆಗಿಂತ ಕಡಿಮೆಯವನಲ್ಲದ ಇತರ ಅಧಿಕಾರಿಯು, ಈ ಉಪಪ್ರಕರಣದ ಮೇರೆಗಿನ ಯಾವುದೇ ಅಧಿಕಾರವನ್ನು ಸದರಿ ಶಿಸ್ತುಭಂಗ ಅಥವಾ ದುರ್ನಡತೆಯು ಸಂಭವಿಸಿದಾಗ ಮತ್ತು ಸದರಿ ಅಧಿಕಾರವನ್ನು ಚಲಾಯಿಸುವಾಗ ಈ ದಂಡನೆಗಳ ಪೈಕಿ ಯಾವುದೇ ದಂಡನೆಯನ್ನು ಯಾವ ವ್ಯಕ್ತಿಗೆ ವಿಧಿಸಲ್ಪಡಬೇಕಾಗಿದೆಯೋ ಅಂತಹ ವ್ಯಕ್ತಿಯು ಅಂತಹ ಅಧಿಕಾರಿಯ ಅಧಿಕಾರಕ್ಕೆ ಒಳಪಟ್ಟಿದ್ದ ಹೊರತು, ಚಲಾಯಿಸತಕ್ಕದ್ದಲ್ಲ; ಮತ್ತು

(ii) (1)ನೆಯ ಪರಂತುಕದ ಮೇರೆಗೆ ಅಧಿಕಾರಯನ್ನು ಚಲಾಯಿಸಲು ಒಬ್ಬರಿಗಿಂತ ಹೆಚ್ಚು ಜನ ಅಧಿಕಾರಿಗಳು ಸಕ್ಷಮರಾಗಿರುವಾಗ, ಅಂತಹ ಅಧಿಕಾರಿಗಳಲ್ಲಿ ಜ್ಯೇಷ್ಠತಮ ಅಧಿಕಾರಿಯು ಆ ಅಧಿಕಾರವನ್ನು ಚಲಾಯಿಸತಕ್ಕದ್ದು.

(2) (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ದಂಡನೆಗಳನ್ನು ಪ್ರತ್ಯೇಕವಾಗಿ ಅಥವಾ ಯಾವುದಾದರೊಡನೆ ಅಥವಾ ಅದಕ್ಕಿಂತ ಹೆಚ್ಚಿನವುಗಳೊಡನೆ ವಿಧಿಸಬಹುದು:

ಪರಂತು, ಜುಲ್ಮಾನೆಯು ವೇತನ ಅಥವಾ ಭತ್ಯೆಗಳ ಮುಟ್ಟುಗೋಲಿನೊಂದಿಗೆ ವಿಧಿಸಲ್ಪಡತಕ್ಕದ್ದಲ್ಲ.

(3) (4)ನೆಯ ಉಪಪ್ರಕರಣದಲ್ಲಿ ಉಪಬಂಧಿಸಲಾಗಿರುವಂಥ ಜುಲ್ಮಾನೆ ದಂಡನೆಯ ಆದೇಶವನ್ನು ಬಿಟ್ಟು, ಈ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶ ಅಥವಾ ದಂಡನೆಯ ಆದೇಶದ ಮೇಲೆ ಅಪೀಲಿಗೆ ಅವಕಾಶ ಇರತಕ್ಕದ್ದಲ್ಲ.

(4) ಜುಲ್ಮಾನೆಯನ್ನು ವಿಧಿಸುವ ಯಾವುದೇ ಆದೇಶದ ಮೇಲೆ ಸರಕಾರದ ಅಥವಾ ಸರಕಾರವು ಈ ಬಗ್ಗೆ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಉಲ್ಲೇಖಿಸಬಹುದಾದಂಥಹ ಅಧಿಕಾರಿಯ ಮುಂದೆ ಅಪೀಲು ಮಾಡಲು ಅವಕಾಶವಿರತಕ್ಕದ್ದಲ್ಲ.

(5) ಸಮಾದೇಶಕನು ಅಥವಾ ಸಹಾಯಕ ಸಮಾದೇಶಕನು ಅಥವಾ ಇತರ ಅಧಿಕಾರಿಯು (1)ನೆಯ ಉಪಪ್ರಕರಣದ ಮೇರೆಗೆ ಆದೇಶವನ್ನು ಮಾಡಿದಾಗ, ಅವನು ಈ ಉದ್ದೇಶಕ್ಕಾಗಿ ಇಟ್ಟುಕೊಂಡು ಬರಲಾಗುವ ಪುಸ್ತಕದಲ್ಲಿ, ತಪ್ಪಿನ ಸಂಕ್ಷಿಪ್ತ ವರ್ಣನೆ, ಸಾಕ್ಷಿಗಳ ಹೆಸರು, ತಪ್ಪಿತಸ್ಥನ ವಿವರಣೆ ಮತ್ತು ದಂಡನೆಯ ಆದೇಶವನ್ನು ನಮೂದಿಸತಕ್ಕದ್ದು ಮತ್ತು ಇಂತಹ ಪ್ರತಿಯೊಂದು ಆದೇಶವನ್ನು ನಮೂದಿಸತಕ್ಕದ್ದು ಮತ್ತು ಇಂತಹ ಪ್ರತಿಯೊಂದು ಆದೇಸಕ್ಕೆ ತನ್ನ ಸಹಿ ಮತ್ತು ತಾರೀಖನ್ನು ಹಾಕತಕ್ಕದ್ದು.

**160. ದಳದವರ ಕಾರ್ಯಗಳ ರಕ್ಷಣೆ :–** (1) ರಾಜ್ಯದ ರಿಜರ್ವ್ ಪೊಲೀಸ್ ದಳದ ಯಾವನೊಬ್ಬನು ಶಕ್ತ ಪ್ರಾಧಿಕಾರದ, ವಾರಂಟಿನ ಅಥವಾ ಆದೇಶದ ಅನುಸರಣೆಯಲ್ಲಿ ಮಾಡಿದ ಯಾವೊಂದು ಕಾರ್ಯದ ಬಗ್ಗೆ, ಅವನ ವಿರುದ್ಧವಾಗಿ ಹೂಡಲಾದ ಯಾವುದೇ ದಾವೆ ಅಥವಾ ವ್ಯವಹರಣೆಯಲ್ಲಿ ಅಂತಹ ಕಾರ್ಯವನ್ನು ಅಂತಹ ಅಧಿ ವಾರಂಟು ಅಥವಾ ಆದೇಶದ ಅಧಿಕಾರದ ಮೇರೆಗೆ ಮಾಡಲಾಗಿದ್ದಿತೆಂದು ಅವನು ವಾದಿಸುವುದು ವಿಧಿಸಮ್ಮತವಾಗಿರತಕ್ಕದ್ದು.

(2) ಅಂತಹ ಯಾವುದೇ ಮನವಿಯನ್ನು, ಕಾರ್ಯವನ್ನು ನಿರ್ದೇಶಿಸಿದ ವಾರಂಟು ಅಥವಾ ಆದೇಶದ ಹಾಜರಾತಿಯ ಮೂಲಕ ರುಜುವಾತು ಪಡಿಸಬಹುದು, ಮತ್ತು ಹಾಗೆ ರುಜುವಾತದಲ್ಲಿ, ಸದರಿ ದಳದವನನ್ನು, ಅಂತಹ ವಾರಂಟು ಅಥವಾ ಆದೇಶವನ್ನು ಹೊರಡಿಸಿದ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯಲ್ಲಿ ಯಾವುದೇ ದೋಷವಿದ್ದರೂ, ಅವನು ಮಾಡಿದ ಕಾರ್ಯದ ಸಂಬಂಧದಲ್ಲಿಯ ಹೊಣೆಯಿಂದ ಬಿಡುಗಡೆ ಮಾಡತಕ್ಕದ್ದು.

**161. ರಿಜರ್ವ್ ಪೊಲೀಸ್ ಅಧಿಕಾರಿಯು, ಪೊಲೀಸ್ ಅಧಿಕಾರಿಯಾಗಿರುವುದು :–** ಈ ಅಧ್ಯಾಯದಲ್ಲಿ ನಿರ್ದಿಷ್ಟವಾಗಿ ಉಪಬಂಧಿಸಿರುವುದನ್ನುಳಿದು, ಪ್ರತಿಯೊಬ್ಬ ರಿಜರ್ವ್ ಪೊಲೀಸ್ ಅಧಿಕಾರಿಯು, (2)ನೆಯ ಪ್ರಕರಣದಲ್ಲಿ ಪರಿಭಾಷಿಸಲಾಗಿರುವಂತೆ ಎಲ್ಲ ಉದ್ದೇಶಗಳಿಗಾಗಿ ಪೊಲೀಸ್ ಅಧಿಕಾರಿಯಾಗಿರುವನೆಂದು ಭಾವಿಸಲ್ಪಡತಕ್ಕದ್ದು, ಮತ್ತು ಈ ಅಧಿನಿಯಮದ ಉಪಬಂಧಗಳು, ಈ ಅಧ್ಯಾಯದ ಉಪಬಂಧಗಳಿಗೆ ಅಸಂಗವಾಗಿರುವಷ್ಟನ್ನು ಬಿಟ್ಟು ಅಂತಹ ಪ್ರತಿಯೊಬ್ಬ ರಿಜರ್ವ್ ಪೊಲೀಸ್ ಅಧಿಕಾರಿಗೂ ಅನ್ವಯಿಸತಕ್ಕದ್ದು.

## ಅಧ್ಯಾಯ – XI

### ಸಂಕೀರ್ಣ

**162. ಫೀಜು, ಬಹುಮಾನ, ಇತ್ಯಾದಿಗಳ ವಿಲೆ :–** ಈ ಅಧಿನಿಯಮದ ಮೇರೆಗೆ ಕೊಟ್ಟ ಎಲ್ಲ ಲೈಸೆನ್ಸುಗಳ ಅಥವಾ ಲಿಖಿತ ಅನುಮತಿಗಳ ಬಗ್ಗೆ ಸಂದಾಯ ಮಾಡಿದ ಎಲ್ಲ ಫೀಜುಗಳನ್ನು, ಮತ್ತು ಪೊಲೀಸ್ ಅಧಿಕಾರಿಗಳ ಮೂಲಕ ಪ್ರೊಸೆಸ್ಸುಗಳನ್ನು ಜಾರಿ ಮಾಡುವುದಕ್ಕಾಗಿ ಸಂದಾಯ ಮಾಡಿದ ಎಲ್ಲ ಮೊಬಲಗುಗಳನ್ನು, ಮತ್ತು ಮಾಹಿತಿಗಾರರಂತೆ ಪೊಲೀಸ್ ಅಧಿಕಾರಿಗಳಿಗೆ ಕಾನೂನು ಮೂಲಕ ಸಂದೇಯವಿರುವ ಎಲ್ಲ ಬಹುಮಾನಗಳು, ಮುಟ್ಟುಗೋಲಾದ ಹಣಗಳು ಮತ್ತು ದಂಡಗಳು ಅಥವಾ ಅವುಗಳ ಭಾಗಗಳು, ಅಂಥ ಯಾವುದೇ ಫೀಜುಗಳು ಅಥವಾ ಮೊಬಲಗುಗಳು ಜಾರಿಯಲ್ಲಿರುವ ಯಾವುದೇ ಅಧಿನಿಯಮದ ಉಪಬಂಬಧಗಳ ಮೇರೆಗೆ ಯಾವುದೇ ಸ್ಥಳೀಯ ಪ್ರಾಧಿಕಾರಿಗೆ ಸೇರಿದ್ದ ಮಟ್ಟಿಗೆ ಉಳಿದು, ಸರಕಾರಕ್ಕೆ ಜಮೆಯಾಗತಕ್ಕದ್ದು:

ಪರಂತು ಸರಕಾರದ ಮಂಜೂರಾತಿಯೊಂದಿಗೆ ಅಥವಾ ಆ ಬಗ್ಗೆ ಸರಕಾರದಿಂದ ಮಾಡಲಾದ ಯಾವುದೇ ನಿಯಮದ ಮೇರೆಗೆ ಅಂಥ ಬಹುಮಾನ, ಮುಟ್ಟುಗೋಲಾದ ಹಣ ಅಥವಾ ದಂಡವು ಪೂರ್ತಿಯಾಗಿ ಅಥವಾ ಅದರ ಯಾವುದೇ ಭಾಗವು, ವಿಶೇಷ ಸೇವೆಗಳಿಗಾಗಿ, ಯಾವೊಬ್ಬ ಪೊಲೀಸ್ ಅಧಿಕಾರಿಗೆ ಕೊಡಲ್ಪಡಬಹುದು ಅಥವಾ ಇಬ್ಬರು ಅಥವಾ ಅದಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗೆ ಹಂಚಲ್ಪಡಬಹುದು.

**163. ನಿಯಮಗಳನ್ನು ರಚಿಸಲು ಸರಕಾರದ ಅಧಿಕಾರ :–** (1) ಸರಕಾರವು ಮುಂಚಿತವಾಗಿ ಪ್ರಕಟಿಸಿದ ತರುವಾಯ ಸರಕಾರೀ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮುಂದೆ ಹೇಳಿದ ಅಧಿಕಾರದ ವ್ಯಾಪಕತೆಗೆ ಬಾಧೆಬಾರದಂತೆ, ಅಂಥ ನಿಯಮಗಳು ಈ ಕೆಳಗಿನ ಎಲ್ಲ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧಿಸಬಹುದು; ಎಂದರೆ :–

(i) (ಎ) ಗ್ರಾಮ ಪೊಲೀಸ್ ದಳದವರಲ್ಲಿ ಪರಸ್ಪರ ಮತ್ತು ಮಾಮೂಲಿ ಪೊಲೀಸ್‌ನೊಂದಿಗೆ ಸಂಬಂಧ;

(ಬಿ) ವಿವಿಧ ದರ್ಜೆಗಳ ಗ್ರಾಮ ಪೊಲೀಸ್ ಅಧಿಕಾರಿಗಳ ಅಧಿಕಾರ ಅಥವಾ ಕರ್ತವ್ಯಗಳು.

(ಸಿ) ಪೊಲೀಸ್ ಪಟೇಲ್ ಮತ್ತು ಇತರ ಗ್ರಾಮ ಪೊಲೀಸ್ ಅಧಿಕಾರಿಗಳ ನೇಮಕದ ರೀತಿ ಮತ್ತು ಅಂತಹ ನೇಮಕ ಮಾಡುವಲ್ಲಿ ಅನುಸರಿಸುವ ಪ್ರಕ್ರಿಯೆ ಈ ತರದ ಗ್ರಾಮ ಪೊಲೀಸಿನ ಸಂಘಟನೆ ಮತ್ತು ವಿನಿಯಮನ;

(ii) ರೂಢಿಗತವಾಗಿ ಅಪರಾಧ ಮಾಡುವ ಅಭ್ಯಾಸವುಳ್ಳವರೆಂದು ನಂಬಬಹುದಾದ ಗುಂಪುಗಳ ವರ್ಗಗಳ ಅಥವಾ ವ್ಯಕ್ತಿಗಳ ನೋಂದಣಿ ಮಾಡುವುದು. ಅವರ ಮೇಲೆ ಲಕ್ಷ್ಯವಿಡುವುದು ಮತ್ತು ನಿಯಂತ್ರಣವಿಡುವುದು ಇವುಗಳ ಸಲುವಾಗಿ; ಮತ್ತು

(ಎ) ಜಾಮೀನಿನ ಮೇಲೆ ಬಿಡುಗಡೆಯಾಗದಂತಹ ಅಪರಾಧಕ್ಕಾಗಿ ಅಭಿರಕ್ಷೆಯಲ್ಲಿರುವ; ಅಥವಾ

(ಬಿ) ನಿಶ್ಚಿತ ನಿವಾಸವಿಲ್ಲದ ಮತ್ತು ಅಪರಾಧ ಮಾಡುವ ಅಭ್ಯಾಸವುಳ್ಳವನೆಂದು ಶಂಕಿಸಲಾದ; ಅಥವಾ

(ಗ) ಸಾಮಾನ್ಯವಾಗಿ ಅಪರಾಧ ಮಾಡುವ ಅಭ್ಯಾಸವುಳ್ಳ ಗುಂಪಿನ ಅಥವಾ ವ್ಯಕ್ತಿಗಳ ವರ್ಗಕ್ಕೆ ಸೇರಿದವನಾದ ಯಾವನೇ ವ್ಯಕ್ತಿಯ ಬೆರಳ ಗುರುತುಗಳನ್ನು ದಾಖಲೆಗೊಳಿಸುವುದಕ್ಕಾಗಿ;

(iii) (ಎ) ರಾಜ್ಯ ರಿಜರ್ವ್ ಪೊಲೀಸ್ ದಳದ ಸಂಖ್ಯೆ, ವರ್ಗಗಳು ಮತ್ತು ದರ್ಜೆಗಳ ವಿನಿಯಮನ ಮತ್ತು ಅದರ ಆಡಳಿತ ಮತ್ತು ಪರಿಶೀಲನೆ;

(ಬಿ) ರಾಜ್ಯ ರಿಜರ್ವ್ ಪೊಲೀಸಿನ ಅಧೀನ ದರ್ಜೆಗಳ ನೌಕರಿಭರ್ತಿ, ಸಂಘಟನೆ, ವರ್ಗೀಕರಣ, ಮತ್ತು ಶಿಸ್ತು ಪಾಲನೆ; ಮತ್ತು

(ಸಿ) ಪೊಲೀಸಿನವರಿಗೆ ಒದಗಿಸಬೇಕಾದ ಶಸ್ತ್ರಗಳ ತೊಡುಗೆಗಳು, ಬಟ್ಟೆಗಳ ಮತ್ತು ಇತರ ಅವಶ್ಯಕತೆಗಳ ವರ್ಣನೆ ಮತ್ತು ಪ್ರಮಾಣ;

(ಡಿ) 75ನೆಯ ಪ್ರಕರಣದ ಮೇರೆಗೆ ವಶಕ್ಕೆ ತೆಗೆದುಕೊಂಡ ಸ್ವತ್ತಿನ ವಿಲೆ.

(3) (2)ನೆಯ ಉಪಪ್ರಕರಣದ (11) ಖಂಡದ ಮೇರೆಗಿನ ಯಾವುದೇ ನಿಯಮದ ಪ್ರತಿಯೊಂದು ಉಲ್ಲಂಘನೆಗಾಗಿ, ಅಪರಾಧಿಯು, ಅಪರಾಧ ಸಿದ್ಧವಾದ ಮೇಲೆ, ಎಂಟು ದಿನಗಳಿಗೆ ಮೀರದ ಕಾರಾವಾಸದಿಂದ ಅಥವಾ ಹತ್ತುರೂಪಾಯಿಗಳಿಗೆ ಮೀರದ ಜುಲ್ಮಾನೆಯಿಂದ, ದಂಡಿತನಾಗತಕ್ಕದ್ದು.

(4) ಸರಕಾರವು ಈ ಅಧಿನಿಯಮದ ಮೇರೆಗೆ ರಚಿಸಿದ ಎಲ್ಲ ನಿಯಮಗಳು, ಅವುಗಳನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಿರುವ ರಾಜ್ಯ ವಿಧಾನ ಸಭೆಯು ಅಧಿವೇಶನದಲ್ಲಿರುವಾಗ ಪ್ರತಿಯೊಂದು ಸದನದ ಮುಂದೆ ಒಟ್ಟು ಮೂವತ್ತು ದಿನಗಳವರೆಗೆ, ಇರಿಸತಕ್ಕದ್ದು ಮತ್ತು, ಅದನ್ನು ಹಾಗೆ ಇರಿಸಿದ, ಅಧಿವೇಶನವು ಅಥವಾ ಕೂಡಲೇ ಅನಂತರ ಬರುವ ಅಧಿವೇಶನವು ಮುಕ್ತಾಯಗೊಳ್ಳುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿಕೊಂಡರೆ, ಸಂದರ್ಭಾನುಸಾರ ಆ ನಿಯಮವು ಆ ತರುವಾಯ ಮಾರ್ಪಾಟಾದ ರೂಪದಲ್ಲಿಯೇ ಪರಿಣಾಮಕಾರಿಯಾಗತಕ್ಕದ್ದು ಅಥವಾ ಯಾವ ಪರಿಣಾಮಕಾರಿಯೂ ಆಗಿರತಕ್ಕದ್ದಲ್ಲ; ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಮಾಡಿದ ಯಾವುದರ ಮಾನ್ಯತೆಗೂ ಬಾಧಕವಾಗತಕ್ಕದ್ದಲ್ಲ.

(5) ಈ ಅಧಿನಿಯಮದ ಮೇರೆಗೆ ಮಾಡಿದ ಎಲ್ಲ ನಿಯಮಗಳು (4)ನೆಯ ಉಪ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಮಾರ್ಪಾಟಿಗೆ ಒಳಪಟ್ಟು, ಈ ಅಧಿನಿಯಮದಲ್ಲಿಯೇ ಅಧಿನಿಯಮಿಸಲಾದಂತೆ ಪರಿಣಾಮಕಾರಿಯಾಗತಕ್ಕದ್ದು.

**164. ಆದೇಶಗಳನ್ನು ಮತ್ತು ಅಧಿಸೂಚನೆಗಳನ್ನು ರುಜುವಾತುಪಡಿಸುವ ರೀತಿ** :– ಈ ಅಧಿನಿಯಮದ ಯಾವುದೇ ಉಪಬಂಧದ ಮೇರೆಗೆ ಸರಕಾರದಿಂದ ಅಥವಾ ಮ್ಯಾಜಿಸ್ಟ್ರೇಟನಿಂದ ಅಥವಾ ಅಧಿಕಾರಿಯಿಂದ ಪ್ರಕಟಿಸಲಾದ ಅಥವಾ ಹೊರಡಿಸಲಾದ ಯಾವುದೇ ಆದೇಶವು ಅಥವಾ ಅಧಿಸೂಚನೆಯು, ಮತ್ತು ಅದರ ಕ್ರಮಬದ್ಧವಾದ ಪ್ರಕಟಣೆಯು ಅಥವಾ ಹೊರಡಿಸುವಿಕೆಯು, ಸರಕಾರೀ ರಾಜ್ಯಪತ್ರದಲ್ಲಿರುವ ಅದರ ಒಂದು ಪ್ರತಿಯನ್ನು ಅಥವಾ ಈ ಅಧಿನಿಯಮದ ಅದಕ್ಕೆ ಅನ್ವಯಿಸುವ ಪ್ರಕರಣದ ಉಪಬಂಧಕ್ಕನುಸಾರವಾಗಿ ಪ್ರಕಟಿಸಿದ ಅಥವಾ ಹೊರಡಿಸಿದ ಮೂಲದ ನಿಜವಾದ ಪ್ರತಿಯಾಗಿದೆಯೆಂದು ಮ್ಯಾಜಿಸ್ಟ್ರೇಟನು ಅಥವಾ ಅಧಿಕಾರಿಯು

ಪ್ರಮಾಣೀಕರಿಸಿದ ಮತ್ತು ಸಹಿ ಹಾಕಿದ ಒಂದು ನಕಲನ್ನು ಹಾಜರುಪಡಿಸುವ ಮೂಲಕ ರುಜುವಾತುಗೊಳಿಸಲ್ಪಡಬಹುದು.

**165. ನಮೂನೆಯಲ್ಲಿಯ ತಪ್ಪು ಅಥವಾ ಪ್ರಕ್ರಿಯೆಯಲ್ಲಿನ ಅಕ್ರಮದಿಂದ ನಿಯಮಗಳು ಮತ್ತು ಆದೇಶಗಳು ಅಮಾನ್ಯವಾಗುವುದಿಲ್ಲ :–** ಈ ಅಧಿನಿಯಮದ ಮೇರೆಗೆ ಅಥವಾ ಈ ಅಧಿನಿಯಮದ ಪ್ರಕಾರ ಮಾಡಿದ ಯಾವುದೇ ನಿಯಮದ ಉಪಬಂಧದ ಮೇರೆಗೆ ಅಥವಾ ಬಹುಮಟ್ಟಿಗೆ ಅದಕ್ಕನುಗುಣವಾಗಿ ಮಾಡಿದ ಅಥವಾ ಪ್ರಕಟಿಸಿದ ಯಾವುದೇ ನಿಯಮ, ಆದೇಶ, ನಿದೇಶ, ನ್ಯಾಯ ನಿರ್ಣಯ, ವಿಚಾರಣೆ ಅಥವಾ ಅಧಿಸೂಚನೆಯು ಮತ್ತು ಮಾಡಿದ ಯಾವುದೇ ಕಾರ್ಯವು, ನಮೂನೆಯಲ್ಲಿನ ತಪ್ಪಿನಿಂದ ಅಥವಾ ಪ್ರಕ್ರಿಯೆಯಲ್ಲಿನ ಯಾವುದೇ ಆಕ್ರಮದಿಂದ, ಕಾನೂನುವಿರುದ್ಧವೆಂದು, ಶೂನ್ಯವೆಂದು, ಅಮಾನ್ಯವೆಂದು ಅಥವಾ ನ್ಯೂನವೆಂದು, ಭಾವಿಸಲ್ಪಡತಕ್ಕದ್ದಲ್ಲ.

**166. 54, 55, 56 ಅಥವಾ 63ನೆಯ ಪ್ರಕರಣಗಳ ಮೇರೆಗೆ ಕೊಟ್ಟ ನಿದೇಶಗಳ ಉಲ್ಲಂಘನೆಯ ಬಗೆಗಿನ ಪ್ರಾಸಿಕ್ಯೂಷನ್ನುಗಳಲ್ಲಿ ಪೂರ್ವಭಾವನೆ :–** ಆಯಾ ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, 54, 55, 56 ರ ಅಥವಾ 63ನೆಯ ಪ್ರಕರಣದ ಮೇರೆಗೆ ಕೊಟ್ಟ ನಿರ್ದೇಶದ ಉಲ್ಲಂಘನೆಗೆ ಸಂಬಂಧಿಸಿದ ಅಪರಾಧದ ಪ್ರಾಸಿಕ್ಯೂಷನ್ನಿನಲ್ಲಿ, ಆದೇಶದ ಅಧಿಕೃತ ನಕಲನ್ನು ಹಾಜರುಪಡಿಸುವಾಗ, ತದ್ವಿರುದ್ಧ ರುಜುವಾತಾಗುವವರೆಗೆ; ರುಜುವಾತುಪಡಿಸುವ ಭಾರವು ಆಪಾದಿತನ ಮೇಲಿದ್ದು ಹಾಗೆ

(ಎ) ಆ ಆದೇಶವು, ಅದನ್ನು ಮಾಡಲು ಈ ಅಧಿನಿಯಮದ ಮೇರೆಗೆ ಸಕ್ಷಮವಾಗಿದ್ದ ಅಧಿಕಾರಿಯಿಂದ ಅದು ಮಾಡಲ್ಪಟ್ಟಿದೆಯೆಂದು;

(ಬಿ) ಆದೇಶವನ್ನು, ಮಾಡುವ ಪ್ರಾಧಿಕಾರಿಗೆ ಅದನ್ನು ಮಾಡುವುದಕ್ಕೆ ಕಾರಣವು ಅಥವಾ ಉದ್ದೇಶವು ಇದ್ದಿತೆಂಬ ಬಗ್ಗೆ ಮತ್ತು ಅದನ್ನು ಮಾಡುವುದು ಅವಶ್ಯಕವಾಗಿದ್ದಿತೆಂಬ ಬಗ್ಗೆ ಮನದಟ್ಟಾಗಿದ್ದಿತೆಂದು;

(ಸಿ) ಮತ್ತು ಆದೇಶ ಅನ್ಯಥಾ ಮಾನ್ಯವಾಗಿದೆಯೆಂದು ಮತ್ತು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿದೆಯೆಂದು, ಭಾವಿಸತಕ್ಕದ್ದು.

**167. ಖಾಲಿಜಾಗಗಳ ಛಾರ್ಜು ಹೊಂದಿರುವ ಅಥವಾ ಅವುಗಳಿಗೆ ಬರುವ ಅಧಿಕಾರಿಗಳು ಅಧಿಕಾರಗಳನ್ನು ಚಲಾಯಿಸಲು ಸಕ್ಷಮವಾಗಿರುವುದು :–** ಕಮೀಷನರನ ಅಥವಾ ಪೊಲೀಸ್ ಅಧಿಕಾರಿಯ ಸ್ಥಾನವು ಖಾಲಿಯಿರುವ ಕಾರಣದಿಂದ ಯಾವನೇ ಅಧಿಕಾರಿಯು ಅಂಥ ಕಮೀಷನರನ ಅಥವಾ ಪೊಲೀಸ್ ಅಧಿಕಾರಿಯ ಹುದ್ದೆಯ ಚಾರ್ಜನ್ನು ಅಥವಾ ಅಡಿಷನಲ್ ಚಾರ್ಜನ್ನು ಹೊಂದಿರುವಾಗ ಅಥವಾ ತಾತ್ಕಾಲಿಕವಾಗಿ ಅಥವಾ ಖಾಯಂ ಆಗಿ ಅವನು ಪದಕ್ಕೆ ಬಂದಿರುವಾಗ, ಅಂಥ ಅಧಿಕಾರಿಯು, ಸಂದರ್ಭಾನುಸಾರ ಅಂಥ ಕಮೀಷನರನಿಗೆ ಅಥವಾ ಪೊಲೀಸ್ ಅಧಿಕಾರಿಗೆ ಈ ಅಧಿನಿಯಮದ ಮೂಲಕ ಕ್ರಮವಾಗಿ ಪ್ರದತ್ತವಾದ ಅಥವಾ ವಿಧಿಸಿದ ಎಲ್ಲ ಅಧಿಕಾರಗಳನ್ನು ಚಲಾಯಿಸಲು ಮತ್ತು ಎಲ್ಲ ಕರ್ತವ್ಯಗಳನ್ನು ನಿರ್ವಹಿಸಲು ಸಕ್ಷಮವಾಗಿರತಕ್ಕದ್ದು.

**168. ತಾನು ಹೊರಟು ಹೋಗಬೇಕೆಂದು ನಿರ್ದೇಶಿಸಲಾದ ಪ್ರದೇಶವನ್ನು ಪ್ರವೇಶಿಸುವ ಅಥವಾ ಅಲ್ಲಿಗೆ ವಾಪಸಾಗುವ ಅನುಮತಿ ಇರುವ ವ್ಯಕ್ತಿಯಿಂದ ಬರೆದು ಕೊಡಲಾದ ಮುಚ್ಚಳಿಕೆಯ ಮುಟ್ಟುಗೋಲು :–** 62ನೆಯ ಪ್ರಕರಣದ (1)ನೆಯ ಉಪಪ್ರಕರಣದ ಮೇರೆಗೆ ಅನುಮತಿ ಪಡೆದ ಯಾವನೇ ವ್ಯಕ್ತಿಯು ಸದರಿ ಉಪಪ್ರಕರಣದ ಮೇರೆಗೆ ವಿಧಿಸಲಾದ ಅಥವಾ ಸದರಿ ಪ್ರಕರಣದ (2)ನೆಯ ಉಪಪ್ರಕರಣದ ಮೇರೆಗೆ ಅವನಿಂದ ಬರೆದು

ಕೊಡಲಾದ ಮುಚ್ಚಳಿಕೆಯಲ್ಲಿನ ಯಾವುದೇ ಷರತ್ತನ್ನು ಪಾಲಿಸಲು ತಪ್ಪಿದರೆ, ಅವನು ಮುಚ್ಚಳಿಕೆಯು ಮುಟ್ಟುಗೋಲಾಗತಕ್ಕದ್ದು ಮತ್ತು ಅದರಿಂದ ಬದ್ಧನಾದ ಯಾವನೇ ವ್ಯಕ್ತಿಯು ತತ್ಸಂಬಂಧದ ದಂಡವನ್ನು ಸಂದಾಯ ಮಾಡತಕ್ಕದ್ದು ಅಥವಾ ಅಂತಹ ದಂಡವನ್ನು ಏಕೆ ಸಂದಾಯ ಮಾಡಬಾರದು ಎಂಬುದರ ಬಗ್ಗೆ ನ್ಯಾಯಾಲಯಕ್ಕೆ ಮನದಟ್ಟಾಗುವಂತಹ ಕಾರಣವನ್ನು ತೋರಿಸತಕ್ಕದ್ದು.

**169. ಮ್ಯಾಜಿಸ್ಟ್ರೇಟ್, ಪೊಲೀಸ್ ಅಧಿಕಾರಿ ಅಥವಾ ಸರಕಾರಿ ನೌಕರನ ರಕ್ಷಣೆ :–** (1) ಯಾವ ಮ್ಯಾಜಿಸ್ಟ್ರೇಟನು ಅಥವಾ ಪೊಲೀಸು ಅಧಿಕಾರಿಯು ಈ ಅಧಿನಿಯಮದ ಅಥವಾ ಆಯಾ ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಯಾವುದೇ ಉಪಬಂಧದ ಅಥವಾ ಅದರ ಮೇರೆಗೆ ಮಾಡಿದ ಅಥವಾ ಕೊಟ್ಟ ಯಾವುದೇ ನಿಯಮ, ಆದೇಶ ಅಥವಾ ನಿರ್ದೇಶನದ ಮೂಲಕ ಅವನಿಗೆ ಪ್ರದತ್ತವಾದ ಯಾವುದೇ ಅಧಿಕಾರದ ಮೇಲೆ ವಿಧಿಸಿದ ಯಾವುದೇ ಕರ್ತವ್ಯದ ಅನುಸರಣೆಯಲ್ಲಿ ಅಥವಾ ಉದ್ದೇಶದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಯಾವುದೇ ಕಾರ್ಯದಿಂದಾಗಿ ಯಾವುದೇ ದಂಡಕ್ಕೆ ಅಥವಾ ನಷ್ಟಭರ್ತಿಯ ಸಂದಾಯಕ್ಕೆ ಹೊಣೆಯಾಗತಕ್ಕದ್ದಲ್ಲ.

(2) ಕ್ರಮಬದ್ಧವಾಗಿ ಅಧಿಕೃತವಾದ ಅಥವಾ ನೇಮಿತವಾದ ಯಾವ ಸರಕಾರೀ ನೌಕರನು ಅಥವಾ ವ್ಯಕ್ತಿಯು ಅಧಿಕಾರವಿದೆಯೆಂದು ತೋರಿ ಸರಕಾರದಿಂದ ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಅಥವಾ ಕೊಟ್ಟ ಯಾವುದೇ ನಿಯಮ ಅಥವಾ ಆದೇಶ ಅಥವಾ ನಿರ್ದೇಶದ ಮೇರೆಗೆ ಸಂಬಂಧದಲ್ಲಿ ಶಕ್ತಗೊಳಿಸಲಾದ ವ್ಯಕ್ತಿಯಿಂದ ಹೊರಡಿಸಲಾದ ಯಾವುದೇ ಅಂತಹ ಆದೇಶ ಅಥವಾ ನಿರ್ದೇಶವನ್ನು ಸದ್ಭಾವನೆಯಿಂದ ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ದಂಡ ಅಥವಾ ಯಾವುದೇ ನಷ್ಟಭರ್ತಿಯ ಸಂದಾಯಕ್ಕೆ ಹೊಣೆಯಾಗತಕ್ಕದ್ದಲ್ಲ.

**170. ಮೇಲೆ ಹೇಳಿದಂತೆ ಕರ್ತವ್ಯದ ನೆಪದಲ್ಲಿ ಮಾಡಿದ ಕಾರ್ಯಗಳ ಬಗ್ಗೆ ಸರಕಾರದ ಮಂಜೂರಾತಿ ಇಲ್ಲದೇ ದಾವೆಗಳನ್ನು ಅಥವಾ ಪ್ರಾಸಿಕ್ಯೂಷನ್‌ಗಳನ್ನು ವಿಚಾರಣೆಗೆ ತೆಗೆದುಕೊಳ್ಳತಕ್ಕದ್ದಲ್ಲ :–** (1) ಮೇಲೆ ಹೇಳಿದ ಯಾವುದೇ ಕರ್ತವ್ಯದ ಅಥವಾ ಅಧಿಕಾರದ ನೆಪದಲ್ಲಿ ಅಥವಾ ಅದನ್ನು ಮೀರಿ ಮಾಡಿದ ಯಾವುದೇ ಕಾರ್ಯದ ಮೂಲಕ ಕಮೀಷನರು, ಮ್ಯಾಜಿಸ್ಟ್ರೇಟು, ಪೊಲೀಸು ಅಧಿಕಾರಿಯು, ಅಥವಾ ರಿಜರ್ವ್ ಪೊಲೀಸ್ ಅಧಿಕಾರಿಯು, ಅಥವಾ ಇತರ ವ್ಯಕ್ತಿಯು ಅಪರಾಧ ಮಾಡಿರುವನೆಂದು ಅಪಾದಿಸಲ್ಪಟ್ಟ ಅಥವಾ ಇಂಥ ಕಮೀಷನರು, ಮ್ಯಾಜಿಸ್ಟ್ರೇಟು, ಪೊಲೀಸ್ ಅಧಿಕಾರಿಯು, ರಿಜರ್ವ್ ಪೊಲೀಸ್ ಅಧಿಕಾರಿಯು ಅಥವಾ ಇತರ ವ್ಯಕ್ತಿಯು, ಅಪಕೃತ್ಯ ಮಾಡಿದ್ದಾನೆಂದು ಅಪಾದಿಲ್ಪಟ್ಟ ಯಾವುದೇ ಸಂದರ್ಭದಲ್ಲಿ ಅಥವಾ ಆ ಅಪರಾಧವನ್ನು ಅಥವಾ ಅಪಕೃತ್ಯವನ್ನು ಮಾಡಿದ್ದರೆ ಅದು ಮೇಲೆ ಹೇಳಿದಂತಹ ಸ್ವರೂಪದ್ದಾಗಿದ್ದಿತೆಂದು ನ್ಯಾಯಾಲಯಕ್ಕೆ ತೋರಿದ ಸಂದರ್ಭದಲ್ಲಿ, ಪ್ರಾಸಿಕ್ಯೂಷನ್ ಅಥವಾ ದಾವೆಯು ಸರಕಾರದ ಮುಂಚಿತ ಮಂಜೂರಾತಿ ಇದ್ದ ಹೊರತು, ವಿಚಾರಣೆಗೆ ತೆಗೆದುಕೊಳ್ಳಲ್ಪಡತಕ್ಕದ್ದಲ್ಲ.

(2) ಮೇಲೆ ಹೇಳಿದಂತಹ ಯಾವುದೇ ಅಪಕೃತ್ಯದ ಕಾರಣದಿಂದ ಉದ್ದೇಶಿತ ದಾವೆಯ ಸಂದರ್ಭದಲ್ಲಿ, ದಾವೆ ಹೂಡಬಯಸುವ ವ್ಯಕ್ತಿಯು, ಅಪಕೃತ್ಯದ ಆಪಾದಿತನಿಗೆ, ಫಿರ್ಯಾದು ಮಾಡಿದ ಅಪಕೃತ್ಯದ ಸಾಕಷ್ಟು ವರ್ಣನೆಯೊಂದಿಗೆ ಉದ್ದೇಶಿತ ದಾವೆಯ ಬಗ್ಗೆ ಕನಿಷ್ಠ ಒಂದು ತಿಂಗಳ ನೋಟೀಸು ಕೊಡಲು ಬದ್ಧನಾಗಿರತಕ್ಕದ್ದು ಹಾಗೆ ಮಾಡಲು ತಪ್ಪಿದರೆ ಅಂಥ ದಾವೆಯು, ವಜಾ ಮಾಡಲ್ಪಡತಕ್ಕದ್ದು.

(3) ವಾದ ಪತ್ರದಲ್ಲಿ ಹೇಳಿದಂತಹ ನೋಟೀಸನ್ನು ಪ್ರತಿವಾದಿಗೆ ಜಾರಿ ಮಾಡಲಾಗಿದೆ ಎಂಬುದನ್ನು ಮತ್ತು ಅಂತಹ ಜಾರಿಯ ತಾರೀಖನ್ನು ನಮೂದಿಸತಕ್ಕದ್ದು ಮತ್ತು ಪ್ರತಿವಾದಿಯು ಯಾವುದೇ ಪರಿಹಾರವನ್ನು ಸಲ್ಲಿಸಿದ್ದನೆಂಬುದನ್ನು ಮತ್ತು ಹಾಗೆ ಸಲ್ಲಿಸಿದ್ದರೆ, ಅದು ಎಷ್ಟು ಎಂಬುದನ್ನು ಅದರಲ್ಲಿ ತಿಳಿಸತಕ್ಕದ್ದು. ಸದರೀ ನೋಟೀಸಿನ ಪ್ರತಿಯನ್ನು ಹಿಂಬರಹದೊಂದಿಗೆ ಅಥವಾ ಅದು ಜಾರಿಯಾದ ಕಾಲ ಮತ್ತು ರೀತಿಯ ಬಗ್ಗೆ ವಾದಿಯ ಘೋಷಣೆಯೊಂದಿಗೆ, ವಾದ ಪತ್ರಕ್ಕೆ ಅನುಬಂಧಿಸತಕ್ಕದ್ದು.

**171. ಲೈಸೆನ್ಸು ಮತ್ತು ಅನುಮತಿಗಳಲ್ಲಿ ಷರತ್ತು, ಇತ್ಯಾದಿಗಳನ್ನು ಉಲ್ಲೇಖಿಸತಕ್ಕದ್ದು ಮತ್ತು ಸಹಿ ಹಾಕಲ್ಪಡತಕ್ಕದ್ದು :–** (1) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಕೊಡಲಾದ ಯಾವುದೇ ಲೈಸೆನ್ಸು ಅಥವಾ ಲಿಖಿತ ಅನುಮತಿಯಲ್ಲಿ, ಅದನ್ನು ಯಾವ ಅವಧಿಗಾಗಿ ಮತ್ತು ಸ್ಥಳಕ್ಕಾಗಿ, ಮತ್ತು ಯಾವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಕೊಡಲಾಗಿದೆ ಎಂಬುದನ್ನು ಉಲ್ಲೇಖಿಸತಕ್ಕದ್ದು. ಮತ್ತು ಅದು ಸಕ್ಷಮ ಪ್ರಾಧಿಕಾರಿಯ ಸಹಿಯೊಂದಿಗೆ ಕೊಡಲ್ಪಡತಕ್ಕದ್ದು ಮತ್ತು ಅದಕ್ಕಾಗಿ ಈ ಅಧಿನಿಯಮದ ಮೇರೆಗಿನ ಯಾವುದೇ ನಿಯಮದಲ್ಲಿ ಈ ಬಗ್ಗೆ ನಿಯಮಿಸಲಾದ ಫೀಜನ್ನು ವಿಧಿಸತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ಕೊಡಲಾದ ಯಾವುದೇ ಲೈಸೆನ್ಸು ಅಥವಾ ಲಿಖಿತ ಅನುಮತಿಯ ಅದರ ಯಾವುದೇ ಷರತ್ತುಗಳು ಅಥವಾ ನಿರ್ಬಂಧಗಳು ಅದನ್ನು ಪಡೆದ ವ್ಯಕ್ತಿಯಿಂದ ಉಲ್ಲಂಘಿಸಲ್ಪಟ್ಟರೆ ಅಥವಾ ತಪ್ಪಿಸಿಕೊಳ್ಳಲ್ಪಟ್ಟರೆ ಅಂತಹ ವ್ಯಕ್ತಿಯು ಅಂತಹ ಲೈಸೆನ್ಸು ಅಥವಾ ಲಿಖಿತ ಅನುಮತಿಗೆ ಸಂಬಂಧಿಸಿದ ಯಾವುದೇ ವಿಷಯದಲ್ಲಿ ಯಾವುದೇ ಅಪರಾಧದ ಸಿದ್ದದೋಷಿಯಾದರೆ, ಸಕ್ಷಮ ಪ್ರಾಧಿಕಾರಿಯು, ಅಂತಹ ಲೈಸೆನ್ಸನ್ನು ಅಥವಾ ಲಿಖಿತ ಅನುಮತಿಯನ್ನು ಯಾವುದೇ ಕಾಲಕ್ಕೆ ನಿಲಂಬ ಮಾಡಬಹುದು ಅಥವಾ ರದ್ದುಮಾಡಬಹುದು.

(3) ಅಂತಹ ಯಾವುದೇ ಲೈಸೆನ್ಸು ಅಥವಾ ಲಿಖಿತ ಅನುಮತಿಯನ್ನು ನಿಲಂಬನಗೊಳಿಸಿದಾಗ ಅಥವಾ ರದ್ದುಪಡಿಸಿದಾಗ ಅಥವಾ ಅದನ್ನು ಯಾವ ಅವಧಿಗಾಗಿ ಕೊಡಲಾಗಿದ್ದಿತೋ ಆ ಅವಧಿಯು ಗತಿಸಿ ಹೋದಾಗ, ಅದನ್ನು ಯಾವ ವ್ಯಕ್ತಿಗೆ ಕೊಡಲಾಗಿದ್ದಿತೋ ಅವನು, ಈ ಅಧಿನಿಯಮದ ಎಲ್ಲ ಉದ್ದೇಶಗಳಿಗಾಗಿ, ಸಂದರ್ಭಾನುಸಾರ ನಿಲಂಬನಗೊಳಿಸಿರುವ ಅಥವಾ ರದ್ದುಗೊಳಿಸಿರುವ ಆದೇಶವು ತೆಗೆದು ಹಾಕಲ್ಪಡುವವರೆಗೆ ಅಥವಾ ಅದು ನವೀಕರಿಸಲ್ಪಡುವವರೆಗೆ ಅಂತಹ ಲೈಸೆನ್ಸು ಅಥವಾ ಲಿಖಿತ ಅನುಮತಿ ಇಲ್ಲದವನಾಗಿರುವನೆಂದು ಭಾವಿಸಲ್ಪಡತಕ್ಕದ್ದು.

(4) ಅಂತಹ ಯಾವುದೇ ಲೈಸೆನ್ಸು ಅಥವಾ ಲಿಖಿತ ಅನುಮತಿಯನ್ನು ಪಡೆದಿರುವ ಪ್ರತಿಯೊಬ್ಬ ವ್ಯಕ್ತಿಯು, ಅದು ಜಾರಿಯಲ್ಲಿರುವಾಗ, ಎಲ್ಲ ಯುಕ್ತ ಕಾಲಗಳಲ್ಲಿ ಪೊಲೀಸು ಅಧಿಕಾರಿಯು ಅಗತ್ಯಪಡಿಸಿದರೆ, ಅದನ್ನು ಹಾಜುರು ಪಡಿಸತಕ್ಕದ್ದು.

**ವಿವರಣೆ :–** ಈ ಪ್ರಕರಣದ ಉದ್ದೇಕ್ಕಾಗಿ ಅಂತಹ ಲೈಸೆನ್ಸು ಅಥವಾ ಲಿಖಿತ ಅನುಮತಿಯನ್ನು ಪಡೆದ ವ್ಯಕ್ತಿಯು ಸೇವಕನಿಂದ ಅಥವಾ ಅವನ ಪರವಾಗಿ ವರ್ತಿಸುವ ಇತರ ಅಭಿಕರ್ತನಿಂದ ಮಾಡಲಾದಂತಹ ಯಾವುದೇ ಅಂತಹ ಉಲ್ಲಂಘನೆಯು ಅಥವಾ ತಪ್ಪಿಸಿಕೊಳ್ಳುವರೆಂದು ಅಥವಾ ದೋಷಸಿದ್ದಿಯು ಅಂತಹ ಲೈಸೆನ್ಸು ಅಥವಾ ಅನುಮತಿಯನ್ನು ಪಡೆದಿರುವ ವ್ಯಕ್ತಿಯ ಉಲ್ಲಂಘನೆ, ಅಥವಾ ತಪ್ಪಿಸಿಕೊಳ್ಳುವ ಎಂದು ಅಥವಾ ಸಂದರ್ಭಾನುಸಾರ ದೋಷಿಸಿದ್ದಿ ಎಂದು ಭಾವಿಸಲ್ಪಡತಕ್ಕದ್ದು.

**172. ಸಾರ್ವಜನಿಕ ನೋಟೀಸುಗಳಲ್ಲಿ ಕೊಡುವ ಬಗ್ಗೆ :–** ಈ ಅಧಿನಿಯಮದ ಉಪಬಂಧಗಳ ಮೇರೆಗೆ ಕೊಡಬೇಕಾದ ಯಾವುದೇ ಸಾರ್ವಜನಿಕ ನೋಟೀಸು ಸಕ್ಷಮ ಪ್ರಾಧಿಕಾರಿಯ ಸಹಿಯೊಂದಿಗೆ ಲಿಖಿತದಲ್ಲಿರತಕ್ಕದ್ದು ಮತ್ತು ಅದು ಸಂಬಂಧಿಸಿರುವ ಸ್ಥಳದಲ್ಲಿ ಅದರ ಪ್ರತಿಗಳನ್ನು ಸಾರ್ವಜನಿಕರಿಗೆ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸುವುದರ ಮೂಲಕ ಅಥವಾ ಅದನ್ನು ಡಂಗುರ ಹೊಡೆಯಿಸುವುದರಿಂದ ಉದ್ಘೋಷಿಸುವ ಮೂಲಕ ಅಥವಾ ಸದರಿ ಪ್ರಾಧಿಕಾರಿಯು ಉಚಿತವೆಂದು ಭಾವಿಸುವಂತಹ ಸ್ಥಾನಿಕ ವೃತ್ತ ಪತ್ರಿಕೆಗಳಲ್ಲಿ ಜಾಹೀರಾತುಪಡಿಸುವುದರ ಮೂಲಕ ಅಥವಾ ಇವುಗಳ ಪೈಕಿ ಎಂದು ಅಥವಾ ಹೆಚ್ಚಿನ ಸಾಧನಗಳ ಮೂಲಕ ಅಥವಾ ಅದು ಸೂಕ್ತವೆಂದು ಯೋಚಿಸುವಂತಹ ಬೇರೆ ಯಾವುದೇ ಸಾಧನಗಳ ಮೂಲಕ ಪ್ರಕಟಿಸತಕ್ಕದ್ದು.

**173. ಸಕ್ಷಮ ಪ್ರಾಧಿಕಾರಿಯ ಸಮ್ಮತಿ ಇತ್ಯಾದಿಗಳನ್ನು ಅವರ ಸಹಿಯೊಂದಿಗಿರುವ ಲಿಖಿತದಿಂದ ರುಜುವಾತು ಪಡಿಸಬಹುದು :–** ಈ ಅಧಿನಿಯಮದ ಮೇರೆಗೆ ಯಾವುದೇ ಕೆಲಸವನ್ನು ಮಾಡುವುದು ಅಥವಾ ಮಾಡದೆ ಇರುವುದು ಅಥವಾ ಯಾವುದೇ ಕೆಲಸದ ವಿಧಿಸಮ್ಮತಿಯು ಒಬ್ಬ ಸಕ್ಷಮ ಪ್ರಾಧಿಕಾರಿಯ ಸಮ್ಮತಿ, ಅನುಮೋದನೆ, ಘೋಷಣೆ, ಅಭಿಪ್ರಾಯ ಅಥವಾ ಸಂತೃಪ್ತಿಯನ್ನು ಅವಲಂಬಿಸಿರುವಾಗಲೆಲ್ಲ, ಅಂತಹ ಸಮ್ಮತಿ, ಅನುಮೋದನೆ, ಘೋಷಣೆ, ಅಭಿಪ್ರಾಯ ಅಥವಾ ಸಂತೃಪ್ತಿಯನ್ನು ತಿಳಿಸುವ ಅಥವ ನಮೂದಿಸುವ ಸಕ್ಷಮ ಪ್ರಾದಿಕಾರಿಯ ಸಹಿ ಇರುವ ಲಿಖಿತ ದಸ್ತಾವೇಜು ಆ ಬಗ್ಗೆ ಸಾಕಷ್ಟು ಸಾಕ್ಷ್ಯವಾಗಿರತಕ್ಕದ್ದು.

**174. ನೋಟೀಸು ಇತ್ಯಾದಿಗಳ ಮೇಲೆ ಮುದ್ರೆಯೊತ್ತುವುದರ ಮೂಲಕ ಸಹಿ ಮಾಡಬಹುದು :–** ಈ ಅಧಿನಿಯಮದಿಂದ ಅಥವಾ ಅದರ ಮೇರೆಗಿನ ಯಾವುದೇ ನಿಯಮದಿಂದ ಕಮೀಷನರನ ಸಹಿಯು ಅಗತ್ಯವಾಗಿರುವ ಪ್ರತಿಯೊಂದು ಲೈಸೆನ್ಸಿಗೆ ಅಥವ ಲಿಖಿತ ಅನುಮತಿಗೆ, ನೋಟೀಸಿಗೆ ಅಥವಾ ಸಮನ್ಸ್, ವಾರಂಟು ಅಥವಾ ಝುಡತಿ ವಾರಂಟು ಆಗಿರದ ಇತರ ದಾಸ್ತವೇಜಿಗೆ, ಅವನ ಸಹಿಯ ಪಡಿಯಚ್ಚಿನ ಮುದ್ರೆಯಿದ್ದರೆ, ಅದು ಅವನಿಂದ ಯುಕ್ತ ರೀತಿಯಲ್ಲಿ ಸಹಿ ಮಾಡಲ್ಪಟ್ಟಿದೆ ಎಂದು ಭಾವಿಸಲ್ಪಡತಕ್ಕದ್ದು.

**175. ಕೆಲವು ಉಪಬಂಧಗಳ ರದ್ದಿಯಾತಿಯ ಬಗ್ಗೆ ಉಳಿಸುವಿಕೆ :–** ಮೈಸೂರು ಸಾಮಾನ್ಯ ಖಂಡಗಳ ಅಧಿನಿಯಮ, 1899ರ 6ನೆಯ ಪ್ರಕರಣದಲ್ಲಿ ಉಪಬಂಧಗಳು

(i) ಈ ಅಧಿನಿಯಮದ ಮೇರೆಗೆ ಒಂದು ಪರಿಮಿತ ಅವಧಿಯವರೆಗೆ ಮಾತ್ರ ಯಾವುದೇ ನಿಯಮ ಅಥವಾ ಆದೇಶವನ್ನು ಮಾಡಿರುವಾಗ; ಅಥವಾ

(ii) ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ನಿಯಮ ಅಥವಾ ಆದೇಶವನ್ನು ರದ್ದುಗೊಳಿಸಿದಾಗ; ಅಥವಾ

(iii) 92ನೆಯ ಪ್ರಕರಣದ (1)ನೆಯ ಉಪಪ್ರಕರಣದ ಯಾವುದೇ ಉಪಬಂಧವನ್ನು ಒಂದು ಪರಿಮಿತ ಅವಧಿಯ ಸಲುವಾಗಿ ಯಾವುದೇ ಸ್ಥಳೀಯ ಪ್ರದೇಶಕ್ಕೆ ವಿಸ್ತರಿಸಿದಾಗ; ಅಥವಾ

(iv) 92ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ಯಾವುದೇ ಉಪಬಂಧವು ಯಾವುದೇ ಸ್ಥಳೀಯ ಪ್ರದೇಶಕ್ಕೆ ಅನ್ವಯಿಸಿರುವುದು ರದ್ದಾದಾಗ, ಆ ನಿಯಮ, ಆದೇಶ ಅಥವಾ ಉಪಬಂಧವು ಖಾಯಂ ಅಧಿನಿಯಮವಾಗಿದ್ದು ಮತ್ತು ಸಂದರ್ಭಾನುಸಾರ ಅದರ ಮುಕ್ತಾಯಕ್ಕೆ ಅಥವಾ ರದ್ದಿಯಾತಿಗೆ ಕೂಡಲೆ ಮುಂಚಿತವಾಗಿ ನಿರಸನಗೊಳಿಸಲಾಗಿದ್ದಂತೆಯೇ ಅನ್ವಯಿಸುವುದಾಗಿರತಕ್ಕದ್ದು.

**176. ಚಾತುರ್ಯದ ಆಟಗಳ ಉಳಿಸುವಿಕೆ :–** ಸಂದೇಹ ನಿವಾರಣೆಗಾಗಿ, ಕೇವಲ ಚಾತುರ್ಯದ ಆಟವಾಡುವುದಕ್ಕೆ ಮತ್ತು ಅಂಥ ಚಾತುರ್ಯದ ಆಟದಲ್ಲಿ ಭಾಗವಹಿಸುವ ವ್ಯಕ್ತಿಗಳು ಪಣ ಕಟ್ಟುವುದಕ್ಕೆ 79 ಮತ್ತು 80ನೆಯ ಪ್ರಕರಣದ ಉಪಬಂಧಗಳು ಅನ್ವಯಿಸುವುದಿಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

**177. ಹಿತಾಸಕ್ತಿಯುಳ್ಳ ವ್ಯಕ್ತಿಗಳು ಯಾವುದೇ ಆದೇಶವನ್ನು ಶೂನ್ಯಗೊಳಿಸಲು, ವಿಪರ್ಯಸಗೊಳಿಸಲು, ಅಥವಾ ಬದಲಾಯಿಸಲು ಸರಕಾರಕ್ಕೆ ಆವೇದನ ಮಾಡಿಕೊಳ್ಳಬಹುದು :–** (1) ಈ ಅಧಿನಿಯಮದಿಂದ ಪ್ರದತ್ತವಾದ ಅಧಿಕಾರದ ಮೇರೆಗೆ ಸರಕಾರದಿಂದ ಮಾಡಲಾದ ಮತ್ತು ಸಾರ್ವಜನಿಕರು ಅಥವಾ ಯಾವುದೇ ನಿರ್ದಿಷ್ಟ ವರ್ಗದ ಜನರು ಒಂದು ಕರ್ತವ್ಯವನ್ನು ಅಥವಾ ಕೆಲಸವನ್ನು ನಿರ್ವಹಿಸಬೇಕೆಂದು, ಅಥವ ಅದರಲ್ಲಿ ಹೇಳಿದ ರೀತಿಯಲ್ಲಿ ತಾವು ಅಥವಾ ತಮ್ಮ ನಿಯಂತ್ರಣದಲ್ಲಿರುವವರು ನಡೆದುಕೊಳ್ಳತಕ್ಕುದೆಂದು ಅಥವಾ ನಿಯಮಬದ್ಧ ರಾಗಿರತಕ್ಕದ್ದೆಂದು ಅಗತ್ಯಪಡಿಸುವ ಯಾವುದೇ ನಿಯಮ ಅಥವಾ ಆದೇಶದ ಸಂದರ್ಭದಲ್ಲಿ, ಯಾವನೇ ಹಿತಾಸಕ್ತಿಯುಳ್ಳ ವ್ಯಕ್ತಿಯು ಅದು ಕಾನೂನುವಿರುದ್ಧವಾಗಿದೆ, ಪೀಡಾಕಾರಿಯಾಗಿದೆ ಅಥವಾ ಯುಕ್ತವಾಗಿಲ್ಲ ಎಂಬ ಆಧಾರದ ಮೇಲೆ, ಹೇಳಿದಂಥ ನಿಯಮವನ್ನು ಅಥವಾ ಆದೇಶವನ್ನು ಶೂನ್ಯಗೊಳಿಸಬೇಕೆಂದು, ವಿಪರ್ಯಯಗೊಳಿಸಬೇಕೆಂದು ಅಥವಾ ಬದಲಾಯಿಸಬೇಕೆಂದು ಆವೇದನ ಮಾಡುವುದು ಸಕ್ಷಮವಾಗಿರತಕ್ಕದ್ದು.

(2) ಮೇಲೆ ಹೇಳಿದಂಥ ಆವೇದನ ಮತ್ತು ಅದರ ಪೂರ್ಣತಃ ಅಥವಾ ಭಾಗಶಃ ನಿರಾಕರಣೆಯ ತರುವಾಯ, ಅಥವಾ ಅಂಥ ಆವೇದನಕ್ಕೆ ಉತ್ತರವಿಲ್ಲದೇ ಆರು ತಿಂಗಳು ಗತಿಸಿದ ತರುವಾಯ, ಅಥವಾ ಅದರ ಮೇಲಿನ ತೀರ್ಮಾನವನ್ನು ಸರಕಾರದವರು ಪ್ರಕಟಿಸಿದ ತರುವಾಯ ಹಿತಾಸಕ್ತಿಯುಳ್ಳ ಮತ್ತು ಆ ನಿಯಮವು ಅಥವಾ ಆದೇಶವು ಕಾನೂನುವಿರುದ್ಧವಾಗಿದೆಯೆಂದು ಭಾವಿಸುವ ವ್ಯಕ್ತಿಯು, ಅಂಥ ನಿಯಮವು ಅಥವಾ ಆದೇಶವು ಪೂರ್ಣತಃ ಅಥವಾ ಭಾಗಶಃ ಕಾನೂನುವಿರುದ್ಧವಾಗಿದೆಯೆಂದು ಘೋಷಿಸುವಂತೆ ಮಾಡಲು ರಾಜ್ಯದ ವಿರುದ್ಧ ದಾವೆ ಹೂಡಬಹುದು. ಅಂತಹ ದಾವೆಯಲ್ಲಿಯ ತೀರ್ಮಾನವು ಅಪೀಲಿಗೆ ಒಳಪಟ್ಟಿರತಕ್ಕದ್ದು; ಮತ್ತು ಕಾನೂನುವಿರುದ್ಧವಾದುದೆಂದು ಅಂತಿಮವಾಗಿ ತೀರ್ಮಾನಿಸಲಾದ ನಿಯಮ ಅಥವಾ ಆದೇಶವು ಸರಕಾರದಿಂದ ಕಾನೂನುಗನುಸಾರವಾಗುವಂತೆ ಶೂನ್ಯ ಅಥವಾ ವಿಪರ್ಯಯಗೊಳಿಸಲ್ಪಡತಕ್ಕದ್ದು ಅಥವಾ ಬದಲಾಯಿಸಲ್ಪಡತಕ್ಕದ್ದು.

**178. ನಿರಸನ ಮತ್ತು ಉಳಿಸುವಿಕೆಗಳು :–** iv ಅನುಸೂಚಿಯಲ್ಲಿ ಹೇಳಲಾಗಿರುವ ಅಧಿನಿಯಮಗಳು ಮತ್ತು ಈ ಅಧಿನಿಯಮದ ಯಾವುದೇ ಉಪಬಂಧಕ್ಕೆ ಸಂವಾದಿಯಾಗಿರುವ ಯಾವುದೇ ಇತರ ಕಾನೂನುಗಳು ಅಥವಾ ನಿಯಮಗಳು ಈ ಮೂಲಕ ನಿರಸಿತವಾಗಿದೆ :

ಪರಂತು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ 1899ರ 6ನೆಯ ಪ್ರಕರಣದ ಉಪಬಂಧಗಳು ಸದರಿ ಅಧಿನಿಯಮಗಳ ಮತ್ತು ಕಾನೂನುಗಳ ನಿರಸನದ ಸಂಬಂಧದಲ್ಲಿ ಅನ್ವಯಿಸತಕ್ಕದ್ದು ಮತ್ತು ಸದರಿ ಅಧಿನಿಯಮಗಳು ಮತ್ತು ವಿಧಿಗಳು ಈ ಅಧಿನಿಯಮದ ಮೂಲಕ ನಿರಸನಗೊಳಿಸಲ್ಪಟ್ಟು ಪುನಃ ಅಧಿನಿಯಮಿಸಲಾದಂತೆ ಸದರಿ ಅಧಿನಿಯಮದ 8ನೆಯ ಮತ್ತು 24ನೆಯ ಪ್ರಕರಣಗಳು ಅನ್ವಯಿಸತಕ್ಕದ್ದು.

**179. ತೊಂದರೆಗಳನ್ನು ನಿವಾರಿಸಲು ಅಧಿಕಾರ :–** ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ, ಈ ಅಧಿನಿಯಮದ ಪ್ರಾರಂಭಕ್ಕೆ ಕೂಡಲೇ ಮುಂಚೆ ಜಾರಿಯಲ್ಲಿದ್ದ ಅಧಿನಿಯಮಗಳ ಉಪಬಂಧಗಳಿಂದ ಈ ಅಧಿನಿಯಮದ ಉಪಬಂಧಗಳಿಗೆ ಯಾವುದಾದರೂ ತೊಂದರೆಯು ಉದ್ಭವಿಸಿದರೆ, ಸರಕಾರೀ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಸರಕಾರವು ಆ ತೊಂದರೆಯನ್ನು ನಿವಾರಿಸುವುದಕ್ಕಾಗಿ ತನಗೆ ಅವಶ್ಯಕವೆಂದು ಅಥವಾ ಯುಕ್ತವೆಂದು ಕಂಡುಬರುವಂತಹ ಉಪಬಂಧಗಳನ್ನು ರಚಿಸಬಹುದು.

**ಅನುಸೂಚಿ – I**

**(13ನೆಯ ಪ್ರಕರಣವನ್ನು ನೋಡಿ)**

**ಪೊಲೀಸ್ ದಳಕ್ಕೆ ನೇಮಕದ ಸರ್ಟಿಫಿಕೇಟು**

ಕರ್ನಾಟಕ ರಾಜ್ಯ

ನಂಬರು . . . . . . . . . . . . . . .

| | |
|---|---|
| ಕರ್ನಾಟಕ ಪೊಲೀಸ್ ಅಧಿನಿಯಮ, 1963ರ ಮೇರೆಗೆ ಕೊಟ್ಟ ನೇಮಕದ ಸರ್ಟಿಫಿಕೇಟು . . . . . . . . . . . . . . . . . . . . . . . . . . . . . . . . . . . . . . . . . . . . ಶ್ರೀ . . . . . . . . . . . . . . . . . . . . . . . . . . ನ್ನು . . . . . . . . . . . . . . . . . . . . ಎಂದು ನೇಮಿಸಲಾಗಿದೆ ಮತ್ತು ಮೈಸೂರು (1963ರ ಕರ್ನಾಟಕ ಪೊಲೀಸ್ ಅಧಿನಿಯಮ)ದ ಮೇರೆಗಿನ ಅಧಿಕಾರಗಳು, ಪ್ರಕಾರ್ಯಗಳು ಮತ್ತು ವಿಶೇಷಾಧಿಕಾರಗಳನ್ನು ಆತನಲ್ಲಿ ನಿಹಿತಗೊಳಿಸಲಾಗಿದೆ. | ಇನ್ಸ್‌ಪೆಕ್ಟರ್ ಮತ್ತು ಸಬ್ ಇನ್ಸ್‌ಪೆಕ್ಟರರು ಸಂಬಂಧದಲ್ಲಿ ಛಾಯಾಚಿತ್ರವನ್ನು ಅಂಟಿಸತಕ್ಕದ್ದು. |

. . . . . . . . . . . . . . . . . . . . . . ತಾರೀಖು . . . . . . . . . . ತಿಂಗಳು, 19 . . . . . . . ರಂದು

ಸಹಿ . . . . . . . . . . . . . . .

ಅಭಿದಾನ

ಮುದ್ರೆ

ವಿವರಗಳು:–

1. ತಂದೆಯ ಹೆಸರು . . . . . . . . . . . . . . . .
2. ತನ್ನ ಸ್ಥಳ . . . . . . . . . . . . . . . . . . . .
3. ವಯಸ್ಸು
4. ಹಿಂದಿನ ಸೇವೆ ಏನಾದರೂ ಇದ್ದರೆ, ಅದರ ಅವಧಿ,

## ಅನುಸೂಚಿ – II

**(147ನೆಯ ಪ್ರಕರಣವನ್ನು ನೋಡಿ)**

ರಾಜ್ಯ ರಿಜರ್ವ್ ಪೊಲೀಸ್ ದಳಕ್ಕೆ ಸೇರುವ ಮುಂಚೆ ಸಹಿ ಹಾಕಬೇಕಾದ ಘೋಷಣೆಯ ಪ್ರಪತ್ರ

1. (ಪೂರ್ಣ ಹೆಸರು) . . . . . . . . . . . . . . . . . . (ಪೊಲೀಸ್ ದಳದವನಾಗಿದ್ದರೆ ಅಭಿದಾನ ನೇರ ಭರ್ತಿಯವನಾಗಿದ್ದರೆ ವಿಳಾಸ) . . . . . . . . . . . ಎಂಬ ನಾನು . . . . . . . . . . . . . . . . . . . . . . . . . . . . . . . . . . . . . . . ಘೋಷಿಸುವುದೇನೆಂದರೆ . . . . . . . . . . . . . . . . . . .

(1) ನಾನು, ರಾಜ್ಯ ರಿಜರ್ವ್ ಪೊಲೀಸ್ ದಳದಲ್ಲಿ ಎಲ್ಲಿಯೇ ಆದರೂ ಸೇವೆ ಸಲ್ಲಿಸಲು ಸಿದ್ಧನಿದ್ದೇನೆ.

(2) ರಾಜ್ಯ ರಿಜರ್ವ್ ದಳದಲ್ಲಿ ನಿಯಮಿಸಲಾದ ಸೇವಾವಧಿಯನ್ನು ಮುಗಿಸುವವರೆಗೆ, ನಾನು ರಾಜ್ಯ ರಿಜರ್ವ್ ಪೊಲೀಸ್ ದಳಕ್ಕೆ ರಾಜೀನಾಮೆ ಕೊಡಲು ಅಥವಾ ಬೇರೆ ಯಾವುದೇ ಪೊಲೀಸ್ ದಳಕ್ಕೆ ವರ್ಗಾಂತರವನ್ನು ಕೇಳಲು ಹಕ್ಕುಳ್ಳವನಾಗಿರತಕ್ಕದ್ದಲ್ಲ; ಮತ್ತು

(3) ಸಂಬಂಧಪಟ್ಟ ತಾರೀಖಿಗೆ ನಾನು ಸಕ್ರಿಯ ಕರ್ತವ್ಯದ ಮೇರೆಗೆ ಇದ್ದರೆ, ಅಥವಾ ಸಂದರ್ಭಾನುಸಾರ ನನ್ನ ರಾಜೀನಾಮೆಯು ಅಥವಾ ವರ್ಗಾವಣೆಯು, ನನ್ನ ಗುಂಪಿನಲ್ಲಿನ ಖಾಲಿ ಸ್ಥಾನಗಳನ್ನು, ಸದರಿ ಗ್ರೂಪಿನ ಮಂಜೂರಾಗಿರುವ ಸಂಖ್ಯೆಯ ಪೈಕಿ ರಾಜ್ಯ ಸರ್ಕಾರದವರು ಆಯಾ ಕಾಲದಲ್ಲಿ ನಿಯಮಿಸಬಹುದಾದಂತಹ ಪ್ರಮಾಣವನ್ನು ಮೀರುವಂತೆ ಮಾಡುವ ಸಂಭವವಿದ್ದರೆ ನಿಯಮಿಸಲಾದ ಸೇವೆಯ ಅವಧಿಯನ್ನು ಮುಗಿಸಿದ ಮೇಲೂ, ಮೇಲೆ (2)ರಲ್ಲಿ ಉಲ್ಲೇಖಿಸಿದ ರೀತಿಯಲ್ಲಿ ನನ್ನ ನೇಮಕಕ್ಕೆ ರಾಜೀನಾಮೆ ಕೊಡಲು ಅಥವಾ ನನ್ನನ್ನು ವರ್ಗಾಯಿಸಬೇಕೆಂದು ಕೇಳಲು ನಾನು ಹಕ್ಕುಳ್ಳವನಾಗಿರತಕ್ಕದ್ದಲ್ಲ.

ಎಂದು ಘೋಷಿಸುತ್ತೇನೆ.

ಮೇಲಿನ ಘೋಷಣೆಯನ್ನು ಘೋಷಣೆ ಮಾಡುವವನ ಸಮಕ್ಷಮ ಓದಿ ಹೇಳಲಾಯಿತು ಮತ್ತು ವಿವರಿಸಲಾಯಿತು ಮತ್ತು ಅವನು ಅದನ್ನು ತಿಳಿದುಕೊಂಡಿದ್ದಾನೆ ಮತ್ತು ಒಪ್ಪಿಕೊಂಡಿದ್ದಾನೆಂಬುದರ ಗುರುತಾಗಿ ಸಹಿ.

ತಾರೀಖು . . . . . . . . . . . .

ಸ್ಥಳ . . . . . . . . . . . . . . .

(ಪೂರ್ಣ ಹೆಸರು . . . . . . . . . . . . . . . . . ಪೊಲೀಸು ದಳದವನಾಗಿದ್ದರೆ ಅಭಿದಾನ ನೇರ ಭರ್ತಿಯವನಾಗಿದ್ದರೆ ಪೂರ್ಣ ವಿಳಾಸ) . . . . . . . . . . . . . . . . . . . . . . . . ಈತನು ಸದರಿ ಘೋಷಣೆಯನ್ನು ತಿಳಿದುಕೊಂಡಿದ್ದರೆ ಮತ್ತು ಒಪ್ಪಿಕೊಂಡಿದ್ದಾನೆ ಎಂಬುದರ ಬಗ್ಗೆ ನನಗೆ ಮನದಟ್ಟಾದ ಬಳಿಕ ನನ್ನ ಸಮಕ್ಷಮ ಸಹಿ ಹಾಕಿದ್ದಾನೆ.

ಯಾವ ಅಧಿಕಾರಿಯ ಮುಂದೆ ಘೋಷಣೆಗೆ ಸಹಿ ಹಾಕಲಾಗಿದೆಯೋ ಅವನ ಅಭಿದಾನ

ಸಹಿ . . . . . . . . . . . . . . . . .

ಕಮಾಂಡೆಂಟ್ ಅಥವಾ ಸಹಾಯಕ ಕಮಾಂಡೆಂಟ್

ಅಥವಾ ಪೊಲೀಸ್ ಅಧಿಕಾರಿ.

ತಾರೀಖು . . . . . . . . . . . .

ಸ್ಥಳ . . . . . . . . . . . . . .

**ಅನುಸೂಚಿ – III**

**(149ನೆಯ ಪ್ರಕರಣವನ್ನು ನೋಡಿ)**

**ಸುಬೇದಾರನ ದರ್ಜೆಗಿಂತ ಕೆಳಗಿನ ದರ್ಜೆಯ ರಾಜ್ಯ ರಿಜರ್ವ್ ಪೊಲೀಸ್ ಅಧಿಕಾರಿಯ ಸರ್ಟಿಫಿಕೇಟಿನ ಪ್ರಪತ್ರ**

| **ಕಮಾಂಡೆಂಟನ ಮುದ್ರೆ** |
|---|

ಕ, ಖ ನನ್ನು ಕರ್ನಾಟಕ ರಾಜ್ಯದಲ್ಲಿ ರಾಜ್ಯದ ರಿಜರ್ವ್ ಪೊಲೀಸ್ ದಳದಲ್ಲಿ ನೇಮಕ ಮಾಡಲಾಗಿದೆ ಮತ್ತು ಈತನಲ್ಲಿ ಕರ್ನಾಟಕ ಪೊಲೀಸ್ ಅಧಿನಿಯಮ, 1963 (1963ರ ಕರ್ನಾಟಕ ಪೊಲೀಸ್ ಅಧಿನಿಯಮ, 4) ಮೇರೆಗೆ ರಿಜರ್ವ್ ಪೊಲೀಸ್ ಅಧಿಕಾರಿಯ ಅಧಿಕಾರಗಳನ್ನು, ಪ್ರಕಾರ್ಯಗಳನ್ನು ಮತ್ತು ವಿಶೇಷಾಧಿಕಾರಿಗಳನ್ನು ನಿಹಿತಗೊಳಿಸಲಾಗಿದೆ.

ಸಹಿ . . . . . . . . . . . . . . . . .

ಕಮಾಂಡೆಂಟ್,

ರಾಜ್ಯ ರಿಜರ್ವ್ ಪೊಲೀಸ್ ದಳ.

ಗ್ರೂಪ್ . . . . . . . . . . . . . . . .

. . . . . . . . . . . . . . . . . . . .

**ಅನುಸೂಚಿ – 4**

**(178ನೆಯ ಪ್ರಕರಣವನ್ನು ನೋಡಿ)**

| ವರುಷ | ನಂಬರು | ಸಂಕ್ಷಿಪ್ತ ಹೆಸರು |
|---|---|---|
| 1861 ಕೇಂದ್ರ ಅಧಿನಿಯಮ | V | ಪೊಲೀಸ್ ಅಧಿನಿಯಮ, 1961 |
| 1867 ಕೇಂದ್ರ ಅಧಿನಿಯಮ | III | ಸಾರ್ವಜನಿಕ ಜೂಜಾಟ ಅಧಿನಿಯಮ, 1867 |
| 1922 ಕೇಂದ್ರ ಅಧಿನಿಯಮ | XXII | ಪೊಲೀಸ್ (ದ್ರೋಹ ಪ್ರಚೋದಿಸುವ) ಅಧಿನಿಯಮ, 1922 |
| 1867 ಮುಂಬೈ ಅಧಿನಿಯಮ | VIII | ಮುಂಬೈ ಗ್ರಾಮ ಪೊಲೀಸ್ ಅಧಿನಿಯಮ, 1867 |
| 1887 ಮುಂಬೈ ಅಧಿನಿಯಮ | IV | ಮುಂಬೈ ಜೂಜಾಟ ನಿರೋಧ ಅಧಿನಿಯಮ, 1887 |
| 1951 ಮುಂಬೈ ಅಧಿನಿಯಮ | XXII | ಮುಂಬೈ ಪೊಲೀಸ್ ಅಧಿನಿಯಮ, 1951 |
| 1951 ಮುಂಬೈ ಅಧಿನಿಯಮ | XXXVIII | ಮುಂಬೈ ರಾಜ್ಯ ರಿಜರ್ವ್ ಪೊಲೀಸ್ ಅಧಿನಿಯಮ, 1951 |
| 1305ಫ ಹೈದರಾಬಾದು ಅಧಿನಿಯಮ | II | ಹೈದರಾಬಾದು ಜೂಜಾಟ ಅಧಿನಿಯಮ, 1305ನೇ ಫಸಲಿ |
| 1329ಫ ಹೈದರಬಾದು ಅಧಿನಿಯಮ | X | ಹೈದರಾಬಾದು ಜಿಲ್ಲಾ ಪೊಲೀಸ್ ಅಧಿನಿಯಮ, 1329 ಫಸಲಿ |
| 1951 ಹೈದರಾಬಾದು ಅಧಿನಿಯಮ | XXIX | ಹೈದರಾಬಾದು ಸಾರ್ವಜನಿಕ ಭದ್ರತೆಯ ಕ್ರಮಗಳ ಅಧಿನಿಯಮ, 1951 |
| 1816 ಮದ್ರಾಸ್ ವಿನಿಯಮ | XI | ಮದ್ರಾಸು ಗ್ರಾಮ ಪೊಲೀಸ್ ವಿನಿಯಮ, 1816 |
| 1821 ಮದ್ರಾಸು ವಿನಿಯಮ | IV | ಮದ್ರಾಸು ಗ್ರಾಮ ಪೊಲೀಸ್ ವಿನಿಯಮ, 1821 |
| 1859 ಮದ್ರಾಸು ಅಧಿನಿಯಮ | XXIII | ಮದ್ರಾಸು ಜಿಲ್ಲಾ ಪೊಲೀಸು ಅಧಿನಿಯಮ, 1859 |

| ವರುಷ | ನಂಬರು | ಸಂಕ್ಷಿಪ್ತ ಹೆಸರು |
|---|---|---|
| 1888 1888ರ ಮದ್ರಾಸು ಅಧಿನಿಯಮ | II | ಮದ್ರಾಸು ಸಾರ್ವಜನಿಕರು ಸೇರುವ ಸ್ಥಳಗಳ ಅಧಿನಿಯಮ, 1888 |
| 1930 ಮದ್ರಾಸು ಅಧಿನಿಯಮ | III | ಮದ್ರಾಸು ಜೂಜಾಟ ಅಧಿನಿಯಮ, 1930 |
| 1948 ಮದ್ರಾಸು ಅಧಿನಿಯಮ | III | ಮದ್ರಾಸು ಗಲಭೆಗಳ ಅಡಗಿಸುವಿಕೆ ಅಧಿನಿಯಮ, 1948 |
| 1948 ಮದ್ರಾಸು ಅಧಿನಿಯಮ | VIII | ಪೊಲೀಸ್ (ಮದ್ರಾಸು ತಿದ್ದುಪಡಿ) ಅಧಿನಿಯಮ, 1948 |
| 1908 ಕರ್ನಾಟಕ ಅಧಿನಿಯಮ | V | ಕರ್ನಾಟಕ ಪೊಲೀಸ್ ಅಧಿನಿಯಮ, 1908 |
| 1452 1952ರ ಕರ್ನಾಟಕ ಅಧಿನಿಯಮ | XXVII | ಕರ್ನಾಟಕ ಸಾರ್ವಜನಿಕರು ಸೇರುವ ಸ್ಥಳಗಳ ಅಧಿನಿಯಮ, 1952 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

* * * * *